2332

ಶಾಂಕರ -
ತತ್ತ್ವದರ್ಶನ



ದಿವಗಂತ ಶ್ರೀ ಲಕ್ಷ್ಮಣಸಾ ಖೋಡೆ
ಶ್ರೀಮತಿ ಗಂಗಮ್ಮ ಲಕ್ಷ್ಮಣಸಾ ಖೋಡೆ ಇವರುಗಳು.

ಧರ್ಮಾರ್ಥಸಾಹಿತ್ಯ

# ಶಾಂಕರಸಮ್ಯಗ್ದರ್ಶನ

(ಮೈತ್ರೇಯಿ-ಯಾಜ್ಞವಲ್ಕ್ಯಸಂವಾದ)

ಲೇಖಕರು :
ಶ್ರೀ ಮೂರ್ತಿ
ಶ್ರೀ ದತ್ತಾತ್ರೇಯ ಆಶ್ರಮ, ಆರ್. ನೂಲೇನೂರು.
(ತಾ|| ಹೊಳಲ್ಕೆರೆ ; ಜಿಲ್ಲಾ|| ಚಿತ್ರದುರ್ಗ)

ಪ್ರಕಾಶಕರು :
ಅಧ್ಯಾತ್ಮಪ್ರಕಾಶಶಾಖಾಕಾರ್ಯಾಲಯ,
ತ್ಯಾಗರಾಜನಗರ, ಬೆಂಗಳೂರು-560028
1980

ಪ್ರಥಮ ಮುದ್ರಣ

ಈ ಗ್ರಂಥದ ಹಕ್ಕುಗಳೆಲ್ಲವೂ
ಅಧ್ಯಾತ್ಮಪ್ರಕಾಶಕಾರ್ಯಾಲಯ, ಬೆಂಗಳೂರು-560028
ಇವರಿಗೆ ಸೇರಿರುತ್ತದೆ.

ಮುದ್ರಣಸ್ಥಾನ :
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.

# ಮುನ್ನುಡಿ

ಬ್ರಹ್ಮೀಭೂತ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಅಧ್ಯಾತ್ಮವಿದ್ಯೆಯ ಸಾಧನಸಿದ್ಧಾಂತಗಳಲ್ಲಿ ಜನರಿಗೆ ಅಭಿರುಚಿಯನ್ನುಂಟುಮಾಡುವ ಕಾರ್ಯಭಾರವನ್ನು ಮಹಾಜನರ ಸತತ-ಪ್ರೋತ್ಸಾಹ ಬೆಂಬಲಗಳಿಂದ ವಿದ್ಯಾರ್ಥಿಗಳಿಗೆ ಹಾಗೂ ಮುಮುಕ್ಷುಗಳಿಗೆ ವೇದಾಂತಪಾಠ ಪ್ರವಚನಗಳು, ಪುರಾಣಶ್ರಾವಣ, ಉಪನ್ಯಾಸಗಳು, ಅನುಷ್ಠಾನಗಳು-ಮುಂತಾದ ಚಟುವಟಿಕೆಗಳ ಮೂಲಕ ಸಾಧಿಸುತ್ತಾ ಬಂದಿದೆ.

ಈಚೆಗೆ ಈ ಸಂಸ್ಥೆಯು ಶ್ರೀಶ್ರೀಗಳವರಿಗೆ ಅತ್ಯಂತ ಪ್ರಿಯವಾಗಿದ್ದ ವೇದಾಂತಗ್ರಂಥಗಳ ಪ್ರಕಟನಕಾರ್ಯವನ್ನು ಕೈಗೊಂಡು ಪೂಜ್ಯ ಶ್ರೀ ನೂಲೇನೂರು ಶ್ರೀನಿವಾಸಮೂರ್ತಿಗಳವರು ದಯಮಾಡಿ ಆಗಾಗ್ಗೆ ಬರೆದು ಅನುಗ್ರಹಿಸುತ್ತಿರುವ ಗ್ರಂಥರತ್ನಗಳನ್ನು ಪ್ರಕಾಶಗೊಳಿಸಿ ಬಹಳಮಟ್ಟಿಗೆ ಧರ್ಮಾರ್ಥವಾಗಿಯೇ ಜನರಿಗೆ ಒದಗಿಸುತ್ತಿದೆ. ಈ ಜ್ಞಾನಸತ್ರದಲ್ಲಿ ಕಾರ್ಯಾಲಯದ ಅಭಿಮಾನಿಗಳು ಅನೇಕರು ತಮ್ಮ ಸಹಕಾರವನ್ನು ನೀಡಿರುತ್ತಾರೆ.

ಈಗ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ಪ್ರಥಮ ಜನ್ಮಶತಾಬ್ದಮಹೋತ್ಸವದ ಸುಸಂದರ್ಭದಲ್ಲಿ ಪೂಜ್ಯ ಶ್ರೀಮೂರ್ತಿಗಳು ಬರೆದಿರುವ ಶಾಂಕರಸಮ್ಯಗ್ದರ್ಶನ (ಮೈತ್ರೇಯೀ-ಯಾಜ್ಞವಲ್ಕ್ಯಸಂವಾದ) ಎಂಬ ಅಮೋಘಗ್ರಂಥವನ್ನು ಶತಾಬ್ದಮಹೋತ್ಸವದ ಸವಿನೆನಪಾಗಿ ಪ್ರಕಟಿಸಿ ಮಹಾಜನರ ಮುಂದೆ ಇಟ್ಟಿರುತ್ತೇವೆ.

'ಪಾರಮಹಂಸ್ಯಮೀಮಾಂಸಾ' ಎಂಬ ಹೆಸರಿನ ಸಂಸ್ಕೃತಭಾಷೆಯ ಕೃತಿಯೊಂದು ಶ್ರೀಶ್ರೀಗಳವರ ಲೇಖನಿಯಿಂದ ಹೊರಬಂದಿದೆಯಾದರೂ ಮುದ್ರಿತವಾಗಿರುವದಿಲ್ಲ. ಈ ಅಮೋಘಗ್ರಂಥದಲ್ಲಿ ಶಾಂಕರಪ್ರಸ್ಥಾನತ್ರಯಭಾಷ್ಯಗಳಲ್ಲಿ ಅಡಗಿರುವ ಪರಮಹಂಸಸಂನ್ಯಾಸಧರ್ಮದ ಮರ್ಮವನ್ನು ಎತ್ತಿಹಿಡಿದು ಸಮ್ಯಗ್ದರ್ಶನಕ್ಕೆ ಇದು ಹೇಗೆ ಅಂಗವಾಗಿದೆ? ಎಂಬಿದನ್ನು ಭಾಷ್ಯಕಾರರ ವಾಕ್ಯಗಳ ಆಧಾರದಿಂದಲೇ ಪ್ರತಿಪಾದಿಸಲಾಗಿದೆ. ಮತ್ತು ಈಗ ಆಚರಣೆಯಲ್ಲಿರುವ ಸಂನ್ಯಾಸಪ್ರಕಾರಗಳಲ್ಲಿ ಯಾವಯಾವವು ವೇದಾಂತದರ್ಶನಕ್ಕೆ ಒಪ್ಪಾದವುಗಳು? ಹಾಗೂ ಪರಮಹಂಸಸಂನ್ಯಾಸದ ಮೂಲಸ್ವರೂಪವು ಯಾವದು? ಎಂಬೀ

ವಿಚಾರಗಳನ್ನು ಶ್ರೀಗಳವರು ನಿಷ್ಪಕ್ಷಪಾತವಾಗಿ ವಿಚಾರಮಾಡಿ ಪರಮಹಂಸ ಪಾರಿವ್ರಾಜ್ಯಕ್ಕೆ ಹೊಂದದಿರುವ ಆಚಾರವಿಚಾರಗಳನ್ನೆಲ್ಲ ನಿರ್ಭಯವಾಗಿ ಈ ಗ್ರಂಥದಲ್ಲಿ ಹೊರಗೆಡಹಿರುತ್ತಾರೆ. ಇಂಥ ಅಪೂರ್ವಗ್ರಂಥದ ಸಾರವನ್ನು ಕನ್ನಡ ದಲ್ಲಿ ಸಂಗ್ರಹಿಸಿ ಬರೆದಿರುವ ಭಾಗವನ್ನು ಈ ಶಾಂಕರಸಮ್ಯಗ್ದರ್ಶನಗ್ರಂಥಕ್ಕೆ ಶ್ರೀ ಶ್ರೀಗಳವರ ಮುನ್ನುಡಿಯೆಂತ ಭಾವಿಸಿ ಗ್ರಂಥಾರಂಭದಲ್ಲಿಯೇ ಅಳವಡಿಸಲಾಗಿದೆ.

ಶ್ರೀಶ್ರೀಗಳವರ ಲೇಖನಿಯ ಪರಂಪರೆಯನ್ನೇ ಹೊತ್ತು ಅತ್ಯುತ್ತಮ ಕೃತಿಯಾಗಿ ಹೊರಬಂದಿರುವ ವಿಶುದ್ಧಶಾಂಕರಪ್ರಕ್ರಿಯಾಪ್ರಕಾಶಕವಾದ ಈ ಗ್ರಂಥವು ಜಿಜ್ಞಾಸುಗಳಿಗೆಲ್ಲ ಕಾಮಧೇನುವಿನಂತಿದೆ ಎಂದು ತಿಳಿಸಲು ಸಂತೋಷಿಸುತ್ತೇವೆ.

ಈ ಅಮೋಘಗ್ರಂಥವನ್ನು ಓದಿ ಮಹಾಜನರು ಕೃತಾರ್ಥರಾಗುವಂತೆ ಸದ್ಗುರುಗಳು ಪ್ರೇರಿಸಲೆಂದು ಪ್ರಾರ್ಥಿಸುತ್ತೇವೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಬೆಂಗಳೂರು–೨೮.

ಪ್ರಕಾಶಕರು.



ಶ್ರೀ ಸದ್ಗುರು ನಿತ್ಯಾನಂದಸ್ವಾಮಿಗಳು
ಗಣೇಶಪುರಿ, ಮುಂಬಯಿ.

|| ಓಂ ||

# ಪಾರಮಹಂಸ್ಯಮೀಮಾಂಸಾಸಾರ

## ೧. ಅವತರಣಿಕೆ

"ಶಾಂಕರಸಮ್ಯಗ್ದರ್ಶನ" ಗ್ರಂಥಕಾರರಾದ ಪೂಜ್ಯ ಶ್ರೀ|| ನೂಲೇನೂರು ಶ್ರೀನಿವಾಸಮೂರ್ತಿಗಳವರು ತಮ್ಮ ಗ್ರಂಥಕ್ಕೆ ಶ್ರೀಶ್ರೀಗಳವರ ಬರವಣಿಗೆಯು ಮಾತ್ರವೇ 'ಮುನ್ನುಡಿ'ಯಾಗಲು ತಕ್ಕದ್ದೆಂದು ಭಾವಿಸಿ ಕೋರಿಕೆಯನ್ನು ಮಂಡಿಸಿದ್ದರಿಂದ ಶ್ರೀಶ್ರೀಗಳವರ ಕೃತಿಯಿಂದಲೇ ಸಾರಸಂಗ್ರಹಮಾಡಿದ ಈ ಭಾಗವನ್ನು ಮೊದಲಿಗೇ ಅಳವಡಿಸಲಾಗಿದೆ. ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳು ರಚಿಸಿರುವ ಸಂಸ್ಕೃತಗ್ರಂಥಗಳ ಮಾಲೆಯಲ್ಲಿ ಇನ್ನೂ ಪ್ರಕಾಶಕ್ಕೆ ಬಾರದೆ ಕೈಬರಹದ ಸ್ಥಿತಿಯಲ್ಲಿಯೇ ಉಳಿದುಕೊಂಡಿರುವ ಗ್ರಂಥಗಳಲ್ಲಿ 'ಪಾರಮಹಂಸ್ಯಮೀಮಾಂಸಾ' ಎಂಬಿದೂ ಒಂದಾಗಿದೆ.

## ೨. ಗ್ರಂಥಾರಂಭಪ್ರತಿಜ್ಞೆ

"ವೇದಾಂತವಿಚಾರದಿಂದ ಲಭಿಸಿದ ಆತ್ಮವಿಜ್ಞಾನದಿಂದ ಕೃತಾರ್ಥರಾಗ ಬಯಸಿರುವ, ವೈದಿಕ ಶಿಷ್ಟಾಚಾರಮಾರ್ಗದಲ್ಲಿ ಶ್ರದ್ಧೆಯುಳ್ಳವರಾಗಿದ್ದು ಮುಕ್ತಿಯನ್ನು ಪಡೆಯಲು ಇಚ್ಛಿಸುವಂಥ ಅಧಿಕಾರಿಗಳಿಗಾಗಿ ಈ ಗ್ರಂಥವು ಹೊರಟಿದೆ"– ಎಂದು ಮೊದಲು ಶ್ರೀಗಳವರು ಇಲ್ಲಿ ತಿಳಿಸುತ್ತಾರೆ. ಇನ್ನು ಮುಂದೆ ನೇರಾಗಿ ಶ್ರೀಗಳವರೇ ಬರೆದಂತೆ ಭಾವಿಸಿಕೊಳ್ಳಬೇಕಾಗಿ ಪ್ರಾರ್ಥನೆ.

## ೩. ಪಾರಮಹಂಸ್ಯವಿಚಾರದ ಆವಶ್ಯಕತೆ

ಪರಮಹಂಸಪಾರಿವ್ರಾಜ್ಯ–ವೆಂಬ ಹೆಸರಿನ ಸಂನ್ಯಾಸಾಶ್ರಮದ ವಿಚಾರದಲ್ಲಿ ಬಹಳ ಜನರು ಅನೇಕರೀತಿಯ ಅಭಿಪ್ರಾಯವುಳ್ಳವರಾಗಿದ್ದು ಐಕಮತ್ಯವಿಲ್ಲವಾಗಿದೆ. ಹೇಗೆಂದರೆ: (೧) ಕಲಿಯುಗದಲ್ಲಿ ಸಂನ್ಯಾಸಾಶ್ರಮವೇ ವರ್ಜ್ಯವು–ಎಂದು ಕೆಲವರು ; (೨) ತ್ರಿದಂಡಾಶ್ರಮವನ್ನು ಮಾತ್ರವೇ ಸ್ವೀಕರಿಸಬೇಕೆಂದು ಮತ್ತೊಬ್ಬರು ; (೩) 'ಪಾರಮಹಂಸ್ಯವನ್ನು ಬಿಟ್ಟರೆ ಬೇರೆ ಯಾವ ಆಶ್ರಮವನ್ನೂ ತೆಗೆದುಕೊಳ್ಳಬಾರದೆಂದು ಕೆಲವರು–ಹೀಗೆ ಮತಭೇದವಿದೆ. ಆಚಾರಗಳೂ ಬೇರೆಬೇರೆಯಾಗಿಯೇ ಇವೆ. ಶ್ರೀವೈಷ್ಣವರು ತ್ರಿದಂಡಸಂನ್ಯಾಸವನ್ನೇ ಅನುಸರಿಸುತ್ತಾರೆ. ಸ್ಮಾರ್ತಸಂಪ್ರದಾಯದವರು ನಿಯಮದಿಂದ ಪರಮಹಂಸಪಾರಿವ್ರಾಜ್ಯವನ್ನೇ ಸ್ವೀಕರಿಸುತ್ತಾರೆ. ಹೀಗೆಯೇ ಯತಿಗಳ ವೇಷಭೂಷಣಾದಿಗಳ ವಿಷಯಕ್ಕೂ ನಿತ್ಯಾಹ್ನಿಕ ಕ್ರಮದ ವಿಷಯಗಳಲ್ಲಿಯೂ ಅಭಿಪ್ರಾಯಭೇದವಿದೆ. ಸಂನ್ಯಾಸಿಗಳು ಮೃತರಾದಾಗ ಮಾಡುವ ಕ್ರಿಯಾನುಷ್ಠಾನಗಳ ವಿಷಯದಲ್ಲಿಯೂ ಮತಭೇದಗಳಿವೆ. 'ಯಾವದಾದರೊಂದು ಸಂಪ್ರದಾಯವನ್ನು ಅನುಸರಿಸಿದರಾಯಿತು; ದೇಶಾಚಾರ ಕುಲಾಚಾರ

ಭೇದಗಳಿಂದ ಅನುಷ್ಠಾನಗಳಲ್ಲಿ ವ್ಯತ್ಯಾಸಗಳಿರಬಹುದು. ಇದ್ದರೇನು ?'– ಎಂದು ಹೇಳುವದು ಅಷ್ಟೇನೂ ಸಮಂಜಸವಾಗಲಾರದು. ಅದಕ್ಕಿಂತ ಮುಖ್ಯವಾಗಿ ಶ್ರೀ ಶಂಕರಾಚಾರ್ಯರು ಶ್ರುತಿ–ಯುಕ್ತಿ–ಅನುಭವಗಳಿಗೆ ಹೊಂದುಗೆಯಾಗಿ ವಿಚಾರ ಮಾಡಿ ಸಿದ್ಧಾಂತಮಾಡಿರುವ ಹಾದಿಯನ್ನೇ ಕೈಬಿಟ್ಟು ಎತ್ತಿನ ಬಾಲವನ್ನು ಹಿಡಿದು ದಾರಿ ನಡೆಯಲಿಚ್ಛಿಸಿದ ಕುರುಡರಂತೆ ಯಾವದೋ ಒಂದು ದಾರಿಯನ್ನವಲಂಬಿಸಿದ ರಾಯಿತು-ಎಂದು ಉದಾಸೀನರಾಗಿ ಕೂಡುವದೂ ಸರಿಯಲ್ಲ. ಆದ್ದರಿಂದ ವಿಚಾರ ಮಾಡಬೇಕಾದ ಆವಶ್ಯಕತೆಯಿದೆ–ಎಂದಾಯಿತು.

## ೪. ಪಾರಮಹಂಸ್ಯವಿಷಯಕ್ಕೆ ಶ್ರುತಿಪ್ರಮಾಣಗಳು

ಉಪನಿಷತ್ತುಗಳಲ್ಲಿ ಪಾರಮಹಂಸ್ಯದ ವಿಚಾರವು ಅನೇಕಕಡೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತದೆ. ಮುಂಡಕ, ಛಾಂದೋಗ್ಯ, ಬೃಹದಾರಣ್ಯಕ, ಶ್ವೇತಾಶ್ವತರ–ಮುಂತಾದ ಉಪನಿಷತ್ತುಗಳಲ್ಲಿ ಸಂನ್ಯಾಸವಿಚಾರವು ಹೆಚ್ಚಾಗಿಯೇ ಬಂದಿದೆ. ಕೆಲವು ಶ್ರುತಿವಾಕ್ಯಗಳನ್ನು ನೋಡಿರಿ :

(೧) ಶಾಂತರಾದ ವಿದ್ವಾಂಸರು ಭಿಕ್ಷಾಚರ್ಯೆಯನ್ನು ಮಾಡುತ್ತಾ ಅರಣ್ಯಗಳಲ್ಲಿ ವಾಸಮಾಡುತ್ತಾರೆ. —ಮುಂಡಕ.

(೨) ವೇದಾಂತವಿಜ್ಞಾನದಿಂದ ಸುನಿಶ್ಚಿತಾರ್ಥರಾದವರಾಗಿ ಸಂನ್ಯಾಸಯೋಗದ ಮೂಲಕ ಶುದ್ಧಸತ್ತ್ವರಾಗಿ ಬ್ರಹ್ಮಲೋಕದಲ್ಲಿದ್ದು ಪರಾಂತಕಾಲದಲ್ಲಿ ಅಮೃತರಾಗುವರು. —ಮುಂಡಕ.

(೩) ಕರ್ಮದಿಂದಾಗಲಿ ಪ್ರಜೆಯಿಂದಾಗಲಿ, ಧನದಿಂದಾಗಲಿ, ಅಲ್ಲ ; ತ್ಯಾಗದಿಂದಲೇ ಅಮೃತತ್ವವನ್ನು ಪಡೆದರು. —ತೈತ್ತಿರೀಯ.

(೪) ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆಗಳನ್ನು ಬಿಟ್ಟಿದ್ದು ಭಿಕ್ಷಾಚರ್ಯೆಯನ್ನು ಮಾಡುವರು. —ಬೃಹದಾರಣ್ಯಕ.

(೫) ಅತ್ಯಾಶ್ರಮಿಗಳಾದವರಿಗೆ ಪರಮಪವಿತ್ರವಾದ (ಜ್ಞಾನವನ್ನು) ಹೇಳಿದನು. —ಶ್ವೇತಾಶ್ವತರ.

ಹೀಗೆ ಎಷ್ಟೋ ವಚನಗಳು ದೊರಕುತ್ತವೆ. ಜಾಬಾಲೋಪನಿಷತ್ತಿನಲ್ಲಿಯೂ ಪರಮಹಂಸಾಶ್ರಮದ ವಿಚಾರವಿದೆ. ಬ್ರಹ್ಮಸೂತ್ರಗಳಲ್ಲಿಯೂ ಈ ಸಂನ್ಯಾಸದ ವಿಚಾರವಾಗಿ ಚರ್ಚೆಮಾಡಲಾಗಿದೆ. ಅಂತೂ ಎಲ್ಲಾ ಉಪನಿಷತ್ತುಗಳೂ ಐಕಮತ್ಯದಿಂದ ತಿಳಿಸುವದೇನೆಂದರೆ : ಪರಮಹಂಸಸಂನ್ಯಾಸವು ಜ್ಞಾನಪರಿಪಾಕದಿಂದ ತಾನಾಗಿಯೇ ದೊರಕತಕ್ಕದ್ದು. ಅದು ಆಶ್ರಮವಲ್ಲ. ಆದ್ದರಿಂದಲೇ ಆ ಆಶ್ರಮದಲ್ಲಿ ಯಾವ ಕರ್ಮಾನುಷ್ಠಾನಗಳೂ ಇರುವದಿಲ್ಲ. ಇದನ್ನು ವಿದ್ವತ್‌ಸಂನ್ಯಾಸವೆಂದೂ ಕರೆಯುತ್ತಾರೆ. ಶ್ರೀ ಸುರೇಶ್ವರಾಚಾರ್ಯರ ಬೃಹದಾರಣ್ಯಕವಾರ್ತಿಕದಲ್ಲಿಯೂ ಪರಮಹಂಸಸಂನ್ಯಾಸದ ವಿಚಾರವಿದೆ.

## ೫. ಬೃಹದಾರಣ್ಯಕ ಶ್ರುತಿ ಮತ್ತು ಶಾಂಕರಭಾಷ್ಯಗಳ ವಿವರ

ಪರಮಹಂಸಪಾರಿವ್ರಾಜ್ಯದ ವಿಷಯದಲ್ಲಿ ಉಳಿದ ಎಲ್ಲಾ ಉಪನಿಷತ್ತುಗಳಿಗಿಂತಲೂ ಬೃಹದಾರಣ್ಯಕದಲ್ಲಿ ಬಹಳ ವಿಸ್ತಾರವಾದ ವಿವರಣೆಯೂ ಅದಕ್ಕೆ ತಕ್ಕಂತೆಯೇ ಶಂಕರಭಾಷ್ಯದಲ್ಲಿಯೂ ಆಕ್ಷೇಪಪರಿಹಾರಗಳೂ ಉಕ್ತವಾಗಿವೆ. ಅವುಗಳ ಸಾರವನ್ನು ಮಾತ್ರ ಈಗ ಕೊಡಲಾಗುವದು.

(ಅ) ಮುಖ್ಯವಾಗಿ ಮೀಮಾಂಸಕರು ಸಂನ್ಯಾಸಾಶ್ರಮವಿರೋಧಿಗಳು. ಏಕೆಂದರೆ ವೈದಿಕಕರ್ಮಗಳನ್ನು ಬದುಕಿರುವವರೆಗೂ ಮಾಡುತ್ತಲೇ ಇರಬೇಕೆಂದೂ ಅವುಗಳನ್ನು ಬಿಡಲೇಬಾರದೆಂದೂ ಅವರು ಹೇಳುತ್ತಿರುವರು. ಸಂನ್ಯಾಸವಿಷಯಕವಾದ ಶ್ರುತಿಯಿದ್ದರೂ ಅದು ಕರ್ಮಕ್ಕೆ ಅನಧಿಕಾರಿಗಳಾದ ಕುಂಟ-ಕುರುಡರ ವಿಷಯವೆಂದೂ ಕರ್ಮಕ್ಕೆ ಅಧಿಕಾರಿಗಳಾದವರು ಯಾರೂ ಸಂನ್ಯಾಸವನ್ನು ಮಾಡಕೂಡದೆಂದೂ ಅವರ ಅಭಿಪ್ರಾಯ. ಇದೇ ಮೀಮಾಂಸಕರನ್ನು ಅನುಸರಿಸಿ ಮತ್ತೆ ಕೆಲವು ವಾದಿಗಳು ಸಂನ್ಯಾಸವೇನೋ ಶ್ರುತಿವಿಹಿತವಾಗಿದೆಯಾದರೂ ಸರ್ವಕರ್ಮಸಂನ್ಯಾಸವೆಂಬುದು ಮಾತ್ರ ಇಲ್ಲ. ಆದ್ದರಿಂದ ಪರಿವ್ರಾಜಕನಿಗೂ ಗುರೂಪಾಸನ, ವೇದಾಧ್ಯಯನ, ಆಚಮನಾದಿ ಕರ್ಮಗಳುಂಟು ; ಯಜ್ಞೋಪವೀತದ ತ್ಯಾಗವಿಲ್ಲ–ಎಂದು ಹೇಳುತ್ತಾರೆ.

(ಆ) ಇದಕ್ಕೆಲ್ಲ ಉತ್ತರವಾಗಿ ಶ್ರೀ ಶಂಕರಾಚಾರ್ಯರು ತಿಳಿಸುವದೇನೆಂದರೆ : ಸಂನ್ಯಾಸವು ಕೇವಲ ಕುಂಟಕುರುಡರ ವಿಷಯವಲ್ಲ. ಮತ್ತೇನೆಂದರೆ : ವಿರಕ್ತನಾದವನಿಗೆ ಅದು ಹೇಳಲ್ಪಟ್ಟಿದೆ. ಶ್ರುತಿಗಳಲ್ಲಿ ಸ್ಪಷ್ಟವಾಗಿ ಸಂನ್ಯಾಸಧರ್ಮವನ್ನು ಪ್ರತಿಪಾದಿಸಿದೆ. ಯಜ್ಞೋಪವೀತಾದಿಗಳನ್ನೂ ಪರಿತ್ಯಾಗಮಾಡಬೇಕೆಂದೇ ಹೇಳಿದೆ. ಶ್ರುತ್ಯನುಸಾರಿಯಾದ ಸ್ಮೃತಿಗಳೂ ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ. ಜ್ಞಾನಾಂಗವಾಗಿ ಸ್ವೀಕರಿಸುವ ಸಂನ್ಯಾಸದಲ್ಲಿ ಶಮದಮಾದಿಗಳೂ ಶ್ರವಣಮನನನಿದಿಧ್ಯಾಸನಗಳೂ ಕರ್ತವ್ಯವಾಗಿ ಹೇಳಲ್ಪಟ್ಟಿವೆ. ಆದರೆ ದೇವತಾ–ಪಿತೃ–ಅತಿಥಿ–ಪೂಜಾದಿಗಳನ್ನಾಗಲೀ ವೇದಾಧ್ಯಯನಾದಿಗಳನ್ನಾಗಲಿ ಸಂನ್ಯಾಸಿಗೆ ವಿಧಿಸಿರುವದಿಲ್ಲ. ಇನ್ನು ಜ್ಞಾನವುಂಟಾದ ಬಳಿಕ ಪ್ರಾಪ್ತವಾಗುವ ಸಂನ್ಯಾಸವು ವಿದ್ವತ್‌ಸಂನ್ಯಾಸವು. ಇದು ತೆಗೆದುಕೊಳ್ಳತಕ್ಕದ್ದಲ್ಲ. ತಾನೇ ಆಗತಕ್ಕದ್ದು. ಅಂತೂ ವಿವಿದಿಷಾ–ವಿದ್ವತ್ ಎಂಬ ಎರಡು ಸಂನ್ಯಾಸಗಳೂ ಜ್ಞಾನಾಂಗವಾಗಿಯೂ ಜ್ಞಾನಪರಿಪಾಕಕ್ಕೆ ಅವಶ್ಯವಾಗಿಯೂ ಇದ್ದು ಮುಕ್ತಿಗೆ ಅವಕಾಶವನ್ನೊದಗಿಸುವವು. ಆದ್ದರಿಂದ ಇವು ಆಶ್ರಮಗಳಲ್ಲ. ಏಷಣಾತ್ಯಾಗರೂಪವಾಗಿರುವ ಇವು ಬ್ರಹ್ಮಜ್ಞಾನಕ್ಕೆ ಮೆಟ್ಟಲುಗಳಂತೆ ಇರುವವು.

(ಇ) ಆದರೆ ಈ ಎರಡು ಸಂನ್ಯಾಸಗಳಿಗಿಂತ ಬೇರೆಯಾಗಿ 'ಆಶ್ರಮರೂಪವಾದ ಪಾರಿವ್ರಾಜ್ಯ'ವೂ ಒಂದಿದೆ. ಅದರಲ್ಲಿ ಯಜ್ಞೋಪವೀತಾದಿಗಳು ಉಂಟು.

ಮತ್ತು ಕೆಲವು ಆಶ್ರಮಕರ್ಮಗಳೂ ಉಂಟು. ಇದು ಬ್ರಹ್ಮಲೋಕಾದಿಗಳ ಪ್ರಾಪ್ತಿಗೆ ಸಾಧನವಾಗಿರುತ್ತದೆ.

ಹೀಗೆ ಶ್ರುತಿಗಳ ಮತ್ತು ಶಂಕರಭಾಷ್ಯಗಳ ಮಥನದಿಂದ ದೊರಕುವ ಸ್ಪಷ್ಟವಾದ ಅಭಿಪ್ರಾಯದಂತೆ (೧) ಆಶ್ರಮರೂಪವಾದ ಪಾರಿವ್ರಾಜ್ಯವಾಗಲಿ (೨) ಆಶ್ರಮಧರ್ಮಗಳ ಸಂಪರ್ಕವಿಲ್ಲದ, ಕೇವಲ ಜ್ಞಾನ ಸಾಧನವಾದ ವಿವಿದಿಷಾಸಂನ್ಯಾಸವಾಗಲಿ (೩) ಜ್ಞಾನವು ಉಂಟಾದ ಬಳಿಕ ಅದರ ಪರಿಪಾಕಕ್ಕಾಗಿ ತಾನಾಗಿಯೇ ಒದಗುವ ವಿದ್ವತ್ಸಂನ್ಯಾಸವಾಗಲಿ, ಈ ಮೂರೂ ಶಾಸ್ತ್ರಸಮ್ಮತವಾದವುಗಳು. ಇವುಗಳಲ್ಲಿ ಆಶ್ರಮರೂಪವಾದ ಪಾರಿವ್ರಾಜ್ಯವನ್ನು ಈಗಲೂ ಶ್ರೀವೈಷ್ಣವರು ಸ್ವೀಕರಿಸುತ್ತಾರೆ. ಆ ಆಶ್ರಮಧರ್ಮದಂತೆ ಯಜ್ಞೋಪವೀತ, ಶಿಖೆ, ದಂಡ, ಕಮಂಡಲು, ಕಾಷಾಯ ವಸ್ತ್ರಾದಿಗಳೆಲ್ಲವೂ ವಿಹಿತವೇ ಆಗಿವೆ. ಈ ಆಶ್ರಮಕ್ಕೆ ವಿಹಿತವಾದ ಆಹ್ನಿಕವೂ ದೇವತಾಪೂಜಾ-ತರ್ಪಣಾದಿಗಳೂ ಉಂಟು. ಈ ವಿಷಯದಲ್ಲಿ ಶಾಸ್ತ್ರವಿರೋಧವಿಲ್ಲ. ಆದರೆ 'ಪರಮಹಂಸಪಾರಿವ್ರಾಜ್ಯ'ವೆಂಬ ಹೆಸರನ್ನು ಬಳಸಿಕೊಂಡು ಸಂನ್ಯಾಸವನ್ನು ಸ್ವೀಕರಿಸಿ ಅದರ ಉದ್ದೇಶಕ್ಕೆ ವಿರುದ್ಧವಾಗಿ ಆಶ್ರಮರೂಪಪಾರಿವ್ರಾಜ್ಯದ ಕರ್ತವ್ಯಗಳನ್ನು ಮಾಡುತ್ತಾ ಸಂನ್ಯಾಸಧರ್ಮವನ್ನು ಅನುಷ್ಠಿಸುವದು ಶಂಕರಸಿದ್ಧಾಂತಕ್ಕೆ ವಿರೋಧವೆಂದು ನಮಗೆ ಕಂಡುಬಂದಿದೆ. ಪ್ರಸ್ಥಾನತ್ರಯಭಾಷ್ಯಗಳೆಲ್ಲೆಲ್ಲ ಎಷ್ಟೇ ಶೋಧಿಸಿದರೂ ಪರಮಹಂಸನಿಗೆ ಕರ್ತವ್ಯಗಳನ್ನು ವಿಧಿಸಿರುವದು ಎಲ್ಲಿಯೂ ಕಂಡುಬರುವದಿಲ್ಲ. ಒಂದು ವೇಳೆ ಕರ್ತವ್ಯಗಳಿದ್ದರೆ ಅದು ಪರಮಹಂಸಪಾರಿವ್ರಾಜ್ಯವೇ ಅಲ್ಲ. ಏಕೆಂದರೆ ಜ್ಞಾನ-ಕರ್ಮಗಳಿಗೆ ಪರಸ್ಪರವಿರೋಧವಿರುವದರಿಂದ ಜ್ಞಾನಿಗೆ ಕರ್ತವ್ಯವು ಏನೂ ಇದ್ದುಕೊಂಡಿರಲು ಸಾಧ್ಯವಿಲ್ಲ. ಆದ್ದರಿಂದ ಪರಮಹಂಸನೆಂಬವನು ಎಂದೆಂದೂ ಕರ್ಮಾತೀತನೇ ಆಗಿರಬೇಕು-ಎಂಬಿದು ಶಂಕರಸಿದ್ಧಾಂತವು.

## ೬. ಭಗವದ್ಗೀತೆಯಲ್ಲಿ ಸಂನ್ಯಾಸವಿಚಾರ

ಭಗವದ್ಗೀತೆಯಲ್ಲಿಯೂ ಅದರ ಶಂಕರಭಾಷ್ಯದಲ್ಲಿಯೂ ಅನೇಕಕಡೆಗಳಲ್ಲಿ ಸಂನ್ಯಾಸವಿಚಾರವು ಪ್ರಸ್ತಾಪಿಸಲ್ಪಟ್ಟಿದೆ. ಅಲ್ಲಿಯೂ ಪರಮಾರ್ಥಸಂನ್ಯಾಸ-ಅಥವಾ ವಿದ್ವತ್ಸಂನ್ಯಾಸವನ್ನು ನಿಷ್ಕ್ರಿಯನಾದ ಆತ್ಮನಲ್ಲಿ ನೆಲೆಗೊಳ್ಳುವಿಕೆ ಮಾತ್ರವೇ-ಎಂದು ವರ್ಣಿಸಲಾಗಿದೆ. ಸರ್ವಕರ್ಮಸಂನ್ಯಾಸವೆಂದೂ ಸರ್ವಧರ್ಮಪರಿತ್ಯಾಗವೆಂದೂ ನೈಷ್ಕರ್ಮ್ಯಸಿದ್ಧಿ-ಎಂದೂ ಈ ಪರಮಹಂಸಸಂನ್ಯಾಸವನ್ನು ಅಲ್ಲಲ್ಲಿ ಸ್ತುತಿಸಿದೆ. ಜ್ಞಾನಿಗೆ ಏನೇನೂ ಕರ್ತವ್ಯವಿಲ್ಲವೆಂಬುದನ್ನು 'ನೈವ ಕುರ್ವನ್ ನ ಕಾರಯನ್' 'ನೈವ ಕಿಂಚಿತ್ ಕರೋತಿ ಸಃ' ಎಂಬಿವೇ ಮುಂತಾದ ವಾಕ್ಯಗಳಲ್ಲಿ ಸ್ಫುಟಗೊಳಿಸಲಾಗಿದೆ. ಆದ್ದರಿಂದ ಪರಮಹಂಸಸಂನ್ಯಾಸಿಗೆ ಯಾವ ಕರ್ತವ್ಯವೂ ಇಲ್ಲವೆಂಬುದು ಗೀತೆಗೂ ಸಮ್ಮತವಾಗಿರುತ್ತದೆ. ಆದರೆ ವಿವಿದಿಷಾಸಂನ್ಯಾಸವೂ

ಉಂಟೆಂಬುದನ್ನು ಗೀತೆಯಲ್ಲಿ ಸೂಚಿಸಿ ಅದು ಅನಾತ್ಮಜ್ಞನಾದವನು ಮಾಡತಕ್ಕದ್ದೆಂದೂ ಅವನಿಗೂ ಬಹಿರಂಗವಾದ ಕರ್ಮಗಳ ಸಂನ್ಯಾಸವೂ ಅಂತರಂಗವಾದ ಶಮದಮಾದಿ ಕರ್ತವ್ಯಗಳೂ ಉಂಟೆಂದು ತಿಳಿಸಲಾಗಿದೆ. 'ಶಮಃ ಕಾರಣಮುಚ್ಯತೇ' ಎಂಬ ವಾಕ್ಯಕ್ಕೆ ಭಾಷ್ಯಕಾರರು 'ಶಮಃ–ಸರ್ವಕರ್ಮಭ್ಯೋ ನಿವೃತ್ತಿಃ' ಎಂದೂ 'ಧ್ಯಾನಯೋಗಪರೋ ನಿತ್ಯಮ್' ಎಂಬಲ್ಲಿ 'ನಿತ್ಯಗ್ರಹಣಂ ಮಂತ್ರ ಜಪಾದ್ಯನ್ಯಕರ್ತವ್ಯಾಭಾವಪ್ರದರ್ಶನಾರ್ಥಮ್' ಎಂದೂ ವ್ಯಾಖ್ಯಾನಮಾಡಿರುತ್ತಾರೆ. ಆದ್ದರಿಂದ ವಿವಿದಿಷಾಸಂನ್ಯಾಸಿಗೂ ಕೂಡ ಬಹಿರಂಗವಾದ ಕರ್ಮಗಳು ಎಂದರೆ ಅಧ್ಯಯನ–ಜಪ–ಪೂಜಾ–ತರ್ಪಣಾದಿಗಳು ಇಲ್ಲವೆಂದಮೇಲೆ ಪರಮಹಂಸನಿಗಂತೂ ಸ್ವಪ್ನದಲ್ಲಿಯೂ ಅವು ಸಂಭವಿಸಲಾರವು–ಎಂದೇ ಭಾಷ್ಯಕಾರರು ಅಭಿಪ್ರಾಯಪಡುತ್ತಾರೆ. ಪರಮಾರ್ಥಸಂನ್ಯಾಸ, ವಿದ್ವತ್‌ಸಂನ್ಯಾಸ, ನೈಷ್ಕರ್ಮ್ಯಸಿದ್ಧಿ, ಸಾಂಖ್ಯಬುದ್ಧಿ, ಜ್ಞಾನನಿಷ್ಠೆ - ಇವೆಲ್ಲ ಒಂದೇ ಅರ್ಥದ ಶಬ್ದಗಳೆಂದು ತಿಳಿಯಬಹುದು.

## ೭. ಪರಮಹಂಸದೀಕ್ಷಾವಿಚಾರ

ಈಗ ಸಂನ್ಯಾಸಿಗಳ ಆಚಾರ–ದೀಕ್ಷಾ– ಆಹ್ನಿಕಾದಿಗಳ ವಿಷಯಕ್ಕೆ ಸ್ವಲ್ಪ ವಿಚಾರಮಾಡೋಣ. ಸಂನ್ಯಾಸಗ್ರಹಣವಿಧಿಯಂತೆ (೧) ಪ್ರೈಷೋಚ್ಚಾರ (೨) ಅಭಯಪ್ರದಾನ (೩) ಕಾಷಾಯವಸ್ತ್ರದಂಡಾದಿಗ್ರಹಣ (೪) ಗುರುಮುಖದಿಂದ ಪ್ರಣವೋಪದೇಶ (೫) ಮಹಾವಾಕ್ಯೋಪದೇಶ– ಇವೇ ಮುಂತಾದವುಗಳು ಆಚಾರದಲ್ಲಿ ಕಂಡುಬರುತ್ತವೆ. ಇವುಗಳಲ್ಲಿಯೂ ಮತಭೇದವಿದೆ. ಅವುಗಳೆಲ್ಲ ನಮಗೆ ಇಲ್ಲಿ ವಿಚಾರಕ್ಕೆ ವಿಷಯವಲ್ಲ. ಆದರೆ ಪರಮಹಂಸಸಂನ್ಯಾಸಿಗೆ ಇವುಗಳುಂಟೆ? ಅವನು ವಿಧಿಬದ್ಧನೆ ? ಅಲ್ಲವೆ ? ಎಂಬಿದನ್ನು ಪರಿಶೀಲಿಸೋಣ. ಭಾಷ್ಯಕಾರರ ಮತದಂತೆ : "ವೇದೋಕ್ತಪಾರಿವ್ರಾಜ್ಯವೆಂದರೆ ಇದೊಂದೇ (ಪರಮಹಂಸಸಂನ್ಯಾಸವೊಂದೇ). ಯಜ್ಞೋಪವೀತದಂಡಕಮಂಡಲುಗಳ ಸ್ವೀಕಾರವುಳ್ಳ ಆಶ್ರಮವು ವೈದಿಕವಲ್ಲ. ಅದು ಸ್ಮಾರ್ತ(ಸ್ಮೃತಿವಿಹಿತ)ಸಂನ್ಯಾಸವು. ಏಕೆಂದರೆ ಶ್ರುತಿಯಲ್ಲಿ 'ಮುಂಡಃ, 'ಅಪರಿಗ್ರಹಃ, 'ಅಸಂಗಃ'–ಎಂದೇ ಇರುತ್ತದೆ' ಎಂದು ತಿಳಿಯಬರುತ್ತದೆ. ಮತ್ತೊಂದು ಕಡೆ 'ಬ್ರಹ್ಮಸಂಸ್ಥಃ' ಎಂಬ ಶಬ್ದಕ್ಕೆ ವ್ಯಾಖ್ಯಾನಮಾಡುವಾಗ ಭಾಷ್ಯಕಾರರು 'ಬ್ರಹ್ಮದಲ್ಲಿಯೇ ಪರಿಸಮಾಪ್ತಿಯನ್ನು ಹೊಂದುವಿಕೆ ಎಂದರೆ 'ಬ್ರಹ್ಮಚಿಂತನೆಯೊಂದನ್ನು ಬಿಟ್ಟು ಬೇರೆಯ ಕರ್ತವ್ಯವೇನೂ ಇಲ್ಲದಿರುವಿಕೆ' ಎಂದು ಬರೆದಿದ್ದಾರೆ. ಗೀತಾಭಾಷ್ಯದಲ್ಲಿಯೂ ಅನಾತ್ಮಜ್ಞರು ಮಾಡುವ ಕರ್ಮಸಂನ್ಯಾಸಪ್ರಸ್ತಾವದಲ್ಲಿ ಕರ್ತೃತ್ವಬುದ್ಧಿಯಿರುವವನಿಗೆ ಮಾತ್ರವೇ ಈ ದಂಡಕಮಂಡಲ್ವಾದಿಗಳ ಪರಿಗ್ರಹವು ಹೊಂದುವದರಿಂದ ಕರ್ತೃತ್ವಾದಿಗಳನ್ನೂ ಪೂರ್ಣವಾಗಿ ಸಂನ್ಯಾಸಮಾಡಿರುವ ಪರಮಹಂಸನಿಗೆ ಯಾವ ವಿಧಿನಿಷೇಧಗಳೂ ಅನ್ವಯಿಸುವದಿಲ್ಲ ಎಂದೇ ಬರೆದಿರುತ್ತಾರೆ.

ಆದ್ದರಿಂದ ಬ್ರಹ್ಮಸಂಸ್ಥನಾಗಿರುವದು, ಓಂಕಾರವನ್ನು ಜಪಿಸುವದು, ಯಮನಿಯಮಾದಿಸಂಪನ್ನನಾಗಿರುವದು, ಬ್ರಹ್ಮಚರ್ಯನಿಷ್ಠನಾಗಿರುವದು-ಇವುಗಳನ್ನು ಬಿಟ್ಟರೆ ದಂಡಧಾರಣಾದಿಗಳು ಯಾವವನ್ನೂ ವಿವಿದಿಷಾ ಸಂನ್ಯಾಸಿಗೂ ಕೂಡ ವಿಧಿಸಿರುವದರ ಪರಾಮರ್ಶವು ಭಾಷ್ಯದಲ್ಲಿ ಕಂಡುಬರುವದಿಲ್ಲ. ಪರಮಹಂಸನಿಗಂತೂ ಇಲ್ಲವೇಇಲ್ಲ-ಎಂದು ತಿಳಿದುಬರುತ್ತದೆ.

## ೮. ಸಂನ್ಯಾಸವಿಷಯದಲ್ಲಿ ಸ್ಮೃತಿವಾಕ್ಯಗಳು

ಈಗ ಸ್ಮೃತಿಗಳಲ್ಲಿ ಸಂನ್ಯಾಸಧರ್ಮದ ವಿಷಯಕ್ಕೆ ದೊರಕಬಹುದಾದ ವಿಷಯಗಳನ್ನು ವಿಚಾರಮಾಡಬಹುದಾಗಿದೆ. ಆರುಣಿಕೋಪನಿಷತ್ತು, ಪರಮಹಂಸೋಪನಿಷತ್ತು, ನಾರದಪರಿವ್ರಾಜಕೋಪನಿಷತ್ತು- ಮುಂತಾದ ಕೆಲವು ಉಪನಿಷತ್ತುಗಳಲ್ಲಿ ತುರೀಯಾಶ್ರಮದ ಪರಾಮರ್ಶವೂ ದಂಡಧಾರಣದ ವಿಷಯವೂ ಕಂಡುಬಂದಿರುತ್ತದೆ. ಆದರೆ ಆ ಉಪನಿಷತ್ತುಗಳನ್ನು ಶಂಕರಾಚಾರ್ಯರು ತಮ್ಮ ಭಾಷ್ಯಗಳಲ್ಲಿ ಪರಾಮರ್ಶಿಸಿಲ್ಲ. ಪ್ರಸ್ಥಾನಾಂತರಭಾಷ್ಯಕಾರರುಗಳೂ ಉದಾಹರಿಸಿಲ್ಲ. ಈ ಉಪನಿಷತ್ತುಗಳ ಪ್ರಾಮಾಣ್ಯವಿಷಯದಲ್ಲಿಯೇ ವಾದಿಗಳಲ್ಲಿ ಮತಭೇದಗಳಿವೆ. ಆದ್ದರಿಂದ ಇವುಗಳನ್ನು ಬಿಟ್ಟು ಸ್ಮೃತಿಗಳನ್ನು ವಿಚಾರಮಾಡಬಹುದಾಗಿದೆ.

ಸ್ಮೃತಿಗ್ರಂಥಗಳಲ್ಲಿ ವಸಿಷ್ಠಸ್ಮೃತಿ, ದಕ್ಷಸ್ಮೃತಿ, ಲಘುವಿಷ್ಣುಸ್ಮೃತಿ, ಶಂಖಸ್ಮೃತಿ, ಬೋಧಾಯನಧರ್ಮಸೂತ್ರ- ಮುಂತಾದವುಗಳಲ್ಲಿ ಸಂನ್ಯಾಸಿಗಳಿಗೆ ದಂಡಧಾರಣೆಯ ವಿಷಯಕ್ಕೆ ಪ್ರಮಾಣವಾಕ್ಯಗಳು ಸಿಗುತ್ತವೆ. ಆದರೆ ಈ ವಾಕ್ಯಗಳು ಎಲ್ಲಿಯೂ ಪಾರಮಹಂಸಸಂನ್ಯಾಸವನ್ನು ಕುರಿತು ತಾತ್ಪರ್ಯವುಳ್ಳವಾಗಿಲ್ಲ. ಪರಮಹಂಸಸಂನ್ಯಾಸವನ್ನು ಇವು ವಿಧಿಸಿಯೂ ಇಲ್ಲ. ಒಂದುವೇಳೆ ಒಂದೆರಡು ಕಡೆಗಳಲ್ಲಿ ಪರಮಹಂಸಶಬ್ದದಿಂದಲೇ ಪರಾಮರ್ಶಿಸಿ ಸಂನ್ಯಾಸಿಗೆ ದಂಡಧಾರಣವನ್ನು ಹೇಳಿದ್ದರೂ ಆ ದಂಡಧಾರಣೆಗೆ ಏನೊಂದೂ ಫಲವನ್ನು ಹೇಳದೆ ಇರುವದು, ಯಾವ ಸ್ಮೃತಿಗಳಲ್ಲಿಯೂ ಈ ಫಲವನ್ನು ಕುರಿತು ವಿಚಾರಮಾಡದೆಇರುವದು- ಈ ಕಾರಣಗಳಿಂದ ಏಕದೇಶತಾತ್ಪರ್ಯವುಳ್ಳ ಈ ವಾಕ್ಯಗಳನ್ನು ದುರ್ಬಲಗಳೆಂದೇ ತಿಳಿಯಬೇಕು. ಆದ್ದರಿಂದ ದಂಡಧಾರಣವು ನಿಯತವಲ್ಲ. 'ನ ಮುಖ್ಯೋಽಸ್ತಿ' ಎಂದು ವಚನವೂ ಇರುತ್ತದೆ.

ಕೆಲವರು ಹೀಗೆ ಹೇಳುತ್ತಾರೆ : 'ಹದಿನೆಂಟುಬಾರಿ ಸೂತಸಂಹಿತೆಯನ್ನು ಅಧ್ಯಯನಮಾಡಿ ಭಾಷ್ಯಕಾರಶಂಕರರು ಭಾಷ್ಯಗಳನ್ನು ರಚಿಸಿರುವದರಿಂದ ಪುರಾಣವಚನಗಳೆಲ್ಲವೂ ಭಾಷ್ಯಕಾರರಿಗೆ ಪ್ರಮಾಣವೆಂದೇ ಭಾವಿಸಬೇಕು. ಅದರಂತೆ ದಂಡಗ್ರಹಣವು ವಿಹಿತವಾಗಿರುವ ಸ್ಮೃತಿವಾಕ್ಯಗಳ ಪ್ರಮಾಣವನ್ನು ಸ್ವೀಕರಿಸಬೇಕು.' ಇದಕ್ಕೆ ಉತ್ತರವೇನೆಂದರೆ : ಭಾಷ್ಯಕಾರರು ಹದಿನೆಂಟುಬಾರಿ ಸೂತಸಂಹಿತೆಯನ್ನು ಓದಿದ್ದರೆಂಬುದು ಒಂದು ಸುದ್ದಿಮಾತ್ರವೇ ಆಗಿದೆ. ಸೂತಸಂಹಿತೆಯ

ಒಂದು ವಾಕ್ಯವೂ ಭಾಷ್ಯದಲ್ಲಿ ಪರಾಮೃಷ್ಟವಾಗಿಲ್ಲ. ಇದು ಹಾಗಿರಲಿ. 'ಏಕದಂಡೀ ತ್ರಿದಂಡೀ ವಾ' ಎಂಬ ವಾಕ್ಯದಲ್ಲಿ ವಿಕಲ್ಪವನ್ನು ಹೇಳಿರುವದರಿಂದ ನಿಯಮದಿಂದ ದಂಡವನ್ನು ಸ್ವೀಕರಿಸಬೇಕಾದದ್ದಿಲ್ಲವೆಂದಾಗುತ್ತದೆ. ದಂಡಧಾರಣಕ್ಕೆ ದೃಷ್ಟ ಪ್ರಯೋಜನವು ಮಾತ್ರ ಕಂಡುಬರುತ್ತದೆ. ಅದು ಪಾರಿವ್ರಾಜ್ಯಕ್ಕೆ ಅಂಗವೆಂದೇನೂ ಆಗಲಾರದು. ಸಂನ್ಯಾಸಿಯನ್ನು ದಂಡಧಾರಣಮಾಡಿಕೊಂಡೇ ಲೋಕೋಪಕಾರ ಮಾಡಬೇಕು- ಎಂದು ನಿಯಮಿಸಲು ಬರುವದಿಲ್ಲ. ಜಮದಗ್ನಿವಚನದಲ್ಲಿ ದಂಡಾತ್ಮ ಸಂಯೋಗವು ಯಾವಾಗಲೂ ಇರತಕ್ಕದ್ದು- ಎಂದಿದೆಯಾದರೂ ಅದಕ್ಕೆ ಅದೃಷ್ಟ ಫಲವೇನನ್ನೂ ಹೇಳಿರುವದಿಲ್ಲ. ಆದ್ದರಿಂದ ದಂಡಿಯಾಗಲೀ ಅದಂಡಿಯಾಗಲೀ ವಿವಿದಿಷಾಸಂನ್ಯಾಸಿಯು ಶ್ರವಣಮನನಾದಿಗಳನ್ನು ಮಾಡಲು ಯಾವ ಅಡ್ಡಿಯೂ ಇಲ್ಲ. ಶ್ರವಣಾದಿಗಳಿಗೆ ದಂಡವು ಉಪಕಾರಕವೆಂದು ಹೇಳಲೂ ಬರುವದಿಲ್ಲ. ಆದ್ದರಿಂದ ಇದರ ಚರ್ಚೆಯನ್ನು ಬೆಳೆಯಿಸಿ ಪ್ರಯೋಜನವಿಲ್ಲ. ಏಷಣೆಗಳನ್ನು ಬಿಟ್ಟು ಮೇಲೆದ್ದಿರುವ ಸಂನ್ಯಾಸಿಗೆ ದಂಡತರ್ಪಣ, ದೇವ-ಋಷಿ-ಪಿತೃ-ತರ್ಪಣಗಳಂತೂ ಹೊಂದುವಂತೆಯೇ ಇಲ್ಲ.

## ೯. ಗುರೂಪದೇಶವಿಚಾರ

ಪ್ರತಿಯೊಬ್ಬ ವಿರಕ್ತನೂ ಸಮಿತ್ಪಾಣಿಯಾಗಿ ಶ್ರೋತ್ರಿಯ ಬ್ರಹ್ಮನಿಷ್ಠನಾದ ಸದ್ಗುರುವನ್ನು ವಿಧಿವತ್ತಾಗಿ ಬಳಿಸಾರಬೇಕು. ಆಚಾರ್ಯನು ಬ್ರಹ್ಮವಿದ್ಯೆಯನ್ನು ಯೋಗ್ಯನಾದ ಶಿಷ್ಯನಿಗೆ ಉಪದೇಶಮಾಡಬೇಕು- ಎಂಬೀ ವಿಷಯಕ್ಕೆ ಯಾವ ಮತ ಭೇದವೂ ಇರುವದಿಲ್ಲ. ಇದು ಎಲ್ಲರಿಗೂ ಒಪ್ಪಾಗಿದೆ.

ಆದರೆ ಪರಮಹಂಸರಿಗೆ ಪಂಚೀಕರಣಪೂರ್ವಕ ಪ್ರಣವೋಪದೇಶವಾಗಬೇಕು ; ಇಲ್ಲದಿದ್ದರೆ ಶಿಷ್ಯತ್ವವೇ ಸಿದ್ಧಿಸುವದಿಲ್ಲ- ಎಂಬಿದನ್ನು ಮಾತ್ರ ವಿಚಾರಮಾಡ ಬೇಕಾಗಿದೆ. ಪಂಚೀಕರಣಗ್ರಂಥವು ಶಂಕರಾಚಾರ್ಯರಿಗೆ ಸಮ್ಮತವಾಗಿತ್ತೆ ? ಇಲ್ಲವೆ ? ಎಂಬಿದು ವಾದಗ್ರಸ್ತವಾಗಿದೆ. ಶಂಕರಭಾಷ್ಯಗಳಲ್ಲಿ ಋಷಿದೇವತಾಚ್ಛಂದಃ ಪುರಸ್ಸರವಾಗಿ ಓಂಕಾರವನ್ನು ಜಪಿಸುವ ಬಗ್ಗೆ ಆಧಾರವು ಸಿಗುವದಿಲ್ಲ. ಪ್ರಶ್ನ-ಬೃಹದಾರಣ್ಯಕ-ಕಠಾದಿಗಳಲ್ಲಿ ಓಂಕಾರವನ್ನು ಬ್ರಹ್ಮಕ್ಕೆ ಪ್ರತೀಕ ಮತ್ತು ಆಲಂಬನ ಗಳಾಗಿ ಹೇಳಿದೆ. ಆದ್ದರಿಂದ ಶಿಷ್ಯನ ಚಿತ್ತಭೂಮಿಕೆಗೆ ಅನುಗುಣವಾಗಿ ಗುರುವು ಪ್ರತೀಕವಾಗಿಯೋ ಆಲಂಬನವಾಗಿಯೋ ಓಂಕಾರವನ್ನು ಉಪದೇಶಮಾಡಬಹುದು. ಅನಂತರ ಅದರ ಅರ್ಥಗ್ರಹಣದಲ್ಲಿಯೂ ಶಿಷ್ಯನನ್ನು ನಿಯೋಗಿಸಬಹುದು. ಇಷ್ಟೇ ಹೊರತು ಹೆಚ್ಚಿನ ವಿಚಾರಗಳು ಭಾಷ್ಯಸಮ್ಮತವೆಂತ ಕಂಡುಬರುವದಿಲ್ಲ.

## ೧೦. ಮಹಾವಾಕ್ಯವಿಚಾರ

ಪ್ರಣವೋಪದೇಶದ ಅನಂತರ ಗುರುವು ಮಹಾವಾಕ್ಯವನ್ನು ಶಿಷ್ಯನ ಶಾಖಾನು ಗುಣವಾಗಿ ಉಪದೇಶಮಾಡುವ ಪದ್ಧತಿಯು ಜಾರಿಯಲ್ಲಿದೆ. ನಾಲ್ಕು ವೇದಗಳಿಗೆ

ನಾಲ್ಕು ಮಹಾವಾಕ್ಯಗಳನ್ನು ಗೊತ್ತುಪಡಿಸಿದ್ದು, ಅವುಗಳಿಗೆ ಋಷಿದೇವತಾ ಛಂದಸ್ಸುಗಳನ್ನು ಜೋಡಿಸಲಾಗಿದೆ. ಈ ಕ್ರಮದಲ್ಲಿ ಉಪದೇಶವನ್ನು ಸ್ವೀಕರಿಸಿ ಜಪಮಾಡಬೇಕೆಂದು ವಿಧಿಸಲಾಗುತ್ತಿದೆ. ಈ ವಿಷಯದಲ್ಲಿ ಹೇಳತಕ್ಕದ್ದೇನೆಂದರೆ : ಮಹಾವಾಕ್ಯಗಳು ಜೀವಪರಬ್ರಹ್ಮರ ಐಕ್ಯವನ್ನು ಹೇಳುವದರಲ್ಲಿ ತಾತ್ಪರ್ಯವುಳ್ಳವುಗಳು. ಅವುಗಳನ್ನು ಜಪಕ್ಕಾಗಿ ವಿನಿಯೋಗಿಸುವದು ಎಂದಿಗೂ ಸರಿಯಲ್ಲ. ಇದು ಉಪನಿಷತ್ ಸಿದ್ಧಾಂತಕ್ಕೆ ವಿರುದ್ಧವಾಗುತ್ತದೆ. ತತ್, ತ್ವಂ ಎಂಬಿವುಗಳನ್ನು ಮಹಾಮಂತ್ರಗಳೆಂದು ಕಲ್ಪಿಸುವದು ಸೂಕ್ತವಲ್ಲ. ಶುಕರಹಸ್ಯೋಪನಿಷತ್ತಿನಲ್ಲಿ ಹೇಳಿರುವಂತೆ ಇವುಗಳನ್ನು ಜಪಕ್ಕೆ ವಿನಿಯೋಗಿಸುವದರಲ್ಲಿ ತಪ್ಪೇನಿದೆ ? ಎಂದು ಕೇಳಬಹುದು. ಆದರೆ ಸರ್ವೋಪನಿಷತ್ಸಿದ್ಧಾಂತಕ್ಕೆ ವಿರುದ್ಧವಾಗಿ ಶುಕರಹಸ್ಯದ ಪ್ರಾಮಾಣ್ಯವನ್ನು ಸ್ವೀಕರಿಸುವದು ಸರಿಯಲ್ಲ. ಅಂತೂ ಮಹಾವಾಕ್ಯೋಪದೇಶವು ಒಂದುವೇಳೆ ಗುರುಮುಖದಿಂದ ಸಂನ್ಯಾಸಕಾಲಕ್ಕೆ ಆಗಬಹುದಾದರೂ ಅದರ ಜಪವು ಮಾತ್ರ ಸರಿಯಲ್ಲ. ಮತ್ತು ಮಹಾವಾಕ್ಯಗಳು ನಾಲ್ಕೇ ಎಂಬುದಕ್ಕೆ ಪ್ರಮಾಣವೇನೂ ಇಲ್ಲ. 'ಓಂ ತತ್ಸತ್' ಎಂಬಿದೂ ಐದನೆಯ ಮಹಾವಾಕ್ಯವೆಂದು ಕೆಲವರು ಹೇಳುತ್ತಿದಾರೆ. ಆದ್ದರಿಂದ ಮಹಾವಾಕ್ಯಜಪವು ಪರಮಹಂಸನಿಗೆ ಕರ್ತವ್ಯವೆಂದು ಹೇಳುವದು ಯಾವ ರೀತಿಯಿಂದಲೂ ಸಮಂಜಸವಾಗಿ ಕಾಣುತ್ತಿಲ್ಲ.

## ೧೧. ಹೆಸರಿಡುವಿಕೆ

ಮಹಾವಾಕ್ಯೋಪದೇಶದ ಅನಂತರ ಸಂನ್ಯಾಸಿಗಳಿಗೆ ಹೊಸ ಹೆಸರನ್ನಿಟ್ಟು ಗಿರಿ–ತೀರ್ಥ–ಅರಣ್ಯ– ಮುಂತಾದ ದಶನಾಮಗಳಲ್ಲೊಂದನ್ನು ಜೋಡಿಸಿ ವ್ಯವಹರಿಸುವ ಪದ್ಧತಿಯಿದೆ. ಇದನ್ನು ಯೋಗಪಟ್ಟವೆಂದು ಕರೆಯುತ್ತಾರೆ. ಲೋಕವ್ಯವಹಾರಕ್ಕಾಗಿಯೂ ಸಂಪ್ರದಾಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದಲೂ ಈ ನಾಮಕರಣವು ಸರಿಯೆನಿಸಿದರೂ ಹೀಗೆಯೇ ಹೆಸರಿಡಬೇಕು-ಎಂಬ ನಿರ್ಬಂಧವು ಸಲ್ಲದು. ಗೌಡಪಾದ-ಶಂಕರಾಚಾರ್ಯರುಗಳು ತಮ್ಮ ಹೆಸರಿಗೆ ಗಿರಿ– ಮುಂತಾದವನ್ನು ಜೋಡಿಸಿಕೊಂಡಿರುವದಿಲ್ಲ. ಆದರೂ ಅವರುಗಳು ಸಂಪ್ರದಾಯಪ್ರವರ್ತಕರಾದ ಆಚಾರ್ಯರುಗಳೆಂದು ಗೌರವಿಸಲ್ಪಟ್ಟಿರುತ್ತಾರೆ. ಆದ್ದರಿಂದ ಓಂಕಾರೋಪದೇಶವನ್ನು ಕರ್ಮಶೇಷವಾಗಿ ಮಾಡುವದು, ಜೀವೇಶ್ವರೈಕ್ಯಬೋಧಕವಾಕ್ಯಗಳನ್ನು ಮಹಾವಾಕ್ಯಗಳೆಂದು ಕರೆಯುವದು, ಮತ್ತು ಅವುಗಳನ್ನು ಜಪದಲ್ಲಿ ತೊಡಗಿಸುವದು, ಸಂನ್ಯಾಸಿಗೆ ದಂಡ, ಕಮಂಡಲು, ನಾಮನಿರ್ದೇಶಗಳ ಬಗ್ಗೆ ಆಗ್ರಹಪಡಿಸುವದು ಇವುಗಳು ಸಲ್ಲದೆಂದು ಹೇಳಬೇಕಾಗಿದೆ.

## ೧೨. ಪಾರಿವ್ರಾಜ್ಯದ್ವಯ

ವಿವಿದಿಷಾಸಂನ್ಯಾಸ, ವಿದ್ವತ್‌ಸಂನ್ಯಾಸ- ಎಂಬಿದಾಗಿ ಪರಮಹಂಸ ಪಾರಿವ್ರಾಜ್ಯವು ಎರಡು ವಿಧವಾಗಿದೆ. 'ಏತಂ ವೈ ತಮಾತ್ಮಾನಂ ವಿದಿತ್ವಾ' ಎಂಬಲ್ಲಿ ವಿದ್ವತ್‌ಸಂನ್ಯಾಸವನ್ನೂ 'ಏತಮೇವ ಪ್ರವ್ರಾಜಿನೋ ಲೋಕಮಿಚ್ಛನ್ತಃ' ಎಂಬಲ್ಲಿ ವಿವಿದಿಷಾಸಂನ್ಯಾಸವನ್ನೂ ಶ್ರುತಿಯಲ್ಲಿ ಹೇಳಿರುತ್ತದೆ. ಮನೋನಾಶ, ವಾಸನಾಕ್ಷಯ, ಜ್ಞಾನಾಭ್ಯಾಸಗಳಿಗಾಗಿ ಸ್ವೀಕರಿಸುವದು ವಿದ್ವತ್‌ಸಂನ್ಯಾಸವೆಂದೂ ಆತ್ಮತತ್ತ್ವದ ಶ್ರವಣಮನನನಿದಿಧ್ಯಾಸನಗಳಿಗಾಗಿ ಸ್ವೀಕರಿಸುವ ಸಂನ್ಯಾಸವು ವಿವಿದಿಷಾಸಂನ್ಯಾಸವೆಂದೂ ಕೆಲವರ ಅಭಿಪ್ರಾಯವಿದೆ. ಇದು ಸರಿಯಲ್ಲ. ಏಕೆಂದರೆ ವಿದ್ವಾಂಸನು ಕೃತಕೃತ್ಯನೂ ಜ್ಞಾನಿಯೂ ಆಗಿರುವದರಿಂದ ಅವನಿಗೆ ಮನೋನಾಶಾದಿಕರ್ತವ್ಯಶೇಷಗಳಿರುವವು- ಎಂಬಿದು ಹೊಂದುವದಿಲ್ಲ. ವಿದ್ವಾಂಸನಾದರೆ ಕರ್ತವ್ಯಶೇಷವಿರುವದೇ ಇಲ್ಲ ; ಕರ್ತವ್ಯಶೇಷವು ಉಳಿದಿದ್ದರೆ ಅವನು ಜ್ಞಾನಿಯೇ ಅಲ್ಲ- ಎಂದೇ ಶಂಕರಾಚಾರ್ಯರು ತಮ್ಮ ಭಾಷ್ಯಗಳಲ್ಲಿ ಸ್ಪಷ್ಟಗೊಳಿಸಿರುತ್ತಾರೆ. ವಿವಿದಿಷಾಸಂನ್ಯಾಸಿಯಾದರೆ ಅವನ ಹೆಸರೇ ತಿಳಿಸುವಂತೆ ಬ್ರಹ್ಮಜಿಜ್ಞಾಸೆಯಲ್ಲಿ ಅವನು ಅಧಿಕೃತನೇ ಆಗಿರುತ್ತಾನೆ. ಅವನು ಸಾಧನಚತುಷ್ಟಯಸಂಪನ್ನನೂ ಆಗಿರಲೇಬೇಕು- ಎಂದು ಭಾಷ್ಯಕಾರರು ಮೊದಲೇ ತಿಳಿಸಿದ್ದಾರೆ. ಆದ್ದರಿಂದ ವಿವಿದಿಷಾಸಂನ್ಯಾಸಿಗೆ ಕರ್ತವ್ಯವೆಂದರೆ ಬ್ರಹ್ಮಜಿಜ್ಞಾಸೆ, ತದ್ವಿಚಾರಾನುಸಂಧಾನಗಳನ್ನು ಮಾತ್ರ ಹೇಳಬಹುದು. ಬ್ರಹ್ಮನಿಷ್ಠನಾಗಿರುವದೊಂದೇ ವಿದ್ವತ್‌ಸಂನ್ಯಾಸಿಯ ಲಕ್ಷಣವು. ವಿವಿದಿಷಾಸಂನ್ಯಾಸಿಯಾಗಿದ್ದು ಬ್ರಹ್ಮವಿದ್ಯೆಯನ್ನು ಬಯಸುವವನು ಅದನ್ನು ಗುರುಮುಖದಿಂದ ಸಂಪಾದಿಸಿಕೊಳ್ಳಬೇಕೆಂಬುದು ಸರಿಯಾದ ಅಭಿಪ್ರಾಯವೇ ಆಗಿದೆ. ಅದಕ್ಕೆ ಶ್ರುತಿಯ ಸಂಮತಿಯೂ ಇರುತ್ತದೆ.

## ೧೩. ಸಂನ್ಯಾಸಧರ್ಮವಿಚಾರ

ಯತಿಯಾದವನು ಶಾಸ್ತ್ರನಿಷಿದ್ಧವಾದ ಆಚಾರಗಳನ್ನು ಕೈಬಿಟ್ಟು ಜ್ಞಾನಸಾಧನವಾಗಿರುವ ಪ್ರಶಸ್ತವಾದ ಸದಾಚಾರಗಳನ್ನು ಅನುಷ್ಠಾನಮಾಡಬೇಕೆಂಬುದು ಸಾಮಾನ್ಯ ನಿಯಮವಾಗಿದೆ. ಶ್ರುತಿಯಲ್ಲಿಯೂ "ನಾವಿರತೋ ದುಶ್ಚರಿತಾತ್...." ಎಂದು ಮುಂತಾಗಿ ಹೇಳಿರುತ್ತದೆ. ಸ್ಮೃತಿಗಳಲ್ಲಿ ಹೇಳಿರುವ ಜ್ಞಾನಸಾಧನವಾದ ಅನುಷ್ಠಾನಗಳನ್ನೂ ಅವನು ಮಾಡಬೇಕು. ಗೀತೆಯಲ್ಲಿ ಹೇಳಿರುವ ಅಮಾನಿತ್ವಾದಿಗಳು ಸದಾ ಅನುಷ್ಠೇಯಗಳಾಗಿರುತ್ತವೆ. ಆದ್ದರಿಂದ ಗುರುವನ್ನು ಬಳಿಸಾರಿ ನಿರಂತರವಾಗಿ ಆತನನ್ನು ಸೇವಿಸುತ್ತಾ ಅವನ ಲಕ್ಷಣಗಳನ್ನು ಅನುಕರಣ ಮಾಡುತ್ತಾ ಅವನನ್ನೇ ಆರಾಧಿಸುತ್ತಾ ಜ್ಞಾನಸಾಧನಾನುಷ್ಠಾನಗಳನ್ನು ನಡೆಯಿಸಬೇಕು. ಶ್ರವಣಮನನಾದಿಗಳು ಬಹು ಮುಖ್ಯ ಸಾಧನಗಳಾದ್ದರಿಂದ ಅವುಗಳನ್ನು ಅವಶ್ಯವಾಗಿ ಕೈಗೊಳ್ಳಲೇಬೇಕು.

## ೧೪. ದೈನಂದಿನಕರ್ತವ್ಯವಿಚಾರ

ಪರಮಹಂಸಸಂನ್ಯಾಸದಲ್ಲಿ ವಿದ್ವತ್‌ಸಂನ್ಯಾಸಿಯು ವಿಧಿನಿಷೇಧಗಳನ್ನು ಮೀರಿದವನಾದ್ದರಿಂದ ಅವನನ್ನು ಯಾವ ಶಾಸ್ತ್ರವೂ ಕಟ್ಟುಪಾಡಿಗೆ ಒಳ ಪಡಿಸಲಾರದು. ಆದರೆ ಅವನೇನೂ ಸ್ವೇಚ್ಛಾಪ್ರವೃತ್ತಿಯುಳ್ಳವನಾಗಿರುವದಿಲ್ಲ. ಹಸಿದವನೇ ವಿಷಾನ್ನವನ್ನು ಊಟಮಾಡದೆ ಇರುವಾಗ ಹೊಟ್ಟೆತುಂಬಿದವನು ಉಂಡಾನೆ ? ಹಾಗೆ ಜ್ಞಾನಪ್ರಾಪ್ತಿಗೆ ಮೊದಲೇ ದುರಾಚಾರಗಳನ್ನು ಬಿಟ್ಟಿರುವವನು ಜ್ಞಾನವುಂಟಾದಮೇಲೆ ನಿಷಿದ್ಧಾಚರಣೆಯನ್ನು ಮಾಡಿಯಾನೆ ? ಅದು ಸಂಭವಿಸಲೇ ಆರದು. ಇನ್ನು ವಿವಿದಿಷಾಸಂನ್ಯಾಸಿಗೆ ನಿಯಮಗಳೇನು ? ಎಂಬಿದನ್ನು ವಿಚಾರ ಮಾಡೋಣ.

ಭಿಕ್ಷಾಟನಂ ಜಪೋ ಧ್ಯಾನಂ ಸ್ನಾನಂ ಶೌಚಂ ಸುರಾರ್ಚನಮ್ ।
ಕರ್ತವ್ಯಾನಿ ಷಡೇತಾನಿ ಯತೀನಾಂ ನೃಪದಂಡವತ್ ॥

ಎಂಬ ನಾರದವಚನವೊಂದನ್ನು ಹಲವರು ಉದಾಹರಿಸಿರುತ್ತಾರೆ. ಸ್ನಾನಶೌಚಗಳು ಎಲ್ಲ ಸಂನ್ಯಾಸಿಗಳೂ ಅನುಷ್ಠಾನಮಾಡತಕ್ಕದ್ದು- ಎಂಬಿದು ಸರಿ. ಜಪಧ್ಯಾನ ಗಳನ್ನು ತಮ್ಮತಮ್ಮ ಗುರುಗಳ ಉಪದೇಶದಂತೆ ಕೈಗೊಳ್ಳಬಹುದು. ಆದರೆ ಪ್ರಣವ ಜಪವನ್ನು ಅವನವನ ಚಿತ್ತಭೂಮಿಕೆಗೆ ತಕ್ಕಂತೆ ಮಾಡಬಹುದಾದರೂ ಮಹಾ ವಾಕ್ಯಜಪವನ್ನು ಮಾತ್ರ ಮಾಡತಕ್ಕದ್ದಲ್ಲ. ದೇವತಾರ್ಚನೆಯೂ ಸಂನ್ಯಾ- ಸಿಗೆ ಹೊಂದುವದಿಲ್ಲ. ಏಕೆಂದರೆ ಪೂಜಾಸಾಮಗ್ರಿಗಳನ್ನು ಹೊಂದಿಸಿಕೊಳ್ಳು ವದೇ ಮುಂತಾದವು ಚಿತ್ತವಿಕ್ಷೇಪಕ್ಕೆ ಕಾರಣವಾಗಿದ್ದು ಅದ್ವೈತಾನುಸಂಧಾನಕ್ಕೆ ವಿಘ್ನವಾಗುವದು. ಮತ್ತು ಸಂಕಲ್ಪಾದಿಗಳು, ಅದೃಷ್ಟಫಲನಿರೀಕ್ಷೆ-ಇವು ಸಂನ್ಯಾಸಿಗೆ ತ್ಯಾಜ್ಯವಾದವುಗಳಾಗಿವೆ. ಆದ್ದರಿಂದ ಸ್ನಾನ, ಶೌಚಗಳು, ಪ್ರಾತಃಸ್ಮರಣ, ಗುರುವಂದನೆ, ಜಪ, ಪ್ರಣವಾನುಸಂಧಾನ, ಧ್ಯಾನ, ವಿಚಾರ- ಇವುಗಳು ಕರ್ತವ್ಯಗಳೆಂದು ಹೇಳಬಹುದಾಗಿದೆ. ಶ್ರವಣಾದಿಗಳು ಮುಖ್ಯಕರ್ತವ್ಯ ಗಳು. ಶ್ರವಣಕ್ಕೆ ಸಿದ್ಧತೆ-ಎಂದರೆ ಶಾಂತಿಪಾಠ, ದಕ್ಷಿಣಾಮೂರ್ತಿಸ್ತೋತ್ರ ಪಠನ, ಗುರುವಂದನೆ, 'ಓಂ ನಮೋ ಬ್ರಹ್ಮಾದಿಭ್ಯೋ....' ಎಂಬ ವಾಕ್ಯ ಪಠನ, "ಸರ್ವೋಪಪ್ಲವರಹಿತಃ ಪ್ರಜ್ಞಾನಘನಃ ಪ್ರತ್ಯಗರ್ಥೋ ಬ್ರಹ್ಮೈ ವಾಹಮಸ್ಮಿ" ಎಂಬ ವಾಕ್ಯಾನುಸಂಧಾನ ಇವು ಕರ್ತವ್ಯಗಳು. ಮಧ್ಯಾಹ್ನ ದಲ್ಲಿಯೂ ಮತ್ತೆ ಸ್ನಾನ-ಜಪಾದಿಗಳು, ಭಿಕ್ಷೆ ಇವು ಮಾಡತಕ್ಕದ್ದು. ಭಿಕ್ಷೆ ಎಂದರೆ ಮಾಧೂಕರ, ಪ್ರಾಕ್‌ಪ್ರಣೀತ, ಅಯಾಚಿತ, ತಾತ್ಕಾಲಿಕ, ಉಪಪನ್ನ- ಎಂಬ ಐದು ವಿಧಗಳಲ್ಲಿ ಯಾವದನ್ನಾದರೂ ಮಧ್ಯಾಹ್ನದ ವೇಳೆಯಲ್ಲಿ ಮಾತ್ರ ಮಾಡ ಬೇಕು. ಚಾತುರ್ವರ್ಣ್ಯಗಳಲ್ಲಿಯೂ ಭಿಕ್ಷೆ- ಮಾಡುವದು, ಸಂಜೆಯೂ ಭಿಕ್ಷೆಮಾಡು ವದು- ಇವು ಆಪದ್ಧರ್ಮಗಳಾಗಿ ಮಾತ್ರ ಹೇಳಲ್ಪಟ್ಟಿವೆ. ಲೋಹಮಯವಲ್ಲದ ಬಿದಿರು, ಮಣ್ಣು ಅಥವಾ ಮರದ ಪಾತ್ರೆಗಳನ್ನು ಉಪಯೋಗಿಸಬೇಕು. ಇದು ಸಂನ್ಯಾಸಿಗೆ ತಕ್ಕದ್ದಾಗಿರುವದು. ಆದರೆ ಈಗ ಆಚರಣೆಯಲ್ಲಿರುವಂತೆ

ಗೃಹಸ್ಥನಾದವನು ಬೆಳಗ್ಗೆಯೇ ಬಂದು ನಮಸ್ಕರಿಸಿ ಭಿಕ್ಷಾವಂದನೆಮಾಡಿ ಸಂನ್ಯಾಸಿಗಳನ್ನು ಊಟಕ್ಕೆ ಕರೆಯುವ ಪದ್ಧತಿಯು ಶಾಸ್ತ್ರಾಧಾರವಿಲ್ಲದ್ದಾಗಿದೆ. ಇನ್ನು ಗುರುಸಮೀಪದಲ್ಲಿದ್ದು ಶಾಸ್ತ್ರಶ್ರವಣವನ್ನು ಮಾಡುತ್ತಿರುವಾಗ ಬ್ರಹ್ಮಚಾರಿಯಾದವನು ಅನುಸರಿಸುವ ಎಲ್ಲಾ ಧರ್ಮಗಳನ್ನೂ ಅನುಸರಿಸಬೇಕು. ಗುರುಶುಶ್ರೂಷೆಯು ಸರ್ವಥಾ ಕರ್ತವ್ಯವೇ ಆಗಿರುವದು. ಭಿಕ್ಷೆಯ ಅನಂತರ ಸ್ಮೃತಿಪುರಾಣಗಳ ಅವಲೋಕನ, ಶ್ರದ್ಧಾಲುಗಳಾದ ಗೃಹಸ್ಥರು ಕೇಳಬಹುದಾದ ಆಧ್ಯಾತ್ಮಿಕವಿಷಯವಾದ ಪ್ರಶ್ನೆಗಳಿಗೆ ಉತ್ತರಿಸುವದು– ಇವುಗಳಿಂದ ಕಾಲಯಾಪನೆ ಮಾಡಬೇಕು. ಸಾಯಂಕಾಲ ಮತ್ತೆ ಸ್ನಾನ–ಪ್ರಣವಜಪಾದಿಗಳನ್ನು ಮಾಡಿ ಗುರುವು ಮಲಗಿಕೊಂಡಮೇಲೆ ತಾನೂ ಮಲಗಬೇಕು.

## ೧೫. ದೇಶಸಂಚಾರ

ಗುರುವಿನ ಸಮೀಪದಲ್ಲಿರುವಾಗ ಶ್ರವಣಾದಿಗಳನ್ನು ಮಾಡಿ ಆತ್ಮಜ್ಞಾನ ಪಾಂಡಿತ್ಯವನ್ನು ಸಂಪಾದಿಸಿಕೊಂಡಮೇಲೆ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಸಂಚಾರಮಾಡುತ್ತಿರುವದೂ ಯತಿಧರ್ಮವಾಗಿದೆ. ಹಿಮಾಚಲ– ವಿಂಧ್ಯ ಪರ್ವತಗಳ ಮಧ್ಯೆ ಇರುವ ಪುಣ್ಯಭೂಮಿಯಲ್ಲಿ ಸಂಚರಿಸಬೇಕೆಂದು ಯತಿಧರ್ಮಸಂಗ್ರಹವೆಂಬ ಗ್ರಂಥದಲ್ಲಿ ಒಂದುಕಡೆ ತಿಳಿಸಿದೆ. ಯೋಗಾಭ್ಯಾಸಕ್ಕೆ ಅನುಕೂಲವಾಗಿದ್ದು ಮನಃಪ್ರಸನ್ನತೆಗೆ ಕಾರಣವಾಗಿರುವಂಥ ಸ್ಥಲಗಳಲ್ಲಿಯೂ ಸಂಚರಿಸಬಹುದು. ಅಂತೂ ಒಂದೇ ಜಾಗದಲ್ಲಿ ಹೆಚ್ಚುದಿನಗಳಿರಬಾರದು. ಮಳೆಗಾಲದಲ್ಲಿ ಮಾತ್ರ ಒಂದುಕಡೆ ನೆಲಸಿರಬೇಕು. ಆಪತ್ಕಾಲದಲ್ಲಿ ಒಂದೇಕಡೆಯಲ್ಲಿ ವಾಸಮಾಡಬಹುದು. ತನ್ನ ನಾಮಗೋತ್ರಗಳನ್ನಾಗಲೀ ದೇಶವನ್ನಾಗಲೀ ಯಾರಿಗೂ ತಿಳಿಸಬಾರದು. ಮೂಕಾಂಧಬಧಿರರಂತೆ– ಎಂದರೆ ಸಾಧ್ಯವಾದಷ್ಟು ಜನಗಳಲ್ಲಿ ಬೆರೆಯದೆ ವ್ಯವಹಾರವನ್ನು ಅಂಟಿಸಿಕೊಳ್ಳದೆ ಇದ್ದುಕೊಂಡಿರಬೇಕು. ಹೀಗೆಲ್ಲ ಕೆಲವು ನಿಯಮಗಳನ್ನು ಸ್ಮೃತಿಗಳಲ್ಲಿ ತಿಳಿಸಿದೆ. ಆತ್ಮಾನುಸಂಧಾನಕ್ಕೆ ಅಡ್ಡಿಯಾಗದಂತೆ ಇವುಗಳನ್ನೆಲ್ಲ ಆಚರಿಸಬಹುದು. ನಿಷಿದ್ಧ ಕರ್ಮಗಳನ್ನು ಸಂಪೂರ್ಣವಾಗಿ ಬಿಟ್ಟವನಾಗಿರಬೇಕು. ನಿಂದೆ, ಸ್ತುತಿ, ಮಾನ, ಅಪಮಾನ–ಪೂಜಾ-ತಿರಸ್ಕಾರಗಳಲ್ಲಿ ಸಮಭಾವನೆಯುಳ್ಳವನಾಗಿರಬೇಕು. ಎಲ್ಲರಿಗೂ ಹಿತವನ್ನು ಕೋರುತ್ತಾ ಎಲ್ಲರಲ್ಲಿಯೂ ಮೈತ್ರಿಯುಳ್ಳವನಾಗಿರಬೇಕು. ಇವುಗಳೂ ಅನುಷ್ಠೇಯವೇ ಆಗಿವೆ.

## ೧೬. ವ್ಯಾಸಪೂಜಾನುಷ್ಠಾನ

ಗೌತಮಧರ್ಮಸೂತ್ರದಲ್ಲಿ ಹೇಳಿರುವಂತೆ ಮಳೆಗಾಲದಲ್ಲಿ ಸಂನ್ಯಾಸಿಯು ಸಂಚಾರಮಾಡದೆ ಒಂದೇಕಡೆಯಲ್ಲಿ ವಾಸಿಸಬೇಕು. ಆಗ ವ್ಯಾಸಪೂಜೆಯನ್ನೂ ಮಾಡಬೇಕು. ಆಷಾಢ ಶುಕ್ಲ ಹುಣ್ಣಿಮೆಯ ದಿನ ವ್ಯಾಸರೂಪನಾದ ಶ್ರೀಮನ್ನಾರಾಯಣನನ್ನು ಪೂಜಿಸಬೇಕು– ಎಂಬಿವೇ ಮುಂತಾದ ವಿಧಿಗಳ ವಿಷಯದಲ್ಲಿ

ವಿಚಾರಮಾಡುವದಾದರೆ : ವ್ಯಾಸಪೂಜೆಯೇನೋ ಶ್ರೇಷ್ಠವಾದುದೇ ಸರಿ. ವ್ಯಾಸರು ಸರ್ವಜ್ಞರೂ ಭಗವದವತಾರಪುರುಷರೂ ಆಗಿದ್ದು ಪರಮಹಂಸರಿಗೆ ಮಾನ್ಯರಾಗಿರುತ್ತಾರೆ. ಶ್ರೀಕೃಷ್ಣಭಗವಂತನೂ ಲೋಕಾನುಗ್ರಹಾರ್ಥವಾಗಿ ವೈದಿಕವಾದ ಧರ್ಮದ್ವಯಗಳನ್ನು ಅರ್ಜುನನಿಗೆ ಉಪದೇಶಮಾಡಿರುವ ಲೋಕಗುರುವಾಗಿರುವದರಿಂದ ಆ ಭಗವಂತನನ್ನು ಪೂಜಿಸುವದೂ ಯೋಗ್ಯವಾದದ್ದೇ ಸರಿ. ಆದರೆ ಈ ಪೂಜೆಯು ಬಾಹ್ಯಪ್ರತೀಕಗಳಲ್ಲಿ ಹೇಗೆತಾನೆ ಪರಮಹಂಸನಿಗೆ ಸಂಭವಿಸುತ್ತದೆ ? ಎಂಬಿದು ವಿಚಾರಣೀಯವಾಗಿದೆ. ಬ್ರಹ್ಮನಿಷ್ಠೆಯ ಸಿದ್ಧಿಗಾಗಿಯೇ ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸುವವನಿಗೆ ವೇದಾಂತಚಿಂತನೆಯ ಹೊರತು ಮತ್ತೆ ಯಾವ ಬಹಿರಂಗಸಾಧನಗಳೂ ಹೊಂದಲಾರವು.

## ಉಪಸಂಹಾರ

ಹೀಗೆಯೇ ಈ ಗ್ರಂಥದಲ್ಲಿ ಶ್ರೀಶ್ರೀಗಳವರು, ಯತಿಗಳು ಒಂದೆಡೆ ಸೇರಿದಾಗ ನಡೆದುಕೊಳ್ಳಬೇಕಾದ ಕ್ರಮಗಳು, ಆಹ್ನಿಕಪ್ರಕಾರಗಳು, ಓಂಕಾರೋಪಾಸನಾ ವಿಚಾರ, ಓಂಕಾರದ ಮೂಲಕ ಪರಬ್ರಹ್ಮೋಪಾಸನಾಪ್ರಕಾರ, ಯೋಗಾಭ್ಯಾಸ, ಮನೋನಿಗ್ರಹ- ಮುಂತಾದ ಸಾಧನಗಳು, ಈ ವಿಷಯಗಳನ್ನು ಕುರಿತು ವಿವರವಾಗಿ ಚರ್ಚಿಸಿರುತ್ತಾರೆ. ಅವರು ವಿಚಾರಮಾಡಿರುವ ವಿಷಯಗಳಿಗೆ ಆಧಾರವಾಗಿ ಸ್ಮೃತಿವಾಕ್ಯಗಳನ್ನೂ ಸಂಗ್ರಹಿಸಿಕೊಟ್ಟಿರುತ್ತಾರೆ. ಈ ಸ್ಮೃತಿಗಳಲ್ಲಿ ಮನು, ಬೋಧಾಯನ, ಯಾಜ್ಞವಲ್ಕ್ಯ, ಗೌತಮಾದಿಸ್ಮೃತಿಕಾರರ ವಾಕ್ಯಗಳೂ ಹೇರಳವಾಗಿರುತ್ತವೆ. ಸಂನ್ಯಾಸಿಗಳಿಗೆ ಮಾಡಬೇಕಾದ ಔರ್ಧ್ವದೇಹಿಕಕ್ರಿಯಾವಿಷಯದಲ್ಲಿ ಗ್ರಂಥಾರಂಭದಲ್ಲಿ ಸೂಚನೆಯಿದ್ದರೂ ಕಡೆಯಲ್ಲಿ ಏನೂ ಪ್ರಸ್ತಾಪಿಸಿರುವದಿಲ್ಲ. ಇದರಿಂದ ಈ ಗ್ರಂಥವು ಪ್ರಾಯಶಃ ಅಪೂರ್ಣವಾಗಿರಬೇಕು-ಎಂದು ಭಾವಿಸಿದ್ದೇನೆ.

ಹೀಗೆ ಶ್ರೀಶ್ರೀಗಳವರ ವಿಚಾರಸರಣಿಯನ್ನು ಸೂಕ್ಷ್ಮವಾಗಿ ಪರಿಚಯಮಾಡಿಕೊಡುವದಕ್ಕಾಗಿ ಈ ಸಂಗ್ರಹರೂಪವಾದ ಪ್ರಬಂಧವನ್ನು ವಾಚಕರ ಮುಂದೆ ಇಟ್ಟಿದೆ. ಶ್ರದ್ಧಾವಂತರೂ ಮುಮುಕ್ಷುಗಳೂ ಆದವರು ಈ ವಿಚಾರಗಳಲ್ಲಿ ಜಿಜ್ಞಾಸೆಯನ್ನು ಮುಂದುವರಿಸಬಹುದಾಗಿದೆ- ಎಂದು ವಿಜ್ಞಾಪಿಸುತ್ತೇನೆ.

ಗುರುಕಿಂಕರ-

ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ.

# ಹಿನ್ನುಡಿ

ಪೂಜ್ಯ ಶ್ರೀ ಮೂರ್ತಿಗಳವರ ದಿವ್ಯಲೇಖನಿಯಿಂದ ಹೊರಬಂದ ಈ ಜ್ಞಾನ ಗಂಗೆಯು ಪರಬ್ರಹ್ಮಸಾಗರವನ್ನು ಸೇರುವ ಮುನ್ನ ಈ ಒಂದು ಸಣ್ಣ ನೀರಿನ ತೊರೆಯು ಆ ಪಾವನವಾದ ಜ್ಞಾನಗಂಗೆಯಲ್ಲಿ ಸೇರಿ ಸಾರ್ಥಕವಾಗುತ್ತಿರುವದು ನನಗೆ ತುಂಬಾ ಸಂತೋಷವೆನಿಸಿರುತ್ತದೆ.

ಸುರಗಂಗೆ ವಿಷ್ಣುವಿನ ಪಾದದಿಂದ ಹೊರಟು ಭೂಮಂಡಲವನ್ನೇ ಬಿರಿಯುವ ವೇಗದಲ್ಲಿ ಬಂದಾಗ ಪರಶಿವನು ತನ್ನ ಜಡೆಯಲ್ಲಿ ಅದನ್ನು ಧರಿಸಿ ಭೂದೇವಿಗೆ ತಾಳುವಷ್ಟು ಪ್ರಮಾಣದಲ್ಲಿ ಮಾತ್ರ ತನ್ನ ತಲೆಯಿಂದ ಹರಿಬಿಟ್ಟನಂತೆ. ಪ್ರಕೃತ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ಲೆಕ್ಕಣಿಕೆಯಿಂದ ಹೊರ ಹೊರಟು ಶಾಂಕರವೇದಾಂತಪ್ರಪಂಚವನ್ನೇ ಗಡಗಡಿಸುತ್ತ ಬರುತ್ತಿರುವ ಜ್ಞಾನ ಗಂಗೆಯನ್ನು ಪರಶಿವಸ್ವರೂಪಿಗಳಾದ ಪೂಜ್ಯ ಶ್ರೀ ಮೂರ್ತಿಗಳು ತಮ್ಮ ಜಟೆಯಲ್ಲಿ (ಶಿರಸ್ಸಿನಲ್ಲಿ) ಹೊತ್ತು ಜನಸಾಮಾನ್ಯರಿಗೆ ಸಹನೆಯಾಗುವಷ್ಟು ವೇಗದಲ್ಲಿ ಮಾತ್ರ ಹೊರಬಿಟ್ಟಿರುವ ಜ್ಞಾನಗಂಗೆಯೇ ಈ 'ಸಮ್ಯಗ್ದರ್ಶನ'ಗ್ರಂಥ ಎಂದು ನನಗನಿಸಿದೆ.

ಶ್ರೀರಾಮತೀರ್ಥರ ಸಮಗ್ರಕೃತಿಗಳು, ಶ್ರೀರಮಣರ ಬೋಧೆಗಳನ್ನು ಶ್ರೀ ಮೂರ್ತಿಗಳವರ ಲೇಖನದ ಮೂಲಕ ಓದಿ ಆನಂದಿಸುವ ಕನ್ನಡನಾಡಿನ ಜಿಜ್ಞಾಸು ಗಳಿಗೆ ಈ ಸಲ "ಪರಿಶುದ್ಧ ಶಂಕರಾದ್ವೈತವೇದಾಂತ"ವನ್ನೇ ಪ್ರತಿನಿಧಿಸಿರುವ ಈ ಗ್ರಂಥವು ಬಹಳ ಸಕಾಲಕ್ಕೆ ಕೈಸೇರಿರುವದೆಂದೇ ನನ್ನ ಅಭಿಪ್ರಾಯ.

ಶ್ರೀ ಗೌಡಪಾದಕಾರಿಕೆಗಳು ಶ್ರೀ ಶಂಕರಾಚಾರ್ಯರ-ಪ್ರಸ್ಥಾನತ್ರಯಭಾಷ್ಯ ಗಳು, ಉಪದೇಶಸಾಹಸ್ರಿ, ಸುರೇಶ್ವರಾಚಾರ್ಯರ ಬೃಹದಾರಣ್ಯಕ ಹಾಗೂ ತೈತ್ತಿರೀಯವಾರ್ತಿಕ ಮತ್ತು ನೈಷ್ಕರ್ಮ್ಯಸಿದ್ಧಿ–ಈ ಸಾಂಪ್ರದಾಯಿಕ ಗ್ರಂಥಗಳಲ್ಲಿ ಏಕಕಂಠದಿಂದ ನಿರೂಪಿಸಿರುವ ಅದ್ವೈತತತ್ತ್ವವೇ "ಪರಿಶುದ್ಧಶಂಕರಾದ್ವೈತ ವೇದಾಂತವು". ಶ್ರೀ ಸುರೇಶ್ವರರಿಂದೀಚೆಗೆ ಬಂದಿರುವ ವ್ಯಾಖ್ಯಾನ ಉಪ ವ್ಯಾಖ್ಯಾನಗಳೂ ಶ್ರೀ ಶಂಕರ ಹಾಗೂ ಶ್ರೀ ಸುರೇಶ್ವರರ ಹೆಸರಿನಿಂದ ಪ್ರಸಿದ್ಧ ವಾಗಿರುವ ಇತರ ಗ್ರಂಥಗಳೂ ಅದ್ವೈತಸಿದ್ಧಾಂತವನ್ನು ಭಿನ್ನಭಿನ್ನರೀತಿಯಿಂದಲೂ ತರ್ಕಪ್ರಧಾನವಾಗಿಯೂ ಪಾತಂಜಲಾದಿಯೋಗಸಿದ್ಧಾಂತಗಳ ಕಲಬೆರಕೆಯಿಂದಲೂ ಪ್ರತಿಪಾದಿಸುತ್ತಾ ಹೊರಟಿರುವದರಿಂದ ಸಾಮಾನ್ಯ ಜಿಜ್ಞಾಸುವಿಗೆ ಅದ್ವೈತತತ್ತ್ವದ ಅನುಭವದಲ್ಲಿ ನೆಲೆನಿಲ್ಲುವದು ಅಸಾಧ್ಯವಾಗಿರುವದಲ್ಲದೆ ಕೆಲವುಟ್ಟಿಗೆ ಅಡ್ಡಿಯೂ ಆಗಿರುತ್ತದೆ. ಈ ಅಡ್ಡಿಯನ್ನು ನಿವಾರಿಸಿ ಸಾರ್ವತ್ರಿಕಪೂರ್ಣಾನುಭವದ ಆಧಾರ

ದಿಂದ ನಿರೂಪಿಸಿದ "ಪರಿಶುದ್ಧಶಂಕರಾದ್ವೈತವೇದಾಂತ" ಸಿದ್ಧಾಂತದ ಮರ್ಮ ವನ್ನು ತೋರಿಸಿಕೊಟ್ಟು ಮುಮುಕ್ಷುಗಳಿಗೆ ಮಾರ್ಗವನ್ನು ನಿಷ್ಕಂಟಕವಾಗಿ ಮಾಡಿದ ಶ್ರೇಯಸ್ಸು ಶ್ರೀಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳಿಗೇ ಮೀಸ ಲಾಗಿದೆ.

ವೇದಾಂತದ ಜ್ಞಾನಸಂಪಾದನೆಗೆ ತರ್ಕ–ವ್ಯಾಕರಣ–ಮೀಮಾಂಸಾದಿಶಾಸ್ತ್ರ ಗಳ ಅಧ್ಯಯನವೇ ಪ್ರಧಾನವಾಗಿರಬೇಕೆಂದೂ ವೇದಾಂತದಲ್ಲಿ ಹೇಳಿದ ಬ್ರಹ್ಮ ತತ್ತ್ವದ ಅನುಭವವನ್ನು ಪಡೆಯಬೇಕಿದ್ದರೆ ಪಾತಂಜಲಯೋಗದಲ್ಲಿ ಹೇಳಿದ ಅಸಂ ಪ್ರಜ್ಞಾತಸಮಾಧಿಯವರೆಗಿನ (ನಿರ್ವಿಕಲ್ಪಸಮಾಧಿ) ಅನುಭವಗಳನ್ನು ಪಡೆಯ ಬೇಕೆಂದೂ ಅಲ್ಲಿಗೂ ಅವಿದ್ಯಾಲೇಶವು ಉಳಿದಿದ್ದು ವಿದೇಹಕೈವಲ್ಯದಲ್ಲಿಯೇ ನಿಜವಾದ ಮುಕ್ತಿಯು (ಸತ್ತಬಳಿಕವೇ) ಸಿಕ್ಕುವದೆಂದೂ ಪ್ರತಿಪಾದಿಸುತ್ತಾ ಸಾಮಾನ್ಯ ಮುಮುಕ್ಷುವಿಗೆ ಅನುಭವ ಹಾಗೂ ಶಾಸ್ತ್ರಜ್ಞಾನ ಎರಡೂ ದಕ್ಕಲಾರದೆಂಬ ಭಯ ವನ್ನೇ ಹೊಗಿಸುವ ಪ್ರಯತ್ನಗಳು ಸಾವಿರಾರು ವರ್ಷಗಳಿಂದಲೂ ನಡೆಯುತ್ತಾ ಬಂದಿವೆ. ಒಟ್ಟಿನಲ್ಲಿ ಈಗ ತರ್ಕ, ಪಾತಂಜಲಯೋಗಗಳಿಗೆ ವೇದಾಂತವನ್ನು ಹಂಚಿಬಿಟ್ಟಿರುವಷ್ಟೇ ನಮಗೆ ಕಂಡುಬರುವದೇ ಹೊರತು ವೇದಾಂತಶಾಸ್ತ್ರವು ತನ್ನದೇ ಆದ ಸ್ವಂತರೂಪದಿಂದ ಎಲ್ಲಿಯೂ ದೊರಕದಂತೆಯೇ ಆಗಿದೆ. ಹರಿಕಥೆಯವರು ಹಾಸ್ಯಕ್ಕಾಗಿ ಹೇಳುವದೇನೆಂದರೆ ಬ್ರಾಹ್ಮಣನೊಬ್ಬನನ್ನು ಭೋಜರಾಜನು ಕೇಳಿದ ನಂತೆ : "ಸ್ವಾಮಿ ಎಲ್ಲಿಂದ ಬಂದಿರಿ"?

ಬ್ರಾಹ್ಮಣ : ಕೈಲಾಸದಿಂದ ಬಂದೆ.

ರಾಜ : ಕೈಲಾಸದಲ್ಲಿ ಶಿವನು ಚೆನ್ನಾಗಿರುವನೆ ?

ಬ್ರಾಹ್ಮಣ : ಅವನು ಸತ್ತುಹೋದನು. ಈಗ ಅವನಿಲ್ಲ.

ರಾಜ : ಹಾ ! ಅದು ಹೇಗೆ ?

ಬ್ರಾಹ್ಮಣ : ರಾಜನೆ, ಕೇಳು. ಅರ್ಧದೇಹವನ್ನು ವಿಷ್ಣುವಿಗೂ ಹಾಗೂ ಅರ್ಧವನ್ನು ಪಾರ್ವತಿಗೂ ಕೊಟ್ಟಿದ್ದರಿಂದ ಶಿವನು ಇಲ್ಲವೇ ಇಲ್ಲ ಎಂದನಂತೆ. ಹಾಗಾದರೆ ಶಿವನ ಆಸ್ತಿಪಾಸ್ತಿಗಳೆಲ್ಲವೂ ಏನಾದವು ? ಎಂದು ರಾಜನು ಕೇಳಲು ಆ ಬ್ರಾಹ್ಮಣನು 'ಚಂದ್ರನು ಆಕಾಶಕ್ಕೂ ಗಂಗೆಯು ಸಾಗರಕ್ಕೂ, ವೃಷಭವು ರೈತನ ಹೊಲದಲ್ಲಿ ದುಡಿಯಲಿಕ್ಕೂ ಸರ್ಪಗಳು ಪಾತಾಳಕ್ಕೂ ಹೋದವು. ಆ ಪರಶಿವನಲ್ಲಿದ್ದ ಶೌರ್ಯ ಔದಾರ್ಯಾದಿಸದ್ಗುಣಗಳು ತಮ್ಮಲ್ಲಿ ಸೇರಿಹೋದವು. ರಾಜನೆ, ಅವನ ಕೈಯಲ್ಲಿದ್ದ ಭಿಕ್ಷಾಪಾತ್ರೆಯು ನನ್ನನ್ನು ಹುಡುಕಿಕೊಂಡು ಬಂತು' ಎಂದನಂತೆ. ಈ ಬ್ರಾಹ್ಮಣನ ಬುದ್ಧಿಚಾತುರ್ಯಕ್ಕೆ ಮೆಚ್ಚಿ ರಾಜನು ಅವನಿಗೆ ಹೇರಳವಾದ ಸಂಪ ತ್ತನ್ನು ದಾನಮಾಡಿದನಂತೆ. ಇದೇ ರೀತಿ ವೇದಾಂತದ ಅರ್ಧಭಾಗವು ತರ್ಕಕ್ಕೂ ಇನ್ನರ್ಧವು ಪಾತಂಜಲಯೋಗಕ್ಕೂ ಹಂಚಿಹೋದಬಳಿಕ ವೇದಾಂತವು ಸತ್ತೇ ಹೋಯಿತೆನ್ನುವ ಪರಿಸ್ಥಿತಿ ಈಗ ಉದ್ಭವವಾಗಿದೆ. ಇಂಥ ಕಷ್ಟಪರಿಸ್ಥಿತಿಯಲ್ಲಿ

ಸಾಕ್ಷಾತ್ ಶಂಕರರೇ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳ ರೂಪದಿಂದ ಅವತರಿಸಿ ಬಂದು "ವೇದಾಂತವು ಸಾರ್ವತ್ರಿಕಪೂರ್ಣಾನುಭವವನ್ನು ಆಧರಿಸಿರುವದೇ ಹೊರತು ವೈಯಕ್ತಿಕಾನುಭವತರ್ಕಗಳನ್ನಲ್ಲ ಎಂದು ತೋರಿಸಿದ್ದೇ ಅಲ್ಲದೆ ವೈದಿಕವಾದ ನಿರಪಾಯವಾಗಿರುವ ಕರ್ಮಯೋಗ, ಭಗವದುಪಾಸನೆಗಳ ಮೂಲಕ ಚಿತ್ತಶುದ್ಧಿಏಕಾಗ್ರತೆ ವೈರಾಗ್ಯಾದಿಗಳನ್ನು ಸಂಪಾದಿಸಿ ಸದ್ಗುರುಗಳ ಬೋಧದ ಸಹಾಯದಿಂದ ತನ್ನ ಅನುಭವದಲ್ಲಿ ಈ ಅದ್ವಿತೀಯ ಆತ್ಮಸ್ವರೂಪವನ್ನು ಜಿಜ್ಞಾಸುವು ಕಂಡುಕೊಳ್ಳಬಹುದೆಂಬುದನ್ನೂ ಸಹ ತೋರಿಸಿಕೊಟ್ಟರೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಇಂಥ ಪರಿಶುದ್ಧಪ್ರಕ್ರಿಯೆಯನ್ನೇ ಆಧರಿಸಿ ಶ್ರೀ ಮೂರ್ತಿಗಳವರು ತಮ್ಮ ಈ ಸಮ್ಯಗ್ದರ್ಶನ ಗ್ರಂಥದಲ್ಲಿ ಯಾಜ್ಞವಲ್ಕ್ಯಮಹಾಮುನಿಗಳು ತಮ್ಮ ಪ್ರಿಯಪತ್ನಿ ಮೈತ್ರೇಯಿಗೆ ಬೋಧಿಸಿರುವ ಪರಮರಹಸ್ಯಮಯವಾದ ವಿಷಯಗಳೆಲ್ಲವನ್ನೂ ಅತಿ ಸುಲಭ ಸರಳ ಶೈಲಿಯಲ್ಲಿ ವಿವರಿಸಿದ್ದಾರೆ. ಇಂತಹ ಅತ್ಯುತ್ತಮವರ್ಗದ ಲೇಖಕರನ್ನು ಪಡೆದ ಕನ್ನಡನಾಡು ನಿಜಕ್ಕೂ ಧನ್ಯವಾದುದು.

ಪರಿಶುದ್ಧವೇದಾಂತದ ಪರಮತತ್ತ್ವಗಳು ಹೇಗೆ ವಿಕೃತವಾಗಿವೆ ? ಎಂಬುದಕ್ಕೆ ಉದಾಹರಣೆಯಾಗಿ ನಾನು ಈ ಹಿನ್ನುಡಿಯಲ್ಲಿ ಮೈತ್ರೇಯಿಗೆ ಯಾಜ್ಞವಲ್ಕ್ಯರು ಬೋಧಿಸಿರುವ ಇದೇ ಸಂದರ್ಭದ ಕೊನೆಯ ಮಂತ್ರವನ್ನು ಕುರಿತು ಕೆಲವು ವಿಷಯಗಳನ್ನು ತೋರಿಸಲಿಚ್ಛಿಸುವೆನು. ಈ ಚರ್ಚೆಯೇ ಮೊದಲು ವರ್ಣಿಸಿದ ಜ್ಞಾನಗಂಗೆಯನ್ನು ಸೇರುವ ಸಣ್ಣ ನೀರಿನ ತೊರೆಯಾಗಿದೆ.

ಬೃಹದಾರಣ್ಯಕದ ೨-೪-೧೪ನೇ ಮಂತ್ರವೇ ಈ ಬೋಧದ ಕೊನೆಯ ಮಂತ್ರ. ಈಗಿನ ವೇದಾಂತಿಗಳ ಅಭಿಪ್ರಾಯವು ಈ ವಿಷಯದಲ್ಲಿ ಈ ಕೆಳಗಿನಂತೆ ಇರುತ್ತದೆ. ಇಲ್ಲಿ "ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್" "ಎಲ್ಲಿ ಇದೆಲ್ಲವೂ ಆತ್ಮವೇ ಆಗಿರುವದೋ ಅಲ್ಲಿ ಯಾವನು ಏತರಿಂದ ಏನನ್ನು ನೋಡಿಯಾನು ?" (ಕೇಳಿಯಾನು ? ಇತ್ಯಾದಿ) ಎಂಬುದು ಇದರ ಅರ್ಥ. ಇಲ್ಲಿ ಶಬ್ದಾರ್ಥದ ಪ್ರಕಾರ ಆತ್ಮತತ್ತ್ವವು ಮಾತ್ರವೇ ಉಳಿದಾಗ ನೋಡುವ, ಕೇಳುವ, ಮುಟ್ಟುವ, ಮೂಸುವ ವ್ಯವಹಾರವು ಇರುವದೇ ಇಲ್ಲ ಎಂದೇ ಅರ್ಥವಾಗುತ್ತದೆ. ಇದೇ ಮಂತ್ರದಲ್ಲಿ ಮೊದಲು 'ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ' ಎಲ್ಲಿ ದ್ವೈತವಿರುವಂತೆ ತೋರುವದೋ ಅಲ್ಲಿ ಇನ್ನೊಂದರಿಂದ ಇನ್ನೊಂದನ್ನು ನೋಡುತ್ತಾನೆ." (ಕೇಳುತ್ತಾನೆ, ಮುಟ್ಟುತ್ತಾನೆ ಇತ್ಯಾದಿ.) ಎಂದು ಹೇಳಿರುತ್ತದೆ. ಇದರಿಂದ ದ್ವೈತವ್ಯವಹಾರವು ಇರುವದೇ ಅಜ್ಞಾನಾವಸ್ಥೆ ಎಂದೂ ದ್ವೈತವ್ಯವಹಾರವು ಇಲ್ಲದಂತಾಗುವದೇ ಜ್ಞಾನದ ಫಲವೆಂದೂ ಗೊತ್ತಾಗುತ್ತದೆ. ಸಾಮಾನ್ಯಮನುಷ್ಯನಿಗೆ ಗಾಢನಿದ್ರೆಯಲ್ಲಿ ದ್ವೈತಪ್ರಪಂಚವು ಕಾಣುವದಿಲ್ಲ. ಎಚ್ಚೆತ್ತಾಗ ಪ್ರಪಂಚವು ಕಾಣುತ್ತದೆ. ಹೀಗಿದ್ದರೂ ಗಾಢನಿದ್ರಾನುಭವವು ಆತ್ಮಜ್ಞಾನವನ್ನು ಪಡೆಯಲು ಸಾಕಾಗಲಾರದು. ಏಕೆಂದರೆ ನಿದ್ರೆಯಲ್ಲಿ ಅವಿದ್ಯೆಯು (ಅಥವಾ ಜಗದ್ಬೀಜವಾದ

ಮಾಯೆಯು ಅಥವಾ ತಮಸ್ಸಿನ) ಆವರಣವು ಆತ್ಮನಲ್ಲಿರುತ್ತದೆ. ನಿರಾವರಣ ಚೈತನದ ಅನುಭವವು ಅಲ್ಲಿ ಇರುವದಿಲ್ಲ. ಪಾತಂಜಲಯೋಗದಪ್ರಕಾರ ಸಾಧನೆ ಮಾಡಿ ಅಸಂಪ್ರಜ್ಞಾತ (ನಿರ್ವಿಕಲ್ಪ) ಸಮಾಧಿಯ ಅನುಭವವನ್ನು ಪಡೆದರೆ ತಮಸ್ಸನ್ನು ದಾಟಿಹೋಗುವದರಿಂದ ಆ ಅವಸ್ಥೆಯಲ್ಲಿ ನಿರಾವರಣ ಚೈತನ್ಯದಲ್ಲಿ ಸೇರಿರುತ್ತಾನೆ. ಆ ಬಳಿಕವೂ ಪ್ರಾರಬ್ಧಯೋಗವಿರುವದರಿಂದ ಪುನಃ ಎಚ್ಚರಕ್ಕೆ ಬರುತ್ತಾನೆ. ಹಾಗೂ ವ್ಯವಹಾರವನ್ನೂ ಮಾಡುತ್ತಿರುತ್ತಾನೆ. ಆದರೂ ಆತ್ಮಾನುಭವಸಂಪನ್ನನಾಗಿರುತ್ತಾನೆ. ಯಾವದೇ ವ್ಯವಹಾರವು ನಡೆಯಬೇಕಾದರೂ ಅವಿದ್ಯಾಪೂರ್ವಕವಾಗಿಯೇ ನಡೆಯುವದೆಂದು ಅಧ್ಯಾಸಭಾಷ್ಯದಲ್ಲಿ ಶಂಕರರು ಅಪ್ಪಣೆ ಕೊಡಿಸಿರುವದರಿಂದ ಈ ಆತ್ಮಾನುಭವವನ್ನು ಪಡೆದ ಜ್ಞಾನಿಯೂ (ಸಮಾಧಿಯಿಂದ ಉತ್ಥಿತನಾದ ಬಳಿಕ) ವ್ಯವಹರಿಸುವವನಾದ್ದರಿಂದ ಇವನಿಗೂ ಅವಿದ್ಯಾಲೇಶವು ಉಳಿದಿರುವದೆಂದೇ ಸಿದ್ಧವಾಗುತ್ತದೆ. ಈ ಕಾರಣದಿಂದಲೇ ಈ ಜೀವನ್ಮುಕ್ತಿಯು ಮುಖ್ಯ ಮುಕ್ತಿಯಲ್ಲ. ಮತ್ತೇನೆಂದರೆ ಈ ಜ್ಞಾನಿಯ ಪ್ರಾರಬ್ಧಭೋಗವೆಲ್ಲವೂ ಮುಗಿದು ಶರೀರವು ಬಿದ್ದುಹೋದಬಳಿಕ ಆತ್ಮನಲ್ಲಿ ಸೇರಿಹೋಗುವದೆಂಬ ರೂಪದ ವಿದೇಹಕೈವಲ್ಯವೇ ಮುಖ್ಯ ಮುಕ್ತಿಯು.

ಯತ್ರ ತ್ವಸ್ಯ....' ಎಂಬ (ಬೃ. ೨-೪-೧೪) ಮಂತ್ರವು ಈ ವಿದೇಹಕೈವಲ್ಯವನ್ನೇ ಹೇಳುತ್ತದೆ. ಇದಕ್ಕೆ ದೃಷ್ಟಾಂತವಾಗಿ ಸುಷುಪ್ತಿಯ (ಗಾಢನಿದ್ರೆಯ) ಅವಸ್ಥೆಯನ್ನು ಹೇಳುವದೆಂದಿಟ್ಟುಕೊಂಡರೂ ತಪ್ಪಲ್ಲ. ಬೃಹದಾರಣ್ಯಕದ ೩-೪-೨೧ರಿಂದ ೩೨ರವರೆಗಿನ ಭಾಗದಲ್ಲಿ ಮೋಕ್ಷಕ್ಕೆ ದೃಷ್ಟಾಂತವಾಗಿ ಗಾಢನಿದ್ರೆಯನ್ನು ವರ್ಣಿಸಿರುವದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. 'ಅವಿದ್ಯಾಕಾಮುಗಳಿಂದ ಬಿಡುಗಡೆಯಾದ ಸ್ವರೂಪವು' ಎಂದು ಇಲ್ಲಿ ವರ್ಣಿಸಿರುವದಕ್ಕೆ 'ಅವಿದ್ಯೆಯ ಕಾರ್ಯವಿಲ್ಲ' ಎಂದಿಷ್ಟೇ ಅರ್ಥ. ಅವಿದ್ಯಾಬೀಜವು ಅಲ್ಲಿ ಇದ್ದೇಇದೆ. ಹೀಗೆ ಸಾಮಾನ್ಯ ಮಾನವನ ದೃಷ್ಟಿಯಿಂದ ನಿದ್ರೆ, ಪರಮಾರ್ಥಸಾಧಕರ ಅನುಭವದ ದೃಷ್ಟಿಯಿಂದ ನಿರ್ವಿಕಲ್ಪಸಮಾಧಿ, ಕೊನೆಗೆ ಶ್ರುತಿಯ ದೃಷ್ಟಿಯಿಂದ ವಿದೇಹಕೈವಲ್ಯ ಇವುಗಳನ್ನೇ ಈ 'ಯತ್ರ ತ್ವಸ್ಯ' ಎಂಬ (ಬೃ. ೨-೪-೧೪) ಶ್ರುತಿಯು ವರ್ಣಿಸುತ್ತದೆ. ಇದು ಜೀವನ್ಮುಕ್ತಿಯನ್ನು ಹೇಳುವದಿಲ್ಲ. ವ್ಯವಹಾರದ ಅಭಾವದ ಅವಸ್ಥಾವಿಶೇಷವನ್ನೇ ಎಂದರೆ ಯಾವ ವ್ಯವಹಾರವೂ ಇಲ್ಲದಿರುವ ಒಂದಾನೊಂದು ಅವಸ್ಥಾವಿಶೇಷವನ್ನೇ ಹೇಳುತ್ತದೆ ಎಂದೇ ಅರ್ಥಮಾಡಬೇಕು- ಎಂಬಿದು ಈಚಿನ ವೇದಾಂತಿಗಳ ಅಭಿಪ್ರಾಯ. ಈ ಬಗ್ಗೆ ಪಂಚದಶಿ (೭-೧೮೧-೧೮೪) ನೋಡಬೇಕು. ಅಲ್ಲಿ ಆತ್ಮಜ್ಞಾನವಾಗಲು ನಿರ್ವಿಕಲ್ಪಸಮಾಧಿಯ ಅವಶ್ಯಕತೆ ಇಲ್ಲ ಎಂಬ ಸಿದ್ಧಾಂತಕ್ಕೆ, ಪೂರ್ವಪಕ್ಷದವರು ಈ 'ಯತ್ರ ತ್ವಸ್ಯ' ಎಂಬ ಶ್ರುತಿಯನ್ನು ಮುಂದೊಡ್ಡಿ ಜ್ಞಾನಿಗೆ ವ್ಯವಹಾರವಿರಬಾರದಲ್ಲ? ಎಂದು ಆಕ್ಷೇಪಿಸಿದ್ದಾರೆ. ಈ ಪೂರ್ವಪಕ್ಷಕ್ಕೆ ಉತ್ತರವಾಗಿ 'ಈ ಶ್ರುತಿಯು

ನಿದ್ರೆಯನ್ನೂ ವಿದೇಹಕೈವಲ್ಯವನ್ನೂ ವರ್ಣಿಸುವದೇ ಹೊರತು ಜೀವನ್ಮುಕ್ತಿಯನ್ನಲ್ಲ. ಬ್ರಹ್ಮಸೂತ್ರದ 'ಸ್ವಾಪ್ಯಯಸಂಪತ್ತ್ಯೋಃ ಅನ್ಯತರಾಪೇಕ್ಷಂ ಆವಿಷ್ಕೃತಂ ಹಿ' (೪-೪-೧೬) ಎಂಬ ಸೂತ್ರವೂ ಇದೇ ಅಭಿಪ್ರಾಯವನ್ನೇ ಎಂದರೆ (ಈ ಶ್ರುತಿಯು ಗಾಢ ನಿದ್ರೆ ಹಾಗೂ ವಿದೇಹಕೈವಲ್ಯವನ್ನು ಹೇಳಿದೆ ಎಂಬ ಅಭಿಪ್ರಾಯವನ್ನೇ) ದೃಢೀಕರಿಸುತ್ತದೆ- ಎಂದು ಪ್ರಮಾಣವನ್ನು ಕೊಟ್ಟಿದ್ದಾರೆ. ಇದೇ ವ್ಯಾಖ್ಯಾನಕಾರಮತದ ಸಾರ. ಇದಲ್ಲದೆ ಹೀಗೆ ನಿರ್ವಿಕಲ್ಪಸಮಾಧಿಯ ಅವಶ್ಯಕತೆಯು ಜ್ಞಾನಕ್ಕೆ ಇಲ್ಲ ಎಂದು ಪ್ರತಿಪಾದಿಸಿದ ಇದೇ ಪಂಚದಶಿಗ್ರಂಥದ ಮೊದಲನೆಯ ತತ್ತ್ವದೀಪಪ್ರಕರಣದಲ್ಲಿ ಶ್ರವಣ-ಮನನ-ನಿದಿಧ್ಯಾಸವಾದ ಬಳಿಕ ಸಮಾಧಿಯನ್ನು ವರ್ಣಿಸಿ ಅದನ್ನು ಧರ್ಮಮೇಘ ಮುಂತಾದ ಪಾತಂಜಲಯೋಗದ ರೀತಿಯಿಂದ ವರ್ಣಿಸಿದ್ದಾರೆ. (ಪಂ. ೧-೫೩-೬೧) ಯೋಗಾನಂದಪ್ರಕರಣದಲ್ಲಿ "ಸಂಸಾರಿತ್ವವು ಇವನಲ್ಲಿ ಕಾಣಬರುವದಿಲ್ಲವಾದ್ದರಿಂದ ಗಾಢನಿದ್ರೆಯಲ್ಲಿ ಇವನು (ಈ ಜೀವನು) ಬ್ರಹ್ಮವೇ ಆಗಿದ್ದಾನೆ ಜೀವನಲ್ಲ- ಎಂದು ಹೇಳಿ, ಅಲ್ಲಿಯೇ ನಾಲ್ಕು ಶ್ಲೋಕಗಳಾದ ಬಳಿಕ "ಗಾಢನಿದ್ರೆಯಲ್ಲಿ ಪ್ರಾಜ್ಞಜೀವತ್ವವೂ (ಭೋಕ್ತೃತ್ವವೂ) ಬ್ರಹ್ಮಾನಂದವು ಭೋಜ್ಯವಾಗಿರುವದೂ ಅಜ್ಞಾನಮಯವೃತ್ತಿಗಳು ಭೋಗಸಾಧನೆಗಳಾಗಿರುವದೂ ಉಂಟು- ಎಂಬ ವಿಧದ ಪ್ರತಿಪಾದನೆಯು ಇರುವದರಿಂದ "ನಿದ್ರೆಯಲ್ಲದ ದ್ವೈತದ ತೋರಿಕೆಯಿಲ್ಲದ ಕಡೆಯಲ್ಲಿ ಯಾವ ಸುಖವಿದೆಯೋ ಅದೇ ಬ್ರಹ್ಮಾನಂದವು" ಎಂದು ನಿರ್ಣಯಿಸಿರುವದರಿಂದ ಸಮಾಧಿಯ ಅನುಭವವನ್ನು ಒಪ್ಪಿದಂತೆಯೇ ಆಗಿರುತ್ತದೆ. ಭಾಮತೀವ್ಯಾಖ್ಯಾನಕಾರರು ಶ್ರವಣ-ಮನನ-ನಿದಿಧ್ಯಾಸನಗಳೆಂದರೆ ಧಾರಣ, ಧ್ಯಾನ, ಸಮಾಧಿಗಳೆಂದೂ ದರ್ಶನವೆಂದರೆ ಸಾಕ್ಷಾತ್ಕಾರವೆಂದೂ ಸ್ಪಷ್ಟವಾಗಿ ವ್ಯಾಖ್ಯಾನವನ್ನು ಮಾಡಿದ್ದಾರೆ. 'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ'ಗ್ರಂಥದ ೪೪೨ನೇ ಪುಟ ನೋಡಿರಿ. ಹೀಗೆ ದರ್ಶನಾಂತರಗಳ ಸಂಕರ, ಹಾಗೂ ಪೂರ್ವಾಪರವಿರೋಧದ ಹೇಳಿಕೆಗಳು ಈಗ್ಗೆ ವೇದಾಂತದಲ್ಲಿ ಹೇರಳವಾಗಿ ಸೇರಿಕೊಂಡಿವೆ. ಇದೆಲ್ಲವೂ ಈಚಿನ ವೇದಾಂತದ ಮಾತಾಯಿತು. ಈಗ ಶ್ರೀ ಶಂಕರಾಚಾರ್ಯರ ಅಭಿಪ್ರಾಯವನ್ನು ಪರಿಶೀಲಿಸಿ ನೋಡೋಣ. ಅವರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಈ ಬಗ್ಗೆ ಎಲ್ಲಿ ಎಲ್ಲಿ ಹೇಗೆ ಹೇಗೆ ವಿವರಿಸಿದ್ದಾರೆಂಬುದನ್ನು ಇಲ್ಲಿ ವಿಚಾರಿಸಲು ಆರಂಭಿಸೋಣ.

(೧) "ಆತ್ಮನಲ್ಲಿಯೇ ಪ್ರಪಂಚವೆಲ್ಲವೂ ಹುಟ್ಟಿ ನಿಂತು ಅಲ್ಲಿಯೇ ಅಡಗುವದನ್ನು ತೋರಿಸಿ 'ಇದೆಲ್ಲವೂ ಆತ್ಮನೇ ಆಗಿದೆ' ಎಂಬ ಪ್ರತಿಜ್ಞೆಯನ್ನು ತರ್ಕದಿಂದ ಸಾಧಿಸಿದಂತಾಗಿದೆ" ಎಂದು (ಬೃ. ೨-೪-೧೧) ೧೧ನೇ ಮಂತ್ರದವರೆಗಿನ ಭಾಗವನ್ನು ವರ್ಣಿಸಿ ೧೨ನೇ ಮಂತ್ರದ ಉದ್ದೇಶವನ್ನು ವಿವರಿಸುತ್ತಾ "ಈ ಪ್ರಳಯವು ಸ್ವಾಭಾವಿಕ ಹಾಗೂ ತಾತ್ಕಾಲಿಕ" (ಏಕೆಂದರೆ ನಿದ್ರೆಯಿಂದ ಎದ್ದರೆ, ಸಮಾಧಿಸ್ಥಿತಿಯಿಂದ ಹೊರಬಂದರೆ, ಮರಣಹೊಂದಿ ಪುನರ್ಜನ್ಮಕ್ಕೆ ಬಂದರೆ, ಮಹಾಪ್ರಳಯವಾಗಿ ಪುನಃ ಸೃಷ್ಟಿಯು ಆರಂಭವಾದರೆ ಮತ್ತೆ ಈ ದ್ವೈತಪ್ರಪಂಚವು ಮುನ್ನಿನಂತೆ

ಯೇ ತೋರತೊಡಗುತ್ತದೆ.) ಆದ್ದರಿಂದ ಇದು ತಾತ್ಕಾಲಿಕ ಪ್ರಳಯವು ಎಂದು ವರ್ಣಿಸಿದ್ದಾರೆ. ಇದಾದ ಬಳಿಕ "ಇನ್ನು ಬುದ್ಧಿಪೂರ್ವಕವಾಗಿ (ಪ್ರಯತ್ನಪೂರ್ವಕ ವಾಗಿ) ಬ್ರಹ್ಮವಿದ್ಯಾನಿಮಿತ್ತದಿಂದ ಉಂಟಾದ ಪ್ರಳಯವು ಬ್ರಹ್ಮವೇತ್ತರ ಅನುಭವಕ್ಕೆ ಗೋಚರವಾಗಿರುತ್ತದೆ. ಈ ಪ್ರಳಯವು ಆತ್ಯಂತಿಕಪ್ರಳಯವು. ಇದು ಅವಿದ್ಯೆಯು ಪೂರ್ತಿಯಾಗಿ ನಿಂತುಬಿಡುವ-ಇಲ್ಲವಾಗುವದರ ಮೂಲಕವೇ ಉಂಟಾಗುತ್ತದೆ. ಆದನ್ನು ವಿವರಿಸಲು ಈ ೧೨ನೆಯ ಮಂತ್ರವು ಬಂದಿದೆ'' ಎಂದು ಆಚಾರ್ಯರು ಬೃ. ೨-೪-೧೨ರ ಅವತರಣಿಕೆಯಲ್ಲಿ ಬರೆದಿದ್ದಾರೆ.

ಇಲ್ಲಿ "ಬ್ರಹ್ಮವಿದ್ಯಾನಿಮಿತ್ತದಿಂದ" "ಅವಿದ್ಯಾನಿರೋಧದ್ವಾರಾ" "ಬ್ರಹ್ಮ ವೇತ್ತರಿಗೆ" ಎಂಬ ಈ ಶಬ್ದಗಳನ್ನು ಲಕ್ಷಿಸಿದರೆ ಈ ಆತ್ಯಂತಿಕಪ್ರಳಯವು ಶರೀರ ಪಾತಾನಂತರ ಉಂಟಾಗುವ ವ್ಯವಹಾರಾಭಾವದ ಅವಸ್ಥಾವಿಶೇಷವಲ್ಲವೆಂಬುದು ಸ್ಪಷ್ಟವಾಗುತ್ತದೆ.

೨) ಮುಂದೆ 12ನೇ ಮಂತ್ರದಲ್ಲಿ ಉಪ್ಪಿನ ದೃಷ್ಟಾಂತವನ್ನು ವಿವರಿಸುತ್ತಾ ದಾರ್ಷ್ಟಾಂತಿಕಕ್ಕೆ ಹೊಂದಿಸುವಾಗ "ಏಷಾಂ ವಿಷಯಪರ್ಯಂತಾನಾಂ ಪ್ರಜ್ಞಾನಘನೇ ಬ್ರಹ್ಮಣಿ ಪರಮಾರ್ಥವಿವೇಕವಿಜ್ಞಾನೇನ ಪ್ರವಿಲಾಪನಂ ಉಕ್ತಂ...." ಎಂದು ಶ್ರೀ ಶಂಕರರು ಬರೆದಿದ್ದಾರೆ. "ಇಲ್ಲಿ ಪರಮಾರ್ಥವಿವೇಕ ವಿಜ್ಞಾನದಿಂದ ವಿಷಯಪರ್ಯಂತವಾದ ('ನಾನು' ಎಂಬ ಅನಿಸುವಿಕೆ ಮೊದಲು ಗೊಂಡು ಹೊರಗಿನ ವಿಷಯಗಳವರೆಗೂ) ಎಲ್ಲವನ್ನೂ ಲಯಗೊಳಿಸಿಕೊಳ್ಳುವದನ್ನೇ ಹೇಳಿರುತ್ತದೆ'' ಎಂದಿರುವದರಿಂದ ಈ ಆತ್ಯಂತಿಕಪ್ರಲಯವು ಪರಮಾರ್ಥವಿವೇಕ ವಿಜ್ಞಾನದಿಂದಲೇ ಆಗತಕ್ಕದ್ದೇ ಹೊರತು ಒಂದಾನೊಂದು ವ್ಯವಹಾರಾಭಾವದ ಅವಸ್ಥೆಗೆ ಹೋದಬಳಿಕ ಉಂಟಾಗುವ ಅನುಭವವಲ್ಲ ಎಂಬುದು ಸ್ವಚ್ಛವಾಗಿ ಗೊತ್ತಾಗುತ್ತಿದೆ. ಹಾಗೂ ಇಲ್ಲಿಯೇ ಮುಂದೆ "ಶಾಸ್ತ್ರಾಚಾರ್ಯೋಪದೇಶೇನ ಬ್ರಹ್ಮವಿದ್ಯಯಾ ನದೀಸಮುದ್ರವತ್ ಪ್ರವಿಲಾಪಿತಾನಿ ವಿನಶ್ಯಂತಿ" ಶಾಸ್ತ್ರ ಹಾಗೂ ಆಚಾರ್ಯರ ಉಪದೇಶದಿಂದ ಬರುವ ಬ್ರಹ್ಮವಿದ್ಯೆಯಿಂದ ದ್ವೈತಪ್ರಪಂಚವೆಲ್ಲವನ್ನೂ (ಅಥವಾ ದೇಹಾದಿ ಉಪಾಧಿಗಳೆಲ್ಲವನ್ನೂ) ಲಯಗೊಳಿಸಿಕೊಂಡಾಗ ಇವು ಆತ್ಯಂತಿಕವಾಗಿ ನಾಶವಾಗುವವು ಎಂದದ್ದರಿಂದ ಶಾಸ್ತ್ರಾಚಾರ್ಯರ ಉಪದೇಶ, ಅದರಿಂದ ಹುಟ್ಟುವ ಬ್ರಹ್ಮವಿದ್ಯೆ ಆ ಮೂಲಕ ಉಂಟಾಗುವ ಆತ್ಯಂತಿಕ ಪ್ರಳಯ ಗಳೇ ಇಲ್ಲಿ ವಿವಕ್ಷಿತವಾಗಿವೆಯೇ ಹೊರತು ದ್ವೈತವ್ಯವಹಾರವಿಲ್ಲದಿರುವ ಒಂದಾ ನೊಂದು ಅವಸ್ಥಾವಿಶೇಷವನ್ನು ಹೇಳುವದು ಮುಖ್ಯವಲ್ಲ ಎಂದೇ ಏರ್ಪಡುತ್ತದೆ.

(೩) "ನ ಪ್ರೇತ್ಯ ಸಂಜ್ಞಾ ಅಸ್ತಿ'' ಎಂಬುದನ್ನು ವಿವರಿಸುವಾಗ "ಅವಿದ್ಯಾ-ಯಾಶ್ಚ ಬ್ರಹ್ಮವಿದ್ಯಯಾ ನಿರನ್ವಯತೋ ನಾಶಿತತ್ವಾತ್ ಕುತೋ ವಿಶೇಷಸಂಜ್ಞಾ ಸಂಭವೋ ಬ್ರಹ್ಮವಿದಃ ಚೈತನ್ಯಸ್ವಭಾವೇ ಅವಸ್ಥಿತಸ್ಯ'' ಬ್ರಹ್ಮವಿದ್ಯೆಯಿಂದ ಅವಿದ್ಯೆ

ಯು ಸಂಪೂರ್ಣವಾಗಿ ಹೋಗಲಾಗಿ (ಅವಿದ್ಯೆ ತನಗೆ ಹಿಂದೆ ಇರಲಿಲ್ಲ, ಈಗ ಇಲ್ಲ, ಮುಂದೆ ಬರುವಂತಿಲ್ಲ ಎಂಬ–ಅನುಭವವು ಬರಲಾಗಿ) ಆ ಜ್ಞಾನಿಯು ನಿತ್ಯವೂ ಒಂದೇ ಬಗೆಯಾಗಿರುವ ಚಿತ್ಸ್ವರೂಪನಾಗಿಯೇ ಉಳಿಯುವನು. (ಎಂದರೆ ಜ್ಞಾನಾಜ್ಞಾನವ್ಯವಹಾರಕ್ಕೆ ಅತೀತವಾದ ಕೇವಲ ಚಿನ್ಮಾತ್ರನೇ ಎಂದೆಂದಿಗೂ ತಾನಾಗಿದ್ದೇನೆ ಎಂಬ ಅನುಭವವು ಬರುವದು). ಹೀಗೆ ನಿತ್ಯವೂ ಚಿತ್ಸ್ವರೂಪನಾಗಿದ್ದ ತನ್ನ ಸ್ವರೂಪವನ್ನು ಗುರುತಿಸಿದ ಬಳಿಕ "ನಾನು ಇದನ್ನು ಇದರಿಂದ ಅರಿಯುವೆನು" ಎಂಬ ಈ ವಿಶೇಷವಿಜ್ಞಾನಕ್ಕೆ ಅವಕಾಶವೆಲ್ಲಿದೆ? ಅವಕಾಶವೇ ಇಲ್ಲ ಎಂದರ್ಥ.

ಇಲ್ಲಿ ನಿತ್ಯಚಿನ್ಮಾತ್ರಸ್ವರೂಪವನ್ನು ಕಂಡಾಗ ಮಿಕ್ಕ ದ್ವೈತಪ್ರಪಂಚ ವ್ಯವಹಾರವೆಲ್ಲವೂ ಕಲ್ಪಿತಮಾತ್ರವಾಗಿರುವದೆಂಬ ಅನುಭವವು ಬರುವದರಿಂದ ವಿಶೇಷವಿಜ್ಞಾನವು ಬಾಧಿತವಾಗಿಬಿಟ್ಟಿರುತ್ತದೆ ಎಂದರೆ ಅದರ ತಿರುಳೆಲ್ಲವೂ ಆತ್ಮನೇ ಎಂದಾಗಿರುತ್ತದೆ ಎಂಬುದೇ ತಾತ್ಪರ್ಯವು. ಇದನ್ನೇ ಈ ಮುಂದಿನ ವಾಕ್ಯದಲ್ಲಿ 'ಶರೀರಾವಸ್ಥಿತಸ್ಯಾಪಿ ವಿಶೇಷಸಂಜ್ಞಾ ನೋಪಪದ್ಯತೇ, –ಕಿಮುತ ಕಾರ್ಯಕರಣ–ವಿಮುಕ್ತಸ್ಯ ಸರ್ವತಃ' ಶರೀರದಲ್ಲಿರುವಾಗಲೇ ವಿಶೇಷಸಂಜ್ಞೆಗಳಿರುವದಿಲ್ಲ–ಎಂದರೆ ಈ ಜ್ಞಾನಿಯು ಇತರರ ದೃಷ್ಟಿಗೆ ಶರೀರವುಳ್ಳವನಾಗಿಯೂ ವ್ಯವಹಾರಮಾಡುವವನಾಗಿಯೂ (ವಿಶೇಷವಿಜ್ಞಾನ ಉಳ್ಳವನಾಗಿಯೂ) ಕಂಡಾಗಲೂ ಅವನ ದೃಷ್ಟಿಯಲ್ಲಿ ಅದು ಈಗಲೇ ಇಲ್ಲ. ಎಲ್ಲವೂ ಬಾಧಿತವಾಗಿರುತ್ತದೆ ಎಂದರ್ಥ. ಈ ಬಗ್ಗೆ ಸೂತ್ರಭಾಷ್ಯದ ೧–೧–೪ರಲ್ಲಿ ಹೇಳಿದ (ಭಾ ಭಾ. ೫೮) 'ಸಶರೀರತ್ವಸ್ಯ ಮಿಥ್ಯಾಜ್ಞಾನಕಲ್ಪಿತತ್ವಾತ್' ಮುಂತಾದ ವಾಕ್ಯಗಳನ್ನು ನೋಡಬೇಕು. ಹೀಗೆ ಇತರರ ದೃಷ್ಟಿಯಿಂದ ಶರೀರಾದಿಗಳಿರುವಾಗಲೇ ಇವೆಲ್ಲವುಗಳನ್ನೂ ಬಾಧಿಸಿ ಕೇವಲ ಚಿನ್ಮಾತ್ರಸ್ವರೂಪದಲ್ಲಿಯೇ ನೆಲೆನಿಂತಿರುವ ಬ್ರಹ್ಮವಿದ್ಯೆಯ ಫಲವಾದ ಈ ಆತ್ಮಾನುಭವವನ್ನು ಹೊಂದಿದವನನ್ನೇ 'ಜೀವನ್ಮುಕ್ತನು' ಎಂದು ಶಾಸ್ತ್ರದಲ್ಲಿ ಕರೆದಿದೆ. ಇದನ್ನೇ ಇಲ್ಲಿ ಆತ್ಯಂತಿಕಪ್ರಳಯೆ ಎಂದು ವರ್ಣಿಸಿರುತ್ತದೆ. ಆದ್ದರಿಂದಲೂ ಇದು ವ್ಯವಹಾರದ ಅಭಾವದ ಅವಸ್ಥೆಯನ್ನು ವರ್ಣಿಸುವ ಶ್ರುತಿಯಲ್ಲ. ಮತ್ತೇನೆಂದರೆ ಆತ್ಮವಿಜ್ಞಾನದಿಂದ ದ್ವೈತವೆಲ್ಲವೂ ಬಾಧಿತವಾದಾಗ ಕೇವಲಾತ್ಮನೇ ಉಳಿದಿರುವ ಅನುಭವ ವಿಶೇಷವನ್ನೇ ಈ ಶ್ರುತಿಯು ವರ್ಣಿಸುತ್ತದೆ–ಎಂಬುದು ಸಿದ್ಧವಾಗುತ್ತದೆ.

(೪) ಇನ್ನು ಶ್ರೀಶಂಕರರ ಭಾಷ್ಯದ ಪ್ರಕಾರ ಜೀವನ್ಮುಕ್ತಿಯೇ ಮುಖ್ಯಮುಕ್ತಿ. ವಿದೇಹಮುಕ್ತಿಯು ಗೌಣ. ಏಕೆಂದರೆ ಶರೀರವಿರುವದು ಇಲ್ಲದಿರುವದು ಎಂಬ ಭೇದವು ಅವಿದ್ಯಾಕಲ್ಪಿತವೇ ಹೊರತು ಸತ್ಯವಲ್ಲ. ಆತ್ಮಸ್ವರೂಪವು ನಿತ್ಯವೂ ಅಶರೀರಿಯಾಗಿಯೇ ಇದೆ. ಸಿನಿಮಾದಲ್ಲಿಯ (ಆರ್ಕಲ್ಯಾಂಪಿನ) ದೀಪದ ಬೆಳಕಿನಲ್ಲಿ ಪರದೆಯ ಮೇಲೆ ಬೊಂಬೆಗಳ ಕುಣಿತ ಕಾಣುತ್ತಿರುವಾಗಲೇ ಬಣ್ಣಗಳು ಕಾಣುತ್ತಿರುವಾಗಲೇ ವಿವೇಕಿಯಾದವನಿಗೆ ಈ ದೀಪದ ಬೆಳಕಿನಲ್ಲಿ ನಿಜವಾಗಿಯೂ ಯಾವ

ಬೊಂಬೆಗಳಾಗಲಿ ಬಣ್ಣಗಳಾಗಲಿ ಇಲ್ಲ ಎಂಬ ನಿಶ್ಚಯವು ಬರುತ್ತದೆ. ಹಾಗೆಯೇ ಆತ್ಮಸ್ವರೂಪದ ವ್ಯಾಪ್ತಿಯನ್ನು ಅನಾತ್ಮಪ್ರಪಂಚದಲ್ಲೆಲ್ಲಾ ಕಂಡುಕೊಂಡವನಿಗೆ ಈಗಲೇ ದೇಹಾದಿಪ್ರಪಂಚವಿಲ್ಲ. ಬರಿಯ ಚಿನ್ಮಾತ್ರವೇ ಇದೆ ಎಂದೇ ಅನುಭವಕ್ಕೆ ಬಂದಿರುತ್ತದೆ. ಹೀಗಿದ್ದರೂ ಅಜ್ಞಜನರ ದೃಷ್ಟಿಯಿಂದ ಈಗ ದೇಹವಿದೆ ಎಂಬುದನ್ನೊಪ್ಪಿ ಈ ದೇಹವು ನಾಶವಾದಬಳಿಕ ಇನ್ನೊಂದು ಶರೀರವು ಇವನಿಗೆ ಬರುವದಿಲ್ಲ ಎಂಬುದನ್ನು ತಿಳಿಸಲೋಸುಗ ವ್ಯಾವಹಾರಿಕವಾಗಿ ವಿದೇಹಕೈವಲ್ಯವನ್ನು ಭಾಷ್ಯದಲ್ಲಿ ಒಪ್ಪಿರುತ್ತದೆ. ಆದನ್ನೇ ಮೇಲೆ ಹೇಳಿದ ವಾಕ್ಯದಲ್ಲಿ "ಕಿಮುತ ಕಾರ್ಯಕರಣ ವಿಮುಕ್ತಸ್ಯ ಸರ್ವತಃ" ಇನ್ನು ಶರೀರಾದಿಕಾರ್ಯಕರಣಸಂಘಾತದಿಂದ ಬಿಡುಗಡೆಯಾಗಿರುವವನಿಗೆ ದ್ವೈತವ್ಯವಹಾರವಿಲ್ಲವೆಂಬುದನ್ನು ಹೇಳತಕ್ಕದ್ದೇನಿದೆ ? ಎಂದು ಬರೆದಿದ್ದಾರೆ. ಹೀಗೆಯೇ ೧೪ನೇ ಮಂತ್ರದಲ್ಲಿ 'ಯತ್ರ ತು ಬ್ರಹ್ಮವಿದ್ಯಯಾ ಅವಿದ್ಯಾ ನಾಶಮುಪಗಮಿತಾ ತತ್ರ ಆತ್ಮವ್ಯತಿರೇಕೇಣ ಅನ್ಯಸ್ಯ ಅಭಾವಃ' ಯಾವಾಗ ಬ್ರಹ್ಮವಿದ್ಯೆಯಿಂದ ಅವಿದ್ಯೆಯು ನಾಶವಾಯಿತೋ ಆಗ ಆತ್ಮನಲ್ಲದ ಇನ್ನಾವದೂ ಇರುವದಿಲ್ಲ" ಎಂಬ ಈ ವಾಕ್ಯದಲ್ಲಿ ಇನ್ನೊಂದೆಂಬ ದ್ವೈತಪ್ರಪಂಚವು ಇಲ್ಲದಾಗುವದು ಅವಿದ್ಯಾನಾಶದಿಂದಲೇ ಶಕ್ಯವಾಗುತ್ತದೆ. ಈ ಅವಿದ್ಯಾನಾಶವು ಬ್ರಹ್ಮವಿದ್ಯೆಯಿಂದ ಆಗುತ್ತದೆ ಎಂದು ಸ್ಪಷ್ಟವಾಗಿ ಹೇಳಿದೆಯೇ ಹೊರತು ಶರೀರವು ನಾಶವಾದ ಬಳಿಕ ವಿದೇಹಕೈವಲ್ಯದಲ್ಲಿ ಮಾತ್ರ ಬರಿಯ ಆತ್ಮನೇ ಉಳಿದಿರುತ್ತಾನೆ ಎಂದೇನೂ ಹೇಳಿರುವದಿಲ್ಲ. ಈ ಕಾರಣದಿಂದ ಬ್ರಹ್ಮವಿಜ್ಞಾನದಿಂದ ದ್ವೈತವು ಬಾಧಿತವಾಗುವದನ್ನೇ ಆತ್ಯಂತಿಕಪ್ರಲಯ ಎಂದಿದೆ ಎಂತಲೂ ಈ "ಯತ್ರ ತ್ವಸ್ಯ...." ಎಂಬ ಮಂತ್ರವು ವ್ಯವಹಾರಾಭಾವದ ಅವಸ್ಥೆಯನ್ನು (ವಿದೇಹಕೈವಲ್ಯ ಗಾಢ ನಿದ್ರೆ, ನಿರ್ವಿಕಲ್ಪಸಮಾಧಿ ಮುಂತಾದ ಅವಸ್ಥಾವಿಶೇಷಗಳನ್ನು) ಕುರಿತು ಹೇಳಲು ಬಂದಿಲ್ಲ ; ಮತ್ತೇನೆಂದರೆ ಆತ್ಮಜ್ಞಾನಾನುಭವವನ್ನೇ ಹೇಳುವದೆಂದೂ ನಿರ್ವಿವಾದವಾಗಿ ಸಿದ್ಧವಾಗುತ್ತದೆ.

(೫) ಈಗ ಮೇಲೆ ಹೇಳಿದ ಅಭಿಪ್ರಾಯವನ್ನು ಗಟ್ಟಿಗೊಳಿಸಲು ಬ್ರಹ್ಮಸೂತ್ರಭಾಷ್ಯದ ಕೆಲವು ವಾಕ್ಯಗಳನ್ನು ನೋಡಿ ಈ ಚರ್ಚೆಯನ್ನು ಮುಗಿಸೋಣ.

"ಅತಶ್ಚ ಇದಂ ಶಾಸ್ತ್ರೀಯಂ ಬ್ರಹ್ಮಾತ್ಮತ್ವಂ ಅವಗಮ್ಯಮಾನಂ ಸ್ವಾಭಾವಿಕಸ್ಯ ಶಾರೀರಾತ್ಮತ್ವಸ್ಯ ಬಾಧಕಂ ಸಂಪದ್ಯತೇ | ರಜ್ಜ್ವಾದಿಬುದ್ಧಯ ಇವ ಸರ್ಪಾದಿಬುದ್ಧೀನಾಮ್ | ಬಾಧಿತೇ ಚ ಶಾರೀರಾತ್ಮತ್ವೇ ತದಾಶ್ರಯಃ ಸಮಸ್ತಃ ಸ್ವಾಭಾವಿಕೋ ವ್ಯವಹಾರಃ ಬಾಧಿತೋ ಭವತಿ | ದರ್ಶಯತಿ ಚ ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್" (ಬೃ. ೨-೪-೧೪, ೪-೫-೧೫) ಇತ್ಯಾದಿನಾ ಬ್ರಹ್ಮಾತ್ಮತ್ವದರ್ಶಿನಂ ಪ್ರತಿ ಸಮಸ್ತಸ್ಯ ಕ್ರಿಯಾಕಾರಕಫಲಲಕ್ಷಣಸ್ಯ ವ್ಯವಹಾರಸ್ಯ ಅಭಾವಮ್ | ನ ಚ ಅಯಂ ವ್ಯವಹಾರಾಭಾವೋ ಅವಸ್ಥಾವಿಶೇಷನಿಬದ್ಧೋ

ಅಭಿಧೀಯತೆ ಇತಿ ಯುಕ್ತಂ ವಕ್ತುಮ್ । 'ತತ್ತ್ವಮಸಿ' ಇತಿ ಬ್ರಹ್ಮಾತ್ಮಭಾವಸ್ಯ ಅನವಸ್ಥಾವಿಶೇಷನಿಬಂಧನತ್ವಾತ್ ।" (ಸೂ. ಭಾ. ೨-೧ ೧೪ ಭಾ. ಭಾ. ೪೩೫)

ಆದ್ದರಿಂದ ಶಾಸ್ತ್ರಗಳಿಂದ ಉಪದೇಶಿಸಲ್ಪಟ್ಟ ಈ ಬ್ರಹ್ಮವೇ ತಾನಾಗಿರುವೆನೆಂಬ ಅರಿವು ಮೂಡಿದೊಡನೆಯೇ ಈ ಮೊದಲು ಅವಿದ್ಯಾಸ್ವಭಾವದಲ್ಲಿರುವಾಗ ಇದ್ದ 'ನಾನು ಶರೀರವುಳ್ಳವನು' ಎಂಬ ರೂಪದ ತಪ್ಪು ತಿಳಿವಳಿಕೆಯು ಹಗ್ಗವನ್ನರಿತಬಳಿಕ ಹಿಂದೆ ಇದ್ದ ಹಾವು ಎಂಬ ಬುದ್ಧಿಯು ಬಾಧಿತವಾಗುವಂತೆ ಬಾಧಿತವಾಗಿಬಿಡುತ್ತದೆ. ಹೀಗೆ ನಾನು ಶರೀರವುಳ್ಳವನು (ಜೀವನು) ಎಂಬ ಬುದ್ಧಿಯು ಬಾಧಿತವಾದೊಡನೆಯೇ ಅದರ ಆಧಾರದಮೇಲೆ ನಡೆದಿದ್ದ ಎಲ್ಲ ಅವಿದ್ಯಾಸ್ವಭಾವದ ವ್ಯವಹಾರವೂ ಬಾಧಿತವಾಗಿಯೇ ಬಿಡುತ್ತದೆ.

ಇದನ್ನೇ ಶ್ರುತಿಯು "ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಯಿತೋ ಅಲ್ಲಿ ಏತರಿಂದ ಏನನ್ನು ನೋಡಿಯಾನು ?'' (ಬೃ. ೨-೪-೧೪, ೪-೫-೧೫) ಮುಂತಾದ ವಾಕ್ಯಗಳಿಂದ ಬ್ರಹ್ಮಾತ್ಮದರ್ಶಿಯಾದವನಿಗೆ ಎಲ್ಲ ವಿಧದ ಕ್ರಿಯೆ, ಕಾರಕ (ಕರ್ತೃ-ಫಲ) ಮುಂತಾದ ಯಾವ ವ್ಯವಹಾರವೂ ಇರುವದೇ ಇಲ್ಲ ಎಂದು ಸಾರುತ್ತಿದೆ. ಈ ಶ್ರುತಿಯು ಯಾವದೋ ಒಂದು ವಿಧದ ವ್ಯವಹಾರವು ಅಭಾವವಾಗಿರುವ (ಇಲ್ಲದಿರುವ) ಅವಸ್ಥಾವಿಶೇಷಕ್ಕೆ ಕಟ್ಟುವಡೆದಿರುವ ಸಂಗತಿಯನ್ನು ತಿಳಿಸುವದೆಂದು ಹೇಳುವದು ಯುಕ್ತವಲ್ಲ. ಏಕೆಂದರೆ ಜೀವನಿಗೆ ಬ್ರಹ್ಮವಾಗಿರುವಿಕೆಯು ಯಾವದೊಂದು ಅವಸ್ಥೆಗೆ ಕಟ್ಟುವಡೆದಿರುವದಾಗಿರುವದಿಲ್ಲ (ಯಾವಾಗಲೂ ಇವನು ಸ್ವರೂಪತಃ ಬ್ರಹ್ಮವೇ ಆಗಿರುತ್ತಾನೆ. ಅದನ್ನು ಗುರುತಿಸದಿದ್ದಾಗ ಜೀವತ್ವವು ಬಂದಂತೆ ಕಾಣುತ್ತದೆ.) 'ಅದು ನೀನಾಗಿರುವೆ' ಎಂಬ ವಾಕ್ಯದಲ್ಲಿ ಜೀವನಿಗೆ ಬ್ರಹ್ಮಾತ್ಮಭಾವವು ಇಂಥದೊಂದು ಅವಸ್ಥೆಯಲ್ಲಿ ಮಾತ್ರ ಬರುವದೆಂದು ಹೇಳಿರುವದಿಲ್ಲ. (ಮತ್ತೇನೆಂದರೆ ಯಾವಾಗಲೂ ನೀನು ಆ ತತ್ತ್ವವೇ ಆಗಿರುವೆ ಎಂದು ನಿತ್ಯವರ್ತಮಾನಸ್ವರೂಪವನ್ನೇ ಉಪದೇಶಿಸಿರುತ್ತದೆ) ಎಂಬುದು ಮೇಲಿನ ವಾಕ್ಯದ ಅರ್ಥವು.

ಇಲ್ಲಿ—

(1) ಆತ್ಮಜ್ಞಾನದಿಂದ ದ್ವೈತವು ಬಾಧಿತವಾಗುವದನ್ನೇ 'ಯತ್ರ ತ್ವಸ್ಯ' ಎಂಬ ಶ್ರುತಿಯು ಹೇಳುತ್ತದೆ.

(2) ಇದು ವ್ಯವಹಾರದ ಅಭಾವದ ಅವಸ್ಥಾವಿಶೇಷವನ್ನು ಹೇಳುವದಿಲ್ಲ.

(3) 'ತತ್ತ್ವಮಸಿ' ಎಂಬುದಕ್ಕೆ ಒಂದು ವಿಶೇಷಾವಸ್ಥೆಯಲ್ಲಿ ಮಾತ್ರ 'ಅದು ನೀನಾಗುತ್ತೀಯೆ' ಎಂದು ಅರ್ಥಮಾಡಬಾರದು. ಮತ್ತೇನೆಂದರೆ ಬ್ರಹ್ಮಾತ್ಮಭಾವವು ಯಾವ ಅವಸ್ಥೆಗೂ ಕಟ್ಟುಬಿದ್ದದ್ದಲ್ಲ- ಎಂಬ ಈ ಮೂರು ಮಾತುಗಳನ್ನು ಚೆನ್ನಾಗಿ ಪರಿಶೀಲಿಸಿದರೆ ವ್ಯಾಖ್ಯಾನಕಾರರ ಜಾಡಿನಲ್ಲಿ ಈಚಿನ ವೇದಾಂತಿಗಳು ಹೇಳುವ

ಅಭಿಪ್ರಾಯವು (ಈ ಮಂತ್ರವು ನಿದ್ರೆ, ವಿದೇಹಕೈವಲ್ಯ, ನಿರ್ವಿಕಲ್ಪಸಮಾಧಿಗಳನ್ನು ಹೇಳುವದೆಂಬ ಮತವು) ಭಾಷ್ಯವಿರೋಧವಾದುದೆಂದು ಸ್ಪಷ್ಟವಾಗುತ್ತದೆ.

(4) ಹೀಗೆಯೇ (ಸೂ. ಭಾ. ೧-೨-೧೨, ಭಾ. ಭಾ. ೧೭೫ರಲ್ಲಿ) "ಯತ್ರ ತ್ವಸ್ಯ....ಇತ್ಯಾದಿನಾ ಚ ವಿವೇಕಿನಃ ಕರ್ತೃತ್ವಂ ವಾರಯತಿ" ಎಂದೂ (ಸೂ. ಭಾ. ೧-೨-೨೦, ಭಾ. ಭಾ. ೧೯೫ರಲ್ಲಿ) "ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ ಇತಿ ಅವಿದ್ಯಾವಿಷಯೇ ಸರ್ವಂ ವ್ಯವಹಾರಂ ದರ್ಶಯತಿ ಯತ್ರ ತ್ವಸ್ಯ....ಇತಿ ವಿದ್ಯಾವಿಷಯೇ ಸರ್ವಂ ವ್ಯವಹಾರಂ ವಾರಯತಿ" ಎಂದು ಆಚಾರ್ಯರು ಬರೆದಿದ್ದಾರೆ.

ಈ ಮೇಲಿನ ವಾಕ್ಯಗಳಲ್ಲಿ ಅವಿದ್ಯೆಯಿಂದ ದ್ವೈತವು ಇರುವಂತೆ ತೋರುವದರಿಂದ 'ಯತ್ರ ಹಿ ದ್ವೈತಮಿವ' ಎಂಬುದು ಅವಿದ್ಯಾವಸ್ಥೆಯನ್ನೂ ಆತ್ಮಜ್ಞಾನವಾದೊಡನೆಯೇ ದ್ವೈತವೆಲ್ಲವೂ ಬಾಧಿತವಾಗಿ ಬಿಡುವದನ್ನೇ ಎಂದರೆ ವಿದ್ಯಾವಸ್ಥೆಯನ್ನೇ 'ಯತ್ರ ತ್ವಸ್ಯ....ಎಂಬ ಮಂತ್ರವು ಹೇಳುವದೆಂದೂ ಘಂಟಾಘೋಷವಾಗಿ ಸಾರಿದ್ದಾರೆ. ಇದೇ ರೀತಿ ಸೂ.ಭಾ. ೧-೪-೨೨ರಲ್ಲಿಯೂ ಸ್ಪಷ್ಟವಾಗಿ ಹೇಳಿದ್ದಾರೆ. ಈ ಪ್ರತಿಪಾದನೆಯ ಆಧಾರದಮೇಲೆ ಈ ಮೊದಲು ಉದಾಹರಿಸಿದ ೪-೪-೧೬ (ಸೂ.ಭಾ.)ದಲ್ಲಿರುವ 'ಸಂಪತ್ತಿ' ಎಂಬ ಶಬ್ದಕ್ಕೆ ಆತ್ಮವಿಜ್ಞಾನದಲ್ಲಿ ನೆಲೆನಿಂತಿರುವದರ ಫಲವಾದ 'ಜೀವನ್ಮುಕ್ತಿ' ಎಂದೇ ಮುಖ್ಯಾರ್ಥವನ್ನು ಮಾಡಬೇಕು. ಆ ಸೂತ್ರದಲ್ಲಿ ವ್ಯಾಖ್ಯಾನಮಾಡುವಾಗ ಆಚಾರ್ಯರು ಇದೇ 'ಯತ್ರ ತ್ವಸ್ಯ....' ಎಂಬ ಮಂತ್ರವನ್ನೇ ಪ್ರಮಾಣವಚನವನ್ನಾಗಿ ಹೇಳಿದ್ದಾರೆ. ಇದರಿಂದ ಮೋಕ್ಷಕ್ಕೆ ನಿದ್ರೆಯು ದೃಷ್ಟಾಂತ, (ಬೃ. ೪-೩-೨೧ರಿಂದ ೩೨) ಆತ್ಮಜ್ಞಾನವು ದಾರ್ಷ್ಟಾಂತಿಕ (ಬೃ. ೪-೪-೬) ಎಂಬುದೂ ಹೊಂದುತ್ತದೆ-ಎಂಬಿದು ಪರಿಶುದ್ಧಶಂಕರಾದ್ವೈತ ವೇದಾಂತಸಿದ್ಧಾಂತವು.

ಹೀಗೆ ನಿಜವಾದ ಶಂಕರವೇದಾಂತವು ಭಾಷ್ಯಗಳಲ್ಲಿ ನಿರೂಪಿಸಲ್ಪಟ್ಟಿದ್ದರೂ ಅದು ಜಿಜ್ಞಾಸುಗಳಿಗೆ ಲಭ್ಯವಾಗದಂತಹ ಪರಿಸ್ಥಿತಿಯನ್ನು ನಿರ್ಮಿಸಿ ಶಂಕರಾದ್ವೈತವಲ್ಲದ್ದನ್ನೂ ಅದಕ್ಕೆ ವಿರೋಧವಾದದ್ದನ್ನೂ ಶಂಕರರ ಅದ್ವೈತವೇದಾಂತವೆಂದೇ ಈಗ್ಗೆ ಕೆಲವರು ಪ್ರಚಾರದಲ್ಲಿ ತಂದಿದ್ದಾರೆ. ಈ ಬಗ್ಗೆ ಇದೊಂದು ಉದಾಹರಣೆ ಮಾತ್ರ. ನನಗೆ ಮೊದಲು ಈ ವಿಷಯವು ಮನಸ್ಸಿನಮೇಲೆ ಪರಿಣಾಮವನ್ನು ಬೀರಿದ ಸಂದರ್ಭವನ್ನು ಇಲ್ಲಿ ವಿವರಿಸಿ ಲೇಖನವನ್ನು ಮುಗಿಸುವೆನು.

1952ನೇ ಇಸವಿಯಲ್ಲಿ ಹುಬ್ಬಳ್ಳಿಯಲ್ಲಿ ಚಾತುರ್ಮಾಸ್ಯವ್ರತವನ್ನು ಮುಗಿಸಿ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಹೊಳೆನರಸೀಪುರಕ್ಕೆ ಹಿಂದಿರುಗುವಾಗ ಹುಬ್ಬಳ್ಳಿಯಿಂದ ರಾಣೇಬೆನ್ನೂರಿನವರೆಗೆ ನನ್ನೊಡನೆ ನಡೆಯಿಸಿದ ಚರ್ಚೆಯ ಅನಂತರ ರಾಣೇಬೆನ್ನೂರಿನಲ್ಲಿ ಆ ದಿನ ಸಾಯಂಕಾಲದ ಉಪನ್ಯಾಸದಲ್ಲಿ ಇದನ್ನು ಚೆನ್ನಾಗಿ ನಿರೂಪಿಸಿದರು. ಸಕ್ಕರೆಯ ಅಚ್ಚಿನಲ್ಲಿ ಮಾಡಿಟ್ಟ ಹಾಲಿನ

ಅಗಲವಾದ ತಟ್ಟೆ, ಅದನ್ನು ಕುಡಿಯಲು ಬಂದ ಇಲಿ, ಅದೇ ವೇಳೆಗೆ ಅತ್ತಕಡೆಯಿಂದ ಹಾಲುಕುಡಿಯಲು ಬಂದಿರುವ ಬೆಕ್ಕು-ಇವುಗಳಲ್ಲಿ ಒಂದೊಂದನ್ನು ನೋಡಿದಾಗಲೂ ಒಂದೊಂದು ಭಾವವು ನಮಗೆ ಮೂಡುತ್ತದೆ. ಬೆಕ್ಕಿನ ರೋಷ, ಇಲಿಯ ಭಯಾನಕ ಪ್ರಾಣಾಂತಿಕಸ್ಥಿತಿ, ತಟ್ಟೆಯಕಡೆಗೆ ಗಮನವಿತ್ತಾಗಿನ ಉದಾಸೀನತೆ ಹೀಗೆ ಅನೇಕಭಾವಗಳು ಪ್ರಕಟವಾಗುತ್ತವೆ. ಆದರೆ 'ಇದೆಲ್ಲವೂ ಸಕ್ಕರೆಮಾತ್ರವೇ ಹೊರತು ಬೇರೇನೂ ಅಲ್ಲ' ಎಂಬ ಅರಿವಾದಾಗ 'ಯತ್ರ ತ್ವಸ್ಯ ಸರ್ವಂ ಶರ್ಕರೈವ ಅಭೂತ್' ಯಾವ ಬೆಕ್ಕನ್ನು ಕಂಡು ಯಾವ ಇಲಿ ಎಲ್ಲಿ ಹೆದರಿಕೊಂಡಿದೆ ? ಯಾವ ತಟ್ಟೆಯಲ್ಲಿ ಯಾವ ಹಾಲು ಇದೆ ? ಯಾವದೂ ಇಲ್ಲ- ಎಂಬ ಉದಾಹರಣೆಯಿಂದ ಈ ಮಂತ್ರದ ಅರ್ಥವನ್ನು ವಿವರಿಸಿದರು. ನಾನು ರೈಲಿನಲ್ಲಿ ಶ್ರೀಗಳ ಎದುರಿಗೆ ಪಂಚದಶಿಯ ಪ್ರಕಾರ ಈ ಮಂತ್ರವು ಸುಷುಪ್ತಿವಿದೇಹಕೈವಲ್ಯವನ್ನು ಹೇಳುವದೇ ಹೊರತು ಜ್ಞಾನದ ವಿಷಯವನ್ನಾಗಲಿ, ಜೀವನ್ಮುಕ್ತಿಯನ್ನಾಗಲಿ ಹೇಳುವದಿಲ್ಲ ಎಂದು ಪ್ರತಿಪಾದಿಸಿದ್ದೆನು. ಶ್ರೀಶ್ರೀಗಳವರ ನಿರೂಪಣೆಯನ್ನು ಕೇಳಿದಾಗ ನಾನು ಮೊದಲು ತಿಳಿದದ್ದು ಸರಿಯಲ್ಲ ಎಂದು ನನಗೆ ಹೊಳೆಯಿತಲ್ಲದೆ ಆ ರೀತಿ ನಾನು ಆಗಲೇ ಶ್ರೀಶ್ರೀಗಳವರಿಗೆ ತಿಳಿಸಿಯೂಬಿಟ್ಟೆ. ಮುಂದೆ ೧೯೬೭ರಿಂದ ೭೧ರವರೆಗೆ ಶ್ರೀಶ್ರೀಗಳವರ ದಿಗ್ದರ್ಶನದಲ್ಲಿ ಪ್ರಸ್ಥಾನತ್ರಯಭಾಷ್ಯಗಳನ್ನು ಅಭ್ಯಸಿಸಿದಾಗ ಪರಿಶುದ್ಧಶಂಕರಾದ್ವೈತವೇದಾಂತದ ಮರ್ಮವನ್ನೇ ಅವರು ನನಗೆ ತೋರಿಸಿ ಕೊಟ್ಟರು.

ಪ್ರಸ್ಥಾನತ್ರಯಭಾಷ್ಯದ ಸತ್‌ಸಂಪ್ರದಾಯದ ಆಧಾರದ ಮೇಲೆ ಶ್ರೀ ಮೂರ್ತಿಗಳವರಿಂದ ಬರೆಯಲ್ಪಟ್ಟ ಈ ಸಮ್ಯಗ್ದರ್ಶನ ಗ್ರಂಥವು ಸುಗಮ-ಸರಳ-ಶೈಲಿಯಲ್ಲಿದ್ದು ಅಷ್ಟೇ ಗಂಭೀರವೂ ಅನುಭವಪೂರ್ಣವೂ ಆಗಿದೆ. ಅಮಾನಿತ್ವಾದಿ ಗುಣಪೂರ್ಣರೂ ಸದಾ ಅಂತರ್ಮುಖಚಿತ್ತರೂ ತೀಕ್ಷ್ಣವಾದ ವಿವೇಕಸಾಮರ್ಥ್ಯವುಳ್ಳವರೂ ಪರಹಿತವೇ ತಮ್ಮ ಹಿತವೆಂಬುದನ್ನು ಜೀವನದಲ್ಲಿ ನಡೆಯಿಂದಲೇ ತೋರಿಸುವವರೂ ಇನ್ನೂ ಅನೇಕ ಸ್ಥಿತಪ್ರಜ್ಞಲಕ್ಷಣಪರಿಪೂರ್ಣರಾಗಿದ್ದು ನನಗೆ ಸಾಕ್ಷಾತ್ ಸದ್ಗುರುಗಳ ಸ್ಥಾನದಲ್ಲಿರುವ ಶ್ರೀ ಮೂರ್ತಿಗಳವರ ಲೇಖನಿಯ ಬಗ್ಗೆ ಬರೆಯಲು ನಾನು ಸರ್ವಥಾ ಅಸಮರ್ಥನಾಗಿದ್ದೇನೆ. ಅವರ ಅಪ್ಪಣೆಯ ಮೇರೆಗೆ ಈ ಹಿನ್ನುಡಿಯನ್ನು ಬರೆದು ಪರಿಶುದ್ಧಶಂಕರಾದ್ವೈತವೇದಾಂತವು ಹೇಗೆ ವಿಕೃತವಾಗಿ ಪ್ರಚಾರವಾಗಿರುವದೆಂಬ ಬಗ್ಗೆ ಇಲ್ಲಿ ಒಂದು ಉದಾಹರಣೆಯನ್ನು ಮಾತ್ರ ತೋರಿಸಲು ಯತ್ನಿಸಿದ್ದೇನೆ. ಪರಿಶುದ್ಧ ಸಂಪ್ರದಾಯದಮೇರೆಗೆ ಶ್ರೀ ಮೂರ್ತಿಗಳು ಗ್ರಂಥಶರೀರದಲ್ಲಿ ಈ "ಯತ್ರ ತ್ವಸ್ಯ...." ಎಂಬ ಮಂತ್ರವನ್ನು ಬಹು ಸ್ವಾರಸ್ಯವಾಗಿಯೇ ವಿವರಿಸಿದ್ದಾರೆ. ಅದನ್ನೋದಿದವರು ಈ ಹಿನ್ನುಡಿಯನ್ನು ಓದಿದರೆ ಚೆನ್ನಾಗಿ ವಿಷಯವು ಮನಸ್ಸಿಗೆ ನಾಟುವದರಲ್ಲಿ ಸಂಶಯವಿಲ್ಲ.

ಶ್ರೀಸದ್ಗುರುಪಾದರೇಣು,

ಬೆಂಗಳೂರು-೫೦ ದೇವರಾಯ ಕುಲಕರ್ಣಿ.

# ಪ್ರವೇಶಿಕೆ

ಈಶ್ವರೇಚ್ಛೆಯಿಂದ ಇಪ್ಪತ್ತುಮೂರು ವರ್ಷಗಳ ಹಿಂದೆ, ಸಾಧನಪ್ರಧಾನವಾಗಿ ಬರೆದಿದ್ದ 'ಸಮಗ್ರಸಾಧನ' (ಎರಡು ಭಾಗಗಳು) ಗ್ರಂಥಕ್ಕೆ ಪೂರಕವಾಗಿಯೋ ಎನ್ನುವಂತೆ, ಹದಿನಾರುವರ್ಷಗಳ ಹಿಂದೆ 'ಚಿಚ್ಛಕ್ತಿಪ್ರಭಾವ'- (ಸಮಗ್ರಜೀವನ) ಎಂಬ ಗ್ರಂಥವನ್ನು ಬರೆದಿದ್ದರೂ ಈಗ ಪುನಃ ಭಗವತ್ಪ್ರೇರಣೆಯಿಂದ ಸಿದ್ಧಾಂತಪ್ರಧಾನವಾದ ಈ 'ಸಮ್ಯಗ್ದರ್ಶನ' ಗ್ರಂಥವನ್ನು ಬರೆಯುವ ಯೋಗವೊದಗಿದೆ. ಅಂದು ಆ ಗ್ರಂಥಗಳ ಲೇಖನಕ್ಕೆ ನುಲೇನೂರು ಪೂಜ್ಯ ಶ್ರೀಶ್ರೀ ಶಂಕರಲಿಂಗಭಗವಾನರ ಮತ್ತು ಮಿತ್ರರಾದ ಪ್ರಸಿದ್ಧ ಮಲ್ಲಾಡಿಹಳ್ಳಿ ಶ್ರೀಶ್ರೀ ರಾಘವೇಂದ್ರಸ್ವಾಮಿಗಳ ಹಾಗೂ ದಿ|| ಖೋಡೆ ಲಕ್ಷ್ಮಣಸಾರವರ ಪ್ರೀತಿಯ ಪ್ರೇರಣೆಯು ಕಾರಣವಾದಂತೆ, ಇಂದು ಈ ಗ್ರಂಥರಚನೆಗೆ ಮಿತ್ರರಾದ ಬ್ರಹ್ಮಜ್ಞಕವಿ, ವೇದಾಂತಚತುರ ಶ್ರೀ ದೇವರಾಯಕುಲಕರಣಿಗಳ ಪ್ರೇಮದ ಪ್ರೋತ್ಸಾಹವೇ ಮುಖ್ಯಕಾರಣವಾಗಿದೆ. ಸುಮಾರು ಮೂವತ್ತು ವರ್ಷಗಳಿಂದ ವೇದಾಂತಪ್ರವಚನವೇ ತ್ರಿಕಾಲಗಳಲ್ಲಿಯೂ ಜೀವನದ ಉಸಿರಾಗಿರುವ ನಮ್ಮೀ ದೇವರಾಯರು ಬೃಹದಾರಣ್ಯಕ ಉಪನಿಷತ್ತಿನಲ್ಲಿರುವ 'ಮೈತ್ರೇಯೀಬ್ರಾಹ್ಮಣ'ವನ್ನು ನೂರಾರುಸಲ ಪ್ರವಚನಮಾಡಿದವರಾದ್ದರಿಂದ, ಅನೇಕ ಮುಮುಕ್ಷು ಜಿಜ್ಞಾಸುಗಳಿಗೆ ಉಪಕಾರವಾಗುವದೆಂದು ಭಾವಿಸಿ, ಆ ವಿಷಯದಮೇಲೆ ಬರೆಯಬೇಕೆಂದು, ವಿವರವಾದ ನಿರ್ದೇಶನವನ್ನೂ ನೀಡಿದ್ದಾರೆ. ಸ್ವರೂಪಸ್ಥಿತಿಯ ಮೌನಜಡತೆಯಿಂದ ಸ್ವತಃ ಸುಮ್ಮನಿರುವದೇ ಸ್ವಭಾವವಾದರೂ ದೈವೇಚ್ಛೆಯಿಂದ ಆಗಾಗ ಬಂದೆರಗುವ ಆಪ್ತಮಿತ್ರರ ವಿಶೇಷಪ್ರೀತಿಯ (ಪೀಡೆಯ)ನ್ನು ಮೀರಲಾರದೆ, "ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯಮನಸಾ ಸಹ" ಮಾತಿಗೂ ಮನಸ್ಸಿಗೂ ನಿಲುಕದ ವಿಷಯವನ್ನು ಮಾತಿನಿಂದ ತಿಳಿಸಲು ಉದ್ಯುಕ್ತವಾಗುವ ಹುಚ್ಚುಸಾಹಸದ ಅಪರಾಧವೆಸಗಬೇಕಾಗುತ್ತದೆ. ಹೀಗೆ, ಇದುವರೆಗೆ ಗುರುಕರುಣೆಯಿಂದ ಎಸಗಿರುವ ಹಲಕೆಲವು ಲೇಖನಾಪರಾಧಗಳ ಮಾಲೆಯುಲ್ಲಿ ಮತ್ತೆ ಈ ಒಂದನ್ನೂ ಸೇರಿಸಬೇಕಾಗಿ ಬಂದ ಸೌಭಾಗ್ಯಕ್ಕಾಗಿ ದೇವರಲ್ಲಿ ಕ್ಷಮೆಯನ್ನು ಬೇಡಬೇಕಾಗಿದೆ. ಏಕೆಂದರೆ, ಭಗವಾನ್ ದತ್ತಾತ್ರೇಯರು ತಮ್ಮ ಅವಧೂತಗೀತೆಯಲ್ಲಿ ಹೀಗೆಯೇ ಹೇಳಿದ್ದಾರೆ :

ತ್ವದ್ಯಾತ್ರಯಾ ವ್ಯಾಪಕತಾ ಹತಾ ತೇ
　ಧ್ಯಾನೇನ ಚೇತಃಪರತಾ ಹತಾ ತೇ ।
ಸ್ತುತ್ಯಾ ಮಯಾ ವಾಕ್ಪರತಾ ಹತಾ ತೇ
　ಕ್ಷಮಸ್ವ ನಿತ್ಯಂ ತ್ರಿವಿಧಾಪರಾಧಾನ್ ॥ (ಅವ. ೮-೧)

ಎಲೈ ಭಗವಂತನೆ, ನಿನ್ನ ಕ್ಷೇತ್ರಗಳಿಗೆ ಯಾತ್ರೆ ಮಾಡುವದರಿಂದ ನಿನ್ನ ಸರ್ವವ್ಯಾಪಕತ್ವದ ನನ್ನ ಪ್ರಜ್ಞೆಗೆ ಹಾನಿಯನ್ನು ತಂದುಕೊಂಡಂತಾಗುತ್ತದೆ ; ನಿನ್ನ ಧ್ಯಾನದಿಂದ, ನೀನು ಮನಸ್ಸಿಗೆ ನಿಲುಕದವನೆಂಬ ಜ್ಞಾನಕ್ಕೆ ಬಾಧೆಯನ್ನು ಉಂಟುಮಾಡಿಕೊಂಡಂತೆ ಆಗುತ್ತದೆ ; ನಿನ್ನನ್ನು ಸ್ತೋತ್ರಮಾಡುವದರಿಂದ ನೀನು ಮಾತಿಗೆ ಮೀರಿದವನೆಂಬ ಅರಿವಿಗೆ ಅಡ್ಡಿಯನ್ನೊಡ್ಡಿದಂತಾಗುತ್ತದೆ ; ಆದರೆ, ಈ ಮರ್ಮವನ್ನರಿತಿದ್ದರೂ ಅನಿವಾರ್ಯವಾಗಿ ಆಗಾಗ ಭಗವತ್ಪ್ರೇಮದ 'ಪ್ರಸಕ್ತಿ'ಯಿಂದಲೂ 'ಅಧ್ಯಾರೋಪ-ಅಪವಾದ'ದೃಷ್ಟಿಯ 'ಪ್ರತಿಪತ್ತಿ'ಯಿಂದಲೂ ಈ 'ತಪ್ಪು'ಗಳನ್ನು ಮಾಡುತ್ತಲೇ ಇರಬೇಕಾಗುತ್ತದೆ. ಆದ್ದರಿಂದ, ದಯಾಸಿಂಧುವಾದ ದತ್ತ ! ನಾವು ನಿತ್ಯವೂ ನಡೆಸಬಹುದಾದ ಯಾತ್ರಾ-ಧ್ಯಾನ-ಸ್ತೋತ್ರ(-ಪ್ರವಚನ-ಲೇಖನ)ಗಳೆಂಬ ಈ ಮೂರುಬಗೆಯ 'ಅಪರಾಧ'ಗಳನ್ನೂ ಕ್ಷಮಿಸು ಗುರುವೆ ! (ಅವಧೂತಗೀತಾ. ೮-೧)

**(1) ಈ ಗ್ರಂಥಕ್ಕೆ "ಸಮ್ಯಗ್ದರ್ಶನ" ಎಂದು ನಾಮಕರಣಮಾಡಲು ಕಾರಣವೇನೆಂದರೆ :**

ಬೃಹದಾರಣ್ಯಕೋಪನಿಷತ್ತಿನ ಎರಡನೆಯ ಅಧ್ಯಾಯದ ನಾಲ್ಕನೆಯ (ಮೈತ್ರೇಯೀ) ಬ್ರಾಹ್ಮಣದಲ್ಲಿ, ಮೈತ್ರೇಯೀಮಹಾದೇವಿಗೆ ಯಾಜ್ಞವಲ್ಕ್ಯ ಮಹರ್ಷಿಗಳು ಉಪದೇಶಿಸಿರುವ ಆತ್ಮವಿಜ್ಞಾನದಲ್ಲಿ, "ಆತ್ಮಾ ವಾ ಅರೇ ದ್ರಷ್ಟವ್ಯಃ...." (ಬೃ. ೨-೪-೫) ಎಂದು ಪ್ರಾರಂಭಿಸಿರುವ ಪ್ರಥಮವಾಕ್ಯದಿಂದಲೇ ಅವರು ಪರಮಾತ್ಮನ "ಸಮ್ಯಗ್ದರ್ಶನ"ವನ್ನು ಬೋಧಿಸಿದ್ದಾರೆಂದು ಶ್ರೀ ಶಂಕರಭಗವತ್ಪಾದರು ತಮ್ಮ ಭಾಷ್ಯದಲ್ಲಿ ಹೇಳಿದ್ದಾರೆ.

> ತಸ್ಮಾತ್ ಆತ್ಮಾ ವಾ ಅರೇ ದ್ರಷ್ಟವ್ಯಃ....। ಶ್ರೋತವ್ಯಃ ಪೂರ್ವಮ್ ಆಚಾರ್ಯತಃ ಆಗಮತಶ್ಚ । ಪಶ್ಚಾತ್ ಮನ್ತವ್ಯಃ ತರ್ಕತಃ । ತತೋ ನಿದಿಧ್ಯಾಸಿತವ್ಯಃ ನಿಶ್ಚಯೇನ ಧ್ಯಾತವ್ಯಃ । ಏವಂ ಹಿ ಅಸೌ ದೃಷ್ಟೋ ಭವತಿ ಶ್ರವಣಮನನನಿದಿಧ್ಯಾಸನಸಾಧನೈರ್ನಿರ್ವರ್ತಿತೈಃ । ಯದಾ ಏಕತ್ವಮ್ ಏತಾನ್ಯುಪಗತಾನಿ ತದಾ ಸಮ್ಯಗ್ದರ್ಶನಂ ಬ್ರಹ್ಮೈಕತ್ವವಿಷಯಂ ಪ್ರಸೀದತಿ ನಾನ್ಯಥಾ ಶ್ರವಣಮಾತ್ರೇಣ । ಯತ್ ಬ್ರಹ್ಮಕ್ಷತ್ರಾದಿ ಕರ್ಮನಿಮಿತ್ತ ವರ್ಣಾಶ್ರಮಾದಿಲಕ್ಷಣಮ್ ಆತ್ಮನಿ ಅವಿದ್ಯಾರೋಪಣಪ್ರತ್ಯಯ ವಿಷಯಂ ಕ್ರಿಯಾಕಾರಕಫಲಾತ್ಮಕಮ್ ಅವಿದ್ಯಾಪ್ರತ್ಯಯ ವಿಷಯಂ ರಜ್ಜ್ವಾಮಿವ ಸರ್ಪಪ್ರತ್ಯಯವಿಷಯಃ ತದುಪಮರ್ದನಾರ್ಥಮ್ ಆಹ-ಆತ್ಮನಿ ಖಲು ಅರೇ ಮೈತ್ರೇಯಿ ದೃಷ್ಟೇ ಶ್ರುತೇ ಮತೇ ವಿಜ್ಞಾತೇ ಇದಂ ಸರ್ವಂ ವಿದಿತಂ ವಿಜ್ಞಾತಂ ಭವತಿ ಇತಿ ॥
> (ಬೃ. ಭಾ. ೨-೪-೫)

(ತಾತ್ಪರ್ಯ) : ಆದ್ದರಿಂದ ಎಲೌ ಮೈತ್ರೇಯಿ ! ಆತ್ಮನನ್ನೇ ವಿವೇಕದಿಂದ (ವಸ್ತುತಂತ್ರವಾಗಿ, ಅನುಭವದಲ್ಲಿ) ಕಂಡುಕೊಳ್ಳಬೇಕು. ಮೊದಲು ಆಚಾರ್ಯರಿಂದಲೂ ಆಗಮದಿಂದಲೂ ಆತ್ಮವಿಚಾರವನ್ನು ಕೇಳಿ ತಿಳಿದುಕೊಳ್ಳಬೇಕು ; ಬಳಿಕ ಆ ವಿಚಾರವನ್ನೇ (ಅನ್ವಯವ್ಯತಿರೇಕ) ತರ್ಕದಿಂದ ಮನನ ಮಾಡಬೇಕು ; ಅನಂತರ, ವಿಷಯಿಗೂ (ಪ್ರಮಾತೃವಿಗೂ) ಸಾಕ್ಷಿಯಾದ ಆತ್ಮನು ಅಂತಃಕರಣಕ್ಕೆ ವಿಷಯನಲ್ಲವಾದರೂ, ಮನನಕ್ಕಾಗಿ (ಅಧ್ಯಾರೋಪ ದೃಷ್ಟಿಯಿಂದ) ವಿಷಯವೆಂಬಂತೆ ಮಾಡಿಕೊಂಡ ಆತ್ಮವಸ್ತುವನ್ನು ಏಕಾಗ್ರವಾದ ಸೂಕ್ಷ್ಮಬುದ್ಧಿಯಿಂದ ಚೆನ್ನಾಗಿ ನೋಡಿ ಸರಿಯಾಗಿ ಅರಿತು ನಿಶ್ಚಯಿಸಬೇಕು. ಹೀಗೆ, ಶ್ರವಣಮನನನಿದಿಧ್ಯಾಸನಗಳೆಂಬ (ಸಾಕ್ಷಾತ್ಸಾಧ-ನೇರಾದ) ಸಾಧನಗಳನ್ನು ಮಾಡಿದರಲ್ಲವೆ, ಈ ಆತ್ಮನನ್ನು ಕಂಡುಕೊಳ್ಳಲು ಸಾಧ್ಯವಾಗುವದು ! ಯಾವಾಗ ಈ ಶ್ರವಣ-ಮನನ-ನಿದಿಧ್ಯಾಸನಗಳು ಪರಸ್ಪರಪೋಷಕವಾಗಿ ಸಂಗಾನದಿಂದ ಒಂದಾಗುವವೋ ಆಗ ಬ್ರಹ್ಮಸ್ವರೂಪವಾದ ಆತ್ಮವು ಒಂದೇ ಸತ್ಯ-ಎಂಬ "ಸಮ್ಯಗ್ದರ್ಶನವು"-ಸರಿಯಾದ ಅರಿವು-ಪ್ರಸನ್ನವಾಗುತ್ತದೆ. ಈ ವಿಜ್ಞಾನವು ಆತ್ಮವಸ್ತುವು ಹೇಗಿದೆಯೋ ಹಾಗೆಯೇ ಚೈತನ್ಯಮಾತ್ರಸ್ವರೂಪವೆಂದು ವಸ್ತುವಿಗನುಗುಣವಾಗಿ (ವಸ್ತುತಂತ್ರವಾಗಿ) ಕಂಡುಕೊಳ್ಳಬೇಕಾದ ವಿವೇಕದ ಫಲವೇ ಹೊರತು ಉಪಾಸನೆಯಂತೆ ಶಾಸ್ತ್ರವಿಧಿಯನ್ನು ಅನುಸರಿಸಿ ಕರ್ತೃತಂತ್ರವಾಗಿ ಮಾಡಿಕೊಳ್ಳಬೇಕಾದ ಭಾವನೆಯ ಫಲವಲ್ಲ. ಹೀಗೆ, ಮನನ ಮತ್ತು ನಿದಿಧ್ಯಾಸನಗಳಿಂದ ಜೊತೆಗೂಡದಿರುವ ಶ್ರ ವ ಣ ಮಾ ತ್ರ ದಿ ಂ ದ ಸಮ್ಯಗ್ದರ್ಶನವು ಪ್ರಸನ್ನವಾಗುವದಿಲ್ಲ. ಆದರೆ ಉತ್ತಮಾಧಿಕಾರಿಗಳಿಗೆ ಶ್ರವಣಸಮಕಾಲದಲ್ಲಿಯೇ (ಪೂರ್ವಸಂಸ್ಕಾರದ ಫಲವಾಗಿ) ಮನನನಿದಿಧ್ಯಾಸನಗಳ ಬಲವೂ ಹುರಿಗೊಳ್ಳುವದರಿಂದ (ತತ್ತ್ವಮಸ್ಯಾದಿ) ವೇದಾಂತವಾಕ್ಯಶ್ರವಣಮಾತ್ರದಿಂದಲೇ ಆತ್ಮವಿಜ್ಞಾನವುಂಟಾಗಬಹುದು.

ಸಂಜೆಗತ್ತಲೆಯ ಮಂದವಾದ ಬೆಳಕಿನಲ್ಲಿ ಹಗ್ಗವನ್ನು ಹಾವೆಂದು ಭ್ರಮಿಸಿ ಭಯದಿಂದ ಚೀರಿ ಓಡುತ್ತೇವೆ. ಅದು ಹಗ್ಗವೇ ಹೊರತು ಹಾವಲ್ಲ-ಎಂಬ ನಿಶ್ಚಯಜ್ಞಾನವುಳ್ಳ ಆಪ್ತರು ಬೆಳಕನ್ನು ತಂದು ಹಗ್ಗವನ್ನು ತೋರಿಸಿದಾಗ ನಮ್ಮ ಭಯವು ತೊಲಗಿ ನಾವು ಸ್ವಸ್ಥರಾಗುತ್ತೇವೆ. ಇದು ಲೋಕದಲ್ಲಿ ಎಲ್ಲರ ಅನುಭವವಾಗಿದೆ. ಈ ದೃಷ್ಟಾಂತದಲ್ಲಿ-ನಿಜವಾಗಿರುವದು ಹಗ್ಗ ; ಇಲ್ಲದಿದ್ದರೂ ಇದ್ದಂತೆ ತೋರುವದು ಹಾವು, ಈ ಹುಸಿತೋರಿಕೆಯೇ ಮಾಯೆ. ಇದಕ್ಕೆ ಕಾರಣ ನಾವು ಹಗ್ಗವನ್ನು ಅರಿಯದಿರುವದೇ. ಆದ್ದರಿಂದ ಅರಿಯದ ಹಗ್ಗವನ್ನು ನಾವು ಹಾವೆಂದು ತಪ್ಪಾಗಿ ತಿಳಿಯುತ್ತಿದ್ದೇವೆ. ಈ ಅರಿಯದಿರುವದೆಂಬುದೇ ಅಜ್ಞಾನ ಅಥವಾ ಅವಿದ್ಯೆ ಅಥವಾ ಅಗ್ರಹಣ (ಜ್ಞಾನಾಭಾವ). ಇದರಿಂದ ಉಂಟಾಗುವ ತಪ್ಪುತಿಳಿವಳಿಕೆಯೇ ಅಧ್ಯಾಸ, ಅಥವಾ ವಿಪರೀತಪ್ರತ್ಯಯ

(ವಿಪರೀತಜ್ಞಾನ, ಅನ್ಯಥಾಜ್ಞಾನ). ಈ ಅಗ್ರಹಣ ಮತ್ತು ಅಧ್ಯಾಸ ಈ ಎರಡೂ (ಸಂಶಯವೂ ಸಹ) ಜ್ಞಾನಪಕ್ಷದಲ್ಲಿ (Subjective) ತೋರಿಕೊಳ್ಳುವ ಮನೋವೃತ್ತಿಗಳು. ನಾಮರೂಪಾತ್ಮಕವಾದ ಹುಸಿತೋರಿಕೆಯು ಮಾತ್ರ, ಜ್ಞೇಯಪಕ್ಷದಲ್ಲಿ (Objective) ತೋರಿಕೊಳ್ಳುವ ವ್ಯಾಕೃತವಾಯಿ-ಎನಿಸುತ್ತದೆ. ತೋರಿಕೆಯ ನಾಮರೂಪಗಳು ಆಗಾಗ ಅಡಗುತ್ತಲೂ ಇರುವದರಿಂದ ಅವು ಪುನಃ ತೋರಿಕೊಳ್ಳುವದಕ್ಕೆ ಕಾರಣವಿರಬೇಕೆಂದು ಊಹಿಸಿ ಸೂಕ್ಷ್ಮವೂ ಶಕ್ತಿರೂಪವೂ ಆಗಿರುವ ನಾಮರೂಪಗಳ ಬೀಜವನ್ನು (ಕಾರಣವನ್ನು) ಅವ್ಯಾಕೃತವಾಯಿ-ಎನ್ನುತ್ತೇವೆ. ಅಂತು ಈ ಬಿಡಿಬಿಡಿಯಾಗಿ ತೋರಿಕೊಳ್ಳುವ (ವ್ಯಾಕೃತ), ಮತ್ತು ಅಡಗಿರುವ (ಅವ್ಯಾಕೃತ) ನಾಮರೂಪ ಸರ್ಪಕ್ಕೆ ಹಗ್ಗದ ಅಜ್ಞಾನವೇ ಕಾರಣ. ಸರ್ಪದ ಭಯಕ್ಕೆ ಹಗ್ಗದ ಅಜ್ಞಾನವೇ ಕಾರಣವಾದುದರಿಂದ, ಆ ಭಯಕಂಪನಾದಿ ಅನರ್ಥವನ್ನು ಕಳೆಯಲು, ಹಗ್ಗದ ಜ್ಞಾನವೊಂದೇ ಸಾಧನ. ಈ ಸರಿಯಾದ ತಿಳಿವಳಿಕೆಯ (ಸಮ್ಯಗ್ಜ್ಞಾನದ) ಹೊರತು, ಬೇರೆ ಜಪತಪಾದಿಸಾಧನಗಳಾಗಲಿ, ಭಾವನಾಮಯವಾದ ಉಪಾಸನೆಯಾಗಲಿ ನಿಜವಾದ ಸಾಧನೆಯಾಗಲಾರವೆಂಬುದು ಸ್ಪಷ್ಟವಾಗಿದೆ.

ಈಗ ಈ ವಿವರವಾದ ದೃಷ್ಟಾಂತದ ಪ್ರತಿಯೊಂದು ಅಂಶವನ್ನೂ ದಾರ್ಷ್ಟಾಂತಿಕದಲ್ಲಿರುವ ಪರಮಾರ್ಥವಸ್ತುವಿಗೆ ಅನ್ವಯಿಸಿ ಅರ್ಥಮಾಡಿಕೊಳ್ಳಬೇಕು. ಹಗ್ಗದ ಸ್ಥಾನದಲ್ಲಿ ಆತ್ಮವಸ್ತುವಿದೆ; ಸರ್ಪದ ಸ್ಥಾನದಲ್ಲಿ (ಅಹಂ-ಇದಂ) ನಾನು ಮತ್ತು ಈ ಪ್ರಪಂಚ ಇವೆ. ಅಥವಾ ಸರ್ಪದ ಸ್ಥಾನದಲ್ಲಿ ಅನಾತ್ಮವಾದ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಎಂಬ ಈ ಸಕಲಪ್ರಪಂಚವಿದೆ. ಅನಂತವಾದ ಕಾಲ, ಅಪಾರವಾದ ದೇಶ, ನಿಯತವಾದ ಕಾರ್ಯಕಾರಣಭಾವಗಳು, ಅನೇಕಜೀವರು, ಆ ಜೀವರ ನಿಸ್ಕೃಷ್ಟವಾದ ಕ್ರಿಯಾಕಾರಕಫಲಗಳು-ಇವೆಲ್ಲವೂ ಸೇರಿಯೇ ಜಗತ್ತಾಗಿದೆ; ಅನಾತ್ಮವಾದ ಇವೆಲ್ಲವೂ ಸರ್ಪದ ಸ್ಥಾನದಲ್ಲಿವೆ. ನಾನು ಬ್ರಾಹ್ಮಣ, ಅಥವಾ ನಾನು ಕ್ಷತ್ರಿಯ ಮೊದಲಾದ ಅಭಿಮಾನಗಳು ನಮ್ಮ ಜನ್ಮವನ್ನು ಆಧರಿಸಿರುವ ವೈದಿಕಕಲ್ಪನೆಗಳು. ನಾನು ಬ್ರಹ್ಮಚಾರಿ ಅಥವಾ ನಾನು ಗೃಹಸ್ಥ-ಮುಂತಾದ ಭಾವನೆಗಳು ವೈದಿಕ ಸಂಸ್ಕಾರಗಳನ್ನು ಅವಲಂಬಿಸಿರುವ ಕಲ್ಪನೆಗಳು. ಈ ಎಲ್ಲಾ ವೈದಿಕವ್ಯವಹಾರಗಳೂ ಮತ್ತು ಜೀವನಮಾತ್ರಕ್ಕಾಗಿಯೂ ಭೋಗಸುಖಕ್ಕಾಗಿಯೂ ನಡೆಸುವ ಲೌಕಿಕವ್ಯವಹಾರಗಳೂ, ಈ ದೇಹೇಂದ್ರಿಯಗಳು ತಾನೆಂದೂ ತಾನು ಕರ್ತೃವೆಂದೂ ಭೋಕ್ತೃವೆಂದೂ ತಿಳಿದಿರುವ ಜೀವನಿಗೇ ಸಂಬಂಧಪಟ್ಟಿವೆ. ಸಂಸಾರದ ಈ ಅನರ್ಥವೆಲ್ಲವೂ ಸರ್ಪದ ಸ್ಥಾನದಲ್ಲಿಯೇ ಸೇರಿವೆ.

ನಮ್ಮ ಸ್ವರೂಪವೇ ಆದ ಆತ್ಮವು ದೃಷ್ಟಾಂತದಲ್ಲಿಯ ಹಗ್ಗದಂತಿದೆ. ನಮ್ಮ ಸ್ವರೂಪವೇ ಆದರೂ ಇದನ್ನು ನಮ್ಮ ಮನಸ್ಸು ಅರಿತಿಲ್ಲ- ಎಂಬಿದು

ಪರಮಾಶ್ಚರ್ಯಕರವೂ ಹಾಸ್ಯಾಸ್ಪದವೂ ವಿಷಾದಕರವೂ ಆದ ವಿಪರ್ಯಾಸ. ಆದರೂ ಇದು ನಮ್ಮ ಅನುಭವದಲ್ಲಿದೆ. ಇನ್ನೊಬ್ಬರ ವಿಷಯವು ನಮಗೆ ತಿಳಿಯದಿರುವದು ಆಶ್ಚರ್ಯವಲ್ಲ ; ನಮ್ಮ ನೈಜವೇ ನಮಗೆ ತಿಳಿಯದಿರುವದು ಎಷ್ಟು ಆಶ್ಚರ್ಯ ! ಈ ಅಜ್ಞಾನವೇ ಇಲ್ಲದಿರುವದನ್ನು ಇದ್ದಂತೆ ತೋರಿಸುವ ತಪ್ಪುಕಲ್ಪನೆಗಳಿಗೆ ಕಾರಣವಾಗುವದು ಸ್ವಾಭಾವಿಕ. ಹಗ್ಗವನ್ನು ಕಂಡಿರುವ ಆಪ್ತರು ಬೆಳಕನ್ನು ಹಿಡಿದು ಹಗ್ಗವನ್ನು ತೋರಿಸಿದಾಗ ಹಾವಿನ ಭ್ರಾಂತಿಯು ಹಾರಿಹೋಗುವಂತೆ, ಆತ್ಮನನ್ನು ಕಂಡಿರುವ(ಶಾಸ್ತ್ರ) ಆಚಾರ್ಯರು ತಮ್ಮ ಉಪದೇಶದಿಂದ ಜ್ಞಾನದ ಬೆಳಕನ್ನು ಆತ್ಮನಮೇಲೆ ಚೆಲ್ಲಿದಾಗ ಆತ್ಮ ಒಂದೇ ಸತ್ಯ-ಎಂಬ ಅನುಭವವುಂಟಾಗಿ ಅನಾತ್ಮಭ್ರಾಂತಿಯೆಲ್ಲಾ (ಸೂರ್ಯಪ್ರಕಾಶದಿಂದ ಕತ್ತಲೆಯ ಮಂಜಿನಂತೆ) ಕರಗಿಹೋಗುತ್ತದೆ. ಮರುಮರೀಚಿಕೆ (ಬಿಸಿಲುಕುದುರೆ) ಯಂತೆ ನಾನು ಎಂಬುದೂ ಪ್ರಪಂಚವೂ ತೋರುತ್ತಿದ್ದರೂ ಇವು ಸತ್ಯವೆಂದು ಮತ್ತೆಂದೂ ಭ್ರಮಿಸದೆ, ಚಿದಾನಂದಸ್ವರೂಪ ಆತ್ಮ ಒಂದೇ ಸತ್ಯವೆಂಬ ಅರಿವಿನಲ್ಲಿ ನೆಲೆಯಾಗಿ ನಿಂತಿರುವದೇ ಜ್ಞಾನನಿಷ್ಠೆ.

ಅನುಭವಿಗಳಾದ ಆಚಾರ್ಯರ ಉಪದೇಶವನ್ನು ಮನವಿಟ್ಟು ಕೇಳುವದರಿಂದಲೂ ಅದನ್ನೇ ಶ್ರುತಿ, ಯುಕ್ತಿ ಮತ್ತು ಸಾರ್ವತ್ರಿಕಾನುಭವಗಳಿಗೆ ಹೊಂದಿಸಿ ಮತ್ತೆಮತ್ತೆ ಮನಸ್ಸಿನಲ್ಲಿ ಚೆನ್ನಾಗಿ ಹೊರಳಾಡಿಸಿ ವಿಚಾರಮಾಡುವದರಿಂದಲೂ, ಹೀಗೆ ವಿವೇಕದ ಬಲದಿಂದ ಆತ್ಮವು ಹೇಗಿದೆಯೋ ಹಾಗೆಯೇ (ವಸ್ತುತಂತ್ರವಾಗಿ) ಸಚ್ಚಿದಾನಂದಸ್ವರೂಪವೆಂದು ನಿಶ್ಚಯಿಸಿದ ಜ್ಞಾನದಲ್ಲಿ ಮನಸ್ಸನ್ನು ಮುಳುಗಿಸುವದರಿಂದಲೂ ಆತ್ಮಾನುಭವವುಂಟಾಗುತ್ತದೆ; ಆಗ ಅಜ್ಞಾತ ಆತ್ಮವೇ ಈ ಸಕಲ ಪ್ರಪಂಚವಾಗಿ ತೋರುತ್ತಿದೆಯೆಂಬ ಅರಿವು ಉಂಟಾಗುವದರಿಂದ, "ಆತ್ಮನಿ ಖಲು....ವಿಜ್ಞಾತೇ ಇದಂ ಸರ್ವಂ ವಿದಿತಂ ವಿಜ್ಞಾತಂ ಭವತಿ ॥ (ಬೃ.ಭಾ. ೨-೪-೫) ಆತ್ಮನನ್ನು ಅರಿತರೆ ಈ ಸಕಲವನ್ನೂ ಅರಿತಂತೆ ಆಗುತ್ತದೆ -ಎಂಬ ವಿಜ್ಞಾನವು ಉಂಟಾಗುತ್ತದೆ.

(2) ಶ್ರೀಶಂಕರರ ಭಾಷ್ಯವಾಕ್ಯದಲ್ಲಿಯೂ ಮೂಲ ಉಪನಿಷದ್‌ವಾಕ್ಯದಲ್ಲಿಯೂ ಆಳವಾಗಿಯೂ ವಿವರವಾಗಿಯೂ ವಿಚಾರಮಾಡಬೇಕಾದ ಕೆಲವು ಮುಖ್ಯವಿಷಯಗಳಿವೆ :

ಮೊಟ್ಟಮೊದಲನೆಯದಾಗಿ, ಈ ಬ್ರಾಹ್ಮಣಾರಂಭದ ಅವತರಣಿಕೆಯಲ್ಲಿ, "ಸಾಧನನಿರಪೇಕ್ಷೈವ ಪುರುಷಾರ್ಥಸಾಧನಮ್ ಇತಿ ಪಾರಿವ್ರಾಜ್ಯಂ ಸರ್ವಸಾಧನಸಂನ್ಯಾಸಲಕ್ಷಣಮ್ ಅಙ್ಗತ್ವೇನ ವಿಧಿತ್ಸ್ಯತೇ । ಏತಾವದೇವ ಅಮೃತತ್ವಸಾಧನಮ್ ಇತ್ಯವಧಾರಣಾತ್ ಷಷ್ಠಸಮಾಪ್ತೌ ।....

ತಸ್ಮಾತ್ ಆತ್ಮಜ್ಞಾನಾಙ್ಗತ್ವೇನ ಸಂನ್ಯಾಸವಿಧಿತ್ಸಯೈವ ಆಖ್ಯಾಯಿಕಾ ಇಯಮ್ ಆರಭ್ಯತೇ ll (ಆದ್ದರಿಂದ ಮತ್ತೊಂದು ಸಾಧನದಿಂದೊಡಗೂಡಿ ಬ್ರಹ್ಮವಿದ್ಯೆಯು ನಾಲ್ಕನೆಯ ಪುರುಷಾರ್ಥಕ್ಕೆ ಸಾಧನವಾಗಿರುವದಿಲ್ಲ. ಏಕೆಂದರೆ ಅದು ಎಲ್ಲಕ್ಕೂ ವಿರುದ್ಧವಾಗಿರುತ್ತದೆ ;- ಈ ವಿದ್ಯೆಯು ದ್ವೈತವೆಲ್ಲಕ್ಕೂ ವಿರುದ್ಧ ವಾಗಿರುತ್ತದೆ.)

ಸಾಧನನಿರಪೇಕ್ಷವಾಗಿಯೇ ಬ್ರಹ್ಮವಿದ್ಯೆಯು ಮೋಕ್ಷವೆಂಬ ಪುರುಷಾರ್ಥಕ್ಕೆ ಸಾಧನವಾಗಿರುತ್ತದೆ. ಆದ್ದರಿಂದ ಎಲ್ಲಾ ಸಾಧನಗಳನ್ನೂ ಬಿಡುವದೆಂಬ ಪಾರಿವ್ರಾಜ್ಯ(ಸಂನ್ಯಾಸ)ವನ್ನು ಬ್ರಹ್ಮವಿದ್ಯೆಗೆ ಅಂಗವಾಗಿ ವಿಧಿಸಬೇಕೆಂದು ಈ (ಉಪನಿಷದ್) ಬ್ರಾಹ್ಮಣವು ಹೊರಟಿರುತ್ತದೆ. (ಸಂನ್ಯಾಸಸಹಿತವಾದ ಜ್ಞಾನ ನಿಷ್ಠೆಯೇ ಮೋಕ್ಷಕ್ಕೆ ಸಾಧನವೆಂದು ಇದರಿಂದ ಸಿದ್ಧವಾಗುತ್ತದೆ.) "ಇಷ್ಟೇ ಅಮೃತತ್ವಕ್ಕೆ ಸಾಧನವು" (೪-೫-೧೫ರ ಅರ್ಥವೂ ಇದೇ.) ಎಂದು ಆರನೆಯ ಅಧ್ಯಾಯದ ಕೊನೆಯಲ್ಲಿ ಒತ್ತಿ ಹೇಳಿರುವದರಿಂದಲೂ ಇದೇ ಸರಿ ಎಂದು ನಿಶ್ಚಯ ವಾಗುತ್ತದೆ. ಯಾಜ್ಞವಲ್ಕ್ಯನು (ಗೃಹಸ್ಥನಾಗಿ) ಕರ್ಮಿಯಾಗಿದ್ದವನು-ಅದನ್ನು ಬಿಟ್ಟು ಪರಿವ್ರಾಜಕನಾದನು (೪-೫-೧೫) ಎಂಬ ಲಿಂಗದಿಂದಲೂ ಹೀಗೆಂದು ನಿರ್ಣಯಿಸಬೇಕು. (ಕರ್ಮವು ಮುಕ್ತಿಗೆ ಅವಶ್ಯಸಾಧನವಾಗಿದ್ದರೆ ಯಾಜ್ಞ ವಲ್ಕ್ಯನು ಆ ಕರ್ಮವನ್ನು ಬಿಟ್ಟುಹೋಗುತ್ತಿರಲಿಲ್ಲ. ಆದರೆ, ಬಿಟ್ಟುಹೋದನು- ಎಂಬಿದು, ಜ್ಞಾನಕ್ಕೆ ಕರ್ಮದ ಅಪೇಕ್ಷೆಯಿಲ್ಲವೆಂಬುದಕ್ಕೆ ಲಿಂಗವು (ಸೂಚಕವು.)

ಕರ್ಮಸಾಧನವಿಲ್ಲದ ಮೈತ್ರೇಯಿಗೆ ಬ್ರಹ್ಮವಿದ್ಯೆಯನ್ನು ಅಮೃತತ್ವಕ್ಕೆ ಸಾಧನವೆಂದು ಉಪದೇಶಿಸಿರುವದರಿಂದಲೂ ಹೀಗೆಂದು ಗೊತ್ತಾಗುತ್ತದೆ. (ಯಾಜ್ಞವಲ್ಕ್ಯರು ತಾವು ಸಂನ್ಯಾಸ ತೆಗೆದುಕೊಳ್ಳುವದರ ಜೊತೆಗೆ ಅನಿವಾರ್ಯ ವಾಗಿ ಮೈತ್ರೇಯಿಗೂ ಸಂನ್ಯಾಸಕೊಟ್ಟಂತಾಗಿದೆ. ಜ್ಞಾನಕ್ಕೂ ಅದರ ಫಲವಾದ ಮೋಕ್ಷಕ್ಕೂ ಪುರುಷರಿಗೆ ಅಧಿಕಾರವಿರುವಂತೆ ಸ್ತ್ರೀಯರಿಗೂ ಅಧಿಕಾರವಿರುವದ ರಿಂದಲೂ ಜ್ಞಾನಕ್ಕೆ ಸಂನ್ಯಾಸವು ಸಾಧನವಾಗಿರುವದರಿಂದ, ಜ್ಞಾನಾಪೇಕ್ಷೆ ಯುಳ್ಳ ಮುಮುಕ್ಷುಗಳಾದ ಸ್ತ್ರೀಯರಿಗೂ (ಪರಮಾರ್ಥ) ಸಂನ್ಯಾಸದ ಅಗತ್ಯ ವಿದೆ-ಎಂದೇ ಸಿದ್ಧವಾಗುತ್ತದೆ. ವಿತ್ತವನ್ನು ನಿಂದಿಸಿರುವ ವಚನದಿಂದಲೂ ಇದೇ ಸಿದ್ಧವಾಗುತ್ತದೆ. ಅಮೃತತ್ವಕ್ಕೆ ಕರ್ಮವು ಸಾಧನವಾಗಿದ್ದರೆ ಪಾಙ್ಕ್ತಕರ್ಮವು ವಿತ್ತಸಾಧ್ಯವಾಗಿರುವದರಿಂದ ಆ ವಿತ್ತವನ್ನು ನಿಂದಿಸಿರುವ ವಚನವು ಒಪ್ಪಾಗು ತ್ತಿರಲಿಲ್ಲ ; ಆದರೆ, ಕರ್ಮವನ್ನು ಬಿಡಿಸಬೇಕೆಂಬುದೇ ಶ್ರುತಿಗೆ ಇಷ್ಟವಾದುದ ರಿಂದ ಅದರ ಸಾಧನವಾದ ವಿತ್ತವನ್ನು ನಿಂದಿಸಿರುವದು ಯುಕ್ತವಾಗಿದೆ. ಕರ್ಮಾಧಿಕಾರಕ್ಕೆ ನಿಮಿತ್ತವಾದ ವರ್ಣಾಶ್ರಮಗಳೇ ಮುಂತಾದವುಗಳ ಪ್ರತ್ಯಯ ಗಳು "ಬ್ರಹ್ಮವು ಅವನನ್ನು ತಿರಸ್ಕರಿಸುತ್ತದೆ" (೨-೪-೬) ಮುಂತಾದ

ಶ್ರುತಿಯಿಂದ ಬಾಧಿತವಾಗಿರುವದರಿಂದಲೂ ಹೀಗೆಂದು ನಿಶ್ಚಯವಾಗುತ್ತದೆ. ಬ್ರಹ್ಮಕ್ಷತ್ರಾದ್ಯಾತ್ಮಕನು ತಾನು ಎಂಬ ವಿಷಯದ ಪ್ರತ್ಯಯವು ಯಾವ ಪುರುಷ ನಿಗೆ ಬಾಧಿತವಾಗಿರುವದೋ ಅವನು ಆ ಪ್ರತ್ಯಯವನ್ನು ಬಿಟ್ಟುಬಿಡುವದರಿಂದ ಅದರ ಕಾರ್ಯವಾದ ಕರ್ಮಗಳನ್ನೂ ಕರ್ಮಸಾಧನಗಳನ್ನೂ ಸಂನ್ಯಾಸಮಾಡುವ ನೆಂದು ತಾನೇ ಸಿದ್ಧವಾಗುತ್ತದೆ. ಆದ್ದರಿಂದ ಆತ್ಮಜ್ಞಾನಕ್ಕೆ ಅಂಗವಾಗಿ ಸಂನ್ಯಾಸವನ್ನು ವಿಧಿಸಬೇಕೆಂದೇ ಈ (ಮೈತ್ರೇಯೀಬ್ರಾಹ್ಮಣ) ಕಥೆಯನ್ನು ಆರಂಭಿಸಿರುತ್ತದೆ. (ಬೃ. ಭಾ. ೨-೪-೧ ಅವತರಣಿಕಾ)

(3) ಆತ್ಮಜ್ಞಾನದಿಂದ ಲಭಿಸುವ ಅಮೃತತ್ವಕ್ಕೆ ತ್ಯಾಗರೂಪವಾದ ಸಂನ್ಯಾಸವೇ ಮುಖ್ಯ ಸಾಧನವೆಂದು ಬೇರೆ ಉಪನಿಷತ್ತುಗಳಲ್ಲಿಯೂ ಭಗವದ್ಗೀತೆ ಯಲ್ಲಿಯೂ ಅನೇಕ ಸಂದರ್ಭಗಳಲ್ಲಿ ನಿಶ್ಚಿತವಾಗಿ ಹೇಳಿದೆ :

ತೈತ್ತಿರೀಯದ ಮಹಾನಾರಾಯಣೋಪನಿಷತ್ತಿನಲ್ಲಿ ;

ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವ-
ಮಾನಶುಃ ।.... ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ ಸಂನ್ಯಾಸ
ಯೋಗಾದ್ಯತಯಃ ಶುದ್ಧಸತ್ತ್ವಾಃ । ತೇ ಬ್ರಹ್ಮಲೋಕೇ ತು
ಪರಾನ್ತಕಾಲೇ ಪರಾಮೃತಾತ್ಪರಿಮುಚ್ಯನ್ತಿ ಸರ್ವೇ ॥
(ತೈ. ಮತ್ತು ಮುಂ. ಭಾ. ೩-೨-೬)

ಕರ್ಮದಿಂದಾಗಲೀ ಪುತ್ರರಿಂದಾಗಲೀ ಧನದಿಂದಾಗಲೀ ಅಮೃತತ್ವ (ಮೋಕ್ಷ)ವುಂಟಾಗುವದಿಲ್ಲ ; ಮತ್ತೇನೆಂದರೆ, ಜ್ಞಾನಿಗಳಾದ ಕೆಲವರು ತ್ಯಾಗ ದಿಂದಲೇ ಅಮೃತತ್ವವನ್ನು ಪಡೆದರು.

ವೇದಾಂತವಾಕ್ಯಾರ್ಥವಿಚಾರದಿಂದ ಉಂಟಾಗುವ ವಿಶೇಷಾನುಭವದಿಂದ ಪರಮಾತ್ಮಸ್ವರೂಪದ ನಿಶ್ಚಯಜ್ಞಾನವುಳ್ಳವರೂ ಕರ್ಮಸಂನ್ಯಾಸಪೂರ್ವಕ ವಾದ ಕೇವಲ ಬ್ರಹ್ಮನಿಷ್ಠಾರೂಪಯೋಗದಿಂದ ಪರಿಶುದ್ಧಮನಸ್ಸುಳ್ಳವರೂ ಆದ ಯತಿಗಳು.

ಜೀವನ್ತ ಏವ ಬ್ರಹ್ಮಭೂತಾಃ । ಪರಾಮೃತಾಃ ಸನ್ತಃ ಪರಿ
ಮುಚ್ಯನ್ತಿ, ಪರಿ ಸಮನ್ತಾತ್ ಪ್ರದೀಪನಿರ್ವಾಣವತ್ ಭಿನ್ನಘ-
ಟಾಕಾಶವಚ್ಚ ನಿವೃತ್ತಿಮ್ ಉಪಯಾನ್ತಿ ॥ (ಮುಂ.ಭಾ. ೩-೨-೬)

ಬದುಕಿರುವಾಗಲೇ ಹೆಚ್ಚಿನ ಅಮೃತವಾದ ಬ್ರಹ್ಮಸ್ವರೂಪರಾಗಿ, ಇತರ ಲೋಕಗಳ ಫಲಗಳೆಲ್ಲ ಅಡಕವಾಗಿರುವ ಬ್ರಹ್ಮವೆಂಬ ಲೋಕದಲ್ಲಿ ದೊಡ್ಡ ದೀಪವು ಆರಿಹೋಗುವಂತೆಯೂ ಒಡೆದ ಗಡಿಗೆಯ ಆಕಾಶವು ಹೊರಗಿನ

ಆಕಾಶದಲ್ಲಿ ಅಡಗುವಂತೆಯೂ- ಎಲ್ಲಾ ವಿಧವಾದ ಬಂಧಗಳಿಂದಲೂ ದೇಹವನ್ನು ಬಿಡುವ ಕಾ ಲ ದ ಲ್ಲಿ (ಎಲ್ಲಜೀವನ್ಮುಕ್ತ)ರೂ ಬಿಡುಗಡೆಯನ್ನು ಹೊಂದುವರು.

ಯೋಽಕಾಮೋ ನಿಷ್ಕಾಮ ಆಪ್ತಕಾಮ ಆತ್ಮಕಾಮೋ ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ॥
ಆತ್ಮೈವ ಅನನ್ತರೋಽಬಾಹ್ಯಃ ಕೃತ್ಸ್ನಃ ಪ್ರಜ್ಞಾನಘನ ಏಕರಸಃ (ಬೃ. ಭಾ. ೪-೪-೬)

ಯಾವನಿಗೆ ಒಳಗಿಲ್ಲದೆ, ಹೊರಗಿಲ್ಲದೆ, ಸಂಪೂರ್ಣವಾಗಿ, ಪ್ರಜ್ಞಾನಘನನಾಗಿ, ಏಕರಸನಾಗಿರುವ ಆತ್ಮನೊಬ್ಬನೇ ಸತ್ಯವೋ, ಆದ್ದರಿಂದ ಕಾಮಿಸುವದಕ್ಕೆ ಆತ್ಮನ ಹೊರತು ಬೇರೆ ಯಾವದೊಂದು ಪದಾರ್ಥವೂ ಇರುವದಿಲ್ಲವೋ ಅವನು ಆತ್ಮಕಾಮನು ; ಆತ್ಮಕಾಮನಿಗೆ ಸಕಲಕಾಮಗಳೂ ಒಟ್ಟಿಗೆ, ಒಮ್ಮೆಗೇ (ಆತ್ಮರೂಪದಿಂದ) ದೊರಕಿರುವದರಿಂದ ಅವನು ಆಪ್ತಕಾಮನು ; ಆಪ್ತಕಾಮನನ್ನು ಕಾಮಗಳೆಲ್ಲಾ ತಾವಾಗಿಯೇ ಬಿಟ್ಟುಹೋಗಿರುವದರಿಂದ ಅ ವ ನೇ ನಿಷ್ಕಾಮನು ; ನಿಷ್ಕಾಮನು ಯಾವದನ್ನೂ ಕಾಮಿಸದವನಾದ್ದರಿಂದ ಅವನು ಅಕಾಮನೂ ಆಗಿದ್ದಾನೆ.

ಹೀಗೆ ಅಕಾಮನೂ ನಿಷ್ಕಾಮನೂ ಆಪ್ತಕಾಮನೂ ಆದ ಬ್ರಹ್ಮಜ್ಞಾನಿಗೆ ಕರ್ಮವೂ ಇಲ್ಲದ್ದರಿಂದ ಸ್ಥಳಾಂತರಗಮನಕ್ಕೆ ಕಾರಣವೇ ಇರುವದಿಲ್ಲ. ಆದ್ದರಿಂದಲೇ ಅವನ ವಾಗಾದಿ ಪ್ರಾಣಗಳು (ಅಜ್ಞಾನಿಗೆ ಪ್ರಾಣಗಳು ಈ ದೇಹವನ್ನು ಬಿಟ್ಟು ಬೇರೆ ದೇಹವನ್ನು ಪಡೆಯುವದಕ್ಕಾಗಿ ಹೊರಗೆ ಹೋಗುವಂತೆ) ಈಗಿರುವ ದೇಹವನ್ನು ಬಿಟ್ಟು ಮೇಲಕ್ಕೆ ಹೋಗುವದಿಲ್ಲ.

ಯೋ ಹಿ ಸುಷುಪ್ತಾವಸ್ಥಮಿವ ನಿರ್ವಿಶೇಷಮ್ ಅದ್ವೈತಮ್ ಅಲುಪ್ತಚಿದ್ರೂಪಜ್ಯೋತಿಃಸ್ವಭಾವಮ್ ಆ ತ್ಮಾ ನ ಂ ಪಶ್ಯತಿ ತಸ್ಯೈವ ಅಕಾಮಯಮಾನಸ್ಯ ಕರ್ಮಾಭಾವೇ ಗಮನಕಾರಣಾಭಾವಾತ್ ಪ್ರಾಣಾ ವಾಗಾದಯಃ ನೋತ್ಕ್ರಾಮನ್ತಿ । ಕಿಂ ತು ವಿದ್ವಾನ್ ಸ ಇಹೈವ ಬ್ರಹ್ಮ ಯದ್ಯಪಿ ದೇಹವಾನಿವ ಲಕ್ಷ್ಯತೇ ಸ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ॥ (ಬೃ. ಭಾ. ೪-೪-೬)

ಯಾವನು ನಿದ್ರಾವಸ್ಥೆಯಲ್ಲಿ ಇರುವಂತೆಯೇ ಆತ್ಮನು ನಿರ್ವಿಶೇಷನೂ ಅದ್ವೈತನೂ ಲೋಪವಾಗದ ಚಿದ್ರೂಪಜ್ಯೋತಿಯ ಸ್ವಭಾವದವನೂ ಆಗಿರುವನೆಂದು ಅರಿತಿರುತ್ತಾನೋ, ಅವನು ಕಾಮಿಸದವನಾದ್ದರಿಂದ ಅವನಿಗೆ ಕರ್ಮವು ಇಲ್ಲವಾಗಲು ಗಮನಕ್ಕೆ ಕಾರಣವಿಲ್ಲದ್ದರಿಂದ ಅವನ ವಾಗಾದಿಪ್ರಾಣಗಳು ಉತ್ಕ್ರಾಂತವಾಗುವದಿಲ್ಲ. ಮತ್ತೇನೆಂದರೆ, ಜ್ಞಾನಿಯಾದ ಅವನು ದೇಹವುಳ್ಳವ

ನಂತೆ ಕಾಣಿಸುತ್ತಿದ್ದರೂ ಇಲ್ಲಿಯೇ ಈಗಲೇ ಅವನು ಬ್ರಹ್ಮವಾಗಿದ್ದಾನೆ. ಅವನು ಸರ್ವದಾ ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಸೇರಿಹೋಗುವನು.

ಪರಮಾತ್ಮವ್ಯತಿರೇಕೇಣ ಅನ್ಯಸ್ಯಾಭಾವಂ ವಿಸ್ತರೇಣ ಅವಾದಿಷ್ಮ । ತಸ್ಮಾತ್ ಅವಿದ್ಯಾನಿವೃತ್ತಿಮಾತ್ರೇ ಮೋಕ್ಷವ್ಯವಹಾರಃ ಇತಿ ಚ ಅವೋಚಾಮ ಯಥಾ ರಜ್ಜ್ವಾದೌ ಸರ್ಪಾದ್ಯಜ್ಞಾನ ನಿವೃತ್ತೌ ಸರ್ಪಾದಿನಿವೃತ್ತಿಃ ॥ (ಬೃ. ಭಾ. ೪-೪-೬)

ಪರಮಾತ್ಮನಿಗಿಂತ ಬೇರೆಯಾದ ಆತ್ಮನು ಮತ್ತೊಬ್ಬನಿಲ್ಲವೆಂಬುದನ್ನು ವಿಸ್ತಾರವಾಗಿ ಹೇಳಿರುತ್ತೇವೆ. (ಬೃ. ಭಾ. ೩-೭-೨೩ ; ೩-೮-೧೧) ಆದ್ದರಿಂದ ಹಗ್ಗವೇ ಮುಂತಾದವುಗಳಲ್ಲಿ ಹಾವು ಮುಂತಾದವುಗಳ ಕಲ್ಪನೆಯ ಅಜ್ಞಾನವು ತೊಲಗಲು, ಹಾವು ಮುಂತಾದ ಭ್ರಮೆಯು ತೊಲಗುವಂತೆ ಅವಿದ್ಯೆಯ ನಿವೃತ್ತಿಯನ್ನೇ ಮೋಕ್ಷವೆಂದು ವ್ಯವಹರಿಸುತ್ತಾರೆ- ಎಂದೂ ಹೇಳಿರುತ್ತೇವೆ.

ನ । ಅವಿದ್ಯಾಪಗಮಮಾತ್ರತ್ವಾತ್ ಬ್ರಹ್ಮಪ್ರಾಪ್ತಿಫಲಸ್ಯ । ಅತೋ ಬ್ರಹ್ಮವಿದ್ಯಾಯಾಂ ಸತ್ಯಾಮ್ ಅವಿದ್ಯಾಕಾರ್ಯಾನುಪಪತ್ತೇಃ ಪ್ರದೀಪ ಇವ ತಮಃಕಾರ್ಯಸ್ಯ॥ (ಬೃ.ಭಾ. ೧-೪-೧೦)

ಹಾಗಲ್ಲ. ಏಕೆಂದರೆ, ಬ್ರಹ್ಮಪ್ರಾಪ್ತಿಫಲವು ಎಂದರೆ, ಅವಿದ್ಯೆಯು ತೊಲಗುವದೇ ಹೊರತು, ಮತ್ತೇನೂ ಅಲ್ಲ. ಆದ್ದರಿಂದ ಬ್ರಹ್ಮವಿದ್ಯೆಯು ಉಂಟಾದರೆ ಪ್ರದೀಪದಲ್ಲಿ ಕತ್ತಲೆಯ ಕಾರ್ಯವು ಹೇಗೆ ಇರಲಾರದೋ ಹಾಗೆ ಅವಿದ್ಯೆಯ ಕಾರ್ಯವು ಇರಲಾರದು.

ಆದ್ದರಿಂದ ಅವಿದ್ಯಾನಿವೃತ್ತಿಯೇ ಬ್ರಹ್ಮಪ್ರಾಪ್ತಿ. ಹಗ್ಗದ ಹಾವು ಮುಂತಾದವುಗಳು ನಿಜವಾಗಿಲ್ಲವಾದುದರಿಂದ, ನಿಜವಾಗಿ ತೊಲಗಬೇಕಾದುದು ಹೇಗಿಲ್ಲವೋ ಹಾಗೆ, ಸಂಸಾರಬಂಧವು ನಿಜವಾಗಿ ತೊಲಗಬೇಕಾದುದೇನೂ ಇಲ್ಲ. ಅಜ್ಞಾನವೊಂದೇ ತೊಲಗಬೇಕಾಗಿದೆ. ಆದರೆ, ಅದು ತೊಲಗಿದರೆ, ನಿತ್ಯಪ್ರಕಾಶ ಸ್ವರೂಪಸೂರ್ಯನಲ್ಲಿ ಹೇಗೆ ಕತ್ತಲೆ ಎಂದೂ ಇರಲಾರದೋ ಹಾಗೆ, ನಿತ್ಯ ಚೈತನ್ಯ(ಜ್ಞಾನ)ಸ್ವರೂಪನಾದ ಆತ್ಮನಲ್ಲಿ ಅವಿದ್ಯಾತಮಸ್ಸಾದರೂ ಎಂದೂ ಇರಲೇಇಲ್ಲ- ಎಂಬ ಅನುಭವವುಂಟಾಗುತ್ತದೆ.

(4) ವೇದಾಂತಶಾಸ್ತ್ರವನ್ನು ಪಾಠಹೇಳುವ ಈಗಿನ ವಿದ್ಯಾಪದ್ಧತಿಯಲ್ಲಿ ತರ್ಕಶಾಸ್ತ್ರದಲ್ಲಿ ಪಾರಂಗತನಾಗದೆ, ವಿದ್ಯಾರ್ಥಿಯು ವೇದಾಂತದಲ್ಲಿ ಪ್ರವೇಶಿಸುವಂತೆಯೇ ಇಲ್ಲ. ವೇದಾಂತಜಿಜ್ಞಾಸುಗಳಿಗೂ ಮುಮುಕ್ಷುಗಳಿಗೂ ಪರಮಾರ್ಥ ಸಾಧನೆಗೆ, ಸಾರ್ವತ್ರಿಕಾನುಭವವನ್ನು ಆಧರಿಸಿರುವ ಶ್ರುತ್ಯನುಗೃಹೀತ ತರ್ಕವು

ಸಾಕಾಗಿರುವಾಗ, ತರ್ಕಶಾಸ್ತ್ರದ ವಿವರವಾದ ಅಭ್ಯಾಸವು ಅಗತ್ಯವೆ ? ಅಥವಾ ಅನಿವಾರ್ಯವೆ ?- ಎಂಬ ಪ್ರಶ್ನೆ ಹುಟ್ಟುತ್ತದೆ.

ಶ್ರುತ್ಯನುಗೃಹೀತ ಏವ ಹಿ ಅತ್ರ ತರ್ಕಃ ಅನುಭವಾಙ್ಗತ್ವೇನ ಆಶ್ರೀಯತೇ। ಸ್ವಪ್ನಾನ್ತಬುದ್ಧಾನ್ತಯೋಃ ಉಭಯೋಃ ಇತರೇತರವ್ಯಭಿಚಾರಾತ್ ಆತ್ಮನಃ ಅನನ್ವಾಗತತ್ವಮ್.... ಇತ್ಯೇವಂಜಾತೀಯಕಃ। 'ತರ್ಕಾಪ್ರತಿಷ್ಠಾನಾತ್' ॥

(ಸೂ. ಭಾ. ; ೨-೧-೬)

ಕನಸು, ಎಚ್ಚರ- ಇವುಗಳು ಒಂದನ್ನೊಂದು ಬಿಟ್ಟು ಹೋಗುತ್ತಿರುವದರಿಂದ ಆತ್ಮನು ಅವುಗಳ ದೋಷದಿಂದ ಕಲುಷಿತನಾಗುವದಿಲ್ಲ ; ಸುಷುಪ್ತಿಯಲ್ಲಿ ಜೀವನು ಪ್ರಪಂಚವನ್ನು ಬಿಟ್ಟು ಸದ್ರೂಪನಾದ ಆತ್ಮನಲ್ಲಿ ಸೇರಿಹೋಗುವದರಿಂದ ನಿಷ್ಪ್ರಪಂಚ-ಸದ್ರೂಪ-ಆತ್ಮನಾಗಿರುತ್ತಾನೆ ; ಕಾರ್ಯವು ಕಾರಣದಿಂದ ಬೇರೆಯುಲ್ಲ- ಎಂಬ ನ್ಯಾಯದಿಂದ ಬ್ರಹ್ಮದ ಕಾರ್ಯವಾದ ಪ್ರಪಂಚವು ಕಾರಣವಾದ ಬ್ರಹ್ಮಕ್ಕಿಂತ ಬೇರೆಯಾಗಿಲ್ಲ- ಎಂಬೀ ಜಾತಿಯ ಶ್ರುತ್ಯನುಗೃಹೀತತರ್ಕವನ್ನೇ ಅನುಭವಾಂಗವಾಗಿ ಆಶ್ರಯಿಸಿರುತ್ತದೆ. 'ತರ್ಕಾಪ್ರತಿಷ್ಠಾನಾತ್' ತರ್ಕಕ್ಕೆ ನಿಲುಗಡೆಯಿಲ್ಲವಾದುದರಿಂದ ತರ್ಕವು ಮೋಸಮಾಡುತ್ತದೆ ಎಂದು ಮುಂದೆ ಸೂತ್ರಕಾರರು ತಿಳಿಸಿರುತ್ತಾರೆ.

ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ ॥ (ಕ. ಉ. ೧-೨-೯)

ಆತ್ಮನಿಗಿಂತ ಅನನ್ಯನಾದ ಬ್ರಹ್ಮನಿಷ್ಠ ಆಚಾರ್ಯನು "ನೀನು ಆತ್ಮನಿಗಿಂತ ಅನನ್ಯನು" ಎಂದು ಉಪದೇಶಿಸುವ ಆಗಮಪ್ರತಿಪಾದ್ಯವಾದ ಆತ್ಮಜ್ಞಾನವು ತನ್ನ ಬುದ್ಧಿಯ ಬರಿಯ ಊಹೆಯ ಸ್ವತಂತ್ರ ತರ್ಕದಿಂದ ಶಿಷ್ಯನಿಗೆ ಬರುವದಿಲ್ಲ. ಆಗಮದಿಂದುಂಟಾಗುವ ಈ ಜ್ಞಾನವು ಬರಿಯ ತಾರ್ಕಿಕನಲ್ಲದ, ಆಗಮವನ್ನು ಬಲ್ಲ ಆಚಾರ್ಯನಿಂದಲೇ ಹೇಳಲ್ಪಟ್ಟರೆ ಸರಿಯಾದ ಜ್ಞಾನವಾಗುವದು.

ತರ್ಕಶಾಸ್ತ್ರದ ಪರಿಚಯವಿಲ್ಲದ ಸಾಮಾನ್ಯಸ್ತ್ರೀಯಾದ ಮೈತ್ರೇಯಿಗೆ ಯಾಜ್ಞವಲ್ಕ್ಯರು, (ಮಧ್ಯಮಾಧಿಕಾರಿಗಳಿಗೆ ಹೇಳುವಂಥ) ಉಪಾಸನಾದಿಗಳನ್ನು ಹೇಳದೆ, ಆತ್ಮಜ್ಞಾನಕ್ಕೆ ಸಾಧನವಾಗಿರುವ (ಉತ್ತಮಾಧಿಕಾರಿಗಳಿಗೆ ಹೇಳುವ) ವಿವೇಕಜ್ಞಾನವನ್ನೇ ಬೋಧಿಸಿರುವದನ್ನು ನೋಡಿದರೆ, ಪರಮಾರ್ಥಸಾಧನೆಗೆ ಶಮದಮಾದಿಗಳಿಂದ ಕೂಡಿದ ವೈರಾಗ್ಯಮುಮುಕ್ಷುತ್ವಗಳೇ ಅತ್ಯಗತ್ಯವಾದ ಮುಖ್ಯ ಸಾಧನೆಗಳೆಂದು ಸಿದ್ಧವಾಗುತ್ತದೆ.

(5) ಆತ್ಮಜ್ಞಾನಕ್ಕೆ ಸಂನ್ಯಾಸವು ಅವಶ್ಯಸಾಧನವೆಂಬಿದು ಶ್ವೇತಾಶ್ವತರ ಉಪನಿಷತ್ತಿನಿಂದಲೂ ಸ್ಪಷ್ಟವಾಗುತ್ತದೆ.

ತಪಃಪ್ರಭಾವಾದ್ದೇವಪ್ರಸಾದಾಚ್ಚ ಬ್ರಹ್ಮ ಹ ಶ್ವೇತಾಶ್ವತರೋಽಥ ವಿದ್ವಾನ್ । ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ ಸಮ್ಯಗೃಷಿಸಂಘಜುಷ್ಟಮ್ ॥ (ಶ್ವೇ. ಉ. ೬-೨೧)

ತಪಸ್ಸಿನ ಪ್ರಭಾವದಿಂದಲೂ ಈಶ್ವರ ಪ್ರಸಾದದಿಂದಲೂ ವಿದ್ವಾಂಸನಾದ ಶ್ವೇತಾಶ್ವತರನೆಂಬ ಬ್ರಹ್ಮಜ್ಞನು ಋಷಿಮಂಡಲಿಯಿಂದ ಚೆನ್ನಾಗಿ ಸೇವಿಸಲ್ಪಟ್ಟಂಥ ಪರಮಪವಿತ್ರವಾದ ಆತ್ಮಜ್ಞಾನವನ್ನು ಆಶ್ರಮಧರ್ಮಗಳನ್ನೆಲ್ಲಾ ಮೀರಿರುವ ಪರಮಹಂಸರಿಗೆ ಬೋಧಿಸಿದನು.

(6) ಆತ್ಮಜ್ಞಾನನಿಷ್ಠೆಗೆ ಸರ್ವಕರ್ಮಸಂನ್ಯಾಸವು ಅತ್ಯಗತ್ಯವೆಂದು ಗೀತಾಭಾಷ್ಯದ ಅವತರಣಿಕೆಯಲ್ಲಿ ಶಂಕರರು ಹೇಳಿದ್ದಾರೆ.

ತಸ್ಯಾಸ್ಯ ಗೀತಾಶಾಸ್ತ್ರಸ್ಯ ಸಂಕ್ಷೇಪತಃ ಪ್ರಯೋಜನಂ ಪರಂ ನಿಃಶ್ರೇಯಸಂ ಸಹೇತುಕಸ್ಯ ಸಂಸಾರಸ್ಯ ಅತ್ಯನ್ತೋಪರಮಲಕ್ಷಣಮ್ । ತಚ್ಚ ಸರ್ವಕರ್ಮಸಂನ್ಯಾಸಪೂರ್ವಕಾತ್ ಆತ್ಮಜ್ಞಾನನಿಷ್ಠಾರೂಪಾತ್ ಧರ್ಮಾತ್ ಭವತಿ ॥ (ಗೀ. ಭಾ. ಅವ.)

ಸ್ವಲ್ಪದರಲ್ಲಿ ಹೇಳಬೇಕಾದರೆ, ಈ ಗೀತಾಶಾಸ್ತ್ರಕ್ಕೆ ಹೆಚ್ಚಿನ ನಿಃಶ್ರೇಯಸವೇ ಪ್ರಯೋಜನವು. ನಿಃಶ್ರೇಯಸವೆಂದರೆ, ಅವಿದ್ಯಾಕಾರಣಸಹಿತವಾಗಿ, ಸಂಸಾರವು ಅತ್ಯಂತವಾಗಿ ಇಲ್ಲವಾಗಿಬಿಡುವದು. (ಸುಷುಪ್ತಿ, ಪ್ರಲಯ ಮುಂತಾದ ಅವಸ್ಥೆಗಳಲ್ಲಿ ಸಂಸಾರಪ್ರಪಂಚವು ಕಾಣದಿದ್ದರೂ ತೀರ ಹೋಗಿರುವದಿಲ್ಲ. ಏಕೆಂದರೆ ನಿದ್ರೆಯಿಂದ ಎಚ್ಚರವಾದೊಡನೆ, ಮತ್ತು ಪ್ರಪಂಚವು ಪುನಃ ಸೃಷ್ಟಿಯಾದೊಡನೆ ಸಂಸಾರವು ತೋರಿಕೊಳ್ಳುತ್ತದೆ. ಆದರೆ, ಜ್ಞಾನದಿಂದ ಅಜ್ಞಾನವು ನಾಶವಾದೊಡನೆ ಸಂಸಾರವು ಅತ್ಯಂತವಾಗಿಯೇ ವಿನಾಶವಾಗಿಬಿಡುವದು.) ಇದು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ಆತ್ಮಜ್ಞಾನದಲ್ಲಿಯೇ ನಿಂತುಬಿಡುವದೆಂಬ ಧರ್ಮದಿಂದ ಆಗುತ್ತದೆ.

(7) ಸಮ್ಯಗ್ದರ್ಶನವೆಂದರೆ ಸರ್ವಕರ್ಮಸಂನ್ಯಾಸವೆಂದೂ ಸದ್ಯೋಮುಕ್ತಿಯೆಂದೂ ಶಂಕರರು ಗೀತಾಭಾಷ್ಯದಲ್ಲಿ ಹೇಳಿದ್ದಾರೆ.

....ತಾಂ ನೈಷ್ಕರ್ಮ್ಯಸಿದ್ಧಿಂ ಪರಮಾಂ....ಸದ್ಯೋಮುಕ್ತ್ಯವಸ್ಥಾನರೂಪಾಮ್ । ಸಂನ್ಯಾಸೇನ ಸಮ್ಯಗ್ದರ್ಶನೇನ ತತ್ಪೂರ್ವಕೇಣ ವಾ ಸರ್ವಕರ್ಮಸಂನ್ಯಾಸೇನ । ಅಧಿಗಚ್ಛತಿ ಪ್ರಾಪ್ನೋತಿ ॥ (ಗೀ. ಭಾ. ೧೮-೪೯)

ನಿಷ್ಕ್ರಿಯವಾದ ಆತ್ಮಸ್ವರೂಪದಿಂದ ನೆಲೆನಿಲ್ಲುವದೆಂಬ ನೈಷ್ಕರ್ಮ್ಯಸಿದ್ಧಿಯನ್ನು- ಕರ್ಮಜಸಿದ್ಧಿಗಿಂತ ಶ್ರೇಷ್ಠವಾದ, ಈಗಲೇ ಪಡೆದು ನಿಲ್ಲುವ ರೂಪವಾದ ಸದ್ಯೋಮುಕ್ತಿಯನ್ನು- ಸಂನ್ಯಾಸರೂಪವಾದ ಸಮ್ಯಗ್ದರ್ಶನದಿಂದ ಅಥವಾ ಆ ದರ್ಶನಪೂರ್ವಕವಾದ ಸರ್ವಕರ್ಮಸಂನ್ಯಾಸದಿಂದ ಪಡೆದುಕೊಳ್ಳುತ್ತಾನೆ.

"ನಿಷ್ಕ್ರಿಯವಾದ ಆತ್ಮಸ್ವರೂಪದಿಂದ ನೆಲೆನಿಲ್ಲುವದು"-ಎನ್ನುವದರಿಂದ ವಸ್ತುತಂತ್ರಜ್ಞಾನವನ್ನೇ ನಿಶ್ಚಿತವಾಗಿ ಹೇಳಿರುತ್ತದೆ.

> (8) ಶಾಸ್ತ್ರಾಚಾರ್ಯೋಪದೇಶೇನ ಜ್ಞಾನೋತ್ಪತ್ತಿಪರಿಪಾಕಹೇತುಸಹಕಾರಿಕಾರಣಂ ಬುದ್ಧಿವಿಶುದ್ಧತ್ವಾದಿ ಅಮಾನಿತ್ವಾದಿ ಚ ಅಪೇಕ್ಷ್ಯ ಜನಿತಸ್ಯ ಕ್ಷೇತ್ರಜ್ಞಪರಮಾತ್ಮೈಕತ್ವಜ್ಞಾನಸ್ಯ ಕರ್ತೃತ್ವಾದಿಕಾರಕಭೇದಬುದ್ಧಿನಿಬನ್ಧನಸರ್ವಕರ್ಮಸಂನ್ಯಾಸಸಹಿತಸ್ಯ ಸ್ವಾತ್ಮಾನುಭವನಿಶ್ಚಯರೂಪೇಣ ಯತ್ ಅವಸ್ಥಾನಮ್ ಸಾ ಪರಾ ಜ್ಞಾನನಿಷ್ಠಾ ಇತ್ಯುಚ್ಯತೇ ॥ (ಗೀ. ಭಾ. ೧೮-೫೫)

(a) ಆತ್ಮಜ್ಞಾನವುಂಟಾಗುವದಕ್ಕೆ ಶಾಸ್ತ್ರಶ್ರವಣವನ್ನೂ ಆಚಾರ್ಯೋಪದೇಶದ ಸಹಾಯದಿಂದ ಮನನವನ್ನೂ ಮಾಡಿರಬೇಕು.

(b) ಆ ಜ್ಞಾನವು ಹುಟ್ಟುವದಕ್ಕೂ ಅದು ಪರಿಪಕ್ವವಾಗುವದಕ್ಕೂ ಚಿತ್ತಶುದ್ಧಿಯೇ (೧೮-೫೧, ೫೨, ೫೩) ಮುಂತಾದ ಮತ್ತು ಅಮಾನಿತ್ವವೇ (೧೩-೭, ೮, ೯, ೧೦, ೧೧) ಮುಂತಾದ ಸಹಕಾರಿಸಾಧನಗಳೂ ಬೇಕು.

(c) ಏಕತ್ವಜ್ಞಾನವು ಅಭೇದಬುದ್ಧಿರೂಪವಾಗಿರುವದರಿಂದ, "ನಾನು ಕರ್ತೃ, ಈ ಕಾರಕಗಳ ಸಹಾಯದಿಂದ ಈ ಕರ್ಮವನ್ನು ಇಂಥಾ ಫಲಕ್ಕಾಗಿ ಮಾಡುತ್ತೇನೆ" ಎಂಬೀ ರೂಪದ ಭೇದಬುದ್ಧಿಯು ಹುಟ್ಟುವದಕ್ಕೆ ಕಾರಣವಾದ ಕರ್ಮಗಳೆಲ್ಲವನ್ನೂ ಸಂನ್ಯಾಸಮಾಡಿಯೇ ಈ ಸಾಧನಗಳನ್ನು ಕೈಗೊಂಡಿರಬೇಕು.

(d) ಆತ್ಮಸ್ವರೂಪದ ಒಂದೇ ತತ್ತ್ವವನ್ನೇ ಶಾಸ್ತ್ರವು ಕ್ಷೇತ್ರಜ್ಞನೆಂದೂ ಪರಮಾತ್ಮನೆಂದೂ ಎರಡು ಶಬ್ದಗಳಿಂದ ಕರೆಯುತ್ತಿದೆ. ಹೀಗೆಂಬ ನಿಶ್ಚಿತವಾದ ಬುದ್ಧಿಯು ಈ ಸಾಧನಗಳಿಂದಲೇ ಉಂಟಾಗುತ್ತದೆ. ಈ ನಿಶ್ಚಯವೇ ಜ್ಞಾನನಿಷ್ಠೆಯು.

(e) ಅಮಾನಿತ್ವಾದಿಗಳನ್ನು ಅಭ್ಯಾಸಮಾಡುವದರಿಂದ ಜ್ಞಾನನಿಷ್ಠೆಗೆ ಯೋಗ್ಯತೆಯು ಬರುವದೆಂದೂ ಈ ಗುಣಗಳು ಯಾವನಲ್ಲಿ ಆಯತ್ನವಾಗಿಯೂ ಸ್ವಾಭಾವಿಕವಾಗಿಯೂ ನಿಂತಿರುವವೋ ಅವನು ಜ್ಞಾನನಿಷ್ಠನೆಂದೂ (೧೩-೭)

ಹೇಳಿರುವದರ ಮರ್ಮವೇ ಇದು. ಆದ್ದರಿಂದಲೇ ಆಚಾರ್ಯರು ಈ ಜ್ಞಾನ ನಿಷ್ಠೆಯೇ ಆರ್ತಾದಿಗೌಣಭಕ್ತಿಗಳಿಗಿಂತ ಬೇರೆಯಾಗಿ ನಾಲ್ಕನೆಯದಾದ ಪರಭಕ್ತಿ ಯೆಂದೂ ಈ ಭಕ್ತಿಯಿಂದಲೇ ಕ್ಷೇತ್ರಜ್ಞಪರಮಾತ್ಮರು ಬೇರೆ ಎಂಬ ಬುದ್ಧಿಯೂ ನಿಶ್ಶೇಷವಾಗಿ ತೊಲಗಿಹೋಗುವದೆಂದೂ ಹೇಳಿರುತ್ತಾರೆ.

ಸೇಯಂ ಜ್ಞಾನನಿಷ್ಠಾ ಆರ್ತಾದಿಭಕ್ತಿತ್ರಯಾಪೇಕ್ಷಯಾ ಪರಾ ಚತುರ್ಥೀ ಭಕ್ತಿಃ ಇತ್ಯುಕ್ತಾ । ಅತಃ ಜ್ಞಾನನಿಷ್ಠಾಲಕ್ಷಣಯಾ ಭಕ್ತ್ಯಾ ಮಾಮ್ ಅಭಿಜಾನಾತಿ ॥ (೧೮-೫೫)

(9) ಈ ಅಭೇದರೂಪವಾದ ಜ್ಞಾನನಿಷ್ಠೆಯೇ "ಸಮ್ಯಗ್ದರ್ಶನ" ಸಾರ್ವತ್ರಿಕಪೂರ್ಣಾನುಭವವನ್ನು ಆಧರಿಸಿರುವ ಶ್ರುತಿವಾಕ್ಯಗಳ ಶ್ರವಣ-ಮನನ -ನಿದಿಧ್ಯಾಸನಗಳಿಂದ ಉದಿಸುವ ವಸ್ತುತಂತ್ರವಾದ ಜ್ಞಾನನಿಷ್ಠೆಯೇ ಸಮ್ಯ ಗ್ದರ್ಶನವಲ್ಲದೆ, ತಮಗಿಂತಲೂ ಹಿಂದೆ ಜೈನರು ತಮ್ಮ ಸ್ಯಾದ್-ವಾದದಲ್ಲಿ ಹೇಳುತ್ತಿದ್ದ ಸಮ್ಯಗ್ದರ್ಶನವು ನಿಜವಾದ ಸಮ್ಯಗ್ದರ್ಶನವಲ್ಲ- ಎಂದು ಆಚಾ-ರ್ಯರು ಸೂತ್ರಭಾಷ್ಯದಲ್ಲಿ ಹೇಳಿದ್ದಾರೆ.

ತಥಾ ತದವಧಾರಣಫಲಂ ಸಮ್ಯಗ್ದರ್ಶನಮ್ ಅಸ್ತಿ ವಾ ನಾಸ್ತಿ ವಾ, ಏವಂ ತದ್ವಿಪರೀತಮ್ ಅಸಮ್ಯಗ್ದರ್ಶನಮಪಿ ಅಸ್ತಿ ವಾ ನಾಸ್ತಿ ವಾ ಇತಿ ಪ್ರಲಪನ್ ಮತ್ತೋನ್ಮತ್ತಪಕ್ಷಸ್ಯೈವ ಸ್ಯಾತ್ ನ ಪ್ರತ್ಯಾಯಿತವ್ಯಪಕ್ಷಸ್ಯ ॥ (ಸೂ. ಭಾ. ೨-೨-೩೩)

ಹೀಗೆಯೇ ಈ ಪದಾರ್ಥಗಳ ನಿಶ್ಚಯದ ಫಲವಾದ ಸಮ್ಯಗ್ದರ್ಶನವು ಇದೆ ಅಥವಾ ಇಲ್ಲ ; ಇದರಂತೆ ಇದಕ್ಕೆ ವಿಪರೀತವಾದ ಅಸಮ್ಯಗ್ದರ್ಶನವೂ ಇದೆ ಅಥವಾ ಇಲ್ಲ ಎಂದು ಗಳಹುತ್ತಿರುವವನು ಮತ್ತ-ಉನ್ಮತ್ತಪಕ್ಷಕ್ಕೆ ಸೇರಿದವ ನಾದಾನೇ ಹೊರತು ವಿಶ್ವಾಸಪಾತ್ರಪಕ್ಷಕ್ಕೆ ಸೇರಿದವನಾಗಲಾರನು. ಸ್ವರ್ಗ ಮೋಕ್ಷಗಳೂ ಒಂದು ಪಕ್ಷದಲ್ಲಿ ಇವೆ ; ಇನ್ನೊಂದು ಪಕ್ಷದಲ್ಲಿ ಇಲ್ಲ ; ಮತ್ತು ಒಂದು ಪಕ್ಷದಲ್ಲಿ ನಿತ್ಯ, ಇನ್ನೊಂದು ಪಕ್ಷದಲ್ಲಿ ಅನಿತ್ಯ-ಎಂದು ಅನಿಶ್ಚಿತವಾಗಿಯೇ ಇದ್ದರೆ ಅವುಗಳಿಗಾಗಿ ಪ್ರವೃತ್ತಿಯೇ ಉಂಟಾಗುವದಿಲ್ಲ.

(10) ಪರಿವ್ರಾಜಕಸ್ಯ ತು ಸರ್ವಕರ್ಮಸಂನ್ಯಾಸಾತ್ ಪ್ರತ್ಯ ವಾಯೋ ನ ಸಂಭವತ್ಯನನುಷ್ಠಾನನಿಮಿತ್ತಃ । ಶಮದಮಾದಿಸ್ತು ತದೀಯೋ ಧರ್ಮೋ ಬ್ರಹ್ಮಸಂಸ್ಥತಾಯಾ ಉಪೋದ್ಬಲಕೋ ನ ವಿರೋಧೀ । ಬ್ರಹ್ಮನಿಷ್ಠತ್ವಮೇವ ಹಿ ತಸ್ಯ ಶಮದಮಾದ್ಯುಪ ಬೃಂಹಿತಂ ಸ್ವಾಶ್ರಮವಿಹಿತಂ ಕರ್ಮ, ಯಜ್ಞಾದೀನಿ ಚೇತರೇ ಷಾಮ್ । ತದ್ವ್ಯತಿಕ್ರಮೇ ಚ ತಸ್ಯ ಪ್ರತ್ಯವಾಯಃ । ತಥಾ ಚ

ಸ್ಮೃತಯಶ್ಚ "ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾ-ಯಣಾಃ" (ಗೀ. ೫-೧೭) ಇತ್ಯಾದ್ಯಾ ಬ್ರಹ್ಮಸಂಸ್ಥಸ್ಯ ಕರ್ಮಾ-ಭಾವಂ ದರ್ಶಯನ್ತಿ । ತಸ್ಮಾತ್ ಪರಿವ್ರಾಜಕಸ್ಯಾಶ್ರಮಮಾತ್ರಾದಮೃತತ್ವಪ್ರಾಪ್ತೇರ್ಜ್ಞಾನಾನರ್ಥಕ್ಯಪ್ರಸಙ್ಗಃ ಇತ್ಯೇಷೋಽಪಿ ದೋಷೋ ನಾವತರತಿ ॥ (ಸೂ. ಭಾ. ೩-೪-೨೦)

ಪರಿವ್ರಾಜಕನಿಗಾದರೋ ಸರ್ವಕರ್ಮಗಳನ್ನೂ ಸಂನ್ಯಾಸಮಾಡಿರುವದರಿಂದ ಅನುಷ್ಠಾನಮಾಡಲಿಲ್ಲವೆಂಬ ನಿಮಿತ್ತದಿಂದ ಯಾವ ಪ್ರತ್ಯವಾಯವೂ ಸಂಭವಿಸುವದಿಲ್ಲ. ಶಮದಮಾದಿಗಳೆಂಬ ಅವನ ಧರ್ಮವು ಬ್ರಹ್ಮಸ್ಥಿತಿಗೆ ಉಪೋದ್ಬಲಕ (ಸಹಾಯಕ)ವೇ ಹೊರತು ವಿರೋಧಿಯಲ್ಲ. ಶಮದಮಾದಿಗಳಿಂದ ಬೆಳೆದ ಬ್ರಹ್ಮನಿಷ್ಠತ್ವವೇ ಅಲ್ಲವೆ, ಅವನ ಆಶ್ರಮಕ್ಕೆ ವಿಹಿತವಾಗಿರುವ ಕರ್ಮವು ? ಯಜ್ಞಾದಿಗಳು ಇತರರಿಗೆ ಕರ್ಮವು. ಆ ಬ್ರಹ್ಮನಿಷ್ಠತ್ವವನ್ನು ಮೀರಿದರೆ ಮಾತ್ರ ಅವರಿಗೆ ಪ್ರತ್ಯವಾಯವು. (ಇದು ಸಾಧಕನಾದ ಪರಿವ್ರಾಜಕನಿಗೆ ಹೇಳಿದ್ದು ; ಜ್ಞಾನಿಗಲ್ಲ. ; ಬ್ರಹ್ಮನಿಷ್ಠತ್ವವೇ ಅವನ ಲಕ್ಷಣವಾಗಿರುವದರಿಂದ ಅವನು ತನ್ನ ಆ ಸ್ವರೂಪಲಕ್ಷಣವನ್ನು ಮೀರುವ ಸಂಭವವೇ ಇಲ್ಲ). "ಆ ಸ್ವರೂಪದಲ್ಲಿಯೇ ಇಟ್ಟ ಬುದ್ಧಿಯುಳ್ಳವರಾಗಿ, ಅದೇ ಆತ್ಮನೆಂದು ತಿಳಿದುಕೊಂಡವರಾಗಿ ಅದರಲ್ಲಿಯೇ ನಿಷ್ಠೆಯುಳ್ಳವರಾಗಿ, ಅದೇ ಬಹಳ ಹೆಚ್ಚಿನದೆಂದು ತಿಳಿದವರಾಗಿ, ಜ್ಞಾನದಿಂದ ಕಲ್ಮಷವನ್ನೆಲ್ಲ ತೊಲಗಿಸಿಕೊಂಡು, ಪುನಃ ಹಿಂದಿರುಗಿ ಬಾರದಿರುವ ಸ್ಥಿತಿಯನ್ನು ಹೊಂದುವರು" (ಗೀ. ೫-೧೭) ಎಂಬಿವೇ ಮುಂತಾದ ಸ್ಮೃತಿಗಳೂ ಬ್ರಹ್ಮಸಂಸ್ಥನಿಗೆ ಕರ್ಮವಿಲ್ಲವೆಂಬುದನ್ನು ತಿಳಿಸುತ್ತವೆ. ಆದ್ದರಿಂದ ಪರಿವ್ರಾಜಕನಿಗೆ ಆಶ್ರಮಮಾತ್ರದಿಂದಲೇ ಅಮೃತತ್ವವು ದೊರೆಯುವದರಿಂದ ಜ್ಞಾನವು ವ್ಯರ್ಥವಾಗುವ ಪ್ರಸಂಗವು ಬರುವದು-ಎಂಬೀ ದೋಷವೂ ಬಂದಿಳಿಯುವದಿಲ್ಲ. (ಬ್ರಹ್ಮನಿಷ್ಠೆಯೇ ಪಾರಿವ್ರಾಜ್ಯವು ; ಇದು ಬರಿಯ ಆಶ್ರಮ ಅಲ್ಲವೇ ಅಲ್ಲ.

(11) "ಬ್ರಹ್ಮಚರ್ಯಂ ಪರಿಸಮಾಪ್ಯ ಗೃಹೀ ಭವೇದ್ ಗೃಹೀ ಭೂತ್ವಾ ವನೀ ಭವೇದ್ ವನೀ ಭೂತ್ವಾ ಪ್ರವ್ರಜೇತ್ । ಯದಿ ವೇತರಥಾ ಬ್ರಹ್ಮಚರ್ಯಾದೇವ ಪ್ರವ್ರಜೇದ್ ಗೃಹಾದ್ವಾ ವನಾದ್ವಾ" (ಜಾ. ೪) ಇತಿ । ....। ಬ್ರಹ್ಮಜ್ಞಾನಪರಿಪಾಕಾಙ್ಗ-ತ್ವಾಚ್ಚ ಪಾರಿವ್ರಾಜ್ಯಸ್ಯ ನಾನಧಿಕೃತವಿಷಯತ್ವಮ್ । ತಚ್ಚ ದರ್ಶಯತಿ "ಅಥ ಪರಿವ್ರಾಡ್ವಿವರ್ಣವಾಸಾ ಮುಣ್ಡೋಽಪರಿಗ್ರಹಃ ಶುಚಿರದ್ರೋಹೀ ಭೈಕ್ಷಾಣೋ ಬ್ರಹ್ಮಭೂಯಾಯ ಭವತಿ" (ಜಾಬಾಲಶ್ರುತಿ-೫) ಇತಿ । (ಸೂ. ಭಾ. ೩-೪-೨೦)

"ಬ್ರಹ್ಮಚರ್ಯವನ್ನು ಮುಗಿಸಿ ಗೃಹಿಯಾಗಬೇಕು ; ಗೃಹಿಯಾದ ಬಳಿಕ ವನಿಯಾಗಬೇಕು ; ವಾನಪ್ರಸ್ಥನಾದ ಬಳಿಕ ಪ್ರವ್ರಜನಮಾಡಬೇಕು ; ಅಥವಾ ಅನ್ಯಪ್ರಕಾರದಿಂದಲೇ ಪ್ರವ್ರಜನವನ್ನು ಮಾಡಬೇಕು. "ಬ್ರಹ್ಮಚರ್ಯದಿಂದಲೇ ಅಥವಾ ಗೃಹಸ್ಥಾಶ್ರಮದಿಂದ ಅಥವಾ ವನದಿಂದ ಪ್ರವಜನ (ಸಂನ್ಯಾಸ) ಮಾಡಬೇಕು ಎಂಬಿದು ಆ ವಿಧಿಯು. ಪಾರಿವ್ರಾಜ್ಯವು ಬ್ರಹ್ಮಜ್ಞಾನದ ಪರಿಪಾಕಕ್ಕೆ ಅಂಗವಾಗಿರುವದರಿಂದಲೂ ಅದು ಅನಧಿಕೃತರ ವಿಷಯವಲ್ಲ. ಅದನ್ನು ಶ್ರುತಿಯು "ಇನ್ನು ಪರಿವ್ರಾಜಕನು, ವಿವರ್ಣದ ಬಟ್ಟೆಯನ್ನುಟ್ಟು, ಬೋಳಿಸಿದ ತಲೆಯುಳ್ಳವನಾಗಿ, ಪರಿಗ್ರಹವಿಲ್ಲದವನಾಗಿ, ಶುಚಿಭೂತನೂ, ಅದ್ರೋಹಿಯೂ, ಭಿಕ್ಷಾಚರ್ಯವನ್ನು ಮಾಡುವವನೂ ಆಗಿರುವವನು ಬ್ರಹ್ಮಭೂಯಕ್ಕೆ ಯೋಗ್ಯನಾಗುತ್ತಾನೆ" ಎಂದು ಹೇಳಿದೆ.

ಬ್ರಹ್ಮಸಂಸ್ಥನೆಂದರೆ ಬ್ರಹ್ಮನಿಷ್ಠನು ; ಇವನೇ ಪರಿವ್ರಾಜಕನು. ಮಿಕ್ಕ ಮೂರು ಆಶ್ರಮದವರಿಗೆ ಅವರವರಿಗೆ ವಿಧಿಸಿರುವ ಕರ್ಮಗಳಿವೆ. ಪರಿವ್ರಾಜಕನಿಗಾದರೋ ಬ್ರಹ್ಮನಿಷ್ಠೆಯೇ ಕರ್ಮವು. ಜಾಬಾಲಶ್ರುತಿಯಲ್ಲಿ ಪಾರಿವ್ರಾಜ್ಯವನ್ನು ಪ್ರತ್ಯಕ್ಷವಾಗಿಯೇ ವಿಧಿಸಿದೆ. ಆದ್ದರಿಂದ ಊರ್ಧ್ವರೇತಸ್ಕರ ಆಶ್ರಮಗಳು ಅನುಷ್ಠೇಯಗಳಾಗಿವೆ. ಅವರಿಗೆ ಜ್ಞಾನದಿಂದಲೇ ಮೋಕ್ಷವಾಗುವದು.

(12) ಯದೇವ ಸಾಕ್ಷಾದಪರೋಕ್ಷಾದ್ಬ್ರಹ್ಮ ಯ ಆತ್ಮಾ ಸರ್ವಾನ್ತರಃ ತಂ ಮೇ ವ್ಯಾಚಕ್ಷ್ವ....ಏತಂ ವೈ ತಮಾತ್ಮಾನಂ ವಿದಿತ್ವಾ ಬ್ರಾಹ್ಮಣಾಃ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರನ್ತಿ.... ತಸ್ಮಾದ್ ಬ್ರಾಹ್ಮಣಃ ಪಾಣ್ಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್ । ಬಾಲ್ಯಂ ಚ ಪಾಣ್ಡಿತ್ಯಂ ಚ ನಿರ್ವಿದ್ಯಾಥ ಮುನಿರಮೌನಂ ಚ ಮೌನಂ ಚ ನಿರ್ವಿದ್ಯಾಥ ಬ್ರಾಹ್ಮಣಃ ಸ ಬ್ರಾಹ್ಮಣಃ....॥

(ಬೃ. ಉ. ೩-೫-೧)

ಆಗ ಕಹೋಲಕೌಷೀತಕೇಯನು ಹೀಗೆಂದು ಕೇಳಿದನು : 'ಯಾಜ್ಞವಲ್ಕ್ಯನೆ' ಎಂದನು. ಯಾವದು ಸಾಕ್ಷಾತ್ತಾಗಿ ಅಪರೋಕ್ಷವಾಗಿರುವ ಬ್ರಹ್ಮವೋ, ಯಾವನು ಸರ್ವಾಂತರ ಆತ್ಮನೋ ಅವನನ್ನೇ ನನಗೆ ವಿವರಿಸಿ ಹೇಳು ! ಯಾವನನ್ನು ಅರಿತುಕೊಂಡರೆ ಬಂಧನದಿಂದ ಮುಕ್ತನಾಗುತ್ತೇನೋ ಅವನನ್ನೇ ಹೇಳು. ಯಾಜ್ಞವಲ್ಕ್ಯನು ಹೀಗೆ ಹೇಳಿದನು :

(ಇವನೇ ನಿನ್ನ ಆತ್ಮನು. ಈ ಆತ್ಮನು ಹಸಿವು ಮುಂತಾದ ಸಂಸಾರಧರ್ಮಗಳನ್ನು ಮೀರಿರುವನೆಂಬ ವಿಶೇಷವನ್ನು ಸಂನ್ಯಾಸಸಹಿತವಾಗಿ ಅರಿತುಕೊಂಡರೇ ಬಂಧನದಿಂದ ಮುಕ್ತನಾಗುತ್ತೀಯೆ.)

ಇವನೇ ನಿನ್ನ ಸರ್ವಾಂತರನಾದ ಆತ್ಮನು. ಯಾವನು ಹಸಿವುಬಾಯಾರಿಕೆಗಳನ್ನೂ ಶೋಕವನ್ನೂ ಮೋಹವನ್ನೂ ಜರೆಯನ್ನೂ ಮೃತ್ಯುವನ್ನೂ ಅತಿಕ್ರಮಿ

ಸಿರುವನೋ ಅವನೇ ಈ ಆತ್ಮನು. ಆ ಈ ಆತ್ಮನನ್ನೇ ಅರಿತುಕೊಂಡು ಬ್ರಾಹ್ಮಣರು ಪುತ್ರೈಷಣೆಯಿಂದಲೂ ವಿತ್ತೈಷಣೆಯಿಂದಲೂ ಲೋಕೈಷಣೆ ಯಿಂದಲೂ ಬಿಟ್ಟೆದ್ದು ಇನ್ನು ಭಿಕ್ಷಾಚರ್ಯೆಯನ್ನು ಮಾಡುತ್ತಿದ್ದರು. ಯಾವದು ಪುತ್ರೈಷಣೆಯೋ ಅದೇ ವಿತ್ತೈಷಣೆ ; ಯಾವದು ವಿತ್ತೈಷಣೆಯೋ ಅದೇ ಲೋಕೈಷಣೆ ; ಇವೆರಡೂ ಏಷಣೆಗಳೇ ಆಗಿರುತ್ತವೆ. ಆದ್ದರಿಂದ ಬ್ರಾಹ್ಮಣನು ಏಷಣೆಗಳಾದ ಸಾಧ್ಯಸಾಧನಗಳನ್ನೆಲ್ಲಾ ಬಿಟ್ಟು ಆತ್ಮಜ್ಞಾನವೆಂಬ ಪಾಂಡಿತ್ಯ ವನ್ನೂ ಅನಾತ್ಮಪ್ರತ್ಯಯನಿರಾಸವೆಂಬ ಬಾಲ್ಯವನ್ನೂ ಪೂರಾ ತಿಳಿದು ಪರ ಮಾರ್ಥಚಿಂತನವೆಂಬ ಮೌನವನ್ನೂ ಪೂರ್ಣವಾಗಿ ತಿಳಿದು ಅಳವಡಿಸಿಕೊಂಡರೆ, ಕೃತಕೃತ್ಯನಾಗಿ ಮುಖ್ಯಾರ್ಥದಲ್ಲಿ ಬ್ರಾಹ್ಮಣನೆನಿಸುವನು. ಅವನು ಯಾವ ದಾದರೊಂದು ಕರ್ಮಾಚರಣೆಯ ನಿಮಿತ್ತದಿಂದ ಬ್ರಾಹ್ಮಣನೆನಿಸಿರುವದಿಲ್ಲ ; ಈ ಬ್ರಹ್ಮನಿಷ್ಠೆಯಿಂದಲೇ ಬ್ರಾಹ್ಮಣನೆನಿಸಿರುತ್ತಾನೆ. ಈ ಬ್ರಹ್ಮನಿಷ್ಠೆಗಿಂತ ಮಿಕ್ಕ ದ್ದೆಲ್ಲವೂ ಅನಿತ್ಯವು, ಹುಸಿ ; ಇದೊಂದೇ ನಿತ್ಯವಾದ ಪರಮಾರ್ಥವು.

ಯಾಜ್ಞವಲ್ಕ್ಯನು ಹೀಗೆ ಹೇಳಲು ಅವನು ಸುಮ್ಮನಾದನು. ಇಲ್ಲಿ ಬಾಲ್ಯ ವೆಂಬುದಕ್ಕೆ ಎರಡು ಅರ್ಥಗಳಿವೆ : (೧) ಆತ್ಮವಿಜ್ಞಾನಬಲವನ್ನು ಆಶ್ರಯಿಸಿ ಕೊಂಡು ಅನಾತ್ಮಪ್ರತ್ಯಯಗಳನ್ನು (ಮರುಮರೀಚಿಕೆಯಂತೆ) ಬರಿಯ ಹುಸಿ ತೋರಿಕೆಯೆಂದು ನಿಶ್ಚಯಿಸಿರುವದೇ ಬಾಲ್ಯ. (೨) "ಅನಾವಿಷ್ಕುರ್ವನ್ ಅನ್ವಯಾತ್" (ಬ್ರ. ಸೂ. ೩-೪-೫೦) ಎಂಬ (ಬ್ರಹ್ಮ)ಸೂತ್ರದಂತೆ, ಮಕ್ಕ ಳಂತೆ ಭಾವಶುದ್ಧಿಯಿಂದಿರಬೇಕು ಮತ್ತು ತನ್ನಲ್ಲಿರುವ ಜ್ಞಾನವನ್ನೂ ಇದಕ್ಕಾಗಿ ಮಾಡಿರುವ ಅಧ್ಯಯನವನ್ನೂ ತನ್ನ ಧರ್ಮಶ್ರದ್ಧೆ, ಧರ್ಮಾಚರಣೆಗಳನ್ನೂ ತೋರಿಸಿಕೊಳ್ಳದೆ, ದಂಭದರ್ಪಾದಿಗಳಿಲ್ಲದೆ ಅತ್ಯಂತ ಸರಳವಾಗಿರುವದು ಬಾಲ್ಯವೆನಿಸುವದು.

ಯಂ ನ ಸನ್ತಂ ನ ಚಾಸನ್ತಂ ನಾಶ್ರುತಂ ನ ಬಹುಶ್ರುತಮ್ ।
ನ ಸುವೃತ್ತಂ ನ ದುರ್ವೃತ್ತಂ ವೇದ ಕಶ್ಚಿತ್ ಸ ಬ್ರಾಹ್ಮಣಃ ॥
ಗೂಢಧರ್ಮಾಶ್ರಿತೋ ವಿದ್ವಾನಜ್ಞಾತಚರಿತಂ ಚರೇತ್ ।
ಅನ್ಧವಜ್ಜಡವಚ್ಚಾಪಿ ಮೂಕವಚ್ಚ ಮಹೀಂ ಚರೇತ್ ॥
(ಸೂ. ಭಾ. ೩-೪-೫೦)

ಯಾವನನ್ನು ಸತ್ಪುರುಷನೆಂದಾಗಲಿ ಅಸತ್ಪುರುಷನೆಂದಾಗಲಿ ತಿಳಿಯದವ ನೆಂದಾಗಲಿ, ಬಹಳ ತಿಳಿದವನೆಂದಾಗಲಿ, ಯಾವನೊಬ್ಬನೂ ಅರಿತುಕೊಳ್ಳ ಲಾರದೇ ಇರುವನೋ ಅವನು ಬ್ರಾಹ್ಮಣನು.

ಗೂಢವಾದ ಧರ್ಮವನ್ನಾಶ್ರಯಿಸಿ ಜ್ಞಾನಿಯು ಯಾರಿಗೂ ತಿಳಿಯದ ನಡತೆಯಿಂದ ನಡೆಯಬೇಕು. ಕುರುಡನಂತೆಯೂ ಅಜ್ಞನಂತೆಯೂ ಮೂಕ ನಂತೆಯೂ ಭೂಮಿಯಲ್ಲಿ ಸಂಚರಿಸುತ್ತಿರಬೇಕು. ಇವೆಲ್ಲಾ ವಿದ್ವತ್‌ಸಂನ್ಯಾಸದ ವಿಷಯ.

(13) ಸ ವಾ ಏಷ ಮಹಾನಜ ಆತ್ಮಾ....ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ.... । ಏತಮೇವ ಪ್ರವ್ರಾಜಿನೋ ಲೋಕಮಿಚ್ಛನ್ತಃ ಪ್ರವ್ರಜನ್ತಿ ।....ಇತಿ ತೇ ಹ ಸ್ಮ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರನ್ತಿ ॥ (ಬೃ. ಉ. ೪-೪-೨೨)

ಪ್ರಾಣಗಳಲ್ಲಿರುವ ಈ ವಿಜ್ಞಾನಮಯನೇ (ಇವನ ಪರಮಾರ್ಥಸ್ವರೂಪವೇ) ಮಹಾಂತನಾದ ಅಜನಾದ ಆತ್ಮನು. ಹೃದಯಾಕಾಶದಲ್ಲಿರುವ ಈ ಸ್ವಯಂ ಜ್ಯೋತಿಯಾದ ಆತ್ಮನನ್ನು ಬ್ರಾಹ್ಮಣರು ವೇದಾನುವಚನದಿಂದಲೂ ಯಜ್ಞ, ದಾನ, ತಪಸ್ಸುಗಳಿಂದಲೂ ತಿಳಿಯಲು ಇಚ್ಛಿಸುತ್ತಾರೆ. ಈ ಆತ್ಮನೆಂಬ ಲೋಕವನ್ನೇ ಇಚ್ಛಿಸುವ ಪ್ರವ್ರಾಜಿಗಳು ಪ್ರವ್ರಜನಮಾಡುತ್ತಾರೆ. ಅವರು ಪುತ್ರೈಷಣೆಯಿಂದಲೂ ವಿತ್ತೈಷಣೆಯಿಂದಲೂ ಲೋಕೈಷಣೆಯಿಂದಲೂ ಎದ್ದು ಇನ್ನು ಭಿಕ್ಷಾಚರ್ಯವನ್ನು ಆಚರಿಸುತ್ತಾರೆ. ಆ ಇವನೇ ನೇತಿ ನೇತಿ ಎಂಬ ಆತ್ಮನು. ಇದು ವಿವಿದಿಷಾಸಂನ್ಯಾಸವು.

ಶ್ರೀ ಶಂಕರಭಗವತ್ಪಾದರ ಸಾಕ್ಷಾತ್ ಶಿಷ್ಯರಾದ ಶ್ರೀಸುರೇಶ್ವರಾಚಾರ್ಯರು ತಮ್ಮ ಬೃಹದಾರಣ್ಯಕ ಭಾಷ್ಯವಾರ್ತಿಕದಲ್ಲಿ ಮೂಲಾವಿದ್ಯೆಯ ವಿಷಯವನ್ನು ಹೇಳಿದ್ದಾರೆಯೆ ? -ಎಂಬಿದನ್ನು ಮುಖ್ಯವಾಗಿ ಪರಿಶೀಲಿಸಿ, ಈ "ಶಾಂಕರ ಸಮ್ಯಗ್ದರ್ಶನ" ಗ್ರಂಥಕ್ಕೆ ಸಹಾಯಕವಾಗಿ ಆ ವಾರ್ತಿಕದಿಂದ ಕೆಲವು ಶ್ಲೋಕಗಳನ್ನು ಸಂಗ್ರಹಿಸಿ ಬರೆಯಬೇಕೆಂದು ಸಕಾಲದಲ್ಲಿ ಪ್ರೀತಿಯಿಂದ ಸೂಚಿಸಿ ಅನುಗ್ರಹಿಸಿರುವ ಪರಮಪೂಜ್ಯ ಕೂಡಲಿಶೃಂಗಗಿರಿ ಜಗದ್ಗುರುಗಳಾದ ಶ್ರೀ ಶ್ರೀ ವಿದ್ಯಾಭಿನವನರಸಿಂಹಭಾರತೀಮಹಾಸ್ವಾಮಿಗಳಿಗೆ ಅನಂತಪ್ರಣಾಮಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಭಾಷ್ಯಾರ್ಥವಿಚಾರದ ಚರ್ಚೆಯಲ್ಲಿಯೂ ಅಚ್ಚಿನ ಕರಡಿನ ತಿದ್ದುಪಡಿಯಲ್ಲಿಯೂ ಆಗಾಗ ಸಹಾಯಮಾಡುತ್ತಿದ್ದ ಬೆಂಗಳೂರು (ಶಾಖಾ) ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಪಂಡಿತರಾದ ಅಧ್ಯಾತ್ಮವಿದ್ಯಾಪ್ರವೀಣ ವೇ॥ ಬ್ರ॥ ಶ್ರೀ॥ ಕೆ. ಜಿ. ಸುಬ್ರಾಯಶರ್ಮರ ಸೌಹಾರ್ದ-ಸಹಕಾರಗಳಿಗಾಗಿಯೂ ಕೃತಜ್ಞತೆಗಳು.

ಇತಿ ಗ್ರಂಥಕರ್ತ.

|| ಓಂ ||

# ಸಮ್ಯಗ್ದರ್ಶನ

ಭಗವಾನ್ ಯಾಜ್ಞವಲ್ಕ್ಯಮಹರ್ಷಿಗಳ ಸಂಕ್ಷಿಪ್ತವಾದೊಂದು ಚರಿತ್ರೆಯನ್ನು ಸುಮಾರು ನಲವತ್ತೈದು ವರ್ಷಗಳ ಹಿಂದೆ ಓದಿ, ಆ ಪವಿತ್ರ ಚರಿತ್ರೆಯಿಂದ ಅತಿಶಯಪ್ರಭಾವಿತನಾಗಿದ್ದೆ. ಅದು ದಿವಂಗತ ಮಾನ್ಯ ಗಳಗನಾಥರಿಂದ ಬರೆಯಲ್ಪಟ್ಟು, ಅಗಡಿ ಆನಂದವನದಿಂದ ಪ್ರಕಟವಾದ ಪುಸ್ತಕವಿರಬಹುದು. ಭಗವಾನ್ ಸೂರ್ಯನಾರಾಯಣದೇವನ ಅನುಗ್ರಹದಿಂದ ಯಾಜ್ಞವಲ್ಕ್ಯರ ಅವತಾರವಾದುದು, ಅವರು ಬಾಲ್ಯದಲ್ಲಿ ವೈಶಂಪಾಯನಮಹರ್ಷಿಗಳ ಗುರುಕುಲದಲ್ಲಿ ವಿದ್ಯಾಭ್ಯಾಸಮಾಡಿದುದು, ವಿಧಿವಶದಿಂದ ಅಲ್ಲಿ ನಡೆದ ಕೆಲವು ವಿಷಮ ಪ್ರಸಂಗಗಳಿಂದ ವೈಮನಸ್ಯವನ್ನು ಹೊಂದಿ ಗುರುಕುಲವನ್ನು ಬಿಟ್ಟು ಹೋಗಿ, ಸ್ವತಂತ್ರವಾಗಿ ಸೂರ್ಯನಾರಾಯಣನನ್ನು ಕುರಿತು ಅವರು ತಪಸ್ಸುಮಾಡಿದುದು, ಸೂರ್ಯನಾರಾಯಣನ ಸಾಕ್ಷಾತ್ಕಾರವನ್ನು ಪಡೆದ ಅನಂತರ ಯಾಜ್ಞವಲ್ಕ್ಯರು ಜನಕರಾಜನ ವಿದ್ವತ್ಸಭೆಯಲ್ಲಿ ಅನೇಕ ಬ್ರಹ್ಮವಾದಿಗಳೊಡನೆ ವಾದಮಾಡಿ ಜಯಿಸಿ, ಪಣವಾಗಿಟ್ಟಿದ್ದ ಸಹಸ್ರಗೋವುಗಳನ್ನು ಪಡೆದು, ನಿಜವಾದ ಶ್ರೋತ್ರಿಯ ಬ್ರಹ್ಮನಿಷ್ಠರೆಂದು ಆ ಮಹಾಸಭೆಯಲ್ಲಿದ್ದ ಸರ್ವಋಷಿಗಳಿಂದಲೂ ಪೂಜೆಯನ್ನು ಪಡೆದು ಜನಕಮಹಾರಾಜನಿಗೂ ಗುರುಗಳಾದುದು, ಆ ಸಭೆಯಲ್ಲಿ ಯಾಜ್ಞವಲ್ಕ್ಯರೊಡನೆ ವಾದಮಾಡಿದ ಬ್ರಹ್ಮವಾದಿನಿಯಾದ ಗಾರ್ಗಿಯೊಡನಿದ್ದ ಮೈತ್ರೇಯಿಯು ಯಾಜ್ಞವಲ್ಕ್ಯರ ಬ್ರಹ್ಮವಿದ್ಯೆಯ ವರ್ಚಸ್ಸನ್ನು ಮೆಚ್ಚಿ, ಅವರ ಮೊದಲನೆಯ ಮಡದಿಯಾದ ಕಾತ್ಯಾಯಿನಿಯ ಸ್ನೇಹದಿಂದ ಆಕೆಯೂ ಮೋಕ್ಷಾರ್ಥಿನಿಯಾಗಿಯೇ ಯಾಜ್ಞವಲ್ಕ್ಯರ ಪತ್ನಿಯಾದುದು- ಇವೇ ಮೊದಲಾದ ಪ್ರಸಂಗಗಳುಳ್ಳ ಈ ಆಖ್ಯಾಯಿಕೆಯನ್ನು ಸ್ವಾರಸ್ಯವಾಗಿ ಅನೇಕ ಶ್ರೋತೃಗಳ ಮುಂದೆ ಹಲವು ಸಂದರ್ಭಗಳಲ್ಲಿ ಶ್ರವಣಮಾಡಿಸಿದ್ದುಂಟು.

ಆದರೆ, ಈ ಕಥೆಯ ಉಗಮವೂ ಆಧ್ಯಾತ್ಮಿಕಮೌಲ್ಯವೂ ಬೃಹದಾರಣ್ಯಕ ಉಪನಿಷತ್ತಿನಲ್ಲಿದೆ. ಆದಿತ್ಯದೇವನ ಮಹತ್ಕೃಪೆಯಿಂದ ಬ್ರಹ್ಮರ್ಷಿಗಳಾದ ಯಾಜ್ಞವಲ್ಕ್ಯರು ಶುಕ್ಲಯಜುರ್ವೇದವನ್ನೂ ಶತಪಥಬ್ರಾಹ್ಮಣವನ್ನೂ ಸಂಹಿತೋಪನಿಷತ್ತನ್ನೂ (ಈಶಾವಾಸ್ಯೋಪನಿಷತ್ತು) ಲೋಕಕ್ಕೆ ಅನುಗ್ರಹಮಾಡಿದರು. ನೂರು ಅಧ್ಯಾಯಗಳ ಪರಿಮಿತಿಯುಳ್ಳ ಶತಪಥಬ್ರಾಹ್ಮಣದ ಕೊನೆಯಲ್ಲಿ ಬೃಹದಾರಣ್ಯಕ ಉಪನಿಷತ್ತು ಬಂದಿದೆ. ಇದು ಹೆಸರಿಗೆ ತಕ್ಕಂತೆ ಉಪನಿಷತ್ತುಗಳಲ್ಲಿ ಬೃಹತ್ತಾಗಿಯೂ ಮಹತ್ತಾಗಿಯೂ ಇದೆ. ಉಪನಿಷತ್ತು ಎಂದರೆ ಬ್ರಹ್ಮವಿದ್ಯೆ. ಬ್ರಹ್ಮವಿದ್ಯೆ ಎಂದರೆ ಬ್ರಹ್ಮವನ್ನು (ಪರಮಾತ್ಮನನ್ನು) ತಿಳಿಸುವ ವಿದ್ಯೆ;



ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು.

ಅಥವಾ ಲೋಕದಲ್ಲಿ ಆದಿಜೀವನೂ ಪ್ರಪ್ರಥಮಪುರುಷನೂ ಎನಿಸಿದ ಹಿರಣ್ಯಗರ್ಭಬ್ರಹ್ಮನು (ಸಮಷ್ಟಿಸೂಕ್ಷ್ಮೋಪಾಧಿಯುಳ್ಳ ಅಪರಬ್ರಹ್ಮ) ತನ್ನ ಮಗನಾದ ವಿರಾಟ್ಪುರುಷನಿಗೆ (ಸಮಷ್ಟಿಸ್ಥೂಲೋಪಾಧಿಯುಳ್ಳ ಅಪರಬ್ರಹ್ಮ) ಅಥವಾ ಅಥರ್ವನಿಗೆ ಉಪದೇಶಮಾಡಿದ ವಿದ್ಯೆ. ಶ್ರೋತ್ರಿಯಬ್ರಹ್ಮನಿಷ್ಠರಾದ ಸದ್ಗುರುಗಳನ್ನು (ಉಪ)ಬಳಿಸಾರಿ, ಶ್ರದ್ಧಾಭಕ್ತಿಯಿಂದ ಅವರ ಶುಶ್ರೂಷೆಮಾಡುತ್ತಾ ಅವರಿಂದ ಶ್ರವಣಾದಿಸಾಧನೆಯನ್ನು ನಡೆಸುತ್ತಿರುವ, ವಿವೇಕವೈರಾಗ್ಯಗಳಿಂದ ಶಮದಮಾದಿ ಸಂಪನ್ನರಾದ ಮುಮುಕ್ಷುಗಳ ಜನ್ಮಜರಾಮರಣಾದಿಗಳಿಗೆ ಕಾರಣವಾದ ಅವಿದ್ಯಾಕಾಮಕರ್ಮಗಳನ್ನು (ನಿಷದ್) ನಾಶಮಾಡುವದರಿಂದಲೂ ಈ ವಿದ್ಯೆಗೆ ಉಪನಿಷತ್ತು ಎಂದು ಹೆಸರು.

ಪ್ರಸಿದ್ಧವಾದ ದಶೋಪನಿಷತ್ತುಗಳಲ್ಲಿ ಮಿಕ್ಕ ಉಪನಿಷತ್ತುಗಳಿಗೆ ಶ್ರೀ ಶಂಕರಭಗವತ್ಪಾದಾಚಾರ್ಯರು ಭಾಷ್ಯವನ್ನು ರಚಿಸಿರುವಂತೆ ಬೃಹದಾರಣ್ಯಕ ಉಪನಿಷತ್ತಿಗೂ ಅವರು ವ್ಯಾಖ್ಯಾನವನ್ನು ಬರೆದಿರುತ್ತಾರೆ. ಈ ಉಪನಿಷತ್ತು ಮಧುಕಾಂಡ, ಮುನಿಕಾಂಡ ಅಥವಾ ಯಾಜ್ಞವಲ್ಕೀಯಕಾಂಡ ಮತ್ತು ಖಿಲ ಕಾಂಡ- ಎಂಬ ಮೂರು ಕಾಂಡಗಳ ರೂಪದಿಂದಿರುತ್ತದೆ. "ಸಮ್ಯಗ್ದರ್ಶನ" ಎಂಬ ಹೆಸರುಳ್ಳ ಈ ಪುಟ್ಟಪುಸ್ತಿಕೆಯ ವಿಚಾರವು ಬೃಹದಾರಣ್ಯಕ ಉಪನಿಷತ್ತಿನ ಎರಡನೆಯ ಅಧ್ಯಾಯದ ನಾಲ್ಕನೆಯ ಬ್ರಾಹ್ಮಣಕ್ಕೆ ಸಂಬಂಧಪಟ್ಟಿದೆ. ಇದರಲ್ಲಿ ಮೋಕ್ಷಾರ್ಥಿನಿಯಾದ ಪತ್ನಿ ಮೈತ್ರೇಯಿಗೆ ಯಾಜ್ಞವಲ್ಕ್ಯಮಹರ್ಷಿಗಳು ಸಾಧನ ಚತುಷ್ಟಯಸಂಪನ್ನನಾದ ಉತ್ತಮಾಧಿಕಾರಿಗೆ ಬೋಧಿಸಬೇಕಾದ ಪರಿಶುದ್ಧವಾದ ಆತ್ಮಜ್ಞಾನವನ್ನೇ ಉಪದೇಶಿಸಿದ್ದಾರೆ. ಇದರಲ್ಲಿಯೂ ವಿಶೇಷವೇನೆಂದರೆ: ಏಷಣಾತ್ರಯಪರಿತ್ಯಾಗರೂಪವಾದ ಸರ್ವಕರ್ಮಸಂನ್ಯಾಸಸಹಿತವಾದ ಆತ್ಮ ಜ್ಞಾನವೇ (ಅಮೃತತ್ತ್ವವೆಂಬ) ಮೋಕ್ಷಕ್ಕೆ ಸಾಧನವೆಂದು ಅವರು ತಿಳಿಸಿದ್ದಾರೆ. ಈ ಉಪನಿಷತ್ತಿನ ಮೊದಲನೆಯ ಮಧುಕಾಂಡದಲ್ಲಿ ಆಗಮ (ಉಪದೇಶ) ಪ್ರಧಾನವಾಗಿ ಬೋಧಿಸಿರುವ ಅದ್ವಿತೀಯಬ್ರಹ್ಮಾತ್ಮಜ್ಞಾನವನ್ನೇ ಈ ಎರಡನೆಯ ಮುನಿಕಾಂಡದಲ್ಲಿ ಉಪಪತ್ತಿ (ಯುಕ್ತಿ)ಪ್ರಧಾನವಾಗಿ ಯಾಜ್ಞವಲ್ಕ್ಯರು ಉಪದೇಶಿಸಿದ್ದಾರೆ. ಈ ಉಪನಿಷತ್ತಿನ ಎರಡನೆಯ ಅಧ್ಯಾಯದಲ್ಲಿಯೂ ನಾಲ್ಕನೆಯ ಅಧ್ಯಾಯದಲ್ಲಿಯೂ ಇದೇ ಮೈತ್ರೇಯೀಬ್ರಾಹ್ಮಣವಿದೆ. ಮಧುಕಾಂಡ ಮುನಿಕಾಂಡಗಳೆರಡರಲ್ಲಿಯೂ ಸಂನ್ಯಾಸಸಹಿತವಾದ ಆತ್ಮಜ್ಞಾನವೇ ಅಮೃತತ್ವಕ್ಕೆ ಸಾಧನವೆಂದು ಆಗಮೋಪಪತ್ತಿಗಳ ಬಲದಿಂದ ನಿರ್ಣಯಮಾಡಿದ್ದನ್ನೇ ನಾಲ್ಕನೆಯ ಅಧ್ಯಾಯದ ಐದನೆಯ ಬ್ರಾಹ್ಮಣದಲ್ಲಿ :

ವಿಜ್ಞಾತಾರಮರೇ ಕೇನ ವಿಜಾನೀಯಾದಿತ್ಯುಕ್ತಾನುಶಾಸನಾಸಿ....
ಹೋಕ್ತ್ವಾ ಯಾಜ್ಞವಲ್ಕ್ಯೋ ವಿಜಹಾರ ॥ ಬೃ. ೪-೫-೧೫

"ಎಲೆ, ಸಕಲವನ್ನೂ ಅರಿಯುವ ವಿಜ್ಞಾತೃವನ್ನು ಏತರಿಂದ ಅರಿತಾನು ? ಮೈತ್ರೇಯಿ, ಹೀಗೆ ಉಕ್ತವಾದ ಅನುಶಾಸನವುಳ್ಳವಳಾಗಿರುವೆ. ಎಲೆ, ಇಷ್ಟೇ ಅಮೃತತ್ವ ಸಾಧನವು ಮತ್ತು ಅಮೃತತ್ವವು- ಹೀಗೆಂದು ನುಡಿದು ಯಾಜ್ಞವಲ್ಕ್ಯನು ಪ್ರವ ಜನ (ಸಂನ್ಯಾಸ) ಮಾಡಿದನು"-ಎಂದು ಉಪಸಂಹಾರಮಾಡಿದೆ. ಮೋಕ್ಷಕ್ಕೆ ಸಾಧನವಾದ ಮತ್ತು ಜ್ಞಾನನಿಷ್ಠೆಗೆ ಅತ್ಯವಶ್ಯವಾದ ಪಾರಿವ್ರಾಜ್ಯದ (ಸಂನ್ಯಾಸದ) ಅಗತ್ಯವನ್ನೂ ಮಹತ್ತ್ವವನ್ನೂ ಒತ್ತಿ ಹೇಳುವದಕ್ಕಾಗಿಯೇ ಮೈತ್ರೇಯೀಬ್ರಾಹ್ಮಣವು ಬಂದಿದೆಯೆಂದು ಈ ಪ್ರಕರಣದ ಉಪಕ್ರಮ, ಉಪಸಂಹಾರಾದಿಗಳನ್ನು ವಿಚಾರಮಾಡುವದರಿಂದ ಸಿದ್ಧವೂ ಸ್ಪಷ್ಟವೂ ಆಗುತ್ತದೆ.

1. ಉಪನಿಷತ್ತುಗಳಲ್ಲಿರುವ ಬ್ರಹ್ಮವಿದ್ಯೆಯು ಎರಡು ರೂಪಗಳಾಗಿದೆ ; ಪರವಿದ್ಯೆ ಮತ್ತು ಅಪರವಿದ್ಯೆ-ಎಂದು. ವೇದೋಕ್ತವಾದ ಕರ್ಮ, ಅದರ ಫಲವಾದ ಸ್ವರ್ಗ ಮತ್ತು ಉಪಾಸನೆ, ಕರ್ಮೋಪಾಸನೆಗಳಿಂದ ಪಡೆಯಬಹುದಾದ ದೇವಲೋಕ-ಬ್ರಹ್ಮಲೋಕ ಇವೆರಡೂ ಅಪರವಿದ್ಯೆ. ಬ್ರಹ್ಮದ ನಿಜರೂಪವನ್ನು ಹೇಗಿದೆಯೋ ಹಾಗೆ ಏತರಿಂದ ಅರಿತುಕೊಳ್ಳಬಹುದೋ ಅದು ಪರವಿದ್ಯೆ. ಅಪರವಿದ್ಯೆಯಲ್ಲಿ ಸಗುಣಬ್ರಹ್ಮವನ್ನು ಉಪಾಸನೆಮಾಡುವವರು ಮರಣಕಾಲದವರೆಗೂ ಉಪಾಸನೆಮಾಡುತ್ತಿದ್ದು, ಆ ದೇವತೆಯೇ ತಾನೆಂಬ ದೃಢಭಾವನೆಯ ಸಾಕ್ಷಾತ್ಕಾರವನ್ನು ಪಡೆದುಕೊಂಡು, ಅಂತ್ಯಕಾಲದಲ್ಲಿ ಸುಷುಮ್ನಾನಾಡಿಯ ಮೂಲಕವಾಗಿ ದೇಹದಿಂದ ಹೊರಹೊರಟು ಸೂರ್ಯದ್ವಾರದಿಂದ ಬ್ರಹ್ಮಲೋಕವನ್ನು ಸೇರುವರು. ಇದು ಬಹುಕಾಲ ಇರುವ ಫಲವಾದ್ದರಿಂದ ಆಪೇಕ್ಷಿಕ ಅಮೃತತ್ವವೆನಿಸಿರುವದು. ಅಥವಾ ಉಪಾಸಕನು ಬ್ರಹ್ಮಲೋಕದಲ್ಲಿಯೇ ಜ್ಞಾನವನ್ನು ಪಡೆದು ಕಲ್ಪಾಂತದಲ್ಲಿ ಆ ಬ್ರಹ್ಮನೊಡನೆ ಮುಖ್ಯವಾದ ಅಮೃತತ್ವವನ್ನೇ ಪಡೆಯುವನು. (ಶಾ. ೧-೧-೧೭/೧೮) ಹೀಗೆ, ಸಗುಣೋಪಾಸನೆಯಿಂದ ಬ್ರಹ್ಮಲೋಕಕ್ಕೆ ಹೋಗಿ, ಅಲ್ಲಿ ಜ್ಞಾನವನ್ನು ಪಡೆದು ಮುಕ್ತಿಹೊಂದುವದನ್ನು ಶಂಕರಾಚಾರ್ಯರು ಕ್ರಮಮುಕ್ತಿ ಎಂದು ಕರೆದಿರುತ್ತಾರೆ. ಲೋಕಾಂತರದಲ್ಲಿ ಜ್ಞಾನದಿಂದ ಕ್ರಮಮುಕ್ತಿಯನ್ನು ಪಡೆಯುವದು ಕಷ್ಟಸಾಧ್ಯವಾದ್ದರಿಂದ, ಬದುಕಿರುವಾಗ ಶಾಸ್ತ್ರಾಚಾರ್ಯರ ಅನುಗ್ರಹದಿಂದಲೂ ಶಮದಮಾದಿಗಳಿಂದಲೂ ಶ್ರವಣಾದಿಸಾಧನಗಳಿಂದಲೂ ಈ ಲೋಕದಲ್ಲಿಯೇ ಜ್ಞಾನವನ್ನು ಪಡೆದು ಈಗಲೇ ಮುಕ್ತಿಯನ್ನು ಹೊಂದಿದರೆ (ನಿತ್ಯಮುಕ್ತರಾದ ನಾವು, ಸ್ವರೂಪದಿಂದ ಎಂದೂ ಬದ್ಧರಾಗಿಯೇ ಇಲ್ಲ- ಎಂಬ ನಿಶ್ಚಯವಾದರೆ) ಇದನ್ನು ಸದ್ಯೋಮುಕ್ತಿ ಎಂದು ಶಂಕರರು ಕರೆದಿದ್ದಾರೆ. ಇಂಥಾ ಸದ್ಯೋಮುಕ್ತಿಗೆ ಸಾಧನವಾದ ಸಂನ್ಯಾಸಸಹಿತವಾದ ಆತ್ಮಜ್ಞಾನವನ್ನೇ ಇಲ್ಲಿ ಯಾಜ್ಞವಲ್ಕ್ಯರು ಮೈತ್ರೇಯಿಗೆ ಬೋಧಿಸಿದ್ದಾರೆ.

2. ಸದ್ಯೋಮುಕ್ತಿಗೆ (ಜೀವನ್ಮುಕ್ತಿಗೆ) ಸಾಧನವಾದ ಅದ್ವೈತಾತ್ಮಜ್ಞಾನಕ್ಕೂ ಉಪಾಸನೆಗೂ ಇರುವ ಸಾಮ್ಯವನ್ನೂ ವೈಷಮ್ಯವನ್ನೂ ಶಂಕರರು ಹೀಗೆ ಹೇಳಿದ್ದಾರೆ :

ರಹಸ್ಯಸಾಮಾನ್ಯಾತ್ । ಮನೋವೃತ್ತಿಸಾಮಾನ್ಯಾಚ್ಚ । ಯಥಾ ಅದ್ವೈತಜ್ಞಾನಂ ಮನೋವೃತ್ತಿಮಾತ್ರಮ್, ತಥಾ ಅನ್ಯಾನ್ಯಪಿ ಉಪಾಸನಾನಿ ಮನೋವೃತ್ತಿರೂಪಾಣಿ ಇತಿ ಅಸ್ತಿ ಹಿ ಸಾಮಾನ್ಯಮ್।ಕಸ್ತರ್ಹಿ- ಅದ್ವೈತಜ್ಞಾನಸ್ಯ ಉಪಾಸನಾನಾಂ ಚ ವಿಶೇಷಃ? ಉಚ್ಯತೇ।ಸ್ವಾಭಾವಿಕಸ್ಯ ಆತ್ಮನಿ ಅವಿಕ್ರಿಯೇ ಅಧ್ಯಾರೋಪಿತಸ್ಯ ಕರ್ತ್ರಾದಿ ಕಾರಕಕ್ರಿಯಾಫಲಭೇದವಿಜ್ಞಾನಸ್ಯ ನಿವರ್ತಕಮ್ ಅದ್ವೈತವಿಜ್ಞಾನಮ್ । ರಜ್ಜ್ವಾದಾವಿವ ಸರ್ಪಾದ್ಯಧ್ಯಾರೋಪಲಕ್ಷಣಜ್ಞಾನಸ್ಯ ರಜ್ಜ್ವಾದಿಸ್ವರೂಪನಿಶ್ಚಯಃ ಪ್ರಕಾಶನಿಮಿತ್ತಃ । ಉಪಾಸನಂ ತು ಯಥಾಶಾಸ್ತ್ರಸಮರ್ಪಿತಂ ಕಿಂಚಿದಾಲಮ್ಬನಂ ಉಪಾದಾಯ ತಸ್ಮಿನ್ ಸಮಾನಚಿತ್ತವೃತ್ತಿಸಂತಾನಕರಣಂ ತದ್ವಿಲಕ್ಷಣಪ್ರತ್ಯಯಾನನ್ತರಿತಮ್ ಇತಿ ವಿಶೇಷಃ ॥

(ಛಾಂ. ಅವ.)

'ರಹಸ್ಯ' ಎಂದರೆ, ಉಪನಿಷತ್ತು-ಎಂಬ ಹೆಸರು ಅದ್ವೈತಜ್ಞಾನಕ್ಕೂ ಉಪಾಸನೆಗಳಿಗೂ ಸಮಾನವಾಗಿರುತ್ತದೆ. (ಶರೀರಪ್ರಧಾನವಾಗಿರುವ ಕರ್ಮಕ್ಕಿಂತಲೂ ಮನಃಪ್ರಧಾನವಾಗಿರುವ ಈ ಜ್ಞಾನವೂ ಉಪಾಸನೆಯೂ ಹೆಚ್ಚು ರಹಸ್ಯವಾಗಿರುತ್ತವೆ.) ಹೇಗೆ ಅದ್ವೈತಜ್ಞಾನವು ಮನೋವೃತ್ತಿಮಾತ್ರವಾಗಿರುತ್ತದೆಯೋ ಹಾಗೆಯೇ ಬೇರೆಯ ಉಪಾಸನೆಗಳೂ ಮನೋವೃತ್ತಿರೂಪವಾಗಿರುತ್ತವೆ- ಎಂಬೀ ಹೋಲಿಕೆಯು ಎರಡಕ್ಕೂ ಇದೆಯಲ್ಲವೆ ?

ಪ್ರಶ್ನೆ : ಹಾಗಾದರೆ, ಅದ್ವೈತಜ್ಞಾನಕ್ಕೂ ಉಪಾಸನೆಗಳಿಗೂ ವಿಶೇಷವೇನು ?

ಉತ್ತರ : ಹೇಳುತ್ತೇನೆ. ಸ್ವಭಾವದಿಂದ ಇದ್ದುಕೊಂಡಿರುವ ಯಾವ ವಿಕಾರವೂ ಇಲ್ಲದ ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಕರ್ತ್ರಾದಿಕಾರಕಗಳು, ಕ್ರಿಯೆ, ಫಲ- ಎಂಬ ಭೇದದ ಅರಿವನ್ನು ತೊಲಗಿಸುವದು ಅದ್ವೈತವಿಜ್ಞಾನವು. ಹಗ್ಗವೇ ಮುಂತಾದದ್ದರಲ್ಲಿ ಹಾವೇ ಮುಂತಾದುದನ್ನು ಅಧ್ಯಾರೋಪಿಸುವ ರೂಪದ ಅರಿವನ್ನು ಬೆಳಕಿನ ನಿಮಿತ್ತದಿಂದಾದ ಹಗ್ಗವೇ ಮೊದಲಾದುದರ ಸ್ವರೂಪದ ನಿಶ್ಚಯವು ತೊಲಗಿಸುವಂತೆಯೇ ಇದು ಭೇದವಿಜ್ಞಾನವನ್ನು ತೊಲಗಿಸುತ್ತದೆ. ಉಪಾಸನೆಯಾದರೋ ಶಾಸ್ತ್ರವು ತಿಳಿಸಿಕೊಟ್ಟಿರುವ ಯಾವದಾದರೊಂದು ಆಲಂಬನವನ್ನು ತೆಗೆದುಕೊಂಡು ಅದರಲ್ಲಿ ಒಂದೇ ಬಗೆಯ ಚಿತ್ತವೃತ್ತಿಯನ್ನು, ಅದಕ್ಕಿಂತ ವಿಲಕ್ಷಣವಾದ ಪ್ರತ್ಯಯವು ನಡುವೆ ಬಾರದಂತೆ, ಸಂತತವಾಗಿ ನಡೆಯಿಸಿಕೊಂಡು ಬರುವದು. (ಛಾಂ. ಉ. ಅವತರಣಿಕೆ)

ಭೇದವನ್ನು ತಿಳಿಸುವ ಅವಿದ್ಯೆಯು ಸ್ವಭಾವದಿಂದಲೇ ಇರುತ್ತದೆ; ವಿದ್ಯೆಯೊದರೋ ಉಪದೇಶದಿಂದ ಹೊಸದಾಗಿ ಉಂಟಾಗತಕ್ಕದ್ದು. ಅವಿದ್ಯೆಯು ಹಾಗಲ್ಲ. ಆತ್ಮನು ನಿರ್ವಿಕಾರಸ್ವಭಾವದವನಾದರೂ ವಿಕ್ರಿಯಾಹೇತುಗಳಾದ ಕಾರಕಗಳು, ಕ್ರಿಯೆ, ಫಲಭೋಗ-ಇವುಗಳನ್ನು ಅವಿದ್ಯೆಯು ಅವನಲ್ಲಿ ಕಲ್ಪಿಸಿ ವಿಕಾರವನ್ನುಂಟುಮಾಡುತ್ತದೆ. ಅವಿದ್ಯೆಯು ಭ್ರಾಂತಿಜ್ಞಾನ; ವಿದ್ಯೆಯು ಸಮ್ಯಗ್ಜ್ಞಾನ; ಭ್ರಾಂತಿಜ್ಞಾನವನ್ನು ತೊಲಗಿಸುವದೇ ಸಮ್ಯಗ್ಜ್ಞಾನದ ಕೃತ್ಯವೆಂದು ಮೇಲಿನ ರಜ್ಜುಸರ್ಪಾದಿಗಳ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ಕರ್ಮವು ಜ್ಞಾನಕ್ಕೆ ಹೊರಗಿನ ಸಾಧನವಾದರೆ, ಉಪಾಸನೆಯು ಒಳಗಿನ ಸಾಧನ. ಕರ್ಮವು ಚಿತ್ತದ ಮಲವನ್ನೂ ಉಪಾಸನೆಯು ವಿಕ್ಷೇಪವನ್ನೂ ಕಳೆದು ಅದ್ವೈತಜ್ಞಾನವುಂಟಾಗುವದಕ್ಕೆ ಸಹಾಯಮಾಡುತ್ತವೆ. ಅದ್ವೈತಜ್ಞಾನಕ್ಕೆ ನಿರಾಕಾರವಾದ ಬ್ರಹ್ಮವು ವಿಷಯವಾದ್ದರಿಂದ ಅದು ನಿರಾಲಂಬನವು ; ಉಪಾಸನೆಗೆ ಸಾಕಾರಬ್ರಹ್ಮವು ವಿಷಯವಾದ್ದರಿಂದ ಅದು ಸಾಲಂಬನವು. ಆದ್ದರಿಂದ ಜ್ಞಾನಕ್ಕಿಂತಲೂ ಉಪಾಸನೆಯು ಸುಲಭಸಾಧ್ಯವಾದುದು.

ಉಪಾಸನೆಯು ಕರ್ತೃವಿನ ಇಚ್ಛೆಗೂ ಪ್ರಯತ್ನಕ್ಕೂ ಅಧೀನವಾಗಿ ಭಾವನಾಮಯವಾಗಿರುವದರಿಂದ ಇದು ಕರ್ತೃತಂತ್ರವೆನಿಸುತ್ತದೆ; ಆದರೆ, ಆತ್ಮವಿಜ್ಞಾನವು ಜಿಜ್ಞಾಸುವಿನ ಇಚ್ಛೆಗೆ ವಶವಾಗದೆ, ಆತ್ಮವಸ್ತು ಹೇಗಿದೆಯೋ ಹಾಗೆ ಶಾಸ್ತ್ರಾಚಾರ್ಯರ ಉಪದೇಶದಿಂದ ಉಂಟಾಗುವದರಿಂದ ವಸ್ತುತಂತ್ರವೆನಿಸುತ್ತದೆ. ಉಪಾಸನೆಯು ಆವೃತ್ತಿಯನ್ನು ಅಪೇಕ್ಷಿಸುತ್ತದೆ. ಆದರೆ ಜ್ಞಾನವು ಒಂದುಸಲ ಉಂಟಾದರೆ ಸಾಕು, ಅಜ್ಞಾನವನ್ನು ಕಳೆಯುತ್ತದೆ.

3. ನನು ಜ್ಞಾನಂ ನಾಮ ಮಾನಸೀಕ್ರಿಯಾ। ನ, ವೈಲಕ್ಷಣ್ಯಾತ್।ಕ್ರಿಯಾ ಹಿ ನಾಮ ಸಾ ಯತ್ರ ವಸ್ತುಸ್ವರೂಪನಿರಪೇಕ್ಷೈವ ಚೋದ್ಯತೇ, ಪುರುಷಚಿತ್ತವ್ಯಾಪಾರಾಧೀನಾ ಚ। ಯಥಾ.... ...."ಸನ್ಧ್ಯಾಂ ಮನಸಾ ಧ್ಯಾಯೇತ್"(?) ಇತಿ ಚೈವಮಾದಿಷು। ಧ್ಯಾನಂ ಚಿನ್ತನಂ ಯದ್ಯಪಿ ಮಾನಸಂ, ತಥಾಪಿ ಪುರುಷೇಣ ಕರ್ತುಂ ಅಕರ್ತುಂ ಅನ್ಯಥಾ ವಾ ಕರ್ತುಂ ಶಕ್ಯಮ್। ಪುರುಷತನ್ತ್ರತ್ವಾತ್। ಜ್ಞಾನಂ ತು ಪ್ರಮಾಣಜನ್ಯಮ್। ಪ್ರಮಾಣಂ ಚ ಯಥಾಭೂತವಸ್ತುವಿಷಯಮ್। ಅತಃ ಜ್ಞಾನಂ ಕರ್ತುಂ ಅಕರ್ತುಂ ಅನ್ಯಥಾ ವಾ ಕರ್ತುಂ ಅಶಕ್ಯಮ್। ಕೇವಲಂ ವಸ್ತುತನ್ತ್ರಮೇವ ತತ್, ನ ಚೋದನಾತನ್ತ್ರಂ ನಾಪಿ ಪುರುಷತನ್ತ್ರಮ್। ತಸ್ಮಾತ್ ಮಾನಸತ್ವೇಽಪಿ ಜ್ಞಾನಸ್ಯ ಮಹತ್ ವೈಲಕ್ಷಣ್ಯಮ್।
(ಸೂ. ಭಾ. ೧-೧-೪)

(ಆಕ್ಷೇಪ:) ಜ್ಞಾನವೆಂಬಿದು ಮನಸ್ಸಿನ ಕ್ರಿಯೆಯಲ್ಲವೆ ? ಧ್ಯಾನ-(ಉಪಾಸನಾ)-ಜ್ಞಾನ, ಇವೆರಡನ್ನೂ ಶ್ರುತಿಯಲ್ಲಿ ಜ್ಞಾನವೆಂದೇ ಕರೆದಿರುವದರಿಂದಲೂ

ಶಂಕರರ ಹೊರತು ಮಿಕ್ಕ ಎಲ್ಲಾ ಆಚಾರ್ಯರೂ ತತ್ತ್ವವೇತ್ತರೂ ಉಪಸನಾ ರೂಪಧ್ಯಾನವನ್ನೇ ಮೋಕ್ಷಸಾಧನವೆಂದು ಹೇಳಿರುವದರಿಂದಲೂ ಮತ್ತು ಅವರ ಮತಗಳಲ್ಲಿ ಧ್ಯಾನಕ್ಕಿಂತ ಬೇರೆಯಾದ ಮೋಕ್ಷಕಾರಣವಾದ ಜ್ಞಾನವು ಇಲ್ಲವಾದ್ದ ರಿಂದಲೂ (ಧ್ಯಾನ ಮತ್ತು ಜ್ಞಾನಗಳ ವೈಲಕ್ಷಣ್ಯವನ್ನು ಸ್ಪಷ್ಟಪಡಿಸಬೇಕಾಗಿದೆ.)

(ಪರಿಹಾರ): ಅಲ್ಲ. ಏಕೆಂದರೆ, ಕ್ರಿಯೆಗೂ ಅದಕ್ಕೂ ವೈಲಕ್ಷಣ್ಯವಿದೆ. ಹೇಗೆಂದರೆ, ವಸ್ತುವಿನ ಸ್ವರೂಪವನ್ನು ಲೆಕ್ಕಿಸದೆ ಯಾವದು ವಿಹಿತವಾಗಿರುವ ದೋ ಯಾವದು ಮನುಷ್ಯನ ಚಿತ್ತವ್ಯಾಪಾರಕ್ಕೆ ಅಧೀನವಾಗಿಯೂ ಇರುವದೋ ಅದೇ ಕ್ರಿಯೆ ಎಂಬಿದು. ಉದಾಹರಣೆಗೆ; "ಯಾವ ದೇವತೆಗಾಗಿ ಹವಿಸ್ಸನ್ನು ಕೊಡಬೇಕೆಂದು ಉದ್ದೇಶಿಸಲಾಗಿದೆಯೋ ಆ ದೇವತೆಯನ್ನು ವಷಟ್ಕರಿಸ ಬೇಕೆಂದಿರುವವನು ಮನಸ್ಸಿನಲ್ಲಿ ಅದನ್ನು ಧ್ಯಾನಮಾಡಬೇಕು." (ಐ. ಬ್ರಾ. ೩-೮-೧) "ಸಂಧ್ಯೆಯನ್ನು ಮನಸ್ಸಿನಲ್ಲಿ ಧ್ಯಾನಮಾಡಬೇಕು." (?) ಎಂಬಿದೇ ಮುಂತಾದ ವಚನಗಳಲ್ಲಿ ವಿಧಿಸಿರುವದು ಧ್ಯಾನವು. (ಹೋತೃವು 'ವಷಟ್' ಎಂದು ಉಚ್ಚರಿಸಿದೊಡನೆ ಅಧ್ವರ್ಯುವು ಹವಿಸ್ಸನ್ನು ದೇವತೆಗೆ ಹಾಕುತ್ತಾನೆ. ಆಗ, ಹೋತೃವು ಆ ದೇವತೆಯನ್ನು ಧ್ಯಾನಮಾಡಬೇಕೆಂದು ಶಾಸ್ತ್ರದಲ್ಲಿ ವಿಧಿಸಿದೆ) ಧ್ಯಾನವೆಂದರೆ ಚಿಂತಿಸುವದು: ಅದು ಮನಸ್ಸಿಗೆ ಸಂಬಂಧಿಸಿದ್ದೇ ಆದರೂ ಮನುಷ್ಯನು ಮಾಡುವದಕ್ಕೂ ಬಿಡುವದಕ್ಕೂ ಅಥವಾ ಬೇರೊಂದು ಬಗೆಯಲ್ಲಿ ಮಾಡುವದಕ್ಕೂ ಬರುತ್ತದೆ. ಏಕೆಂದರೆ ಅದು ಪುರುಷತಂತ್ರವಾಗಿರುತ್ತದೆ. (ಪುರು ಷನ ಇಚ್ಛೆಗೆ ಅಧೀನವಾಗಿರುತ್ತದೆ.) ಜ್ಞಾನವಾದರೋ ಪ್ರತ್ಯಕ್ಷ, ಅನುಮಾನ, ಆಗಮವೇ- ಮುಂತಾದ ಪ್ರಮಾಣಗಳಿಂದ ಉಂಟಾಗತಕ್ಕದ್ದು; ಮತ್ತು ಆ ಪ್ರಮಾಣವು ವಸ್ತುವು ಹೇಗಿರುವದೋ ಹಾಗೆಯೇ ಅದನ್ನು ವಿಷಯೀಕರಿಸುವದು. ಆದ್ದರಿಂದ ಜ್ಞಾನವು ಮಾಡುವದಕ್ಕಾಗಲಿ ಬಿಡುವದಕ್ಕಾಗಲಿ, ಅಥವಾ ಬೇರೊಂದು ಬಗೆಯಲ್ಲಿ ಮಾಡುವದಕ್ಕಾಗಲಿ ಬರುವದಲ್ಲ. ಅದು ಕೇವಲ ವಸ್ತು ತಂತ್ರವಾಗಿಯೇ ಇರುತ್ತದೆಯೇ ಹೊರತು ಚೋದನಾತಂತ್ರವೂ (ಶಾಸ್ತ್ರವಿಧಿಗೆ ಅಧೀನವೂ) ಅಲ್ಲ, ಪುರುಷತಂತ್ರವೂ ಅಲ್ಲ. (ಬ್ರಹ್ಮಜ್ಞಾನವು ವೇದಾಂತವಾಕ್ಯ ಗಳ ಅರ್ಥವನ್ನು ಅನುಭವಾನುಸಾರಿಯಾದ ಶ್ರುತ್ಯುಕ್ತಯುಕ್ತಿಗಳಿಂದ ವಿಚಾರ ಮಾಡಿ ಆತ್ಮಸ್ವರೂಪವನ್ನು ನಿಶ್ಚಯಿಸಿಕೊಳ್ಳುವದರಿಂದ ಆಗುವದೇ ಹೊರತು ಅನುಮಾನವೇ ಮುಂತಾದ ಬೇರೆಯ ಪ್ರಮಾಣಗಳಿಂದ ಉಂಟಾಗತಕ್ಕದ್ದಲ್ಲ.)

ವಾಕ್ಯಾರ್ಥವಿಚಾರಣಾಧ್ಯವಸಾನನಿರ್ವೃತ್ತಾ ಹಿ ಬ್ರಹ್ಮಾವ-
ಗತಿಃ ನ ಅನುಮಾನಾದಿಪ್ರಮಾಣಾನ್ತರನಿರ್ವೃತ್ತಾ ॥

(ಸೂ.ಭಾ. ೧-೧-೨)

ಆದ್ದರಿಂದ ಜ್ಞಾನವು ಮಾನಸವಾದರೂ ಕ್ರಿಯೆಗೂ ಅದಕ್ಕೂ ಬಹಳ ವೈಲಕ್ಷಣ್ಯವಿದೆ." ಉದಾಹರಣೆಗೆ:

ಛಾಂದೋಗ್ಯಉಪನಿಷತ್ತಿನ ಪಂಚಾಗ್ನಿವಿದ್ಯೆಯಲ್ಲಿ "ಎಲೈ ಗೌತಮನೆ, ಪುರುಷನೇ ಅಗ್ನಿಯು, ಸ್ತ್ರೀಯೇ ಅಗ್ನಿಯು"–ಹೀಗೆ ಧ್ಯಾನಿಸಬೇಕೆಂದು ವಿಧಿಸಿದೆ. ಸ್ತ್ರೀಪುರುಷರು ಅಗ್ನಿಯಲ್ಲದಿದ್ದರೂ ಅಗ್ನಿಯೆಂದು ಧ್ಯಾನಿಸಬೇಕೆಂದು ಅಲ್ಲಿ ವಿಧಿಸಿರುವದರಿಂದ ಆ ಧ್ಯಾನವು ಚೋದನಾತಂತ್ರ ಮತ್ತು ಪುರುಷತಂತ್ರವೆನಿಸುತ್ತದೆ. ಆದರೆ, ಪ್ರಸಿದ್ಧವಾದ ಅಗ್ನಿಯಲ್ಲಿ ಅಗ್ನಿ ಎಂಬ ಬುದ್ಧಿಯುಂಟಾಗುವದಲ್ಲ, ಅದು ಚೋದನಾತಂತ್ರವಲ್ಲ, ಪುರುಷತಂತ್ರವೂ ಅಲ್ಲ, ಮತ್ತೇನೆಂದರೆ, ಪ್ರತ್ಯಕ್ಷ ಪ್ರಮಾಣಕ್ಕೆ ವಿಷಯವಾದ ವಸ್ತುವಿಗೆ ಅಧೀನವಾಗಿಯೇ ಅಗ್ನಿ ಎಂಬ ಬುದ್ಧಿ ಇರುವದರಿಂದ ಇದು ಜ್ಞಾನವೇ, ಕ್ರಿಯೆಯಲ್ಲ. ಎಲ್ಲಾ ಪ್ರಮಾಣಗಳಿಗೂ ವಿಷಯವಾದ ವಸ್ತುಗಳ ಜ್ಞಾನವನ್ನು ಹೀಗೆಯೇ ತಿಳಿಯಬೇಕು. ಇದು ಹೀಗಿರುವದರಿಂದ ಇದ್ದದ್ದು ಇದ್ದಂತೆ ತಿಳಿಸುವ ಬ್ರಹ್ಮಾತ್ಮವಿಷಯವಾದ ಜ್ಞಾನವು ಚೋದನಾತಂತ್ರವಲ್ಲ.

4. ಅತಃ ನ ಪುರುಷವ್ಯಾಪಾರತನ್ತ್ರಾ ಬ್ರಹ್ಮವಿದ್ಯಾ । ಕಿಂ ತರ್ಹಿ ಪ್ರತ್ಯಕ್ಷಾದಿಪ್ರಮಾಣವಿಷಯವಸ್ತುಜ್ಞಾನವತ್ ವಸ್ತುತನ್ತ್ರಾ । ಏವಂ ಭೂತಸ್ಯ ಬ್ರಹ್ಮಣಃ ತಜ್ಜ್ಞಾನಸ್ಯ ಚ ನ ಕಯಾಚಿತ್ ಯುಕ್ತ್ಯಾ ಶಕ್ಯಃ ಕಾರ್ಯಾನುಪ್ರವೇಶಃ ಕಲ್ಪಯಿತುಮ್ । ನ ಚ ವಿಧಿಕ್ರಿಯಾಕರ್ಮತ್ವೇನ ಕಾರ್ಯಾನುಪ್ರವೇಶೋ ಬ್ರಹ್ಮಣಃ । "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ" (ಕೇ. ೧-೩) ಇತಿ ವಿಧಿಕ್ರಿಯಾಕರ್ಮತ್ವಪ್ರತಿಷೇಧಾತ್ । "ಯೇನೇದಂ ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾತ್ (ಬೃ. ೨-೪-೧೪) ಇತಿ ಚ। ತಥಾ ಉಪಾಸ್ತಿ ಕ್ರಿಯಾಕರ್ಮತ್ವಪ್ರತಿಷೇಧೋಽಪಿ ಭವತಿ- ಇತ್ಯವಿಷಯತ್ವಂ ಬ್ರಹ್ಮಣ ಉಪನ್ಯಸ್ಯ "ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ" (ಕೇ. ೧-೪) ಇತಿ । ಅವಿಷಯತ್ವೇ ಬ್ರಹ್ಮಣಃ ಶಾಸ್ತ್ರಯೋನಿತ್ವಾನುಪಪತ್ತಿಃ ಇತಿ ಚೇತ್ । ನ; ಅವಿದ್ಯಾಕಲ್ಪಿತಭೇದನಿವೃತ್ತಿಪರತ್ವಾತ್ ಶಾಸ್ತ್ರಸ್ಯ । ನ ಹಿ ಶಾಸ್ತ್ರಂ ಇದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ । ಕಿಂ ತರ್ಹಿ ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿಭೇದಂ ಅಪನಯತಿ । ತಥಾ ಚ ಶಾಸ್ತ್ರಮ್ "ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ । ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ ॥ (ಕೇ. ೨-೩) "ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ.... ನ ವಿಜ್ಞಾತೇರ್ವಿಜ್ಞಾತಾರಂ ವಿಜಾನೀಯಾಃ" (ಬೃ. ೩-೪-೨) ಇತಿ ಚೈವಮಾದಿ । ಅತಃ ಅವಿದ್ಯಾಕಲ್ಪಿತಸಂಸಾರಿತ್ವ

ನಿವರ್ತನೇನ ನಿತ್ಯಮುಕ್ತಾತ್ಮಸ್ವರೂಪಸಮರ್ಪಣಾತ್ ನ ಮೋಕ್ಷಸ್ಯ ಅನಿತ್ಯತ್ವದೋಷಃ ॥ (ಸೂ. ಭಾ. ೧-೧-೪)

"ಆದಕಾರಣ ಬ್ರಹ್ಮವಿದ್ಯೆಯು ಪುರುಷವ್ಯಾಪಾರಕ್ಕೆ ಅಧೀನವಾದದ್ದಲ್ಲ; ಮತ್ತೇನೆಂದರೆ, ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳ ವಿಷಯವಾಗಿರುವ ವಸ್ತುಗಳ ಜ್ಞಾನದಂತೆ ಇದೂ ವಸ್ತುವಿಗೆ ಅಧೀನವಾಗಿರುತ್ತದೆ. ಹೀಗಿರುವದರಿಂದ ಬ್ರಹ್ಮವಾಗಲಿ, ಅದರ ಜ್ಞಾನವಾಗಲಿ ಕಾರ್ಯದಲ್ಲಿ ಸೇರಿರುವದೆಂದು ಯಾವ ಯುಕ್ತಿಯಿಂದಲೂ ಕಲ್ಪಿಸುವದಕ್ಕೆ ಆಗಲಾರದು. (ಬ್ರಹ್ಮವಾಗಲಿ ಬ್ರಹ್ಮಜ್ಞಾನವಾಗಲಿ ಸ್ವರ್ಗದಂತೆ ಕ್ರಿಯೆಯಿಂದ ಸಾಧಿಸಿಕೊಳ್ಳತಕ್ಕದ್ದಲ್ಲ.) ಬ್ರಹ್ಮವು ಅರಿಯುವದೆಂಬ ಕ್ರಿಯೆಗೆ ವಿಷಯವಾಗಿರುವದರಿಂದ ಕಾರ್ಯದಲ್ಲಿ ಸೇರಿರುವದೆಂದು ಹೇಳುವದಕ್ಕೂ ಆಗುವಹಾಗಿಲ್ಲ. ಏಕೆಂದರೆ, ''ಅದು ಅರಿತದ್ದಕ್ಕಿಂತಲೂ ಬೇರೆಯೇ; ಅರಿಯಲ್ಪಡದ್ದಕ್ಕಿಂತಲೂ ಬೇರೆ" (ಕೇ. ೧-೩) ಎಂದೂ "ಏತರಿಂದ ಇದೆಲ್ಲವನ್ನೂ ಅರಿತುಕೊಳ್ಳುತ್ತಾನೋ, ಅದನ್ನು ಏತರಿಂದ ಅರಿತುಕೊಂಡಾನು? (ಬೃ. ೨-೪-೧೪) ಎಂದೂ ಬ್ರಹ್ಮವು ಅರಿಯುವ ಕ್ರಿಯೆಗೆ ಕರ್ಮವಲ್ಲವೆಂದೂ ಶಾಸ್ತ್ರದಲ್ಲಿ ಹೇಳಿರುತ್ತದೆ. ಇದರಂತೆ ಉಪಾಸನೆ ಎಂಬ ಕ್ರಿಯೆಗೆ ಅದು ಕರ್ಮವೆಂಬುದನ್ನು ಶ್ರುತಿಯಲ್ಲಿ ಅಲ್ಲಗಳೆದೂ ಇರುತ್ತದೆ. ಹೇಗೆಂದರೆ: "ಯಾವದನ್ನು ವಾಕ್ಕಿನಿಂದ ಹೇಳುವದಾಗುವದಿಲ್ಲವೋ ಯಾವದರಿಂದ ವಾಕ್ಕು ಹೇಳಲ್ಪಡುವದೋ" ಎಂದು ಬ್ರಹ್ಮವು ವಾಗಾದಿಗಳಿಗೆ ವಿಷಯವಲ್ಲವೆಂದು ಹೇಳಿ, "ಅದೇ ಬ್ರಹ್ಮವೆಂದು ನೀನು ಅರಿತುಕೊ; 'ಇದು' ಎಂದು ಯಾವದನ್ನು ಉಪಾಸನೆ ಮಾಡುವರೋ ಅದು ಬ್ರಹ್ಮವಲ್ಲ'' (ಕೇ. ೧-೪) ಎಂದು ಹೇಳಿದೆ.

(ಆಕ್ಷೇಪ): ಬ್ರಹ್ಮವು ಏತಕ್ಕೂ ವಿಷಯವಲ್ಲದಿದ್ದರೆ, ಆದಕ್ಕೆ ಶಾಸ್ತ್ರವು ಪ್ರಮಾಣವೆಂದು ಸೂತ್ರದಲ್ಲಿ ಹೇಳಿರುವದು ಹೊಂದುವದಿಲ್ಲವಲ್ಲ?

(ಪರಿಹಾರ): ಹಾಗಲ್ಲ. ಏಕೆಂದರೆ, ಅವಿದ್ಯೆಯಿಂದ ಕಲ್ಪಿತವಾಗಿರುವ ಭೇದವನ್ನು ಕಳೆಯುವದರಲ್ಲಿ ಶಾಸ್ತ್ರಕ್ಕೆ ತಾತ್ಪರ್ಯವಿರುತ್ತದೆ. ಶಾಸ್ತ್ರವು ಬ್ರಹ್ಮವನ್ನು ಇದು ಎಂದು ವಿಷಯವಾಗಿರುವಂತೆ ತಿಳಿಸುವದಕ್ಕೆ ಹೊರಟಿಲ್ಲ. ಮತ್ತೇನೆಂದರೆ, ಅದು ನಮ್ಮೊಳಗಿನ ಆತ್ಮನೇ ಆಗಿರುವದರಿಂದ ವಿಷಯವಲ್ಲವೆಂದು ತಿಳಿಸಿ ಅವಿದ್ಯಾಕಲ್ಪಿತವಾದ ವೇದ್ಯ (ಅರಿಯಲ್ಪಡತಕ್ಕದ್ದು), ವೇದಿತೃ (ಅರಿಯುವವ), ವೇದನ (ಅರಿವು)- ಮುಂತಾದ ಭೇದವನ್ನು ಕಳೆಯುತ್ತದೆ. ಆದ್ದರಿಂದಲೇ "ಯಾವನಿಗೆ ಅದು ತಿಳಿಯದಿರುವದೋ ಅವನಿಗೆ ತಿಳಿದಿರುವದು, ಯಾವನಿಗೆ ಅದು ತಿಳಿದಿರುವದೋ ಅವನು ತಿಳಿಯನು. ತಿಳಿಯುವವರಿಗೆ ತಿಳಿದಿಲ್ಲ; ತಿಳಿಯದವರಿಗೆ ಅದು ತಿಳಿದಿದೆ'' (ಕೇ. ೨-೩) ''ನೋಟವನ್ನು ನೋಡುವಾತನನ್ನು ನೀನು ನೋಡಲಾರೆ; ಅರಿವನ್ನು ಅರಿಯುವಾತನನ್ನು ನೀನು

ಅರಿತುಕೊಳ್ಳಲಾರೆ.” (ಬೃ. ೩-೪-೨) ಎಂದು ಮುಂತಾಗಿ ಶಾಸ್ತ್ರವು ಹೇಳುತ್ತದೆ. ಆದ್ದರಿಂದ ಅವಿದ್ಯೆಯಿಂದ ಕಲ್ಪಿತವಾದ ಸಂಸಾರಿತ್ವವನ್ನು ತೆಗೆದುಹಾಕಿ, ಯಾವಾಗಲೂ ಮುಕ್ತನಾಗಿಯೇ ಇರುವ ಆತ್ಮನ ಸ್ವರೂಪವನ್ನು ತಿಳಿಸಿಕೊಡುವದರಿಂದ ಮೋಕ್ಷವು ಅನಿತ್ಯವೆಂಬ ದೋಷವೂ ಬರುವದಿಲ್ಲ. (ಏಕೆಂದರೆ ಮೋಕ್ಷವು ನಿತ್ಯಪ್ರಾಪ್ತವಾಗಿರುವ ಆತ್ಮಸ್ವರೂಪವೇ ಆಗಿರುತ್ತದೆ.)

5. ಶ್ರೀಶಂಕರಾಚಾರ್ಯರು, ಅವರ ಪರಮಗುರುಗಳಾದ ಶ್ರೀಗೌಡಪಾದಾಚಾರ್ಯರು, ಶಂಕರರ ಶಿಷ್ಯರಾದ ಶ್ರೀಸುರೇಶ್ವರಾಚಾರ್ಯರು- ಈ ಮೂವರು ಆಚಾರ್ಯರುಗಳನ್ನು ಬಿಟ್ಟರೆ, ಲೋಕದಲ್ಲಿರುವ ಮಿಕ್ಕ ವೇದಾಂತಿಗಳೆಲ್ಲರೂ ಮರಣಾನಂತರದಲ್ಲಿ ಆಗುವ ವಿದೇಹಮುಕ್ತಿಯೇ ಮುಖ್ಯಮುಕ್ತಿಯು ಎಂದು ಹೇಳಿದ್ದಾರೆ. ಶಾಸ್ತ್ರದಲ್ಲಿ, ಉಪಾಸನಾವಿಧಿಪ್ರಧಾನವಾಗಿರುವ ಪ್ರತಿಯೊಂದು ಪ್ರಕರಣದಲ್ಲಿಯೂ ದೇಹಪಾತಾನಂತರದಲ್ಲಿ ಆಗುವ ಫಲವನ್ನೇ ಹೇಳಿದೆ. ಇದನ್ನು ಎಲ್ಲರೂ ಒಪ್ಪಿರುತ್ತಾರೆ. ಆದರೆ, ಮತ್ತೆ ಕೆಲವು ವಾಕ್ಯಗಳು ವಸ್ತು(ಬ್ರಹ್ಮ) ಸ್ವರೂಪಪ್ರಧಾನವಾಗಿರುತ್ತವೆ. ಆ ವಾಕ್ಯಗಳಲ್ಲಿರುವ ಪದಗಳು ಬ್ರಹ್ಮದಲ್ಲಿಯೇ ಸಮನ್ವಯವಾಗಿರುತ್ತವೆ. ಬ್ರಹ್ಮಜ್ಞಾನವಾದ ಬಳಿಕವೂ ಮಾಡಬೇಕಾದ ಯಾವ ಉಪಾಸನೆಯನ್ನೂ ಈ ಪ್ರಕರಣದಲ್ಲಿ ಹೇಳಿರುವದಿಲ್ಲ. ಉಪಾಸನಾವಾಕ್ಯಗಳಂತೆ ಈ ವಾಕ್ಯಗಳಲ್ಲಿ ಕಾಲಾಂತರಫಲವನ್ನೂ ಹೇಳಿರುವದಿಲ್ಲ. ಶಾಸ್ತ್ರಾಚಾರ್ಯರ ಪ್ರಸಾದದಿಂದ ವಾಕ್ಯಾರ್ಥವನ್ನು ಅವಗತಿಪರ್ಯಂತವಾಗಿ ತಿಳಿದ ಮಾತ್ರದಿಂದಲೇ ಈಗಲೇ ಇಲ್ಲಿಯೇ ಆಗುವ ಫಲವನ್ನು ಈ ವಾಕ್ಯಗಳು ಹೇಳುತ್ತವೆ. ಅಥವಾ ಇವು ಜೀವಬ್ರಹ್ಮೈಕ್ಯವನ್ನು ಹೇಳಿ ಅಷ್ಟರಲ್ಲಿಯೇ ಪರಿಸಮಾಪ್ತವಾಗುತ್ತವೆ. ಉದಾಹರಣೆಗಾಗಿ ನಾವು 'ತತ್ತ್ವಮಸಿ'(ಛಾಂ) ವಾಕ್ಯವನ್ನು ಸ್ಮರಿಸಬಹುದು.

> ಕರ್ಮಫಲೇ ಹಿ ಸ್ವರ್ಗಾದೌ ಅನುಭವಾನಾರೂಢೇ ಸ್ಯಾದಾಶಙ್ಕಾ ಭವೇದ್ವಾ ನ ವಾ ಇತಿ । ಅನುಭವಾರೂಢಂ ತು ಜ್ಞಾನಫಲಮ್ “ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ ಯ ಆತ್ಮಾ ಸರ್ವಾನ್ತರಃ ।” (ಬೃ. ೩-೪-೧) ಇತಿ ಶ್ರುತೇಃ । 'ತತ್ತ್ವಮಸಿ' (ಛಾ. ೬-೮-೭) ಇತಿ ಚ ಸಿದ್ಧವದುಪದೇಶಾತ್ । ನ ಹಿ 'ತತ್ತ್ವಮಸಿ' ಇತ್ಯಸ್ಯ ವಾಕ್ಯಸ್ಯ ಅರ್ಥಃ ತತ್ತ್ವಂ ಮೃತೋ ಭವಿಷ್ಯಸಿ ಇತ್ಯೇವಂ ಪರಿಣೇತುಂ ಶಕ್ಯಃ । ....ಇತಿ ಚ । ಸಮ್ಯಗ್ದರ್ಶನಕಾಲ ಏವ ತತ್ಫಲಂ ಸರ್ವಾತ್ಮತ್ವಂ ದರ್ಶಯತಿ । ತಸ್ಮಾತ್ ಐಕಾನ್ತಿಕೀ ವಿದುಷಃ ಕೈವಲ್ಯಸಿದ್ಧಿಃ ॥ (ಸೂ. ಭಾ. ೩-೩-೩೨)

“ವ್ಯಾಸಾದಿ ಆಧಿಕಾರಿಕಪುರುಷರಿಗೆ ಅವರ ಅಧಿಕಾರನಿಮಿತ್ತದಿಂದ (ಲೋಕಾನುಗ್ರಹಾರ್ಥವಾಗಿ) ಮೋಕ್ಷಪ್ರಾಪ್ತಿಯು ತಡವಾದ ಮಾತ್ರದಿಂದ

ಜ್ಞಾನವು ಮೋಕ್ಷಕ್ಕೆ ಕಾರಣವಲ್ಲವೆಂದೇನೂ ಆಗುವದಿಲ್ಲ. ಆದ್ದರಿಂದಲೇ ಯಾವ ವಿಶೇಷವೂ ಇಲ್ಲದೆ ಎಲ್ಲರಿಗೂ ಜ್ಞಾನದಿಂದ ಮೋಕ್ಷವಾಗುವದೆಂದು "ಅಲ್ಲಿ ದೇವತೆಗಳೊಳಗೆ ಯಾವಯಾವನು ಅರಿತುಕೊಂಡನೋ ಅವನೇ ಅದಾದನು ; ಹಾಗೆಯೇ ಋಷಿಗಳೊಳಗೆ, ಹಾಗೆಯೇ ಮನುಷ್ಯರೊಳಗೆ" (ಬೃ. ೧-೪-೧೦) ಎಂಬ ಶ್ರುತಿಯು ತಿಳಿಸುತ್ತದೆ. ಜ್ಞಾನದ ಫಲವು ಪ್ರತ್ಯಕ್ಷವಾಗಿರುವದರಿಂದಲೂ ಅದಕ್ಕೆ ಫಲವಾಗಲಾರದೆಂಬ ಶಂಕೆಯು ಹೊಂದುವದಿಲ್ಲ. ಕರ್ಮಫಲವಾದ ಸ್ವರ್ಗಾದಿಗಳ ಪ್ರಾಪ್ತಿಯು ಈಗಲೇ ಅನುಭವಕ್ಕೆ ಬರುವದಿಲ್ಲವಾದ್ದರಿಂದ ಅದು ಆದೀತೋ ಇಲ್ಲವೋ ಎಂಬ ಶಂಕೆಯು ಉಂಟಾಗಬಹುದು. ಆದರೆ ಜ್ಞಾನದ ಫಲವು ಅನುಭವಕ್ಕೆ ಈಗಲೇ ಬರತಕ್ಕದ್ದು. "ಯಾವದು ನೇರಾದ ಅಪರೋಕ್ಷವಾದ ಬ್ರಹ್ಮವೋ ಯಾವನು ಸರ್ವಾಂತರನಾದ ಆತ್ಮನೋ".... (ಬೃ. ೩-೪-೧) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. "ಅದೇ ನೀನಾಗಿರುವೆ" (ಛಾಂ. ೬-೮-೭) ಎಂಬೀ ವಾಕ್ಯದ ಅರ್ಥವನ್ನು "ನೀನು ಸತ್ತಮೇಲೆ ಅದಾಗುವೆ" ಎಂದೇನೂ ತಿರುಗಿಸುವದಕ್ಕೆ ಆಗಲಾರದಷ್ಟೆ ; ಮತ್ತು ಆ ಇದನ್ನು ಕಂಡುಕೊಂಡ ವಾಮದೇವನು 'ನಾನು ಮನುವಾದೆನು' 'ಸೂರ್ಯನಾದೆನು'-ಎಂದು ತಿಳಿದುಕೊಂಡನು- (ಬೃ. ೧-೪-೧೦) ಎಂದು 'ಸಮ್ಯಗ್ದರ್ಶನ' ಸಮಕಾಲದಲ್ಲಿಯೇ ಅದರ ಫಲವಾದ ಸರ್ವಾತ್ಮತ್ವವನ್ನು ಶ್ರುತಿಯು ತಿಳಿಸುತ್ತದೆ. (ಆದ್ದರಿಂದ ಮೋಕ್ಷವು ಸ್ವರ್ಗಾದಿಗಳಂತೆ ಸಂಶಯಗ್ರಸ್ತವೂ ಅಲ್ಲ ; ಕೇವಲ ಆಪ್ತವಾಕ್ಯದಿಂದ ನಂಬತಕ್ಕದ್ದೂ ಅಲ್ಲ.) ಆದ್ದರಿಂದ ಜ್ಞಾನಿಗೆ ಕೈವಲ್ಯಸಿದ್ಧಿಯು ತಪ್ಪದೆ, ನಿಯಮದಿಂದ ಆಗುತ್ತದೆ- ಎಂದು ಸಿದ್ಧವಾಯಿತು."

ಈಗಲೇ ಇಲ್ಲಿಯೇ ಆತ್ಮಾನುಭವವನ್ನು ಅಥವಾ ಸರ್ವಾತ್ಮತ್ವದ (ಸರ್ವವೂ ಆತ್ಮನೇ ಎಂಬ ಅಥವಾ ಅವಿದ್ಯಾಕಲ್ಪಿತವಾಗಿ-ನಿಜವಾಗಿಲ್ಲವಾದರೂ ಇದ್ದಂತೆ ತೋರುವ-ಸರ್ವಕ್ಕೂ ಅಧಿಷ್ಠಾನವಾದ ಆತ್ಮವು ಒಂದೇ ಪರಮಾರ್ಥಸತ್ಯವೆಂಬ) ಅನುಭವವನ್ನು ಪಡೆಯುವದಕ್ಕೆ ಸಮ್ಯಗ್ದರ್ಶನವೇ ಸಾಧನವೆಂದು ಶಂಕರರು ಹೇಳಿರುವದನ್ನು ನಾವು ಇಲ್ಲಿ ಮುಖ್ಯವಾಗಿ ಗಮನಿಸಬೇಕು.

6. ಸಮ್ಯಕ್ ಎಂದರೆ ಚೆನ್ನಾಗಿ, ಪರಿಪೂರ್ಣವಾಗಿ, ಸರಿಯಾಗಿ, ಸ್ಪಷ್ಟವಾಗಿ, ಸತ್ಯವಾಗಿ ಇತ್ಯಾದಿ ; ದರ್ಶನವೆಂದರೆ ಕಾಣುವದು, ನೇರಾಗಿ ಕಾಣುವದು, ಅನುಭವದಲ್ಲಿ ಕಾಣುವದು ಇತ್ಯಾದಿ- ಅರ್ಥವಾಗುತ್ತದೆ. ಬೇರೆಬೇರೆಯ ತತ್ತ್ವವೇತ್ತರು ತಮ್ಮ ತಮ್ಮ ಅನುಭವದಲ್ಲಿ ಕಂಡ ತತ್ತ್ವಗಳನ್ನು ವ್ಯವಸ್ಥಿತರೀತಿಯಲ್ಲಿ ತರ್ಕಬದ್ಧವಾಗಿ ತಿಳಿಸುವ ಶಾಸ್ತ್ರಗಳೂ ದರ್ಶನಗಳು- ಎನಿಸುತ್ತವೆ. ಸಾಂಖ್ಯ, ಯೋಗ-ಮೊದಲಾದ ಷಡ್ದರ್ಶನಗಳು ಪ್ರಸಿದ್ಧವಾಗಿವೆ. ದರ್ಶನಗಳಲ್ಲಿ

ವೈದಿಕದರ್ಶನಗಳೂ ಇವೆ ; ಅವೈದಿಕದರ್ಶನಗಳೂ ಇವೆ. ವೇದಾಂತದರ್ಶನದಲ್ಲಿ ಶಾಂಕರದರ್ಶನವು ಅದ್ವೈತದರ್ಶನವಾಗಿದೆ. ಒಟ್ಟಿನಲ್ಲಿ ಅನುಭವಕ್ಕಾಗಲಿ, ಯುಕ್ತಿಗಾಗಲಿ, ಅನುಭವಾನುಸಾರವಾದ ಯುಕ್ತಿಗಾಗಲಿ, ಹೊಂದಿಕೆಯಾಗುವ ತಿಳಿವಳಿಕೆಯನ್ನು ದರ್ಶನವೆನ್ನಬಹುದು. ಆದ್ದರಿಂದ ದರ್ಶನವೆಂದರೆ ಜ್ಞಾನ ; ಸಮ್ಯಕ್-ದರ್ಶನವೆಂದರೆ ಸಮ್ಯಗ್ಜ್ಞಾನ- ಎಂದಭಿಪ್ರಾಯ.

**ಸರ್ವತ್ರಸಮದರ್ಶನಃ- ಸರ್ವೇಷು ಬ್ರಹ್ಮಾದಿಸ್ಥಾವರಾನ್ತೇಷು ವಿಷಮೇಷು ಸರ್ವಭೂತೇಷು ಸಮಂ ನಿರ್ವಿಶೇಷಂ ಬ್ರಹ್ಮಾತ್ಮೈಕತ್ವವಿಷಯಂ ದರ್ಶನಂ ಜ್ಞಾನಂ ಯಸ್ಯ ಸಃ ಸರ್ವತ್ರಸಮದರ್ಶನಃ ॥ (ಗೀ. ಭಾ. ೬-೨೯)**

ಅವನು ಸರ್ವತ್ರಸಮದರ್ಶನನಾಗಿ ಎಂದರೆ, ಬ್ರಹ್ಮನಿಂದ ಹಿಡಿದು ಸ್ಥಾವರದ ವರೆಗಿನ ಒಂದಕ್ಕಿಂತ ಇನ್ನೊಂದು ಹೆಚ್ಚುಕಡಿಮೆ ಇರುವ ಸರ್ವಭೂತಗಳಲ್ಲಿಯೂ ಸಮವನ್ನು ಎಂದರೆ ನಿರ್ವಿಶೇಷವಾದ ಬ್ರಹ್ಮಾತ್ಮೈಕತ್ವವನ್ನೇ ಕಾಣುವ ದರ್ಶನವು ಎಂದರೆ, ಜ್ಞಾನವು ಯಾವನಿಗಿರುವದೋ ಅವನು ಸರ್ವತ್ರಸಮದರ್ಶನನು. (ಗೀ.ಭಾ.೬-೨೯) ಇಲ್ಲಿ ದರ್ಶನ ಎಂದರೆ ಜ್ಞಾನವೆಂದು ಹೇಳಿದ್ದಾರೆ; ಆದ್ದರಿಂದ ಸಮ್ಯಗ್ದರ್ಶನ ಎಂದರೆ ಸಮ್ಯಗ್ಜ್ಞಾನ-ಎಂದಾಗುತ್ತದೆ. ಅದರಲ್ಲಿಯೂ ದರ್ಶನವೆಂದರೆ ಬ್ರಹ್ಮಾತ್ಮೈಕತ್ವಜ್ಞಾನವೆಂದೇ ಹೇಳಿರುವದನ್ನು ಲಕ್ಷಿಸಬೇಕು.

7. ಶಂಕರರು ಸೂತ್ರಭಾಷ್ಯದಲ್ಲಿ ಹೇಳಿರುವದೇನೆಂದರೆ :

**ಅಪಿ ಚ ಸಮ್ಯಗ್ಜ್ಞಾನಾತ್ ಮೋಕ್ಷಃ ಇತಿ ಸರ್ವೇಷಾಂ ಮೋಕ್ಷವಾದಿನಾಮ್ ಅಭ್ಯುಪಗಮಃ । ತಚ್ಚ ಸಮ್ಯಗ್ಜ್ಞಾನಮ್ ಏಕರೂಪಮ್, ವಸ್ತುತನ್ತ್ರತ್ವಾತ್ । ಏಕರೂಪೇಣ ಹಿ ಅವಸ್ಥಿತೋ ಯೋಽರ್ಥಃ ಸ ಪರಮಾರ್ಥಃ । ಲೋಕೇ ತದ್ವಿಷಯಂ ಜ್ಞಾನಂ ಸಮ್ಯಗ್ಜ್ಞಾನಮ್ ಇತ್ಯುಚ್ಯತೇ । ಯಥಾ ಅಗ್ನಿರುಷ್ಣಃ ಇತಿ ।.... ವೇದಸ್ಯ ತು ನಿತ್ಯತ್ವೇ ವಿಜ್ಞಾನೋತ್ಪತ್ತಿಹೇತುತ್ವೇ ಚ ಸತಿ ವ್ಯವಸ್ಥಿತಾರ್ಥವಿಷಯತ್ವೋಪಪತ್ತೇಃ ತಜ್ಜನಿತಸ್ಯ ಜ್ಞಾನಸ್ಯ ಸಮ್ಯಕ್ತ್ವಮ್ ಅತೀತಾನಾಗತವರ್ತಮಾನೈಃ ಸರ್ವೈರಪಿ ತಾರ್ಕಿಕೈಃ ಅಪಹ್ನೋತುಮ್ ಅಶಕ್ಯಮ್ । ಅತಃ ಸಿದ್ಧಮ್ ಅಸ್ಯೈವ ಔಪನಿಷದಸ್ಯ ಜ್ಞಾನಸ್ಯ ಸಮ್ಯಗ್ಜ್ಞಾನತ್ವಮ್ ॥**

**(ಸೂ. ಭಾ. ೨-೧-೧೧)**

ಇದಲ್ಲದೆ, ಸಮ್ಯಗ್ಜ್ಞಾನದಿಂದ ಮೋಕ್ಷವಾಗುವದೆಂಬುದು ಎಲ್ಲಾ ಮೋಕ್ಷವಾದಿಗಳಿಗೂ ಒಪ್ಪಾಗಿರುತ್ತದೆ. ಆ ಸಮ್ಯಗ್ಜ್ಞಾನವು ಒಂದೇ ರೂಪವಾಗಿರಬೇಕು. ಏಕೆಂದರೆ, ಅದು ವಸ್ತುತಂತ್ರವಾಗಿರುತ್ತದೆ. ಒಂದೇ

ರೂಪದಿಂದಿರುವ ಅರ್ಥವು ಯಾವದೋ ಅದೇ ಪರಮಾರ್ಥವು ; ಲೋಕದಲ್ಲಿ ಅದರ ವಿಷಯದ-ಜ್ಞಾನವೇ ಸಮ್ಯಗ್ಜ್ಞಾನವೆನಿಸುತ್ತದೆ. ಉದಾಹರಣೆಗೆ 'ಬೆಂಕಿಯು ಬಿಸಿಯಾಗಿರುತ್ತದೆ' ಎಂಬ ತಿಳಿವಳಿಕೆಯು ಅಂಥ ಸಮ್ಯಗ್ಜ್ಞಾನವು. (ವೈಯಕ್ತಿಕವಾಗಿ ಒಬ್ಬನಿಗೆ ಮಾತ್ರ ಆಗುವ ಅನುಭವವು ಸಮ್ಯಗ್ಜ್ಞಾನವಲ್ಲ) ಇದು ಹೀಗಿರುವಲ್ಲಿ ಸಮ್ಯಗ್ಜ್ಞಾನದ ವಿಷಯಕ್ಕೆ ಪುರುಷರಿಗೆ ವಿರುದ್ಧಾಭಿಪ್ರಾಯವಿರುವದೆಂಬುದು ಹೊಂದುವದಿಲ್ಲ. ತರ್ಕಜ್ಞಾನವುಳ್ಳವರ ಅಭಿಪ್ರಾಯಗಳು ಪರಸ್ಪರವಿರುದ್ಧವಾಗಿರುತ್ತವೆ- ಎಂಬುದು ಪ್ರಸಿದ್ಧವೇ ಇದೆ. ಯಾವದನ್ನು ಒಬ್ಬ ತಾರ್ಕಿಕನು ಇದೇ ಸಮ್ಯಗ್ಜ್ಞಾನವು ಎಂದು ಪ್ರತಿಪಾದಿಸುತ್ತಾನೋ ಅದನ್ನು ಮತ್ತೊಬ್ಬನು ಎತ್ತಿಹಾಕುತ್ತಾನೆ. ....ಒಂದೇ ರೂಪದಲ್ಲಿ ನಿಲುಗಡೆಯಿಲ್ಲದ ವಿಷಯವುಳ್ಳ ತರ್ಕಜನ್ಯಜ್ಞಾನವು ಹೇಗೆ ಸಮ್ಯಗ್ಜ್ಞಾನವಾದೀತು ? ಹಿಂದೆ ಆಗಿಹೋಗಿರುವ, ಮುಂದೆ ಬರಲಿರುವ, ಈಗ ಇರುವ ತಾರ್ಕಿಕರನ್ನೆಲ್ಲ ಒಂದೇ ದೇಶದಲ್ಲಿ ಒಂದೇ ಕಾಲದಲ್ಲಿ ಕೂಡಿಸುವದೂ ಆಗುವದಿಲ್ಲ. ಹಾಗಿದ್ದರೆ ಅವರ ಮತಿಯು ಒಂದೇ ರೂಪವಾದ ಒಂದೇ ಅರ್ಥವನ್ನು ವಿಷಯೀಕರಿಸುವದರಿಂದ ಸರಿಯಾದ ತಿಳಿವಳಿಕೆ- ಎಂದು ಆಗಬಹುದಾಗಿತ್ತು. ವೇದವಾದರೋ ನಿತ್ಯವಾಗಿರುವದರಿಂದಲೂ ವಿಜ್ಞಾನವುಂಟಾಗುವದಕ್ಕೆ ಕಾರಣವಾಗಿರುವದರಿಂದಲೂ ಒಂದೇ ಸಮನಾಗಿ ನಿಲ್ಲುವ ಅರ್ಥವದು- ಎಂದಾಗುವದರಿಂದ ಅದರಿಂದುಂಟಾಗುವ ಜ್ಞಾನವು ಸಮ್ಯಗ್ಜ್ಞಾನವೆಂಬುದನ್ನು ಹಿಂದಿನ ಮುಂದಿನ ಇಂದಿನ ಯಾವ ತಾರ್ಕಿಕರೂ ಇಲ್ಲವೆನ್ನುವದಕ್ಕೆ ಆಗಲಾರದು. ಆದ್ದರಿಂದ ಈ ಔಪನಿಷದಜ್ಞಾನವೇ ಸಮ್ಯಗ್ಜ್ಞಾನವೆಂದು ಸಿದ್ಧವಾಯಿತು. ಅದ್ದರಿಂದ ಇನ್ನೊಂದು ಸಮ್ಯಗ್ಜ್ಞಾನವಾಗುವಂತಿಲ್ಲ....

(ಸೂ. ಭಾ. ೨-೧-೧೧)

ಸಮಸ್ತಸ್ಯ ಮಿಥ್ಯಾಜ್ಞಾನವಿಜೃಮ್ಭಿತಸ್ಯ ಭೇದವ್ಯವಹಾರಸ್ಯ ಸಮ್ಯಗ್ಜ್ಞಾನೇನ ಬಾಧಿತತ್ವಾತ್ ॥ (ಸೂ. ಭಾ. ೨-೧-೨೨)

ಏಕೆಂದರೆ, ಮಿಥ್ಯಾಜ್ಞಾನದಿಂದ ಹರಡಿಕೊಂಡಿರುವ ಎಲ್ಲಾ ಭೇದವ್ಯವಹಾರವೂ ಆಗ ಸಮ್ಯಗ್ಜ್ಞಾನದಿಂದ ಬಾಧಿತವಾಗಿಬಿಟ್ಟಿರುತ್ತದೆ.

8. ಭಾವನಾಮಯವೂ ಕರ್ತೃತಂತ್ರವೂ ಕಾಲಾಂತರದಲ್ಲಿಯೂ ಲೋಕಾಂತರದಲ್ಲಿಯೂ ಫಲವನ್ನು ಕೊಡತಕ್ಕದೂ ಕೇವಲ ಶ್ರದ್ಧೆಯನ್ನೂ ನಂಬಿಕೆಯನ್ನೂ ಅವಲಂಬಿಸಿಕೊಂಡಿರುವದೂ ಆದ ಉಪಾಸನೆಗೂ ಕೇವಲ ವಸ್ತುತಂತ್ರವೂ, ವಿವೇಕಗಮ್ಯವೂ, ವಿಚಾರಸಮಕಾಲದಲ್ಲಿಯೇ ಅನುಭವ ಫಲವನ್ನು ಕೊಡತಕ್ಕದೂ, ಅನಂತರ ಯಾವ ಕರ್ತವ್ಯಶೇಷವೂ ಉಳಿಯದಂತೆ ಪೂರ್ಣ ಕೃತಕೃತ್ಯತೆಯನ್ನು ನೀಡತಕ್ಕದೂ ಆದ ಪರಿಶುದ್ಧತತ್ತ್ವ

ಜ್ಞಾನಕ್ಕೂ ಇರುವ ಈ ಅತಿಸೂಕ್ಷ್ಮವಾದ ವ್ಯತ್ಯಾಸವನ್ನು ಜಗತ್ತಿನಲ್ಲಿ ಶಂಕರರ ಹೊರತು ಬೇರೆ ಯಾವ ತತ್ತ್ವಜ್ಞಾನಿಯೂ ತೋರಿಸಿಲ್ಲವೆನ್ನಬಹುದು. ಆದರೆ, ಉಪಾಸನೆಗೂ ಜ್ಞಾನಕ್ಕೂ ಇಷ್ಟು ವ್ಯತ್ಯಾಸಗಳಿದ್ದರೂ ಶ್ರುತಿಯಲ್ಲಿ ಜ್ಞಾನಕ್ಕೆ ಸಾಧನವಾದ ಉಪಾಸನೆಯನ್ನೂ ಜ್ಞಾನವೆಂದೇ ಅನೇಕಸಂದರ್ಭಗಳಲ್ಲಿ ಉಪ ಚರಿಸಿರುವದರಿಂದ, ವಸ್ತುತಂತ್ರವಾದ ಕೇವಲಜ್ಞಾನವನ್ನು ಬಿಡಿಸಿ ತೋರಿಸು ವದಕ್ಕಾಗಿ ಶಂಕರರು 'ಸಮ್ಯಗ್ಜ್ಞಾನ'ವೆಂಬ ಶಬ್ದವನ್ನು ಬಳಸಿ ಸ್ಪಷ್ಟಪಡಿ ಸಿದ್ದಾರೆ. ಅವರು ತಮ್ಮ ಭಾಷ್ಯದಲ್ಲಿ ಮಿಥ್ಯಾಜ್ಞಾನಕ್ಕೂ ಮಿಥ್ಯಾಪ್ರತ್ಯಯಕ್ಕೂ ಪ್ರತಿಯೋಗಿಶಬ್ದವಾಗಿ ಸಮ್ಯಗ್ಜ್ಞಾನವನ್ನು ಬಳಸಿ, ಅದೇ ಅರ್ಥದಲ್ಲಿ ಸಮ್ಯಗ್ದರ್ಶನವೆಂಬ ಶಬ್ದವನ್ನು ಸ್ವತಂತ್ರವಾಗಿ ನೂರಾರುಸ್ಥಳಗಳಲ್ಲಿ ಉಪ ಯೋಗಿಸಿದ್ದಾರೆ.

ಸಮ್ಯಗ್ದರ್ಶನವೆಂದರೆ ಸಂಪೂರ್ಣದರ್ಶನ, ಪರಿಪೂರ್ಣದರ್ಶನ, ಸತ್ಯದರ್ಶನ– ಎಂದು ಮೊದಲಾಗಿಯೂ ಅರ್ಥಮಾಡಬಹುದು.

ಶಂಕರರು ಭಾಷ್ಯದಲ್ಲಿ, ಔಪನಿಷದಂ ದರ್ಶನಮ್ (ಸೂ. ಭಾ. ೨-೧-೩೭) ಪರಮಾರ್ಥದರ್ಶನಮ್ (ಬೃ. ಭಾ. ೨-೪-೧೨) ಆತ್ಮೈಕತ್ವದರ್ಶನಾತ್ಮಿಕಾಂ ಬ್ರಹ್ಮವಿದ್ಯಾಮ್ (ಬೃ. ಭಾ. ೫-೧-೧) ಅನನ್ಯದರ್ಶನ (ಬೃ.ಭಾ. ೩-೨-೧೨) ಬ್ರಹ್ಮದರ್ಶನ (ಬೃ. ಭಾ. ೪-೪-೧೯) ಬ್ರಹ್ಮಾತ್ಮೈಕತ್ವದರ್ಶನಮ್ (ಮುಂ. ಅವತರಣಿಕೆ) ಇತ್ಯಾದಿ ಬೇರೆಬೇರೆಯ ರೂಪಗಳಿಂದ ದರ್ಶನಶಬ್ದವನ್ನು ಉಪಯೋಗಿಸಿದ್ದಾರೆ.

**9.** ಜ್ಞಾನವು ವಸ್ತುತಂತ್ರವಾಗಿರುವಂತೆ ದರ್ಶನವೂ ವಸ್ತುತಂತ್ರವೆಂದು ಶಂಕರರು ಬೃಹದಾರಣ್ಯಕದಲ್ಲಿ ಮುನಿಕಾಂಡದ ಮೂರನೆಯ ಅಧ್ಯಾಯದ ಒಂದನೆಯ ಬ್ರಾಹ್ಮಣದ ಆರಂಭದಲ್ಲಿಯೇ ಹೇಳಿದ್ದಾರೆ :

> ಆಗಮೋಪಪತ್ತೀ ಹಿ ಆತ್ಮೈಕತ್ವಪ್ರಕಾಶನಾಯ ಪ್ರವೃತ್ತೇ ಶಕ್ನುತಃ ಕರತಲಗತಬಿಲ್ವಮಿವ ದರ್ಶಯಿತುಮ್। "ಶ್ರೋತವ್ಯೋ ಮನ್ತವ್ಯಃ" (೨–೪–೫) ಇತಿ ಹಿ ಉಕ್ತಮ್ । ತಸ್ಮಾತ್ ಆಗಮಾ-ರ್ಥಸ್ಯೈವ ಪರೀಕ್ಷಾಪೂರ್ವಕಂ ನಿರ್ಧಾರಣಾಯ ಯಾಜ್ಞವಲ್ಕೀ-ಯಂ ಕಾಣ್ಡಮ್ ಉಪಪತ್ತಿಪ್ರಧಾನಮ್ ಆರಭ್ಯತೇ ॥
>
> (ಬೃ. ಭಾ. ಅವ. ೩–೧.೧)

"ಆಗಮೋಪಪತ್ತಿಗಳೆರಡೂ ಆತ್ಮೈಕತ್ವವನ್ನು ಪ್ರಕಾಶಪಡಿಸುವದಕ್ಕೆ ಪ್ರವೃತ್ತವಾದರೆ ಅದನ್ನು ಅಂಗೈಯಲ್ಲಿರುವ ಬಿಲ್ವಫಲದಂತೆ ದರ್ಶನಮಾಡಿಸಲು ಸಮರ್ಥವಾಗುತ್ತವೆ. "ಆತ್ಮನನ್ನು ಶ್ರವಣಮಾಡಬೇಕು, ಮನನಮಾಡಬೇಕು" ಎಂದಲ್ಲವೆ, ಹಿಂದೆ ಹೇಳಿದೆ? ಆದ್ದರಿಂದ ಆಗಮಾರ್ಥವನ್ನೇ ಪರೀಕ್ಷಾಪೂರ್ವಕವಾಗಿ

ಗೊತ್ತುಪಡಿಸುವದಕ್ಕಾಗಿ ಉಪಪತ್ತಿಪ್ರಧಾನವಾದ ಯಾಜ್ಞವಲ್ಕೀಯಕಾಂಡವನ್ನು ಆರಂಭಿಸಿರುತ್ತದೆ. (ಬೃ. ಭಾ. ಅವ. ೩-೧-೧)

ಅಂಗೈಯಲ್ಲಿರುವ ದುಂಡಾದ ಬಿಲ್ವಫಲವನ್ನಾಗಲಿ ಅಥವಾ ನೆಲ್ಲಿಯಕಾಯಿಯನ್ನಾಗಲಿ ಕಣ್ಣಿಟ್ಟು, ಮನಮುಟ್ಟಿ ಏಕಾಗ್ರತೆಯಿಂದ ನೋಡಿದರೆ ಆ ವಸ್ತುವಿನ ಎಲ್ಲ ಭಾಗವೂ ಬಹಳಮಟ್ಟಿಗೆ ಕಾಣುವದರಿಂದ (ದರ್ಶನವಾಗುವದರಿಂದ) ಅದರ ನಿಜರೂಪವು ಹೇಗಿದೆಯೋ ಹಾಗೇ ಅರಿವಾಗುತ್ತದೆ. ಆ ವಸ್ತುವಿನ ಅರಿವು ಆ ವಸ್ತುವಿಗೆ ಅಧೀನವಾಗಿದೆಯೇ ಹೊರತು ನಮ್ಮ ಇಚ್ಛೆಯನ್ನೇನೂ ಅವಲಂಬಿಸಿಲ್ಲ. ಇದೇ ವಸ್ತುತಂತ್ರವಾದ ಜ್ಞಾನ. ಆದ್ದರಿಂದ ದರ್ಶನವು ಅದರಲ್ಲಿಯೂ ಸಮ್ಯಗ್ದರ್ಶನವು ಸಮ್ಯಗ್ಜ್ಞಾನದಂತೆ ವಸ್ತುತಂತ್ರವಾದ ಜ್ಞಾನವೆಂದು ಶಂಕರರು ಹೇಳಿದ್ದಾರೆ. ಲೌಕಿಕದೃಷ್ಟಾಂತದಲ್ಲಿರುವ ವಸ್ತುವು ಆಧ್ಯಾತ್ಮಿಕವಾಗಿ ಆತ್ಮನಾಗುತ್ತದೆ.

**10.** ನ ತು ವಸ್ತು 'ಏವಮ್' 'ನೈವಮ್', 'ಅಸ್ತಿ' 'ನಾಸ್ತಿ' ಇತಿ ವಾ ವಿಕಲ್ಪ್ಯತೇ । ವಿಕಲ್ಪನಾಸ್ತು ಪುರುಷಬುದ್ಧ್ಯಪೇಕ್ಷಾಃ, ನ ವಸ್ತುಯಾಥಾತ್ಮ್ಯಜ್ಞಾನಂ ಪುರುಷಬುದ್ಧ್ಯಪೇಕ್ಷಮ್, ಕಿಂ ತರ್ಹಿ ವಸ್ತುತನ್ತ್ರಮೇವ ತತ್ । ತತ್ರ ಏವಂ ಸತಿ ಬ್ರಹ್ಮಜ್ಞಾನಮಪಿ ವಸ್ತುತನ್ತ್ರಮೇವ, ಭೂತವಸ್ತುವಿಷಯತ್ವಾತ್ ॥ (ಸೂ. ಭಾ. ೧-೧-೨)

....ಆದರೆ, (ಸಿದ್ಧ) ವಸ್ತುವನ್ನು 'ಹೀಗೆ', 'ಹೀಗಲ್ಲ' ಎಂದಾಗಲಿ, 'ಇದೆ', 'ಇಲ್ಲ' ಎಂದಾಗಲಿ ವಿಕಲ್ಪನೆಮಾಡುವದಕ್ಕೆ ಆಗಲಾರದು. ವಿಕಲ್ಪನೆಗಳಾದರೋ ಪುರುಷನ ಬುದ್ಧಿಯನ್ನು ಅನುಸರಿಸುತ್ತವೆ. ವಸ್ತುವಿನ ಯಥಾರ್ಥಜ್ಞಾನವು ಪುರುಷನ ಬುದ್ಧಿಯನ್ನು ಅನುಸರಿಸಿ ಉಂಟಾಗುವದಿಲ್ಲ. ಮತ್ತೇನೆಂದರೆ ವಸ್ತುವಿಗೆ ಅಧೀನವಾಗಿಯೇ ಅದು ಉಂಟಾಗುವದು. ಇಲ್ಲಿ, ಹೀಗಿರುವದರಿಂದ ಬ್ರಹ್ಮಜ್ಞಾನವೂ ವಸ್ತುವಿಗಧೀನವಾಗಿಯೇ ಇರುತ್ತದೆ-ಎನ್ನಬೇಕು. ಏಕೆಂದರೆ ಇದಕ್ಕೆ ಭೂತವಸ್ತುವೇ ವಿಷಯವಾಗಿರುತ್ತದೆ. (ಸೂ. ಭಾ. ೧-೧-೨) ಆದ್ದರಿಂದ ಆತ್ಮವಿಷಯದ ಸಮ್ಯಗ್ಜ್ಞಾನವು ವಸ್ತುತಂತ್ರವಾದ ಯಥಾರ್ಥಜ್ಞಾನವೇ ಹೊರತು, ಭಾವನಾರೂಪವಾದ ಉಪಾಸನೆಯಲ್ಲ.

## ಸಮ್ಯಗ್ದರ್ಶನವೆಂದರೆ ಅದ್ವೈತದರ್ಶನ

**11.** ಶಾಸ್ತ್ರೋಪಪತ್ತಿಭ್ಯಾಮ್ ಅವಧಾರಿತತ್ವಾತ್ ಅದ್ವಯಾತ್ಮದರ್ಶನಂ ಸಮ್ಯಗ್ದರ್ಶನಮ್ । ತದ್ಬಾಹ್ಯತ್ವಾತ್

ಮಿಥ್ಯಾದರ್ಶನಮ್ ಅನ್ಯತ್ । ಇತಶ್ಚ ಮಿಥ್ಯಾದರ್ಶನಂ ದ್ವೈತಿನಾಮ್, ರಾಗದ್ವೇಷಾದಿದೋಷಾಸ್ಪದತ್ವಾತ್ ॥

(ಗೌ. ಕಾ. ಭಾ. ೩-೧೬)

"ಶಾಸ್ತ್ರಪ್ರಮಾಣ ಮತ್ತು ಯುಕ್ತಿ ಈ ಎರಡರಿಂದಲೂ ನಿರ್ಧರಿಸಿರುವದರಿಂದ ಅದ್ವಯಾತ್ಮದರ್ಶನವೇ ಸಮ್ಯಗ್ದರ್ಶನ- ಎಂದರೆ ಸರಿಯಾದ ದರ್ಶನವು – ಆ ಎರಡಕ್ಕೂ ಹೊರಚ್ಚಾಗಿರುವದರಿಂದ ಮಿಕ್ಕದ್ದು ತಪ್ಪು ದರ್ಶನವು. ದ್ವೈತಿಗಳದು ತಪ್ಪುದರ್ಶನವೆಂಬುದು ಈ ಕಾರಣದಿಂದಲೂ ಸಿದ್ಧವಾಗುತ್ತದೆ. ಅದೇಕೆಂದರೆ, ಅದು ರಾಗ, ದ್ವೇಷ- ಮುಂತಾದ ದೋಷಗಳಿಗೆ ಅವಕಾಶವುಳ್ಳದ್ದಾಗಿರುತ್ತದೆ.

....ತೈಃ ಅನ್ಯೋನ್ಯವಿರೋಧಿಭಿಃ ಅಸ್ಮದೀಯಃ ಅಯಂ ವೈದಿಕಃ ಸರ್ವಾನನ್ಯತ್ವಾತ್ ಆತ್ಮೈಕತ್ವದರ್ಶನಪಕ್ಷಃ ನ ವಿರುಧ್ಯತೇ । ಯಥಾ ಸ್ವಹಸ್ತಪಾದಾದಿಭಿಃ । ಏವಂ ರಾಗದ್ವೇಷಾದಿದೋಷಾನಾಸ್ಪದತ್ವಾತ್ ಆತ್ಮೈಕತ್ವಬುದ್ಧಿರೇವ ಸಮ್ಯಗ್ದರ್ಶನಮ್ ಇತಿ ಅಭಿಪ್ರಾಯಃ ॥ (ಗೌ. ಕಾ. ೩-೧೮)

ಹೀಗೆ ರಾಗದ್ವೇಷಗಳಿಂದ ಕೂಡಿದವರಾದ (ದ್ವೈತಿಗಳು) ತಮ್ಮ ತಮ್ಮ ಸಿದ್ಧಾಂತವಾಗಿರುವ ದರ್ಶನದ ಕಾರಣದಿಂದಲೇ ಒಬ್ಬರಿಗೊಬ್ಬರು ವಿರೋಧಿಗಳಾಗಿರುತ್ತಾರೆ. ಹಾಗೆ ಒಬ್ಬರಿಗೊಬ್ಬರು ವಿರೋಧಿಗಳಾಗಿರುವ ಅವರಿಗೆ ಈ ವೈದಿಕವಾದ ಆತ್ಮೈಕತ್ವದರ್ಶನವೆಂಬ ನಮ್ಮ ಪಕ್ಷವು, ಯಾವದಕ್ಕೂ ಬೇರೆಯಲ್ಲವಾಗಿರುವದರಿಂದ ವಿರುದ್ಧವಾಗಿರುವದಿಲ್ಲ; ಹೇಗೆ ತನ್ನ ಕೈಕಾಲು-ಮುಂತಾದವುಗಳಿಗೆ ತಾನು ವಿರೋಧಿಯಲ್ಲವೋ ಹಾಗೆಯೇ ಇದು. ಹೀಗೆ ರಾಗ, ದ್ವೇಷ- ಮುಂತಾದ ದೋಷಗಳಿಗೆ ಅವಕಾಶವಿಲ್ಲದೆ ಇರುವದರಿಂದ ಆತ್ಮೈಕತ್ವಬುದ್ಧಿಯೇ ಸಮ್ಯಗ್ದರ್ಶನ- ಸರಿಯಾದ ತಿಳಿವಳಿಕೆ- ಎಂದು ಅಭಿಪ್ರಾಯ (ಮಾಂ. ಗೌ. ಕಾ. ಭಾ. ೩-೧೮).

12. ....ಕ್ಲೇಶಾನಾಸ್ಪದತ್ವಾತ್ ಸಮ್ಯಗ್ದರ್ಶನಮ್ ಇತಿ ಅದ್ವೈತದರ್ಶನಸ್ತುತಯೇ ॥ (ಮಾಂ. ಗೌ. ಕಾ. ಭಾ. ೪ರ ಆರಂಭ)

ಯಾವ ಕ್ಲೇಶಕ್ಕೂ ಆಶ್ರಯವಿಲ್ಲದ್ದರಿಂದ ಇದು ಸಮ್ಯಗ್ದರ್ಶನವು- ಸರಿಯಾದ ದರ್ಶನವು- ಎಂದು ಅದ್ವೈತದರ್ಶನವನ್ನು ಹೊಗಳುವದಕ್ಕಾಗಿ ಹೀಗೆ ಸೂಚಿಸಲಾಗಿದೆ. ಆದ್ದರಿಂದ ಇಲ್ಲಿ ಬೇರೆಬೇರೆಯ ದರ್ಶನಗಳು ಒಂದಕ್ಕೊಂದಕ್ಕೆ ವಿರುದ್ಧವಾಗಿರುವದರಿಂದ ಅವು ಸರಿಯಾದ ದರ್ಶನಗಳಲ್ಲವೆಂಬುದನ್ನು ವಿಸ್ತಾರವಾಗಿ ತೋರಿಸಿಕೊಟ್ಟು ಅವನ್ನು ಅಲ್ಲಗಳೆಯುವ ಮೂಲಕವಾಗಿ ಆವೀತನ್ಯಾಯದಿಂದ (ಅನ್ವಯವ್ಯತಿರೇಕ) ಅದ್ವೈತದರ್ಶನವನ್ನು ಸಿದ್ಧಮಾಡಿದೆ.

## 13. ಅದ್ವೈತದರ್ಶನವೇ ಸಮ್ಯಗ್ದರ್ಶನ.

### ಆತ್ಮದರ್ಶನಕ್ಕೆ ಸಾಧನಗಳು

**ಅಧುನಾ ಸತ್ಯಾದೀನಿ ಭಿಕ್ಷೋಃ ಸಮ್ಯಗ್ಜ್ಞಾನ (ಸಮ್ಯಗ್ದರ್ಶನ) ಸಹಕಾರೀಣಿ ಸಾಧನಾನಿ ವಿಧೀಯನ್ತೇ ನಿವೃತ್ತಿಪ್ರಧಾನಾನಿ–**

ಈಗ ಸಮ್ಯಗ್ಜ್ಞಾನಕ್ಕೆ (ಸಮ್ಯಗ್ದರ್ಶನಕ್ಕೆ)– ಸರಿಯಾದ ಜ್ಞಾನಕ್ಕೆ– ಸಹಕಾರಿಗಳಾದ ಸತ್ಯವೇ ಮುಂತಾದ ನಿವೃತ್ತಿಪ್ರಧಾನವಾದ ಸಾಧನಗಳನ್ನು ಸಂನ್ಯಾಸಿಗೆ ವಿಧಿಸಲಾಗುತ್ತದೆ.

ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ
ಸಮ್ಯಗ್ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್ ।
ಅನ್ತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ
ಯಂ ಪಶ್ಯನ್ತಿ ಯತಯಃ ಕ್ಷೀಣದೋಷಾಃ ॥
(ಮುಂ. ೩–೧–೫)

"ಈ ಆತ್ಮನು ನಿತ್ಯವಾಗಿ ಸತ್ಯದಿಂದಲೂ (ಸುಳ್ಳುಹೇಳುವದನ್ನು ಬಿಡುವದರಿಂದಲೂ) ನಿತ್ಯವಾದ ತಪಸ್ಸಿನಿಂದಲೂ ("ಮನಸಶ್ಚೇನ್ದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ । ತಜ್ಜ್ಯಾಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರ ಉಚ್ಯತೇ" (ಮೋ. ಧ. ೭೫೦–೪)– ಮನಸ್ಸಿನ ಮತ್ತು ಇಂದ್ರಿಯಗಳ ಏಕಾಗ್ರತೆಯು ಹೆಚ್ಚಿನ ತಪಸ್ಸು–) ಸಮ್ಯಗ್ಜ್ಞಾನದಿಂದಲೂ (ಯಥಾಭೂತಾತ್ಮದರ್ಶನೇನ– ಸರಿಯಾದ ಜ್ಞಾನದಿಂದಲೂ ಎಂದರೆ, ಆತ್ಮನನ್ನು ಅವನು ಹೇಗಿರುವನೋ ಹಾಗೆಯೇ– ವಸ್ತುತಂತ್ರವಾಗಿ– ನಿರಂತರವಾಗಿ ಕಂಡುಕೊಳ್ಳುವದರಿಂದಲೂ) ಸ್ತ್ರೀಸಂಭೋಗವಿಲ್ಲದಿರುವದರಿಂದಲೂ ('ಸ್ಮರಣಂ ಕೀರ್ತನಂ ಕೇಳಿಃ ಪ್ರೇಕ್ಷಣಂ ಗುಹ್ಯಭಾಷಣಮ್ । ಸಙ್ಕಲ್ಪೋಽಧ್ಯವಸಾಯಶ್ಚ ಕ್ರಿಯಾನಿರ್ವೃತಿರೇವ ಚ ॥– ಹೀಗೆ ಮೈಥುನವು ಎಂಟು ಬಗೆ ; ಇವುಗಳಲ್ಲಿ ಯಾವದೊಂದೂ ಇಲ್ಲದಿರುವದು ಬ್ರಹ್ಮಚರ್ಯವು.) ಅಂತಶ್ಶರೀರದಲ್ಲಿ ಎಂದರೆ, ಹೃದಯಪುಂಡರೀಕದ ಆಕಾಶದಲ್ಲಿ ಜ್ಯೋತಿರ್ಮಯನಾಗಿರುವ– ಬಂಗಾರದ ಬಣ್ಣವುಳ್ಳವನಾಗಿ, ಪರಿಶುದ್ಧನಾಗಿರುವ, ಈ ಆತ್ಮನನ್ನು ರಾಗದ್ವೇಷಾದಿಚಿತ್ತಮಲಗಳನ್ನು ಕಳೆದುಕೊಂಡಿರುವ ಪ್ರಯತ್ನಶೀಲರಾದ ಸಂನ್ಯಾಸಿಗಳು ಕಂಡುಕೊಳ್ಳುವರು (ಮುಂ. ಭಾ. ೩–೧–೫)

**14. ಯಸ್ಮಾತ್ ಇಹೈವ ಆತ್ಮನೋ ದರ್ಶನಮ್ ಆದರ್ಶಸ್ಥಸ್ಯೇವ ಮುಖಸ್ಯ ಸ್ಪಷ್ಟಮುಪಪದ್ಯತೇ ನ ಲೋಕಾನ್ತರೇಷು ಬ್ರಹ್ಮಲೋಕಾದನ್ಯತ್ರ । ಸ ಚ ದುಷ್ಪ್ರಾಪಃ ॥ (ಕಾ. ಭಾ. ೨–೩–೪)**

ಏಕೆಂದರೆ, ಇಲ್ಲಿ ಮಾತ್ರ ಕನ್ನಡಿಯಲ್ಲಿ ಮುಖವನ್ನು ಕಾಣುವಂತೆ ಆತ್ಮನನ್ನು ಸ್ಪಷ್ಟವಾಗಿ ಕಾಣಬಹುದೇ ಹೊರತು, ಮಿಕ್ಕ ಲೋಕಗಳಲ್ಲಿ- ಬ್ರಹ್ಮಲೋಕವೊಂದನ್ನು ಬಿಟ್ಟರೆ ಎಲ್ಲಿಯೂ ಕಾಣುವಹಾಗಿಲ್ಲ. ಬ್ರಹ್ಮಲೋಕವನ್ನು ಪಡೆಯುವದು ಬಹಳ ಕಷ್ಟವಾಗಿರುತ್ತದೆ.

**ಯಥಾ ಆದರ್ಶೇ ಪ್ರತಿಬಿಮ್ಬಭೂತಮ್ ಆತ್ಮಾನಂ ಪಶ್ಯತಿ ಲೋಕಃ ಅತ್ಯನ್ತವಿವಿಕ್ತಮ್, ತಥಾ ಇಹ ಆತ್ಮನಿ ಸ್ವಬುದ್ಧೌ ಆದರ್ಶವನ್ನಿರ್ಮಲೀಭೂತಾಯಾಂ ವಿವಿಕ್ತಮಾತ್ಮನೋ ದರ್ಶನಂ ಭವತಿ.... ತಸ್ಮಾತ್ ಆತ್ಮದರ್ಶನಾಯ ಇಹೈವ ಯತ್ನಃ ಕರ್ತವ್ಯಃ॥**

(ಕಾ. ಭಾ. ೨-೩-೫)

ಕನ್ನಡಿಯಲ್ಲಿ ಪ್ರತಿಬಿಂಬಿತವಾಗಿರುವ ತಮ್ಮನ್ನು ಹೇಗೆ ಅತ್ಯಂತವಿಂಗಡವಾಗಿ -ಸ್ಪಷ್ಟವಾಗಿ- ಜನರು ಕಾಣುವರೋ ಹಾಗೆ ಇಲ್ಲಿ ಆತ್ಮದಲ್ಲಿ ಎಂದರೆ, ಕನ್ನಡಿಯಂತೆ ನಿರ್ಮಲವಾಗಿರುವ ತಮ್ಮ ಬುದ್ಧಿಯಲ್ಲಿ ವಿಂಗಡವಾಗಿ-ಸ್ಫುಟವಾಗಿ- ವಿಶಿಷ್ಟವಾಗಿ-ಆತ್ಮನ ದರ್ಶನ (ಸಮ್ಯಗ್ದರ್ಶನ)ವಾಗುತ್ತದೆ. ಪಿತೃಲೋಕ, ಗಂಧರ್ವಲೋಕ- ಮೊದಲಾದ ಲೋಕಗಳೆಲ್ಲವೂ ಭೋಗಭೂಮಿಗಳಾದ್ದರಿಂದ ಅವುಗಳಲ್ಲಿ ಆತ್ಮನನ್ನು ಸ್ಫುಟವಾಗಿ ಕಾಣುವದಾಗುವದಿಲ್ಲ. ಬ್ರಹ್ಮಲೋಕವೊಂದರಲ್ಲಿ ಮಾತ್ರ ನೆರಳುಬಿಸಿಲುಗಳಂತೆ ಅತ್ಯಂತ ವಿಂಗಡವಾಗಿ ಕಾಣಬಹುದು. ಆದರೆ ಆ ಬ್ರಹ್ಮಲೋಕವನ್ನು ಪಡೆಯುವದೆಂಬುದು ಅತಿಕಷ್ಟ. ಆದ್ದರಿಂದ ಆತ್ಮದರ್ಶನಕ್ಕಾಗಿ (ಸಮ್ಯಗ್ದರ್ಶನಕ್ಕಾಗಿ) ಇಲ್ಲಿಯೇ ಯತ್ನವನ್ನು ಮಾಡಬೇಕು.

**15. ಏವಂ ಪುರುಷೇ ಆತ್ಮನಿ ಸರ್ವಂ ಪ್ರವಿಲಾಪ್ಯ ನಾಮರೂಪ ಕರ್ಮತ್ರಯಂ ಯನ್ಮಿಥ್ಯಾಜ್ಞಾನವಿಜೃಮ್ಭಿತಂ ಕ್ರಿಯಾಕಾರಕಫಲ ಲಕ್ಷಣಂ ಸ್ವಾತ್ಮಯಾಥಾತ್ಮ್ಯಜ್ಞಾನೇನ ಮರೀಚ್ಯುದಕರಜ್ಜು ಸರ್ಪಗಗನಮಲಾನೀವ ಮರೀಚಿರಜ್ಜುಗಗನಸ್ವರೂಪದರ್ಶನೇನೈವ ಸ್ವಸ್ಥಃ ಪ್ರಶಾನ್ತಾತ್ಮಾ ಕೃತಕೃತ್ಯೋ ಭವತಿ ಯತಃ ॥**

(ಕಾಠಕ ಭಾ. ೧-೩-೧೩)

"ಹೀಗೆ ಮಿಥ್ಯಾಜ್ಞಾನದಿಂದ ಹಬ್ಬಿರುವ ಕ್ರಿಯೆ, ಕಾರಕ, ಫಲ-ಇವುಗಳ ರೂಪವಾದ ನಾಮರೂಪಕರ್ಮಗಳೆಂಬ ಮೂರಾಗಿರುವದೆಲ್ಲವನ್ನೂ- ಬಿಸಿಲು ಕುದುರೆಯ ನೀರು, ಹಗ್ಗದ ಹಾವು, ಆಕಾಶದ ಕಶ್ಮಲ-ಇವುಗಳನ್ನು ಬಿಸಿಲು, ಹಗ್ಗ, ಆಕಾಶ-ಇವುಗಳ ಸ್ವರೂಪವನ್ನು ಕಂಡುಕೊಳ್ಳುವ ಮಾತ್ರದಿಂದಲೇ ಲಯ ಮಾಡುವಂತೆ-ತನ್ನ ಆತ್ಮನ ನಿಜವನ್ನು ಅರಿತುಕೊಳ್ಳುವದರಿಂದಲೇ ಪುರುಷನೆಂಬ ಆತ್ಮನಲ್ಲಿ ಲಯಮಾಡಿಕೊಂಡು ತನ್ನಲ್ಲಿ ತಾನು ನಿಂತು, ಅಂತಃಕರಣದಲ್ಲಿ ಹೆಚ್ಚಿನ ಶಾಂತಿಯನ್ನು ಹೊಂದಿ ಕೃತಕೃತ್ಯನಾಗುತ್ತಾನಲ್ಲವೆ ?

16. ....ಈಕ್ಷತೇಸ್ತು ತಥಾಭೂತಮೇವ ವಸ್ತು ಲೋಕೇ ಕರ್ಮ ದೃಷ್ಟಮ್ ಇತ್ಯತಃ ಪರಮಾತ್ಮೈವ ಅಯಂ ಸಮ್ಯಗ್ದರ್ಶನ ವಿಷಯಭೂತಃ ಈಕ್ಷತಿಕರ್ಮತ್ವೇನ ವ್ಯಪದಿಷ್ಟ ಇತಿ ಗಮ್ಯತೇ ॥
(ಸೂ. ಭಾ. ೧-೩-೧೩)

ಆದರೆ, ಈಕ್ಷಣಕ್ಕೆ ಸತ್ಯವಾದ ವಸ್ತುವೇ ಕರ್ಮವಾಗಿರುವದು ಕಂಡು ಬಂದಿದೆ. (ಹಗ್ಗದ ಹಾವು ಮುಂತಾದವೂ ಈಕ್ಷಣಕ್ಕೆ ವಿಷಯವಾಗಿರುವಂತೆ ತೋರಿದರೂ ಅಲ್ಲಿ ನಿಜವಾದ ಈಕ್ಷಣವಾಗಲಿ ನಿಜವಾದ ವಸ್ತುವಾಗಲಿ ಇರುವದಿಲ್ಲ. ನಿಜವಾದ ಈಕ್ಷಣಕ್ಕೆ ನೋಟಕ್ಕೆ ಅನುಗುಣವಾಗಿಯೇ ಅದರ ವಿಷಯವಾದ ವಸ್ತುವಿರಬೇಕೆಂದು ಇಲ್ಲಿ ಹೇಳಿದೆ.) ಆದ್ದರಿಂದ ಸಮ್ಯಗ್ದರ್ಶನಕ್ಕೆ ವಿಷಯನಾಗಿರುವ (ಸರಿಯಾದ ವೇದಾಂತಜ್ಞಾನದಿಂದ ತಿಳಿಯಬರುವ ಎಂದೇ ಅರ್ಥ ; ಪರಮಾತ್ಮನು ವಿಷಯನಾಗುತ್ತಾನೆ ಎಂದೇನೂ ತಾತ್ಪರ್ಯವಲ್ಲ) ಪರಮಾತ್ಮನನ್ನೇ ಈಕ್ಷಣಕ್ಕೆ ಕರ್ಮವೆಂದು ಹೇಳಿದೆ ಎಂದು ನಿಶ್ಚಯವಾಗುತ್ತದೆ.

ತ್ರಿಮಾತ್ರೇಣ ಓಂಕಾರೇಣ ಆಲಮ್ಬನೇನ ಪರಮಾತ್ಮಾನಮ್ ಅಭಿಧ್ಯಾಯತಃ ಫಲಂ ಬ್ರಹ್ಮಲೋಕಪ್ರಾಪ್ತಿಃ ಕ್ರಮೇಣ ಚ ಸಮ್ಯಗ್ದರ್ಶನೋತ್ಪತ್ತಿಃ ಇತಿ ॥ (ಸೂ. ಭಾ. ೧-೩-೧೩)

ಮೂರು ಮಾತ್ರೆಗಳ ಓಂಕಾರವೆಂಬ ಆಲಂಬನದಿಂದ (ಓಂಕಾರವೆಂಬ ಪ್ರತೀಕದಿಂದ) ಪರಮಾತ್ಮನನ್ನು ಅಭಿಧ್ಯಾನ (ಉಪಾಸನೆ)ಮಾಡುವವನಿಗೆ ಬ್ರಹ್ಮಲೋಕಪ್ರಾಪ್ತಿಯೂ ಕಾಲಕ್ರಮದಿಂದ ಅಲ್ಲಿ ಸಮ್ಯಗ್ದರ್ಶನ (ಸರಿಯಾದ ಜ್ಞಾನವು) ಉಂಟಾಗುವದೂ ಫಲವು. (ಸೂ. ಭಾ. ೪-೨-೧೦ರಲ್ಲಿ ಬ್ರಹ್ಮಲೋಕದಲ್ಲಿ ಜ್ಞಾನವುಂಟಾಗಬಹುದೆಂದು ಹೇಳಿದೆ.) ಆದ್ದರಿಂದ ಇದು ಕ್ರಮಮುಕ್ತಿಯ ಅಭಿಪ್ರಾಯದಿಂದ ಹೇಳಿದ್ದಾದ್ದರಿಂದ ಯಾವ ದೋಷವೂ ಇಲ್ಲ.

17. ತೇಷಾಮ್ ಸರ್ವೇಷಾಂ ಆತ್ಮೈಕತ್ವಸಮ್ಯಗ್ದರ್ಶನಪ್ರತಿಪಕ್ಷಭೂತಾನಾಂ ಪ್ರತಿಬೋಧಾಯ ಇದಂ ಶಾರೀರಕಮ್ ಆರಬ್ಧಮ್ ॥ (ಸೂ. ಭಾ. ೧-೩ ೧೯)

ಆತ್ಮೈಕತ್ವದ ಸಮ್ಯಗ್ದರ್ಶನಕ್ಕೆ ಪ್ರತಿಪಕ್ಷದವರಾಗಿರುವ ಅವರೆಲ್ಲರ ತಿಳಿವಳಿಕೆಗಾಗಿ ಕೂಟಸ್ಥನಿತ್ಯನೂ ವಿಜ್ಞಾನಧಾತುವೂ ಆಗಿರುವ ಪರಮೇಶ್ವರನೊಬ್ಬನೇ ಅವಿದ್ಯೆಯಿಂದ- ಮಾಯೆಯಿಂದ ಮಾಯಾವಿಯು ಅನೇಕವಾಗಿ ಕಾಣುವಂತೆ-ಅನೇಕ ವಿಧವಾಗಿ ಕಾಣುತ್ತಾನೆಯೇ ಹೊರತು, ಇನ್ನೊಂದು ವಿಜ್ಞಾನಧಾತುವಿಲ್ಲ-ಎಂದು ತಿಳಿಸುವ ಈ ಶಾರೀರಕವನ್ನು (ಶಾರೀರಕನ ಅಥವಾ ಜೀವನ ಪರಮಾರ್ಥಸ್ವರೂಪವನ್ನು ನಿರ್ಣಯಿಸುವದರಿಂದ ಈ ಶಾಸ್ತ್ರಕ್ಕೆ

ಶಾರೀರಕಮೀಮಾಂಸಾಶಾಸ್ತ್ರ- ವೇದಾಂತಮೀಮಾಂಸಾಶಾಸ್ತ್ರ-ಎಂದು ಹೆಸರು) ಪ್ರಾರಂಭಿಸಿರುತ್ತದೆ.

18. ಸ್ಥಿತೇ ಚ ಕ್ಷೇತ್ರಜ್ಞಪರಮಾತ್ಮೈಕತ್ವವಿಷಯೇ ಸಮ್ಯಗ್ದರ್ಶನೇ ಕ್ಷೇತ್ರಜ್ಞಃ ಪರಮಾತ್ಮಾ ಇತಿ ನಾಮಮಾತ್ರ ಭೇದಾತ್.... ಯೇ ತು ನಿರ್ಬನ್ಧಂ ಕುರ್ವನ್ತಿ ತೇ ವೇದಾನ್ತಾರ್ಥಂ ಬಾಧಮಾನಾಃ ಶ್ರೇಯೋದ್ವಾರಂ ಸಮ್ಯಗ್ದರ್ಶನಮೇವ ಬಾಧನ್ತೇ ॥ (ಸೂ. ಭಾ. ೧-೪-೨೨)

ಕ್ಷೇತ್ರಜ್ಞಪರಮಾತ್ಮೈಕತ್ವವಿಷಯಕವಾದ ಸಮ್ಯಗ್ದರ್ಶನವಿರುತ್ತಿರುವಲ್ಲಿ ಕ್ಷೇತ್ರಜ್ಞ, ಪರಮಾತ್ಮ- ಎಂಬುದು ನಾಮಮಾತ್ರದ ಭೇದವಾಗಿರುವದರಿಂದ ....ಆತ್ಮಭೇದವಿಷಯಕವಾದ ನಿರ್ಬಂಧವು ನಿರರ್ಥಕವು. ಯಾರಾದರೆ ಕ್ಷೇತ್ರಜ್ಞಪರಮಾತ್ಮರು ಬೇರೆಬೇರೆ ಎಂದು ನಿರ್ಬಂಧವನ್ನು ಮಾಡುವರೋ ಅವರು ವೇದಾಂತಾರ್ಥವನ್ನು ಬಾಧಿಸುತ್ತಾರಾದ್ದರಿಂದ ಮೋಕ್ಷದ್ವಾರವಾದ ಸಮ್ಯಗ್ದರ್ಶನವನ್ನೇ ಬಾಧಿಸಿದವರಾಗುತ್ತಾರೆ.

19. ಮೋಕ್ಷಸಾಧನಮೇವ ಹಿ ಸಮ್ಯಗ್ದರ್ಶನಮ್ ಅಧಿಕೃತ್ಯ ತಾಃ ಪ್ರಣೀತಾಃ ॥ (ಸೂ. ಭಾ. ೨-೧-೧)

ಏಕೆಂದರೆ, ಮೋಕ್ಷಸಾಧನವಾಗಿರುವ ಸಮ್ಯಗ್ದರ್ಶನವನ್ನು ಕುರಿತೇ ಅವುಗಳನ್ನು ರಚಿಸಲಾಗಿರುತ್ತದೆ.

20. ಸಮ್ಯಗ್ದರ್ಶನಾಭ್ಯುಪಾಯೋ ಹಿ ಯೋಗೋ ವೇದೇ ವಿಹಿತಃ 'ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ' (ಬೃ. ೨-೪-೫) ಇತಿ ।....ಯೋಗಶಾಸ್ತ್ರೇಽಪಿ 'ಅಥ ತತ್ತ್ವದರ್ಶನೋಪಾಯೋ ಯೋಗಃ'(?) ಇತಿ ಸಮ್ಯಗ್ದರ್ಶನಾಭ್ಯುಪಾಯತ್ವೇನೈವ ಯೋಗೋಽಙ್ಗೀಕ್ರಿಯತೇ ॥ (ಸೂ. ಭಾ. ೨-೧-೩)

ಇಲ್ಲಿ ಹೆಚ್ಚಿನ ಆಶಂಕೆಯೂ ಇದೆ. ಹೇಗೆಂದರೆ, 'ಶ್ರವಣಮಾಡತಕ್ಕದ್ದು, ಮನನಮಾಡತಕ್ಕದ್ದು, ನಿದಿಧ್ಯಾಸನಮಾಡತಕ್ಕದ್ದು (ಬೃ. ೨-೪-೫) ಎಂದು ವೇದದಲ್ಲಿ ಸಮ್ಯಗ್ದರ್ಶನಕ್ಕೆ ಉಪಾಯವಾಗಿ ಯೋಗ (ನಿದಿಧ್ಯಾಸನ)ವನ್ನು ವಿಧಿಸಿರುತ್ತದೆ. ಯೋಗಶಾಸ್ತ್ರದಲ್ಲಿಯೂ "ಇನ್ನು ತತ್ತ್ವದರ್ಶನಕ್ಕೆ ಉಪಾಯವಾದ ಯೋಗವನ್ನು ಹೇಳುತ್ತೇವೆ" (?) ಎಂದು ಸಮ್ಯಗ್ದರ್ಶನಕ್ಕೆ ಉಪಾಯವಾಗಿಯೇ ಯೋಗವನ್ನು ಅಂಗೀಕರಿಸಿರುತ್ತದೆ.

ಈ ಮೇಲಿನ ಭಾಷ್ಯಭಾಗದಲ್ಲಿ ಅತ್ಯಂತಮಹತ್ತ್ವವಾದೊಂದು ವಿಷಯವಿರುವದನ್ನು ಇಲ್ಲಿ ನಾವು ಗಮನಿಸಬೇಕು. ಈ ಪುಟ್ಟಪುಸ್ತಿಕೆಗೆ ಭಗವತ್

ಪ್ರೇರಣೆಯಿಂದ ಇಟ್ಟಿರುವ 'ಸಮ್ಯಗ್ದರ್ಶನ' ಎಂಬ ಸರಿಯಾದ ಹೆಸರಿನ ಔಚಿತ್ಯವನ್ನು ಇಲ್ಲಿ ಕಾಣಬಹುದು. ಮೈತ್ರೇಯಿಗೆ ಯಾಜ್ಞವಲ್ಕ್ಯರು ಮಾಡುವ ಉಪದೇಶದ ಪ್ರಾರಂಭದಲ್ಲಿ....'ಶ್ರೋತವ್ಯೋ ಮನ್ತವ್ಯೋ' ಎಂದು ಮೊದಲಾಗಿ ಹೇಳುವದಕ್ಕೆ ಮೊದಲು 'ದ್ರಷ್ಟವ್ಯೋ' ಎಂದಿದ್ದಾರೆ. ಎಂದರೆ, ಆತ್ಮನನ್ನು ಅನುಭವದಲ್ಲಿ ಕಂಡುಕೊಳ್ಳುವದಕ್ಕಾಗಿ, ಶ್ರೋತ್ರಿಯಬ್ರಹ್ಮನಿಷ್ಠಸದ್ಗುರುಗಳಿಂದ ವೇದಾಂತಶಾಸ್ತ್ರದ ಶ್ರವಣಾದಿಗಳನ್ನು ಮಾಡಬೇಕು- ಎಂದೇ ಅರ್ಥ. ಮೇಲಿನ ಭಾಷ್ಯಭಾಗದಲ್ಲಿ ಶಂಕರರು 'ದ್ರಷ್ಟವ್ಯಃ' ಎನ್ನುವದಕ್ಕೆ ಬದಲಾಗಿ 'ಸಮ್ಯಗ್ದರ್ಶನ' ಎಂಬಿದನ್ನು ಸಮಾನಾರ್ಥಕವಾಗಿ ಉಪಯೋಗಿಸಿರುವದನ್ನು ನಾವು ಲಕ್ಷಿಸಬೇಕು.

21. ....ತಥಾಪಿ ವೇದಾನ್ತವಾಕ್ಯಾನಿ ವ್ಯಾಚಕ್ಷಾಣೈಃ ಸಮ್ಯಗ್ದರ್ಶನಪ್ರತಿಪಕ್ಷಭೂತಾನಿ ಸಾಂಖ್ಯಾದಿದರ್ಶನಾನಿ ನಿರಾಕರಣೀಯಾನಿ ಇತಿ ತದರ್ಥಃ ಪರಃ ಪಾದಃ ಪ್ರವರ್ತತೇ । ವೇದಾನ್ತಾರ್ಥನಿರ್ಣಯಸ್ಯ ಚ ಸಮ್ಯಗ್ದರ್ಶನಾರ್ಥತ್ವಾತ್ ತನ್ನಿರ್ಣಯೇನ ಸ್ವಪಕ್ಷಸ್ಥಾಪನಂ ಪ್ರಥಮಂ ಕೃತಮ್ ॥ (ಸೂ.ಭಾ. ೨-೨-೧)

ಆದರೂ ವೇದಾಂತವಾಕ್ಯಗಳನ್ನು ವ್ಯಾಖ್ಯಾನಮಾಡುವವರು ಸಮ್ಯಗ್ದರ್ಶನಕ್ಕೆ ಪ್ರತಿಪಕ್ಷವಾಗಿರುವ ಸಾಂಖ್ಯಾದಿದರ್ಶನಗಳನ್ನು ನಿರಾಕರಿಸತಕ್ಕದ್ದು ಅವಶ್ಯವಾದ್ದರಿಂದ ಅದಕ್ಕಾಗಿ ಮುಂದಿನ ಪಾದವು ಹೊರಟಿರುತ್ತದೆ. ಆದರೆ, ವೇದಾಂತಗಳ ಅರ್ಥವನ್ನು ನಿರ್ಣಯಿಸುವದರಿಂದ ಸಮ್ಯಗ್ದರ್ಶನವೆಂಬ ಪ್ರಯೋಜನವುಂಟಾಗುವದರಿಂದ ಸ್ವಪಕ್ಷಸ್ಥಾಪನೆಯನ್ನು ಮೊದಲು ಮಾಡಿದ್ದಾಯಿತು.

22..... ಅತಶ್ಚ ಲೌಕಿಕಸ್ಯಾಪಿ ಪುಂಸಃ ಸಮ್ಯಗ್ದರ್ಶನಾರ್ಥವತ್ತ್ವಂ ದೃಷ್ಟಮ್, ಕಿಮುತ ವಿಷಯಶೂನ್ಯಾತ್ ಆತ್ಮನೋಽನ್ಯದ್ವಸ್ತ್ವನ್ತರಮ್ ಅಪಶ್ಯತಃ ನಿತ್ಯಚೈತನ್ಯಮಾತ್ರಸ್ವರೂಪಸ್ಯ ಇತಿ। ತಸ್ಮಾತ್ ನಾಸ್ತಿ ಸಮ್ಯಗ್ದರ್ಶನಾನರ್ಥಕ್ಯಪ್ರಸಙ್ಗಃ ॥ (ಸೂ. ಭಾ. ೨-೩-೪೬)

ಆದ್ದರಿಂದ, ಲೌಕಿಕಪುರುಷನಿಗೂ ಸಮ್ಯಗ್ದರ್ಶನದ ಸಪ್ರಯೋಜನತ್ವವು ಕಂಡುಬರುತ್ತದೆ. ಇನ್ನು ವಿಷಯರಹಿತನಾಗಿರುವ ಆತ್ಮನಿಗಿಂತ ಬೇರೆಯಾಗಿರುವ ಮತ್ತೊಂದು ವಸ್ತುವನ್ನು ಕಾಣದಿರುವ ನಿತ್ಯಚೈತನ್ಯಮಾತ್ರಸ್ವರೂಪನಾಗಿರುವವನಿಗೆ ಸಮ್ಯಗ್ದರ್ಶನವು ಸಪ್ರಯೋಜನವೆಂಬುದನ್ನು ಹೇಳುವದೇನಿದೆ? ಆದ್ದರಿಂದ ಸಮ್ಯಗ್ದರ್ಶನವು ವ್ಯರ್ಥವೆಂಬ ಪ್ರಸಕ್ತಿಯಿರುವದಿಲ್ಲ.

23. ....ದೇಹಾದಿರಯಂ ಸಂಘಾತೋಽಹಮೇವ ಇತಿ ಆತ್ಮನಿ ವಿಪರೀತಪ್ರತ್ಯಯೋತ್ಪತ್ತಿಃ । ದೃಷ್ಟಾ ಚ ಸಾ ಸರ್ವಪ್ರಾಣಿನಾಮ್

....ನ ಹಿ ಅಸ್ಯಾಃ ಸಮ್ಯಗ್ದರ್ಶನಾತ್ ಅನ್ಯತ್ ನಿವಾರಕಮ್ ಅಸ್ತಿ । ಪ್ರಾಕ್ತು ಸಮ್ಯಗ್ದರ್ಶನಾತ್ ಪ್ರತತಾ ಏಷಾ ಭ್ರಾನ್ತಿಃ ಸರ್ವಜನ್ತುಷು । ....ಸಮ್ಯಗ್ದರ್ಶಿನಸ್ತರ್ಹಿ ಅನುಜ್ಞಾಪರಿಹಾರಾ-ನರ್ಥಕ್ಯಂ ಪ್ರಾಪ್ತಮ್ । ನ । ತಸ್ಯ ಕೃತಾರ್ಥತ್ವಾತ್ ನಿಯೋಜ್ಯತ್ವಾನುಪಪತ್ತೇಃ ।.... ಅಭಿಮಾನಾಭಾವಾಚ್ಚ ಸಮ್ಯಗ್ದರ್ಶಿನಃ ॥
(ಸೂ. ಭಾ. ೨-೩-೪೮)

ದೇಹವೇ ಮುಂತಾದ ಈ ಸಂಘಾತವು ನಾನೇ ಎಂದು ತನ್ನಲ್ಲಿ ವಿಪರೀತ ಪ್ರತ್ಯಯವು ಉಂಟಾಗುವದೇ ಆ ಸಂಬಂಧವು. 'ನಾನು ಹೋಗುತ್ತೇನೆ' 'ನಾನು ಬರುತ್ತೇನೆ'....ಎಂಬೀ ಮುಂತಾದ ರೂಪದ ಪ್ರತ್ಯಯವು ಉಂಟಾಗುವದು ಸರ್ವಜೀವರಲ್ಲಿಯೂ ಕಂಡುಬರುತ್ತದೆ. ಸಮ್ಯಗ್ದರ್ಶನವನ್ನು ಬಿಟ್ಟರೆ ಮತ್ತೆ ಯಾವದೂ ಇದನ್ನು ಕಳೆಯಲಾರದು. ಸಮ್ಯಗ್ದರ್ಶನದ ಮುಂಚೆ ಈ ಭ್ರಾಂತಿಯು ಎಲ್ಲಾ ಪ್ರಾಣಿಗಳಲ್ಲಿಯೂ ಸತತವಾಗಿ ಇರುತ್ತದೆ.

(ಆಕ್ಷೇಪ) : ಹಾಗಾದರೆ, ಸಮ್ಯಗ್ದರ್ಶಿಗೆ ಅನುಜ್ಞಾಪರಿಹಾರಗಳು ವ್ಯರ್ಥವಾದವಲ್ಲ !

(ಪರಿಹಾರ) : ಹಾಗಲ್ಲ. ಏಕೆಂದರೆ, ಸಮ್ಯಗ್ದರ್ಶಿಯು ಕೃತಾರ್ಥನಾಗಿರುವದರಿಂದ ಅವನು ನಿಯೋಜ್ಯನಾಗಲಾರನು....ಏಕೆಂದರೆ, ಎಲ್ಲೆಲ್ಲಿಯೂ ಅಭಿಮಾನವೇ ಪ್ರವರ್ತಕವು ; ಆದರೆ, ಸಮ್ಯಗ್ದರ್ಶಿಗೆ ಅಭಿಮಾನವಿರುವದಿಲ್ಲ.

24. ....ಇತಿ ಚ ಸಮ್ಯಗ್ದರ್ಶನಕಾಲಮೇವ ತತ್ಫಲಂ ಸರ್ವಾತ್ಮತ್ವಂ ದರ್ಶಯತಿ । ತಸ್ಮಾತ್ ಐಕಾನ್ತಿಕೀ ವಿದುಷಃ ಕೈವಲ್ಯಸಿದ್ಧಿಃ ॥ (ಸೂ. ಭಾ. ೩-೩-೩೨)

'ಆ ಇದನ್ನು ಕಂಡುಕೊಂಡ ವಾಮದೇವನು ನಾನು ಮನುವಾದೆನು, ಸೂರ್ಯನಾದೆನು ಎಂದು ತಿಳಿದುಕೊಂಡನು' (ಬೃ. ೧-೪-೧೦) ಎಂದು ಸಮ್ಯಗ್ದರ್ಶನಕಾಲದಲ್ಲಿಯೇ ಅದರ ಫಲವಾದ ಸರ್ವಾತ್ಮತ್ವವನ್ನು ಶ್ರುತಿಯು ತಿಳಿಸುತ್ತದೆ. (ಆದ್ದರಿಂದ ಮೋಕ್ಷವು ಸ್ವರ್ಗಾದಿಗಳಂತೆ ಸಂಶಯಗ್ರಸ್ತವೂ ಅಲ್ಲ ; ಕೇವಲ ಆಪ್ತವಾಕ್ಯದಿಂದ ನಂಬತಕ್ಕದ್ದೂ ಅಲ್ಲ.) ಆದ್ದರಿಂದ ಜ್ಞಾನಿಗೆ ಕೈವಲ್ಯಸಿದ್ಧಿಯು ನಿಯಮದಿಂದ ಆಗುತ್ತದೆ- ಎಂದು ಸಿದ್ಧವಾಯಿತು.

25. ....ದರ್ಶನಪರ್ಯವಸಾನಾನಿ ಹಿ ಶ್ರವಣಾದೀನಿ ಆವರ್ತ್ಯಮಾನಾನಿ ದೃಷ್ಟಾರ್ಥಾನಿ ಭವನ್ತಿ । ಯಥಾ ಅವಘಾತಾದೀನಿ ತಣ್ಡುಲಾದಿನಿಷ್ಪತ್ತಿಪರ್ಯವಸಾನಾನಿ, ತದ್ವತ್॥ (ಸೂ.ಭಾ, ೪-೧-೧)

"ಶ್ರವಣಾದಿಗಳು ದರ್ಶನದಲ್ಲಿ ಕೊನೆಗಾಣತಕ್ಕವಾದ್ದರಿಂದ ಇವುಗಳನ್ನು ಆವೃತ್ತಿಮಾಡಿದರೆ ದೃಷ್ಟಾರ್ಥವಾಗುವವು. ಹೇಗೆ ಕುಟ್ಟುವದೇ ಮುಂತಾದುವನ್ನು ಅಕ್ಕಿಯಾಗುವದಕ್ಕಾಗಿ ಮಾಡಬೇಕೋ ಹಾಗೆ." (ಶ್ರವಣಾದಿಗಳು ಯಾವದಾದರೊಂದು ಅದೃಷ್ಟಫಲಕ್ಕಾಗಿ ಮಾಡತಕ್ಕವಲ್ಲ.)

26. ....ನಾಪಿ ಸಮ್ಯಗ್ದರ್ಶನೇ । ವಸ್ತುತನ್ತ್ರತ್ವಾದ್ ವಿಜ್ಞಾನಸ್ಯ.... ॥ (ಸೂ. ಭಾ. ೪-೧-೭)

ಸಮ್ಯಗ್ದರ್ಶನದಲ್ಲಿಯೂ ಆಸನಾದಿಗಳ ನಿಯಮವು ಬೇಕಾಗುವದಿಲ್ಲ; ಏಕೆಂದರೆ, ಆ ಅನುಭವವು ವಸ್ತುತಂತ್ರವಾಗಿರುತ್ತದೆ. (ಹೇಗೆ ನೋಡಿದರೂ ತತ್ತ್ವಾನುಭವವು ವಸ್ತುವಿಗೂ ಪ್ರಮಾಣಕ್ಕೂ ಅಧೀನವಾಗಿರುವದರಿಂದ ಒಂದೇ ಸಮನಾಗಿರುತ್ತದೆ.)

27. ....ತಚ್ಚ ಮಿಥ್ಯಾಜ್ಞಾನಂ ಸಮ್ಯಗ್ಜ್ಞಾನೇನ ದಗ್ಧಮ್ ಇತಿ.... (ಸೂ. ಭಾ. ೪-೧-೧೯)

ಆದರೆ, ಆ ಮಿಥ್ಯಾಜ್ಞಾನವು ಸಮ್ಯಗ್ಜ್ಞಾನದಿಂದ ಸುಟ್ಟುಹೋಗಿರುತ್ತದೆಯಾದಕಾರಣ ಆರಬ್ಧಕಾರ್ಯವು ಕ್ಷಯಿಸಲು ಜ್ಞಾನಿಗೆ ಕೈವಲ್ಯವು ಅವಶ್ಯವಾಗಿ ಆಗುತ್ತದೆ. (ಸಮ್ಯಗ್ಜ್ಞಾನವೆಂದರೆ ಸಮ್ಯಗ್ದರ್ಶನ.)

28. ....ಸಮ್ಯಗ್ದರ್ಶನವಿಧ್ವಸ್ತತಮಸಾಂ ತು ನಿತ್ಯಸಿದ್ಧನಿರ್ವಾಣಪರಾಯಣಾನಾಂ ಸಿದ್ಧೈವ ಅನಾವೃತ್ತಿಃ ॥ (ಸೂ. ಭಾ. ೪-೪-೨೨)

ಸಮ್ಯಗ್ದರ್ಶನದಿಂದ ಅಜ್ಞಾನವನ್ನು ಕಳೆದುಕೊಂಡು ನಿತ್ಯಸಿದ್ಧವಾದ ನಿರ್ವಾಣವೇ ಪರಾಯಣವಾಗಿರುವ (ಅದೇ ಪ್ರಾಪ್ಯಸ್ಥಾನವಾಗಿರುವ) ಜ್ಞಾನಿಗಳಿಗಾದರೋ ಅನಾವೃತ್ತಿಯು (ಮರಳಿ ಸಂಸಾರಕ್ಕೆ ಬಾರದಿರುವದು) ತಾನೇ ಸಿದ್ಧವಾಗಿರುತ್ತದೆ.... (ನಿತ್ಯಪ್ರಾಪ್ತವಾಗಿರುವ ಮುಕ್ತಿಯನ್ನು ಜ್ಞಾನದಿಂದ ಪಡೆದುಕೊಂಡವರಿಗೆ ಪುನರಾವೃತ್ತಿಯ ಶಂಕೆಯೇ ಇಲ್ಲ.)

ಹೀಗೆ, ಬೃಹತ್ತಾದ ಸೂತ್ರಭಾಷ್ಯದ ತುಟ್ಟತುದಿಯಲ್ಲಿಯೂ ಬೆಳಗುತ್ತಿರುವ ಸಮ್ಯಗ್ದರ್ಶನಶಬ್ದದಿಂದಲೇ ಅದರ ಮಂಗಳಾಚರಣೆಯಾಗಿರುವದನ್ನು ನೋಡಿದರೆ, ಸಮ್ಯಗ್ದರ್ಶನವು ಶಂಕರರಿಗೆ ಎಷ್ಟು ಪ್ರಿಯವಾದುದೆಂಬುದೂ ಅದರ ಮಹತ್ತ್ವವೆಷ್ಟೆಂಬುದೂ ಸ್ಪಷ್ಟವಾಗುತ್ತದೆ !

29. ಏವಂ ಹಿ ಅಸೌ ದೃಷ್ಟೋ ಭವತಿ ಶ್ರವಣಮನನನಿದಿಧ್ಯಾಸನಸಾಧನೈರ್ನಿರ್ವರ್ತಿತೈಃ । ಯದಾ ಏಕತ್ವಮ್ ಏತಾನ್ಯುಪ-

ಗತಾನಿ ತದಾ ಸಮ್ಯಗ್ದರ್ಶನಂ ಬ್ರಹ್ಮೈಕತ್ವವಿಷಯಂ ಪ್ರಸೀದತಿ ನಾನ್ಯಥಾ ಶ್ರವಣಮಾತ್ರೇಣ ॥ (ಬೃ. ಭಾ. ೨-೪-೫)

ಹೀಗೆ ಶ್ರವಣಮನನನಿದಿಧ್ಯಾಸನಗಳೆಂಬ ಸಾಧನಗಳನ್ನು ಮಾಡಿದರಲ್ಲವೆ, ಇವನನ್ನು ಕಂಡದ್ದು ಆಗುವದು ? ಯಾವಾಗ ಇವುಗಳು ಒಂದಾಗುವವೋ ಆಗ ಬ್ರಹ್ಮೈಕತ್ವವಿಷಯದ ಸಮ್ಯಗ್ದರ್ಶನವು ಪ್ರಸನ್ನವಾಗುತ್ತದೆ ; ಹಾಗಿಲ್ಲದೆ ಬರಿಯ ಶ್ರವಣಮಾತ್ರದಿಂದ ಪ್ರಸನ್ನವಾಗುವದಿಲ್ಲ. (ಶ್ರವಣಮನನನಿದಿಧ್ಯಾಸನಗಳು ಒಂದಾಗುವದು-ಎಂದರೆ, ಶ್ರುತಿ, ಯುಕ್ತಿ, ಅನುಭವಗಳು ಹೊಂದಿಕೊಳ್ಳುವದು. ಇದರಿಂದಲೇ ಸಮ್ಯಗ್ದರ್ಶನವು, ಆತ್ಮದರ್ಶನವು- ಸರಿಯಾಯಿತೆಂದು ನಿಶ್ಚಯಿಸಬಹುದು. ಮನನನಿದಿಧ್ಯಾಸನಗಳಿಗೆ ಹೊಂದದ ಶ್ರವಣಮಾತ್ರದಿಂದ ಆತ್ಮದರ್ಶನವಾಗುವದಿಲ್ಲ. ಆದರೆ, ಉತ್ತಮಾಧಿಕಾರಿಗಳಿಗೆ 'ತತ್ತ್ವಮಸಿ' ವಾಕ್ಯ ಶ್ರವಣಮಾತ್ರದಿಂದಲೂ ಜ್ಞಾನವುಂಟಾಗಬಹುದು. (ಸೂ.ಭಾ. ೪.೧-೨) ನಿದಿಧ್ಯಾಸನವೆಂದರೆ ನಿಶ್ಚಯದಿಂದ ಧ್ಯಾನಮಾಡಿ- ವಸ್ತುವನ್ನು ಸೂಕ್ಷ್ಮಬುದ್ಧಿಯಿಂದ ಚೆನ್ನಾಗಿ ನೋಡಿ, ಅದು ಹೇಗಿದೆಯೋ ಹಾಗೆ, (ವಸ್ತುತಂತ್ರವಾಗಿ)- ಅರಿತುಕೊಳ್ಳುವದು. ಇದೇ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ. ಇಲ್ಲಿ ಧ್ಯಾನವೆಂದರೆ, ಉಪಾಸನೆಯಂತೆ ಬರಿಯ ಭಾವನೆಯಲ್ಲ.

30. ....ಇತಿ ಹೋವಾಚ ಉಕ್ತವಾನ್ ಕಿಲ ಪರಮಾರ್ಥದರ್ಶನಂ ಮೈತ್ರೇಯ್ಯೈ ಭಾರ್ಯಾಯೈ ಯಾಜ್ಞವಲ್ಕ್ಯಃ ॥ (ಬೃ. ಭಾ. ೨-೪-೧೨)

ಹೀಗೆಂದು ಯಾಜ್ಞವಲ್ಕ್ಯನು ಹೆಂಡತಿಯಾದ ಮೈತ್ರೇಯಿಗೆ ಪರಮಾರ್ಥದರ್ಶನವನ್ನು ಹೇಳಿಕೊಟ್ಟನಲ್ಲವೆ ! ಈ ಪರಮಾರ್ಥದರ್ಶನವೇ ಸಮ್ಯಗ್ದರ್ಶನ !

31. ಏವಂ ಪರಮಾರ್ಥಾತ್ಮದರ್ಶಿನೋ .... ಅವಿದ್ಯಾಕಾಮಕರ್ಮಲಕ್ಷಣಸ್ಯ ಮೃತ್ಯೋರ್ವಿನಾಶಾತ್ ಅಮೃತೋ ಭವತಿ ॥ (ಕಾಠಕ. ಭಾ. ೨-೩-೧೪)

ಹೀಗೆ, ಪರಮಾರ್ಥವಾದ ಆತ್ಮನನ್ನು ಕಂಡುಕೊಂಡ ಈ ಜ್ಞಾನಿಗೆ ಅವಿದ್ಯಾ, ಕಾಮ, ಕರ್ಮ- ಎಂಬ ಮೃತ್ಯುವು ನಾಶವಾದದ್ದರಿಂದ ಇವನು ಅಮೃತನಾಗುವನು.

32....ಅನಾತ್ಮದರ್ಶಿನೋ ಹಿ ತದ್ವ್ಯತಿರಿಕ್ತವಸ್ತ್ವನ್ತರೇಪ್ಸೋಃ । ಮಮೇದಂ ಸ್ಯಾತ್, ಪುತ್ರಸ್ಯೇದಮ್, ಭಾರ್ಯಾಯಾ ಇದಮ್ ಇತ್ಯೇವಮ್ ಈಹಮಾನಃ ಪುನಃ ಪುನಃ ಜನನಮರಣ

ಪ್ರಬನ್ಧಾರೂಢಶರೀರರೋಗಮನು ರುಜ್ಯತೇ । ಸರ್ವಾತ್ಮದರ್ಶಿ-
ನಸ್ತು ತದಸಂಭವಃ ಇತ್ಯೇತದಾಹ ॥ (ಬೃ. ಭಾ. ೪-೪-೧೨)

ಆತ್ಮದರ್ಶಿಯಲ್ಲದವನಿಗಲ್ಲವೆ, ಆ ಸ್ವರೂಪಕ್ಕಿಂತ ಬೇರೆಯಾಗಿರುವ ಹುತ್ತೊಂದು ವಸ್ತುವನ್ನು ಅವನು ಪಡೆಯಬೇಕೆನ್ನುತ್ತಿರುವದರಿಂದ ಅದು-ದುಃಖವು- ಸಂಭವಿಸುತ್ತದೆ ! 'ಇದು ನನಗೆ ಆಗಬೇಕು', 'ಮಗನಿಗೆ ಇದು', 'ಹೆಂಡತಿಗೆ ಇದು'- ಎಂದು ಪ್ರಯತ್ನಿಸುತ್ತಿರುವದರಿಂದ ಅವನು ಮತ್ತೆಮತ್ತೆ ಜನನಮರಣಗಳ ಸಾಲನ್ನು ಏರಿ, ಶರೀರದ ರೋಗವನ್ನು ಅನುಸರಿಸಿ ನರಳುತ್ತಾನೆ. ಆದರೆ ಸರ್ವಾತ್ಮದರ್ಶಿಗೆ ಇದು ಸಂಭವಿಸುವದಿಲ್ಲ- ಎಂಬಿದನ್ನು ಇಲ್ಲಿ ಹೇಳಿರುತ್ತಾನೆ. (ಆತ್ಮಜ್ಞಾನಿಗೆ ಆತ್ಮಕ್ಕಿಂತ ಬೇರೆಯಾದ ಶರೀರವಾಗಲಿ, ಕಾಮವಾಗಲಿ, ತಾಪವಾಗಲಿ ಸಂಭವಿಸುವದಿಲ್ಲ.) ಇದರಿಂದ, ಸರ್ವಾತ್ಮದರ್ಶನವೇ ಸಮ್ಯಗ್ದರ್ಶನವೆಂದು ಸಿದ್ಧವಾಗುತ್ತದೆ.

33....ತದೇವ ಬ್ರಹ್ಮ ವಿಗತಸರ್ವೋಪಾಧಿವಿಶೇಷಂ ಸಮ್ಯಗ್
ದರ್ಶನವಿಷಯಮ್ ಅಜಮ್ ಅಜರಮ್ ಅಮೃತಮ್ ಅಭಯಂ
ವಾಙ್ಮನಸಯೋರಪ್ಯವಿಷಯಮ್ ಅದ್ವೈತತ್ವಾತ್ ನೇತಿ ನೇತಿ
ಇತಿ ನಿರ್ದಿಶ್ಯತೇ ॥ (ಬೃ. ಭಾ. ೨-೩-೧)

ಅದರಲ್ಲಿ ಬ್ರಹ್ಮವು ಎರಡು ರೂಪಗಳುಳ್ಳದಾಗಿರುತ್ತದೆ..... ಮೂರ್ತಾಮೂರ್ತವೆಂಬ ಹೆಸರಿನ ಬ್ರಹ್ಮವು ಸರ್ವಜ್ಞವೂ ಸರ್ವಶಕ್ತಿಯುಳ್ಳದ್ದೂ ಆಗಿರುವ ಸೋಪಾಖ್ಯಬ್ರಹ್ಮವಾಗಿರುತ್ತದೆ..... ಅದೇ ಬ್ರಹ್ಮವು ಯಾವದೊಂದು ಉಪಾಧಿಯೂ ಇಲ್ಲದೆ ಸಮ್ಯಗ್ದರ್ಶನಕ್ಕೆ ವಿಷಯವಾಗಿ ಅಜವೂ ಅಜರವೂ ಅಮೃತವೂ ಅಭಯವೂ ವಾಙ್ಮನಸ್ಸುಗಳಿಗೆ ಗೋಚರವಾಗದೆಯೂ ಇರುತ್ತದೆ ; ಅದು ಅದ್ವೈತವಾಗಿರುವದರಿಂದ ನೇತಿ ನೇತಿ (ಹೀಗಲ್ಲ, ಹೀಗಲ್ಲ ; ಇದಲ್ಲ, ಇದಲ್ಲ) ಎಂದು ಅದನ್ನು ತಿಳಿಸಲಾಗುತ್ತದೆ.

34. ....ಪಶ್ಚಾತ್ ಪ್ರಸಿದ್ಧಕ್ರಿಯಾಕಾರಕಫಲಸ್ವರೂಪದೋಷ
ದರ್ಶನವತೇ ತದ್ವಿಪರೀತೌದಾಸೀನ್ಯಸ್ವರೂಪಾವಸ್ಥಾನಫಲಾರ್ಥಿನೇ
ತದುಪಾಯಭೂತಾಮ್ ಆತ್ಮೈಕತ್ವದರ್ಶನಾತ್ಮಿಕಾಂ ಬ್ರಹ್ಮ
ವಿದ್ಯಾಮ್ ಉಪದಿಶತಿ ॥ (ಬೃ. ಭಾ. ೫-೧-೧)

ಆ ಬಳಿಕ ಗೊತ್ತಾಗಿರುವ ಕ್ರಿಯಾಕಾರಕಫಲಗಳ ಸ್ವರೂಪದಲ್ಲಿರುವ ದೋಷವನ್ನು ಕಂಡುಕೊಂಡು, ಅದಕ್ಕೆ ವಿಪರೀತವಾದ ಉದಾಸೀನ (ಪ್ರವೃತ್ತಿನಿವೃತ್ತಿಗಳೆರಡೂ ಇಲ್ಲದ ನೈಷ್ಕರ್ಮ್ಯ) ಸ್ವರೂಪದಿಂದ ಇದ್ದುಕೊಂಡಿರುವ ಫಲವನ್ನು ಬಯಸುವವನಿಗೆ, ಅದಕ್ಕೆ ಉಪಾಯವಾಗಿ ಆತ್ಮೈಕತ್ವದರ್ಶನರೂಪವಾದ ಬ್ರಹ್ಮವಿದ್ಯೆಯನ್ನು ತಿಳಿಸಿಕೊಡುತ್ತದೆ-ಎಂದರಿಯಬೇಕು.

## ಆತ್ಮೈಕತ್ವದರ್ಶನವೇ ಸಮ್ಯಗ್ದರ್ಶನ ; ಇದೇ ಬ್ರಹ್ಮವಿದ್ಯೆ.

35. ....ಅಯಂ ತು ಏಕತ್ವದರ್ಶೀ ನ ಬಿಭೇತಿ ಕುತಶ್ಚನ ।
(ಬೃ. ಭಾ. ೪– –೧೫)

ಭೇದದರ್ಶಿಯಾದವನು ಪ್ರತಿಯೊಬ್ಬನೂ ಈಶ್ವರನಿಂದ ಆತ್ಮರಕ್ಷಣೆಯನ್ನು ಬಯಸುತ್ತಾನಲ್ಲವೆ ? ಆದರೆ, ಇವನು ಏಕತ್ವದರ್ಶಿಯಾದ್ದರಿಂದ ಏತಕ್ಕೂ ಹೆದರುವದಿಲ್ಲ, ಆದ್ದರಿಂದ ಆಗ ಕಾಪಾಡಿಕೊಳ್ಳಲಿಚ್ಛಿಸುವದಿಲ್ಲ. ಇದರಿಂದ ಏಕತ್ವದರ್ಶಿಯೇ ಸಮ್ಯಗ್ದರ್ಶಿ ಎಂದಾಗುತ್ತದೆ.

36. ತದ್ವಿಜ್ಞಾನೇನ ಪರಿಪಶ್ಯನ್ತಿ ಧೀರಾಃ । ಆನನ್ದರೂಪ-ಮಮೃತಂ ಯದ್ವಿಭಾತಿ ॥ (ಮುಂ. ಉ. ೨-೨-೮)

ಯಾವ ಆನಂದರೂಪವಾದ ಅಮೃತವು ಹೊಳೆಯುತ್ತಿರುವದೋ ಅದನ್ನು ಧೀರರು ವಿಜ್ಞಾನದಿಂದ ಎಲ್ಲೆಲ್ಲಿಯೂ ಕಂಡುಕೊಳ್ಳುವರು.

ತತ್ ಆತ್ಮತತ್ತ್ವಂ ವಿಜ್ಞಾನೇನ ವಿಶಿಷ್ಟೇನ ಶಾಸ್ತ್ರಾಚಾರ್ಯೋಪದೇಶಜನಿತೇನ ಶಮದಮಧ್ಯಾನಸರ್ವತ್ಯಾಗವೈರಾಗ್ಯೋದ್ಭೂತೇನ ಪರಿಪಶ್ಯನ್ತಿ ಸರ್ವತಃ ಪೂರ್ಣಂ ಪಶ್ಯನ್ತಿ ಉಪಲಭನ್ತೇ ಧೀರಾಃ ವಿವೇಕಿನಃ । ಆನನ್ದರೂಪಂ ಸರ್ವಾನರ್ಥದುಃಖಾಯಾಸಪ್ರಹೀಣಮ್ ಅಮೃತಂ ಯದ್ ವಿಭಾತಿ ವಿಶೇಷೇಣಸ್ವಾತ್ಮನ್ಯೇವ ಭಾತಿ ಸರ್ವದಾ ॥ (ಮುಂ. ಭಾ. ೨-೨-೮)

ಆ ಆತ್ಮತತ್ತ್ವವನ್ನು ವಿಜ್ಞಾನದಿಂದ ಎಂದರೆ, ಶಾಸ್ತ್ರ, ಆಚಾರ್ಯ– ಇವರ ಉಪದೇಶದಿಂದ ಉಂಟಾಗುವದಾಗಿಯೂ ಶಮ, ದಮ, ಧ್ಯಾನ, ಸರ್ವತ್ಯಾಗ, ವೈರಾಗ್ಯ–ಇವುಗಳಿಂದ ತೋರಿಕೊಳ್ಳುವದಾಗಿಯೂ ಇರುವ ವಿಶಿಷ್ಟವಾದ ಜ್ಞಾನದಿಂದ ಧೀರರು ಎಂದರೆ ವಿವೇಕಿಗಳು 'ಪರಿಪಶ್ಯನ್ತಿ' ಪರಿ ಎಂದರೆ ಎಲ್ಲೆಲ್ಲಿಯೂ ಪೂರ್ಣವಾಗಿ ಕಂಡುಕೊಳ್ಳುವರು, ಅರಿತುಕೊಳ್ಳುವರು. ಆನಂದರೂಪವಾದ ಎಂದರೆ ಯಾವ ಅನರ್ಥಗಳ ದುಃಖದ ಆಯಾಸವೂ ಇಲ್ಲದ (ವಿಷಯಗಳನ್ನು ಉಪಭೋಗಿಸುವ ದುಃಖವಿಲ್ಲದ ಆನಂದವು ಆತ್ಮಸ್ವರೂಪದಲ್ಲಿದೆ) ಅಮೃತವಾದ ಯಾವ ಬ್ರಹ್ಮವು ವಿಭಾತಿ ಎಂದರೆ, ವಿಶೇಷವಾಗಿ ತಮ್ಮ ಆತ್ಮನಲ್ಲಿಯೇ ಹೊಳೆಯುತ್ತಿರುವದೋ ಅದನ್ನು ಧೀರರು–ವಿವೇಕಿಗಳು– ಪರಿಪಶ್ಯನ್ತಿ, ಪರಿ ಎಂದರೆ ಎಲ್ಲೆಲ್ಲಿಯೂ ಪೂರ್ಣವಾಗಿ ಕಂಡುಕೊಳ್ಳುವರು. (ಮುಂ. ಭಾ. ೨-೨-೮) ಪೂರ್ಣಾನಂದಸ್ವರೂಪಬ್ರಹ್ಮವಾದ ನಮ್ಮ ಆತ್ಮನಲ್ಲಿ ಅವಿದ್ಯೆಯಿಂದ ತೋರುತ್ತಿರುವ ವ್ಯಾಕೃತ-ಅವ್ಯಾಕೃತ ಜಗತ್ತಿನ ಒಳಹೊರಗೆಲ್ಲ, ಬಿಸಿಲು

ಕುದುರೆಯಲ್ಲಿ (ಮರೀಚಿಕೆಯಲ್ಲಿ) ಬಿಸಿಲನ್ನು ಕಂಡಂತೆ– ಚಿನ್ಮಾತ್ರಸ್ವರೂಪವಾದ ನಮ್ಮ ಆತ್ಮನೇ ಪೂರಾ ತುಂಬಿರುವದನ್ನು ಕಾಣುವದೇ ಪರಿಪೂರ್ಣದರ್ಶನ. ಪರಿಪೂರ್ಣದರ್ಶನವೇ ಸಮ್ಯಗ್ದರ್ಶನ.

37. ....'ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ' (ಈ. ೭) ಇತಿ ಮನ್ತ್ರವರ್ಣಾತ್ । ಯಚ್ಚ ಏಕತ್ವದರ್ಶನೇನ ಭಯಮ್ ಅಪನುನೋದ ತದ್ಯುಕ್ತಮ್....ತದೇಕತ್ವದರ್ಶನೇನ ದ್ವಿತೀಯದರ್ಶನಮ್ ಅಪನೀತಮ್ ಇತಿ ನಾಸ್ತಿ ಯತಃ ॥ (ಬೃ. ಭಾ. ೧-೪-೨)

"ಅಲ್ಲಿ ಏಕತ್ವವನ್ನು ಕಂಡುಕೊಂಡಿರುವವನಿಗೆ ಯಾವ ಮೋಹವು ? ಯಾವ ಶೋಕವು? (ಈ. ೭) ಎಂಬ ಮಂತ್ರವರ್ಣದಿಂದ ಇದು ಸಿದ್ಧವಾಗುತ್ತದೆ. ಏಕತ್ವದರ್ಶನದಿಂದ ಪ್ರಜಾಪತಿಯು ಭಯವನ್ನು ಕಳೆದುಕೊಂಡನಲ್ಲ, ಅದೂ ಯುಕ್ತವು ; ಎರಡನೆಯದಾದ ಬೇರೊಂದು ವಸ್ತುವಿನಿಂದಲ್ಲವೆ, ಭಯವಾಗುವದು ? ಆ ಎರಡನೆಯ ವಸ್ತುವಿನ ಅರಿವು ಏಕತ್ವಜ್ಞಾನದಿಂದ ತೊಲಗಿದ್ದರಿಂದ ಭಯವಿಲ್ಲ.

....ತಥಾ ಪ್ರಜಾಪತೇಃ ಧರ್ಮಜ್ಞಾನವೈರಾಗ್ಯೈಶ್ವರ್ಯವಿಪರೀತಹೇತುಸರ್ವಪಾಪ್ಮದಾಹಾತ್ ವಿಶುದ್ಧೈಃ ಕಾರ್ಯಕರಣೈಃ ಸಂಯುಕ್ತಮ್ ಉತ್ಕೃಷ್ಟಂ ಜನ್ಮ, ತದುದ್ಭವಂ ಚ ಅನುಪದಿಷ್ಟನೇವ ಯುಕ್ತಮ್ ಏಕತ್ವದರ್ಶನಂ ಪ್ರಜಾಪತೇಃ । ತಥಾ ಚ ಸ್ಮೃತಿಃ "ಜ್ಞಾನಮಪ್ರತಿಘಂ ಯಸ್ಯ ವೈರಾಗ್ಯಂ ಚ ಜಗತ್ಪತೇಃ । ಐಶ್ವರ್ಯಂ ಚೈವ ಧರ್ಮಶ್ಚ ಸಹಸಿದ್ಧಂ ಚತುಷ್ಟಯಮ್" ॥ (ಬೃ. ಭಾ. ೧-೪-೨)

ಹಾಗೆಯೇ ಪ್ರಜಾಪತಿಗೆ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ– ಇವುಗಳಿಗೆ ವಿಪರೀತವಾದ (ಅಧರ್ಮಾದಿಗಳಿಗೆ) ಹೇತುವಾದ ಪಾಪವನ್ನು ಸುಡುವದರಿಂದ ವಿಶುದ್ಧವಾದ ಕಾರ್ಯಕರಣಗಳಿಂದೊಡಗೂಡಿದ ಉತ್ಕೃಷ್ಟಜನ್ಮವೂ, ಆದರಿಂದ ಯಾವ ಉಪದೇಶವೂ ಇಲ್ಲದೆಯೇ ಪ್ರಜಾಪತಿಗೆ ಏಕತ್ವದರ್ಶನವುಂಟಾಗುವದೆಂಬುದೂ ಯುಕ್ತವು. ಆದ್ದರಿಂದಲೇ ಸ್ಮೃತಿಯು ಹೀಗೆಂದು ಹೇಳುತ್ತಿದೆ. "ಆ ಜಗತ್ಪತಿಗೆ ಅಪ್ರತಿಹತವಾದ ಜ್ಞಾನವೂ ವೈರಾಗ್ಯವೂ ಐಶ್ವರ್ಯವೂ ಧರ್ಮವೂ ಈ ನಾಲ್ಕೂ ಸಹಸಿದ್ಧವಾಗಿರುತ್ತವೆ."

ಈ ಏಕತ್ವದರ್ಶನವೇ ಮೈತ್ರೇಯಿಗೆ ಯಾಜ್ಞವಲ್ಕ್ಯರು ಉಪದೇಶಿಸಿದ 'ದ್ರಷ್ಟವ್ಯಃ' ಎನ್ನುವ ಸಮ್ಯಗ್ದರ್ಶನವು.

38. ....ಭೇದದರ್ಶನಾಪವಾದಾಚ್ಚ ಸೃಷ್ಟ್ಯಾದಿವಾಕ್ಯಾನಾಮ್ ಆತ್ಮೈಕತ್ವದರ್ಶನಾರ್ಥತ್ವೋಪಪತ್ತಿಃ ॥ (ಬೃ.ಭಾ. ೧-೪-೭)

ಭೇದದರ್ಶನವನ್ನು ಶ್ರುತಿಯಲ್ಲಿ ನಿಂದಿಸಿರುವದರಿಂದಲೂ ಸೃಷ್ಟ್ಯಾದಿವಾಕ್ಯಗಳಿಗೆ ಆತ್ಮೈಕತ್ವದರ್ಶನದಲ್ಲಿಯೇ ತಾತ್ಪರ್ಯವೆಂಬುದು ಹೊಂದುತ್ತದೆ.

## ಈ ಆತ್ಮೈಕತ್ವದರ್ಶನವೇ ಸಮ್ಯಗ್ದರ್ಶನ

....ಸೃಷ್ಟ್ಯಾದಿವಾಕ್ಯಾನಾಮ್ ಆತ್ಮೈಕತ್ವಪ್ರತಿಪತ್ತ್ಯರ್ಥಪರತ್ವಾತ್ ಪ್ರಕೃತಮೇವ ತಸ್ಯ ದರ್ಶನಮ್ ॥ (ಬೃ. ಭಾ. ೧-೪-೭)

ಸೃಷ್ಟ್ಯಾದಿ ವಾಕ್ಯಗಳು ಆತ್ಮೈಕತ್ವಜ್ಞಾನಕ್ಕಾಗಿಯೇ ಬಂದಿರುವದರಿಂದ ಆ ಆತ್ಮನನ್ನು ನೋಡ(ದರ್ಶನಮಾಡ)ಬೇಕೆಂಬುದು ಪ್ರಕೃತವೇ ಆಗಿರುತ್ತದೆ.

ಯದೈವ ಆತ್ಮಪ್ರತಿಪಾದಕವಾಕ್ಯಶ್ರವಣಾತ್ ಆತ್ಮವಿಷಯಂ ವಿಜ್ಞಾನಮ್ ಉತ್ಪದ್ಯತೇ ತದೈವ ತದುತ್ಪದ್ಯಮಾನಂ ತದ್ವಿಷಯಂ ಮಿಥ್ಯಾಜ್ಞಾನಂ ನಿವರ್ತಯದೇವ ಉತ್ಪದ್ಯತೇ । ಆತ್ಮೈಕತ್ವವಿಜ್ಞಾನಸ್ಮೃತಿಸನ್ತತೇರರ್ಥತ ಏವ ಭಾವಾತ್ ನ ವಿಧೇಯತ್ವಂ ಶೋಕಮೋಹಭಯಾಯಾಸಾದಿದುಃಖದೋಷನಿವರ್ತಕತ್ವಾಚ್ಚ ತತ್ಸ್ಮೃತೇಃ । (ಬೃ. ಭಾ. ೧-೪-೭)

ಯಾವಾಗ ಆತ್ಮನನ್ನು ತಿಳಿಸುವ ವೇದಾಂತವಾಕ್ಯಶ್ರವಣದಿಂದ ಆತ್ಮವಿಷಯದಲ್ಲಿ ವಿಜ್ಞಾನ (ಅನುಭವ) ಉಂಟಾಗುವದೋ ಆಗಲೇ ಅದು ಹುಟ್ಟುವಾಗಲೇ ಆ ಆತ್ಮನ ವಿಷಯವಾದ ಮಿಥ್ಯಾಜ್ಞಾನವನ್ನು ತೊಲಗಿಸಿಕೊಂಡೇ ಹುಟ್ಟುತ್ತದೆ. ಆತ್ಮೈಕತ್ವವಿಜ್ಞಾನಸ್ಮೃತಿಯ ಸಂತಾನವು (ಪ್ರಯತ್ನವಿಲ್ಲದೆ ಸ್ವಾಭಾವಿಕವಾಗಿ) ತಾನೇ ಉಂಟಾಗುವದರಿಂದ ಅದನ್ನು ವಿಧಿಸಬೇಕಾಗಿರುವದಿಲ್ಲ. ಈ ಆತ್ಮವಿಜ್ಞಾನಸ್ಮೃತಿಯು ಶೋಕ, ಮೋಹ, ಭಯ, ಆಯಾಸ-ಮುಂತಾದ ದುಃಖಗಳನ್ನು ತೊಲಗಿಸುವದರಿಂದಲೂ ಅದನ್ನು ವಿಧಿಸಬೇಕಾಗಿಲ್ಲ.

....ಚಿತ್ತವೃತ್ತಿನಿರೋಧಸ್ಯ ಮೋಕ್ಷಸಾಧನತ್ವೇನ ಅನವಗಮಾತ್। ನ ಹಿ ವೇದಾನ್ತೇಷು ಬ್ರಹ್ಮಾತ್ಮವಿಜ್ಞಾನಾತ್ ಅನ್ಯತ್ ಪರಮಪುರುಷಾರ್ಥಸಾಧನತ್ವೇನ ಅವಗಮ್ಯತೇ । "ಆತ್ಮಾನಮೇವಾವೇತ್ ತಸ್ಮಾತ್ ತತ್ಸರ್ವಮಭವತ್" (ಬೃ. ೧-೪-೧೦) "ಬ್ರಹ್ಮವಿದಾಪ್ನೋತಿ ಪರಮ್" (ತೈ. ೨-೧) "ಅಭಯಂ ಹಿ ವೈ ಬ್ರಹ್ಮ ಭವತಿ ಯ ಏವಂ ವೇದ" (ಬೃ. ಉ. ೪-೪-೨೫) ಇತ್ಯೇವಮಾದಿಶ್ರುತಿಶತೇಭ್ಯಃ । ನ ಹಿ ಆತ್ಮವಿಜ್ಞಾನತತ್ಸ್ಮೃತಿ

ಸನ್ತಾನವ್ಯತಿರೇಕೇಣ ಚಿತ್ತವೃತ್ತಿನಿರೋಧಸ್ಯ ಸಾಧನಮಸ್ತಿ । ನ ತು ಬ್ರಹ್ಮವಿಜ್ಞಾನವ್ಯತಿರೇಕೇಣ ಅನ್ಯನ್ಮೋಕ್ಷಸಾಧನಮ್ ಅವಗಮ್ಯತೇ ॥ (ಬೃ. ಭಾ. ೧-೪-೭)

ಚಿತ್ತವೃತ್ತಿಯ ನಿರೋಧವು ಮೋಕ್ಷಸಾಧನವೆಂದು ನಿಶ್ಚಿತವಾಗಿರುವದಿಲ್ಲ. ವೇದಾಂತಗಳಲ್ಲಿ (ಉಪನಿಷತ್ತುಗಳಲ್ಲಿ) ಬ್ರಹ್ಮಾತ್ಮವಿಜ್ಞಾನಕ್ಕಿಂತ ಬೇರೆಯಾದುದು ಪರಮಪುರುಷಾರ್ಥಕ್ಕೆ ಸಾಧನವೆಂದು ನಿಶ್ಚಿತವಾಗಿರುವದೇ ಇಲ್ಲ. "ತನ್ನನ್ನೇ ಅರಿತುಕೊಂಡಿತು ; ಅದರಿಂದ ಅದು ಎಲ್ಲವೂ ಆಯಿತು" (ಬೃ. ೧-೪-೧೦), "ಬ್ರಹ್ಮವನ್ನು ಅರಿತುಕೊಂಡವನು ಪರಮಪುರುಷಾರ್ಥವನ್ನು ಪಡೆದುಕೊಳ್ಳುತ್ತಾನೆ'' (ತೈ. ೨-೧), ''ಯಾವನು ಹೀಗೆಂದು ಅರಿತುಕೊಳ್ಳುವನೋ ಅವನು ಅಭಯವಾಗಿರುವ ಬ್ರಹ್ಮವೇ ಆಗುತ್ತಾನೆ"(ಬೃ. ೪-೪-೨೫)- ಎಂಬಿವೇ ಮುಂತಾದ ನೂರಾರು ಶ್ರುತಿಗಳಿಂದ ಇದು ಸಿದ್ಧವಾಗುತ್ತದೆ. ಈ ಶ್ರುತಿಗಳೆಲ್ಲ ಬ್ರಹ್ಮಾತ್ಮಜ್ಞಾನವೇ ಮೋಕ್ಷಸಾಧನವೆಂದು ಹೇಳುತ್ತವೆ. ಆತ್ಮವಿಜ್ಞಾನ ಅದರ ಸ್ಮೃತಿಗಳ ಸಂತಾನ- ಇವುಗಳನ್ನು ಬಿಟ್ಟರೆ ಚಿತ್ತವೃತ್ತಿನಿರೋಧಕ್ಕೆ ಬೇರೊಂದು ಸಾಧನವೇ ಇರುವದಿಲ್ಲ. (ಆದ್ದರಿಂದ ಆತ್ಮಜ್ಞಾನವು ಉಂಟಾದರೆ ಚಿತ್ತವೃತ್ತಿನಿರೋಧವು ತಾನೇ ಆತುತ್ತದೆ.) ನಿರೋಧವು ಮೋಕ್ಷಸಾಧನವೆಂದು ಒಪ್ಪಿ ಈ ಮಾತನ್ನು ಆಡಿದೆವು ; ಆದರೆ ಬ್ರಹ್ಮವಿಜ್ಞಾನಕ್ಕಿಂತ ಬೇರೆಯಾಗಿ ಮೋಕ್ಷಸಾಧನವು ಇರುವದೇ ಇಲ್ಲ.

'ಆತ್ಮಾ ವಾ ಅರೇ ದ್ರಷ್ಟವ್ಯಃ' ಎಂಬ ಯಾಜ್ಞವಲ್ಕ್ಯರ ಬೋಧೆಯಲ್ಲಿರುವ ಸಮ್ಯಗ್ದರ್ಶನದ ಫಲವೇ ಈ ಮೇಲಿನ ಶಂಕರರ ಮಾತಿನಲ್ಲಿರುವ ಬ್ರಹ್ಮಾತ್ಮವಿಜ್ಞಾನವು ಮತ್ತು ಜ್ಞಾನಿಯಲ್ಲಿ ಪ್ರಯತ್ನವಿಲ್ಲದೆ ಸ್ವಾಭಾವಿಕವಾಗಿ ತಾನಾಗಿಯೇ ನಡೆಯುತ್ತಿರುವ ಆತ್ಮವಿಜ್ಞಾನದ ಸ್ಮೃತಿಸಂತಾನವೂ ಆಗಿವೆ.

**39.** ಗೀತಾಭಾಷ್ಯದಲ್ಲಿ ಶಂಕರರು ದರ್ಶನಶಬ್ದವನ್ನೂ ಸಮ್ಯಗ್ದರ್ಶನಶಬ್ದವನ್ನೂ ಸಂನ್ಯಾಸಶಬ್ದವನ್ನೂ ಯಾವಯಾವ ಅರ್ಥದಲ್ಲಿ ಉಪಯೋಗಿಸಿದ್ದಾರೆಂಬುದನ್ನು ಈಗ ನೋಡೋಣ :

ತಸ್ಯಾಸ್ಯ ಗೀತಾಶಾಸ್ತ್ರಸ್ಯ ಸಂಕ್ಷೇಪತಃ ಪ್ರಯೋಜನಂ ಪರಂ ನಿಃಶ್ರೇಯಸಂ ಸಹೇತುಕಸ್ಯ ಸಂಸಾರಸ್ಯ ಅತ್ಯನ್ತೋಪರಮಲಕ್ಷಣಮ್ । ತಚ್ಚ ಸರ್ವಕರ್ಮಸಂನ್ಯಾಸಪೂರ್ವಕಾತ್ ಆತ್ಮಜ್ಞಾನನಿಷ್ಠಾರೂಪಾತ್ ಧರ್ಮಾತ್ ಭವತಿ ॥ (ಗೀ.ಭಾ. ಅವತರಣಿಕಾ)

ಸ್ವಲ್ಪದರಲ್ಲಿ ಹೇಳಬೇಕೆಂದರೆ, ಆ ಈ ಗೀತಾಶಾಸ್ತ್ರಕ್ಕೆ ಹೆಚ್ಚಿನ ನಿಃಶ್ರೇಯಸವೇ ಪ್ರಯೋಜನವು. ನಿಃಶ್ರೇಯಸವೆಂದರೆ ಕಾರಣಸಹಿತವಾಗಿ (ಅವಿದ್ಯಾಸಹಿತವಾಗಿ) ಸಂಸಾರವು ಅತ್ಯಂತವಾಗಿ ಇಲ್ಲವಾಗಿಬಿಡುವದು. ಇದು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ಆತ್ಮಜ್ಞಾನದಲ್ಲಿಯೇ ನಿಂತುಬಿಡುವದೆಂಬ ಧರ್ಮದಿಂದ ಆಗುತ್ತದೆ. 'ಜ್ಞಾನಂ ಸಂನ್ಯಾಸಲಕ್ಷಣಮ್' ॥

(ಅಶ್ವ. ೪೩-೨೬)

....ಸಃ ನಿತ್ಯಾತ್ಮಸ್ವರೂಪದರ್ಶನನಿಷ್ಠೋ ದ್ವನ್ದ್ವಸಹಿಷ್ಣುಃ ಅಮೃತತ್ವಾಯ ಅಮೃತಭಾವಾಯ ಮೋಕ್ಷಾಯ ಇತ್ಯರ್ಥಃ । ಕಲ್ಪತೇ ಸಮರ್ಥೋ ಭವತಿ ॥ (ಗೀ. ಭಾ. ೨-೧೫)

ನಿತ್ಯವಾದ ಆತ್ಮಸ್ವರೂಪದ ದರ್ಶನದಲ್ಲಿ ನಿಷ್ಠನಾಗಿ (ಶೀತೋಷ್ಣಾದಿ) ದ್ವಂದ್ವಗಳನ್ನು ಸಹಿಸಿಕೊಂಡಿರುವ ಧೀರನು (ವಿವೇಕಿಯು) ಅಮೃತನಾಗುವದಕ್ಕೆ ಎಂದರೆ ಮೋಕ್ಷವನ್ನು ಪಡೆಯುವದಕ್ಕೆ ಶಕ್ತನಾಗುತ್ತಾನೆ.

40.....ತತ್ತ್ವದರ್ಶಿಭಿಃ । ತತ್ ಇತಿ ಸರ್ವನಾಮ, ಸರ್ವಂ ಚ ಬ್ರಹ್ಮ, ತಸ್ಯ ನಾಮ ತತ್ ಇತಿ, ತದ್ಭಾವಃ ತತ್ತ್ವಮ್ । ಬ್ರಹ್ಮಣೋ ಯಾಥಾತ್ಮ್ಯಮ್ । ತತ್ ದ್ರಷ್ಟುಂ ಶೀಲಂ ಯೇಷಾಂ ತೇ ತತ್ತ್ವದರ್ಶಿನಃ ॥ (ಗೀ. ಭಾ. ೨-೧೬)

ತತ್ತ್ವದರ್ಶಿಗಳಿಂದ ದೃಷ್ಟವಾಗಿರುತ್ತದೆ, ಅರಿಯಲ್ಪಟ್ಟಿರುತ್ತದೆ. ತತ್ ಎಂಬುದು ಸರ್ವನಾಮವು ; ಸರ್ವವೂ ಬ್ರಹ್ಮವಾದ್ದರಿಂದ ಅದಕ್ಕೆ ತತ್ ಎಂದು ಹೆಸರು. ಆ ಬ್ರಹ್ಮದ ಸ್ವರೂಪವು ತತ್ತ್ವವು ಎಂದರೆ ಬ್ರಹ್ಮದ ನಿಜವಾದ ಸ್ವರೂಪವು. ಅದನ್ನು ತಿಳಿಯುವ ಸ್ವಭಾವವುಳ್ಳವರು ಯಾರೋ ಅವರು ತತ್ತ್ವದರ್ಶಿಗಳು.

41. ....ತಸ್ಮಾತ್ ವಿಶೇಷಿತಸ್ಯ ಅವಿಕ್ರಿಯಾತ್ಮದರ್ಶಿನೋ ವಿದುಷೋ ಸರ್ವಕರ್ಮಸಂನ್ಯಾಸ ಏವಾಧಿಕಾರಃ ॥ (ಗೀ.ಭಾ. ೨-೨೧)

ಆದ್ದರಿಂದ ಮೇಲೆ ಹೇಳಿದಂತೆ ವಿಕಾರವಿಲ್ಲದ ಆತ್ಮನನ್ನು ಅರಿತುಕೊಂಡಿರುವ ಜ್ಞಾನಿಗೆ ಸರ್ವಕರ್ಮಸಂನ್ಯಾಸದಲ್ಲಿಯೇ ಅಧಿಕಾರವು. ಯಾಜ್ಞವಲ್ಕ್ಯರು ಮೈತ್ರೇಯಿಗೆ ಹೇಳಿದ ವಿಚಾರಗಳಲ್ಲಿ ಅವರ ಮುಖ್ಯವಾದ ಅಭಿಪ್ರಾಯವೇ ಇದಾಗಿದೆ.

'ಮನಸೈವಾನುದ್ರಷ್ಟವ್ಯಮ್' (ಬೃ. ೪-೪-೧೯) ಇತಿ ಶ್ರುತೇಃ। ಶಾಸ್ತ್ರಾಚಾರ್ಯೋಪದೇಶಶಮದಮಾದಿಸಂಸ್ಕೃತಂ ಮನಃ ಆತ್ಮದರ್ಶನೇ ಕರಣಮ್' ॥ (ಗೀ. ಭಾ. ೨-೨೧)

"ಮನಸ್ಸಿನಿಂದಲೇ ಕಂಡುಕೊಳ್ಳಬೇಕು." (ಬೃ. ೪-೪-೧೯) ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಶಾಸ್ತ್ರದ ಮತ್ತು ಆಚಾರ್ಯರ ಉಪದೇಶದಿಂದಲೂ ಶಮದಮಾದಿಗಳಿಂದಲೂ ಸಂಸ್ಕಾರವನ್ನು ಹೊಂದಿರುವ ಮನಸ್ಸು ಆತ್ಮನನ್ನು ಕಂಡುಕೊಳ್ಳುವದಕ್ಕೆ ಕರಣವು-ಸಾಧನವು.

42. ....ಆತ್ಮನ್ಯೇವ ಪ್ರತ್ಯಗಾತ್ಮಸ್ವರೂಪೇ ಏವ ಆತ್ಮನಾ ಸ್ವೇನೈವ ಬಾಹ್ಯಲಾಭನಿರಪೇಕ್ಷಃ ತುಷ್ಟಃ ಪರಮಾರ್ಥದರ್ಶನಾಮೃತರಸಲಾಭೇನ ಅನ್ಯಸ್ಮಾತ್ ಅಲಂಪ್ರತ್ಯಯವಾನ್ ಸ್ಥಿತಪ್ರಜ್ಞಃ ಸ್ಥಿತಾ ಪ್ರತಿಷ್ಠಿತಾ ಆತ್ಮಾನಾತ್ಮವಿವೇಕಜಾ ಪ್ರಜ್ಞಾ ಯಸ್ಯ ಸಃ ಸ್ಥಿತಪ್ರಜ್ಞಃ ವಿದ್ವಾನ್ ತದಾ ಉಚ್ಯತೇ । ತ್ಯಕ್ತಪುತ್ರವಿತ್ತಲೋಕೈಷಣಃ ಸಂನ್ಯಾಸೀ ಆತ್ಮಾರಾಮಃ ಆತ್ಮಕ್ರೀಡಃ ಸ್ಥಿತಪ್ರಜ್ಞಃ ಇತ್ಯರ್ಥಃ ॥ (ಗೀ. ಭಾ. ೨-೫೫)

ಆತ್ಮನಲ್ಲಿಯೇ ಎಂದರೆ, ಪ್ರತ್ಯಗಾತ್ಮಸ್ವರೂಪದಲ್ಲಿಯೇ ಆತ್ಮನಿಂದ ಎಂದರೆ ತನ್ನಿಂದಲೇ-ಹೊರಗಿನ ವಸ್ತುವನ್ನು ಪಡೆದುಕೊಳ್ಳುವ ಅಪೇಕ್ಷೆಯಿಲ್ಲದೆಯೇ-ತುಷ್ಟನಾಗಿರುವನೋ, ಪರಮಾರ್ಥವನ್ನು ಕಂಡುಕೊಂಡಿರುವದೆಂಬ ಪರಮಾರ್ಥದರ್ಶನಾಮೃತರಸ- ಎಂಬ ಅಮೃತರಸವು ಸಿಕ್ಕಿರುವದರಿಂದ ಉಳಿದದ್ದೇನೂ ತನಗೆ ಬೇಡವೆಂಬ ಭಾವವನ್ನು ಯಾವಾಗ ಹೊಂದಿರುವನೋ ಆಗ ಅವನು ಸ್ಥಿತಪ್ರಜ್ಞನು ಎನಿಸಿಕೊಳ್ಳುತ್ತಾನೆ; ಯಾವನಿಗೆ ಆತ್ಮಾನಾತ್ಮಗಳ ವಿವೇಕದಿಂದ ಉಂಟಾದ ಪ್ರಜ್ಞೆಯು ನಿಂತಿರುವದೋ-ನೆಲೆನಿಂತಿರುವದೋ ಅಂಥವನು ಸ್ಥಿತಪ್ರಜ್ಞನು- ಜ್ಞಾನಿಯು ಎನಿಸಿಕೊಳ್ಳುತ್ತಾನೆ. ಮತ್ತು ಪುತ್ರ, ವಿತ್ತ, ಲೋಕ- ಎಂಬ ವಿಷಯಾತ್ರಯಗಳನ್ನು ತ್ಯಜಿಸಿ, ಸಂನ್ಯಾಸಿಯಾಗಿ, ಆತ್ಮಾರಾಮನಾಗಿ ಯಾವನು ಆತ್ಮಕ್ರೀಡನಾಗಿರುವನೋ ಅವನೇ ಸ್ಥಿತಪ್ರಜ್ಞನು. (ಗೀ. ಭಾ. ೨-೫೫) ಯಾಜ್ಞವಲ್ಕ್ಯರು ಮೈತ್ರೇಯಿಗೆ ಹೇಳಿದ ಉಪದೇಶವೇ ಇದು.

43. ....ನಾಸತಿ ಸಮ್ಯಗ್ದರ್ಶನೇ ರಸಸ್ಯ ಉಚ್ಛೇದಃ । ತಸ್ಮಾತ್ ಸಮ್ಯಗ್ದರ್ಶನಾತ್ಮಿಕಾಯಾಃ ಪ್ರಜ್ಞಾಯಾಃ ಸ್ಥೈರ್ಯಂ ಕರ್ತವ್ಯಮ್ ಇತ್ಯಭಿಪ್ರಾಯಃ ॥ (ಗೀ. ಭಾ. ೨-೫೯)

ಸಮ್ಯಗ್ದರ್ಶನವು (ಸರಿಯಾದ ಜ್ಞಾನವು) ಉಂಟಾಗದಿದ್ದರೆ ರಸವು (ರಾಗವು) ನಾಶವಾಗದು. ಆದ್ದರಿಂದ ಸಮ್ಯಗ್ದರ್ಶನರೂಪವಾದ ಪ್ರಜ್ಞೆಯನ್ನು ಸ್ಥಿರಗೊಳಿಸಿಕೊಳ್ಳಬೇಕು.

44. ವಿದುಷಃ ತ್ಯಕ್ತೈಷಣಸ್ಯ ಸ್ಥಿತಪ್ರಜ್ಞಸ್ಯ ಯತೇರೇವ ಮೋಕ್ಷಪ್ರಾಪ್ತಿಃ ನ ತು ಅಸಂನ್ಯಾಸಿನಃ ಕಾಮಕಾಮಿನಃ ॥

(ಗೀ. ಭಾ. ೨-೭೦ ಅವತರಣಿಕಾ)

ಏಷಣೆಗಳನ್ನು ಬಿಟ್ಟು ಜ್ಞಾನಿಯಾಗಿರುವ ಸ್ಥಿತಪ್ರಜ್ಞನಾಗಿರುವ ಯತಿಗೇ ಮೋಕ್ಷವು ಸಿಕ್ಕುವದೇ ಹೊರತು ಸಂನ್ಯಾಸಿಯಲ್ಲದೆ ಕಾಮಗಳನ್ನು (ಭೋಗಗಳನ್ನು) ಬಯಸುತ್ತಿರುವವನಿಗೆ ಸಿಕ್ಕುವದಿಲ್ಲ.

....ಬ್ರಾಹ್ಮಣಸ್ಯ ಸಂನ್ಯಾಸಿನಃ ಪರಮಾರ್ಥತತ್ತ್ವಂ ವಿಜಾನತಃ ಯೋಽರ್ಥಃ ಯತ್ ವಿಜ್ಞಾನಫಲಂ ಸರ್ವತಃಸಂಪ್ಲುತೋದಕಸ್ಥಾನೀಯಮ್ ತಸ್ಮಿನ್ ತಾವಾನೇವ ಸಂಪದ್ಯತೇ ತತ್ರೈವ ಅನ್ತರ್ಭವತಿ ಇತ್ಯರ್ಥಃ ॥ (ಗೀ. ಭಾ. ೨-೪೬)

(ಸಣ್ಣ ಸಣ್ಣ ಕೆರೆ ಕುಂಟೆ ಮುಂತಾದವುಗಳಲ್ಲಿ ಆಗುವ ಸ್ನಾನಪಾನಾದಿ ಪ್ರಯೋಜನವೆಲ್ಲಾ ಎಲ್ಲೆಲ್ಲಿಯೂ ನೀರು ತುಂಬಿರುವ ಮಹತ್ತಾದ ಜಲಾಶಯದಲ್ಲಿ ಆಗುವದಲ್ಲದೆ ಹೆಚ್ಚಾಗಿಯೂ ಆಗುವದು.) ಈ ಉದಾಹರಣೆಯಲ್ಲಿರುವ ಸಣ್ಣ ಸಣ್ಣ ಕೆರೆ ಕುಂಟೆಗಳ ಪ್ರಯೋಜನದಂತೆ ವೇದೋಕ್ತಕರ್ಮಗಳ ಫಲವು ಅಪೂರ್ಣವಾದುದು. ಅಂದರೆ ಅಲ್ಪವಾದುದು. ಪರಮಾರ್ಥತತ್ತ್ವವನ್ನು ಬಲ್ಲ ಸಂನ್ಯಾಸಿಯ ಸಮ್ಯಗ್ದರ್ಶನವೆಂಬ ಬ್ರಹ್ಮಾತ್ಮವಿಜ್ಞಾನದ ಫಲವು, ಪೂರ್ಣಾನಂದವೆಂಬ ಅಮೃತತ್ತ್ವವು ಸರ್ವತ್ರ ಜಲಪರಿಪೂರ್ಣವಾದ ಮಹಾಜಲಾಶಯದ ಪ್ರಯೋಜನವಿರುವಂತೆ ಇದೆ.

45. ನ ತ್ವಮ್ ಏತಸ್ಮಿನ್ ಸರ್ವತಃ ಸಂಪ್ಲುತೋದಕಸ್ಥಾನೀಯೇ ಸಮ್ಯಗ್ದರ್ಶನೇ ವರ್ತಸೇ । (ಗೀ. ಭಾ. ೩-೧೯ ಅವತರಣಿಕಾ)

ಆದರೆ ನೀನು ಎಲ್ಲೆಲ್ಲಿಯೂ ನೀರು ತುಂಬಿರುವ ಜಲಾಶಯದಂತೆ ಇರುವ ಈ ಸಮ್ಯಗ್ದರ್ಶನದಲ್ಲಿ ಇರುವದಿಲ್ಲ.

ಈ ಉಪಮಾನದಲ್ಲಿ ಸಮ್ಯಗ್ದರ್ಶನವೆಂದರೆ ಪರಿಪೂರ್ಣವಿಜ್ಞಾನ ಎಂಬ ಸ್ಪಷ್ಟವಾದ ಅರ್ಥವಿದೆ. ಅಸಂಖ್ಯಾತಜೀವರಿಂದಲೂ ಅನಂತವಾದ ದೇಶಕಾಲಕಾರಣಕಾರ್ಯಭಾವಗಳಿಂದಲೂ ಜೀವರ ನಿಷ್ಕೃಷ್ಟವಾದ ಕ್ರಿಯಾಕಾರಕಫಲಗಳಿಂದಲೂ ಕೂಡಿರುವ ಆಧಿಭೌತಿಕವೂ ಆಧಿದೈವಿಕವೂ ಆಧ್ಯಾತ್ಮಿಕವೂ ಆದ ನಮ್ಮೀ ಎಚ್ಚರದ ಜಗತ್ತು ನಮ್ಮ ಎಚ್ಚರವನ್ನು ಬಿಟ್ಟು ಬೇರೆ ಇಲ್ಲ; ನಮ್ಮ ಕನಸಿನ ಜಗತ್ತು ಆ ಕನಸನ್ನು ಬಿಟ್ಟು ಬೇರೆ ಇಲ್ಲ; ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳ ವಾಸನಾಬೀಜವುಳ್ಳ ನಿದ್ರೆಯು ನಮ್ಮ ನಿದ್ರಾವಸ್ಥೆಯನ್ನು ಬಿಟ್ಟು ಬೇರೆ ಇಲ್ಲ. ನಮ್ಮ ಚಿನ್ಮಾತ್ರಸ್ವರೂಪದಲ್ಲಿ (ಬರಿಅರಿವಿನಲ್ಲಿ) ಅವಿದ್ಯೆಯಿಂದ ತೋರುತ್ತಲೂ ಅಡಗುತ್ತಲೂ ಇರುವ ಈ ಮೂರು ಅವಸ್ಥೆಗಳು ನಮ್ಮ ಸ್ವರೂಪವನ್ನು ಬಿಟ್ಟು ಬೇರೆ ಇಲ್ಲ. ತೋರುವ ಜಗತ್ತು ವ್ಯಾಕೃತಮಾಯೆ, ಅಡಗಿತೆಂಬ ಜಗತ್ತು ಅವ್ಯಾಕೃತಮಾಯೆ. ಈ ಎರಡು ಬಗೆಯ ಮಾಯೆಯೂ ಅವಿದ್ಯಾಕಲ್ಪಿತವಾಗಿವೆ. ಭ್ರಮೆಯಿಂದ ನೀರಿನಂತೆ ತೋರುವ ಬಿಸಿಲ್ಕುದುರೆಯಲ್ಲಿ

ಒಳಹೊರಗೆಲ್ಲಾ ತುಂಬಿರುವದು ಬಿಸಿಲಿನ ಹೊರತು ಬೇರೊಂದಿಲ್ಲ ಎಂಬ ನಿಶ್ಚಯದಂತೆ ಅಜ್ಞಾನದಿಂದ ಸತ್ಯವಾಗಿ ತೋರುವ ಎಚ್ಚರಕನಸುಗಳ ಪರಿಚ್ಛಿನ್ನ ಜಗತ್ತಿನ ಒಳಹೊರಗೆಲ್ಲಾ ಪರಿಪೂರ್ಣವಾಗಿ ತುಂಬಿರುವದು ಚಿನ್ಮಾತ್ರಸ್ವರೂಪವೇ ಹೊರತು ಬೇರೊಂದು ಸತ್ಯವಲ್ಲ ಎಂಬ ನಿಶ್ಚಯವೇ ವಿವೇಕವಿಜ್ಞಾನ. ಈ ದೃಷ್ಟಿಯಲ್ಲಿ ಬಾಧಿತಾನುವೃತ್ತಿಯಿಂದ ಜಗತ್ತು ತೋರುತ್ತಿರುವಾಗಲೂ-ಮರೀಚಿಕೆಯಂತೆ- ಅದು ಹುಸಿತೋರಿಕೆ ಎಂಬ ನಿಶ್ಚಯಜ್ಞಾನವಿರುವದರಿಂದ ಅದರಿಂದ ಬಾಧಕವಿಲ್ಲ. ಇನ್ನು, ಪರಮಾರ್ಥದೃಷ್ಟಿಯಿಂದ ವಿಚಾರಮಾಡಿದಾಗ, ಅವಿದ್ಯಾಕಾಮಕರ್ಮಗಳಾಗಲಿ, ಅವುಗಳ ವಾಸನೆಯಾಗಲಿ, ಅದರ ಬೀಜವಾಗಲಿ ಲೇಶವೂ ಇಲ್ಲದ ಗಾಢನಿದ್ರೆಯಲ್ಲಿ ನಮ್ಮ ಚಿನ್ಮಾತ್ರಸ್ವರೂಪವು ಸನ್ಮಾತ್ರವಾಗಿ ತಾನೇ ತಾನಾದ ಪೂರ್ಣಾನಂದಘನವಾಗಿ ಅದ್ವಿತೀಯವಾಗಿಯೂ ಅಸಂಗವಾಗಿಯೂ ಅಮೃತವಾಗಿಯೂ ಪರಮಸತ್ಯವಾಗಿದೆ ಎಂಬುದೇ ವಿವೇಕವಿಜ್ಞಾನ. ಹಗ್ಗವನ್ನೇ ಸಂಜೆಗತ್ತಲೆಯಲ್ಲಿ ಒಮ್ಮೆ ಹಾವೆಂದೂ ಇನ್ನೊಮ್ಮೆ ಹೂವಿನ ಮಾಲೆಯೆಂದೂ ಮತ್ತೊಮ್ಮೆ ನೀರಿನ ಕೋಡಿಯೆಂದೂ ತಪ್ಪಾಗಿ ತಿಳಿಯುವಂತೆ, ನಮ್ಮ ಸ್ವರೂಪವನ್ನೇ ಅಜ್ಞಾನದಿಂದ ಎಚ್ಚರವೆಂದೂ ಕನಸೆಂದೂ ನಿದ್ರೆಯೆಂದೂ ವಿಕಲ್ಪಿಸಿಕೊಳ್ಳುತ್ತಿರುವದರಿಂದ, ಅಜವೂ ಅಜರವೂ ಅಮರವೂ ಅಮೃತವೂ ಅಭಯವೂ ಅದ್ವಿತೀಯವೂ ಆದ ನಮ್ಮ ಸಚ್ಚಿದಾನಂದ ಪರಿಪೂರ್ಣಸ್ವರೂಪ ಒಂದೇ ಪರಮಸತ್ಯವೆಂಬ ನಿಶ್ಚಯವೇ ವಿವೇಕವಿಜ್ಞಾನ. ಇದೇ ಪರಮಾರ್ಥ ದೃಷ್ಟಿಯು ಪರಿಪೂರ್ಣದರ್ಶನ ; ಇದೇ ಸಮ್ಯಗ್ದರ್ಶನ.

**46.....ನ ಹಿ ಅಸ್ಯ ಯೋಗಸ್ಯ ಸಮ್ಯಗ್ದರ್ಶನನಿಷ್ಠಾಲಕ್ಷಣಸ್ಯ ಮೋಕ್ಷಾಖ್ಯಂ ಫಲಂ ವ್ಯೇತಿ ||** (ಗೀ. ಭಾ. ೪-೧)

(ಅವ್ಯಯವಾದ ಯೋಗದ ಫಲವು ಅವ್ಯಯವಾಗಿರುತ್ತದೆ.) ಏಕೆಂದರೆ, ಸಮ್ಯಗ್ದರ್ಶನದಲ್ಲಿ ನಿಲುಗಡೆಯನ್ನು ಪಡೆಯುವದೆಂಬ ಈ ಯೋಗದ ಮೋಕ್ಷವೆಂಬ ಫಲವು ನಾಶವಾಗುವದೇ ಇಲ್ಲ.

**47 ....ಕರ್ಮಾದೌ ಅಕರ್ಮಾದಿದರ್ಶನಂ ಜ್ಞಾನಮ್ ||**
(ಗೀ. ಭಾ. ೪-೧೯)

ಮೇಲೆ ಹೇಳಿರುವಂತೆ ಕರ್ಮದಲ್ಲಿ ಅಕರ್ಮವನ್ನು ಕಾಣುವದೇ ಮುಂತಾದ ತಿಳಿವಳಿಕೆಯೇ ಜ್ಞಾನವು, ಅದೇ ಅಗ್ನಿಯು.

**ಯಸ್ತು ಕರ್ಮಾದೌ ಅಕರ್ಮಾದಿದರ್ಶೀ ಸಃ ಅಕರ್ಮಾದಿ ದರ್ಶನಾದೇವ ನಿಷ್ಕರ್ಮಾ ಸಂನ್ಯಾಸೀ ಜೀವನಮಾತ್ರಾರ್ಥ ಚೇಷ್ಟಃ ಸನ್ ಕರ್ಮಣಿ ನ ಪ್ರವರ್ತತೇ ಯದ್ಯಪಿ ಪ್ರಾಕ್**

ವಿವೇಕತಃ ಪ್ರವೃತ್ತಃ । ಯಸ್ತು ಪ್ರಾರಬ್ಧಕರ್ಮಾ ಸನ್ ಉತ್ತರ ಕಾಲಮ್ ಉತ್ಪನ್ನಾತ್ಮಸಮ್ಯಗ್ದರ್ಶನಃ ಸ್ಯಾತ್ ಸ ಸರ್ವ ಕರ್ಮಣಿ ಪ್ರಯೋಜನಮ್ ಅಪಶ್ಯನ್ ಸಸಾಧನಂ ಕರ್ಮ ಪರಿತ್ಯಜತ್ಯೇವ ॥ (ಗೀ. ಭಾ. ೪-೧೯)

ಯಾವನಾದರೆ ಕರ್ಮದಲ್ಲಿ ಅಕರ್ಮವನ್ನು ನೋಡುವದೇ ಮುಂತಾದ ಜ್ಞಾನವುಳ್ಳವನೋ ಆತನು ಹೀಗೆ ಅಕರ್ಮವೇ ಮುಂತಾದುದನ್ನು ಕಾಣುವದ ರಿಂದಲೇ ನಿಷ್ಕರ್ಮನಾಗಿ, ಸಂನ್ಯಾಸಿಯಾಗಿ ಬದುಕಿರುವವುಟ್ಟಿಗೆ ಬೇಕಾದ ಕೆಲಸವನ್ನು ಮಾಡುತ್ತಿರುವನು. ಈ ವಿವೇಕವುಂಟಾಗುವ ಮೊದಲು ಕರ್ಮದಲ್ಲಿ ತೊಡಗಿದ್ದನಾದರೂ ಇನ್ನು ಮುಂದೆ ಕರ್ಮದಲ್ಲಿ ತೊಡಗುವದಿಲ್ಲ. ಆದರೆ ಕರ್ಮ ವನ್ನು ಪ್ರಾರಂಭಿಸಿದವನಾದಬಳಿಕ ಯಾವನಿಗೆ ಆತ್ಮನ ವಿಷಯವಾದ ಸಮ್ಯ-ಗ್ದರ್ಶನವು (ಸರಿಯಾದ ಜ್ಞಾನವು) ಉಂಟಾಗುವದೋ ಅವನಿಗೆ ಯಾವ ಕರ್ಮದಲ್ಲಿಯೂ ಯಾವ ಪ್ರಯೋಜನವೂ ತೋರುವದಿಲ್ಲವಾದ್ದರಿಂದ ಕರ್ಮ ವನ್ನೂ ಅದರ ಸಾಧನಗಳನ್ನೂ ಅವನು ಬಿಟ್ಟೇಬಿಡುತ್ತಾನೆ.

48. ಸೋಪಾಧಿಕಸ್ಯ ಆತ್ಮನಃ ನಿರುಪಾಧಿಕೇನ ಪರಬ್ರಹ್ಮ-ರೂಪೇಣೈವ ಯದ್ ದರ್ಶನಮ್ ಸ ತಸ್ಮಿನ್ ಹೋಮಃ । ತಂ ಕುರ್ವನ್ತಿ ಬ್ರಹ್ಮಾತ್ಮೈಕತ್ವದರ್ಶನನಿಷ್ಠಾಃ ಸಂನ್ಯಾಸಿನಃ ॥ (ಗೀ. ಭಾ. ೪-೨೫)

ಉಪಾಧಿಯಿಂದೊಡಗೂಡಿದ ಆತ್ಮನನ್ನು ಯಾವ ಉಪಾಧಿಯೂ ಇಲ್ಲದ ಪರಬ್ರಹ್ಮರೂಪದಿಂದ ಕಾಣುವದೆಂಬುದಿದೆಯಲ್ಲ, ಅದೇ ಆ ಬ್ರಹ್ಮಾಗ್ನಿಯಲ್ಲಿ ಮಾಡುವ ಹೋಮವು. ಬ್ರಹ್ಮಾತ್ಮೈಕತ್ವದರ್ಶನದಲ್ಲಿಯೇ ನೆಲೆನಿಂತಿರುವ ಸಂನ್ಯಾಸಿಗಳು ಅದನ್ನು ಮಾಡುವರು.

49. ಸೋಽಯಂ ಸಮ್ಯಗ್ದರ್ಶನಲಕ್ಷಣಃ ಯಜ್ಞಃ (ಗೀ. ಭಾ. ೪-೨೬ ಅವತರಣಿಕಾ)

ಆ ಈ ಸಮ್ಯಗ್ದರ್ಶನವೆಂಬ (ಸರಿಯಾದ ಆತ್ಮಜ್ಞಾನವೆಂಬ) ಯಜ್ಞವು.

50. ....ನ ಮದ್ವ್ಯಾಪಾರಾ ಇಮೇ, ನಿರ್ವ್ಯಾಪಾರೋ ಅಹಮ್ ಉದಾಸೀನಃ" ಇತಿ ಏವಂ ಜ್ಞಾತ್ವಾ ಅಸ್ಮಾತ್ ಸಮ್ಯಗ್ದರ್ಶನಾತ್ ಮೋಕ್ಷ್ಯಸೇ ಸಂಸಾರಬನ್ಧನಾತ್ ॥ (ಗೀ. ಭಾ. ೪-೩೨)

"ಇವು ನನ್ನ ಕೆಲಸಗಳಲ್ಲ, ನಾನು ಯಾವ ವ್ಯಾಪಾರವೂ ಇಲ್ಲದೆ ಸುಮ್ಮನೆ ಇರುತ್ತೇನೆ." ಎಂದೀಪರಿಯಲ್ಲಿ ತಿಳಿದುಕೊಳ್ಳುವದಾದರೆ ಈಸಮ್ಯಗ್ದರ್ಶನದ ಫಲವಾಗಿ (ಈ ಸರಿಯಾದ ತಿಳಿವಳಿಕೆಯಿಂದ) ಸಂಸಾರದ ಬಂಧನದಿಂದ ಬಿಡುಗಡೆಯನ್ನು ಹೊಂದುವೆ.

51..... ಯೇ ಸಮ್ಯಗ್ದರ್ಶಿನಃ ತೈರುಪದಿಷ್ಟಂ ಜ್ಞಾನಂ ಕಾರ್ಯಕ್ಷಮಂ ಭವತಿ ನೇತರತ್ ಇತಿ ಭಗವತೋ ಮತಮ್ ॥

(ಗೀ. ಭಾ. ೪-೩೪ ಅವ)

ಯಾರು ಸಮಗ್ದರ್ಶಿಗಳೋ (ಸರಿಯಾಗಿ ತತ್ತ್ವವನ್ನು ಮನಗಂಡಿರುವರೋ) ಅವರು ಉಪದೇಶಮಾಡಿದ ಜ್ಞಾನವೇ ಕಾರ್ಯಕಾರಿಯಾಗುವದೇ ಹೊರತು ಮಿಕ್ಕದ್ದು ಆಗಲಾರದು- ಎಂಬಿದು ಭಗವಂತನ ಅಭಿಪ್ರಾಯವು.

52.....ತಸ್ಮಾತ್ ಸಮ್ಯಗ್ದರ್ಶನಂ ಸರ್ವಕರ್ಮಣಾಂ ನಿರ್ಬೀಜತ್ವಕಾರಣಮ್ ಇತ್ಯಭಿಪ್ರಾಯಃ ॥ (ಗೀ. ಭಾ. ೪-೩೭)

ಆದ್ದರಿಂದ ಸಮ್ಯಗ್ದರ್ಶನವು (ಸರಿಯಾದ ಆತ್ಮಜ್ಞಾನವು) ಕರ್ಮಗಳೆಲ್ಲವೂ ನಿರ್ಬೀಜವಾಗುವಂತೆ ಮಾಡುವದಕ್ಕೆ ಕಾರಣವಾಗುವದೆಂದೇ ಅಭಿಪ್ರಾಯವು.

53..... ಸಮ್ಯಗ್ದರ್ಶನಾತ್ ಕ್ಷಿಪ್ರಮೇವ ಮೋಕ್ಷೋ ಭವತಿ ಇತಿ ಸರ್ವಶಾಸ್ತ್ರನ್ಯಾಯಪ್ರಸಿದ್ಧಃ ಸುನಿಶ್ಚಿತೋಽರ್ಥಃ ॥

(ಗೀ. ಭಾ. ೪-೩೯)

ಸಮ್ಯಗ್ದರ್ಶನದಿಂದ (ಸರಿಯಾದ ಆತ್ಮಜ್ಞಾನದಿಂದ) ಮೋಕ್ಷವುಂಟಾಗುವದೆಂಬುದು ಸಕಲಶಾಸ್ತ್ರಗಳಿಂದಲೂ ಯುಕ್ತಿಯಿಂದಲೂ ಸಿದ್ಧವಾಗಿ ಅತ್ಯಂತವಾಗಿ ನಿಶ್ಚಿತವಾಗಿರುವ ವಿಷಯವು.

54- ಯೋಗಸಂನ್ಯಸ್ತಕರ್ಮಾಣಂ ಪರಮಾರ್ಥದರ್ಶನಲಕ್ಷಣೇನ ಯೋಗೇನ ಸಂನ್ಯಸ್ತಾನಿ ಕರ್ಮಾಣಿ ಯೇನ ಪರಮಾರ್ಥದರ್ಶಿನಾ ಧರ್ಮಾಧರ್ಮಾಖ್ಯಾನಿ ತಂ ಯೋಗಸಂನ್ಯಸ್ತಕರ್ಮಾಣಮ್ ॥ (ಗೀ. ಭಾ. ೪-೪೧)

ಯೋಗಸಂನ್ಯಸ್ತಕರ್ಮನು ಎಂದರೆ ಪರಮಾರ್ಥದರ್ಶನವೆಂಬ ಯೋಗದಿಂದ (ಆತ್ಮಜ್ಞಾನದಿಂದ) ಧರ್ಮ, ಅಧರ್ಮ ಎಂಬ ಹೆಸರಿನ ಕರ್ಮಗಳನ್ನು ಯಾವನು ಸಂನ್ಯಾಸಮಾಡಿರುವನೋ ಅವನು.

55..... ಶೋಕಮೋಹಾದಿದೋಷಹರಂ ಸಮ್ಯಗ್ದರ್ಶನಂ ಜ್ಞಾನಂ ತದೇವ ಅಸಿಃ ಖಡ್ಗಃ....ಯೋಗಂ ಸಮ್ಯಗ್ದರ್ಶನೋಪಾಯಂ ಕರ್ಮಾನುಷ್ಠಾನಮ್ ॥ (ಗೀ. ಭಾ. ೪-೪೨)

ಶೋಕ, ಮೋಹ- ಮುಂತಾದ ದೋಷಗಳನ್ನು ತೊಲಗಿಸುವ ಸಮ್ಯಗ್ದರ್ಶನವೇ ಜ್ಞಾನವು, ಆ ಜ್ಞಾನವೆಂಬುದೇ ಅಸಿಯು ಖಡ್ಗವು. ಸಂಶಯವನ್ನು ಕತ್ತರಿಸಿಹಾಕಿಕೊಂಡು ಯೋಗವನ್ನು ಎಂದರೆ ಸಮ್ಯಗ್ದರ್ಶನಕ್ಕೆ ಉಪಾಯವಾಗಿರುವ ಕರ್ಮಾನುಷ್ಠಾನವನ್ನು ಸ್ವೀಕರಿಸು, ಮಾಡು.

56.....ಜನ್ಮಾದಿಸರ್ವವಿಕ್ರಿಯಾರಹಿತತ್ವೇನ ನಿಷ್ಕ್ರಿಯಮ್ ಆತ್ಮಾನಮ್ ಆತ್ಮತ್ವೇನ ಯೋ ವೇತ್ತಿ ತಸ್ಯ ಆತ್ಮವಿದಃ ಸಮ್ಯಗ್ದರ್ಶನೇನ ಅಪಾಸ್ತಮಿಥ್ಯಾಜ್ಞಾನಸ್ಯ ನಿಷ್ಕ್ರಿಯಾತ್ಮಸ್ವರೂಪಾವಸ್ಥಾನಲಕ್ಷಣಂ ಸರ್ವಕರ್ಮಸಂನ್ಯಾಸಮ್ ಉಕ್ತ್ವಾ ॥ (ಗೀ. ಭಾ. ಅಧ್ಯಾಯ ೫ ಅವ)

ಜನ್ಮವೇ ಮುಂತಾದ ಯಾವ ವಿಕಾರವೂ ಇಲ್ಲದ್ದರಿಂದ ನಿಷ್ಕ್ರಿಯನಾದ ಆತ್ಮನು ತಾನೆಂದು ಯಾವನು ಅರಿತುಕೊಂಡಿರುವನೋ ಆ ಆತ್ಮಜ್ಞಾನಿಗೆ ಸಮ್ಯಗ್ದರ್ಶನದಿಂದ ತಪ್ಪುತಿಳಿವಳಿಕೆಯು ಹೋಗಿಬಿಟ್ಟಿರುವದರಿಂದ ನಿಷ್ಕ್ರಿಯವಾದ ಆತ್ಮರೂಪದಲ್ಲಿದ್ದುಬಿಡುವದೆಂಬ ಸರ್ವಕರ್ಮಸಂನ್ಯಾಸವನ್ನು ಹೇಳಿದೆ.

ಆತ್ಮತತ್ತ್ವವಿದಃ ಸಮ್ಯಗ್ದರ್ಶನವಿರುದ್ಧೋ ಮಿಥ್ಯಾಜ್ಞಾನಹೇತುಕಃ ಕರ್ಮಯೋಗಃ ಸ್ವಪ್ನೇಽಪಿ ನ ಸಂಭಾವಯಿತುಂ ಶಕ್ಯತೇ॥ (ಗೀ. ಭಾ. ಅಧ್ಯಾಯ ೫ ಅವ)

ಸಮ್ಯಗ್ದರ್ಶನಕ್ಕೆ ವಿರುದ್ಧವಾದ ತಪ್ಪುತಿಳಿವಳಿಕೆಯೆಂಬ ಕಾರಣವುಳ್ಳ ಕರ್ಮಯೋಗವು ಆತ್ಮತತ್ತ್ವವನ್ನು ಬಲ್ಲಾತನಿಗೆ ಇರಬಹುದೆಂದು ಕನಸಿನಲ್ಲಿ ಕೂಡ ಕಲ್ಪಿಸುವದಕ್ಕೆ ಆಗಲಾರದು.

57- ತಸ್ಯ ಏವಂ ತತ್ತ್ವವಿದಃ ಸರ್ವಕಾರ್ಯಕರಣಚೇಷ್ಟಾಸು ಕರ್ಮಸು ಅಕರ್ಮೈವ ಪಶ್ಯತಃ ಸಮ್ಯಗ್ದರ್ಶಿನಃ ಸರ್ವಕರ್ಮಸಂನ್ಯಾಸೇ ಏವ ಅಧಿಕಾರಃ । ಕರ್ಮಣಃ ಅಭಾವದರ್ಶನಾತ್ । ನ ಹಿ ಮೃಗತೃಷ್ಣಿಕಾಯಾಮ್ ಉದಕಬುದ್ಧ್ಯಾ ಪಾನಾಯ ಪ್ರವೃತ್ತಃ ಉದಕಾಭಾವಜ್ಞಾನೇಽಪಿ ತತ್ರೈವ ಪಾನಪ್ರಯೋಜನಾಯ ಪ್ರವರ್ತತೇ ॥ (ಗೀ. ಭಾ. ೫-೯)

ಹೀಗೆ ತತ್ತ್ವವನ್ನರಿತುಕೊಂಡಿರುವ ಸಕಲವಿಧವಾದ ದೇಹೇಂದ್ರಿಯಗಳ ವ್ಯಾಪಾರರೂಪವಾದ ಕರ್ಮಗಳಲ್ಲಿ ಅಕರ್ಮವನ್ನೇ ಕಾಣುತ್ತಿರುವ ಆ ಸಮ್ಯಗ್ದರ್ಶಿಗೆ (ಸರಿಯಾದ ಆತ್ಮಜ್ಞಾನವುಳ್ಳ ಆತನಿಗೆ) ಸರ್ವಕರ್ಮಸಂನ್ಯಾಸದಲ್ಲಿಯೇ ಅಧಿಕಾರವು. ಏಕೆಂದರೆ, ಅವನು ತನಗೆ ಕರ್ಮವೇ ಇಲ್ಲವೆಂಬುದನ್ನು ಕಂಡುಕೊಂಡಿರುತ್ತಾನೆ. ಬಿಸಿಲುಕುದುರೆಯಲ್ಲಿ (ಮೃಗತೃಷ್ಣೆಯಲ್ಲಿ) ನೀರೆಂಬ ಬುದ್ಧಿಯಿಂದ ಅದನ್ನು ಕುಡಿಯುವದಕ್ಕೆ ಹೊರಟವನು, ಅದು ನೀರಲ್ಲವೆಂಬ ಜ್ಞಾನವು ಉಂಟಾದ ಬಳಿಕವೂ ನೀರು ಕುಡಿಯುವದೆಂಬ ಪ್ರಯೋಜನವಾಗಬೇಕೆಂದು ಅದರಲ್ಲಿಯೇ ತೊಡಗಲಾರನಲ್ಲವೆ? ಅದರಂತೆಯೇ ಇಲ್ಲಿಯೂ ತಿಳಿಯಬೇಕು.

58. ಸರ್ವತ್ರ ಸಮದರ್ಶನಃ ಸರ್ವೇಷು ಬ್ರಹ್ಮಾದಿಸ್ಥಾವರಾನ್ತೇಷು ವಿಷಮೇಷು ಸರ್ವಭೂತೇಷು ಸಮಂ ನಿರ್ವಿಶೇಷಂ ಬ್ರಹ್ಮಾತ್ಮೈಕತ್ವವಿಷಯಂ ದರ್ಶನಂ ಜ್ಞಾನಂ ಯಸ್ಯ ಸಃ ಸರ್ವತ್ರಸಮದರ್ಶನಃ ॥ (ಗೀ. ಭಾ. ೬-೨೯)

ಅವನು ಸರ್ವತ್ರಸಮದರ್ಶನನಾಗಿ-ಎಂದರೆ ಬ್ರಹ್ಮನಿಂದ ಹಿಡಿದು ಸ್ಥಾವರದವರೆಗಿನ ಒಂದಕ್ಕಿಂತ ಒಂದು ಹೆಚ್ಚುಕಡಿಮೆ ಇರುವ ಸರ್ವಭೂತಗಳಲ್ಲಿಯೂ ಸಮವಾದ ಎಂದರೆ ನಿರ್ವಿಶೇಷವಾದ ಬ್ರಹ್ಮಾತ್ಮೈಕತ್ವವನ್ನೇ ಕಾಣುವ ದರ್ಶನವು ಎಂದರೆ ಜ್ಞಾನವು ಯಾವನಿಗಿರುವದೋ ಅವನು ಸರ್ವತ್ರಸಮದರ್ಶನನು. ಆದ್ದರಿಂದ ಸಮ್ಯಕ್‌ದರ್ಶನ ಎಂದರೆ ಸಮ್ಯಕ್‌ಜ್ಞಾನವು.

59. ಸರ್ವಥಾ ಸರ್ವಪ್ರಕಾರೈಃ ವರ್ತಮಾನೋಽಪಿ ಸಮ್ಯಗ್ದರ್ಶೀ ಯೋಗೀ ಮಯಿ ವೈಷ್ಣವೇ ಪರಮೇ ಪದೇ ವರ್ತತೇ । ನಿತ್ಯಮುಕ್ತ ಏವ ಸಃ, ನ ಮೋಕ್ಷಂ ಪ್ರತಿ ಕೇನಚಿತ್ ಪ್ರತಿಬಧ್ಯತೇ ಇತ್ಯರ್ಥಃ ॥ (ಗೀ. ಭಾ. ೬-೩೧)

ಯಾವನು ಹೀಗೆ ಅಹಿಂಸಕನಾಗಿ ಸಮ್ಯಗ್ದರ್ಶನದಲ್ಲಿ ನೆಲೆನಿಂತಿರುವನೋ ಆ ಯೋಗಿಯು ಯೋಗಿಗಳೊಳಗೆಲ್ಲ ಪರಮನು, ಹೆಚ್ಚಿನವನು-ಎಂದು ನನ್ನ ಅಭಿಪ್ರಾಯವು.

60. ಯ ಏವಮ್ ಅಹಿಂಸಕಃ ಸಮ್ಯಗ್ದರ್ಶನನಿಷ್ಠಃ ಸ ಯೋಗೀ ಪರಮ ಉತ್ಕೃಷ್ಟಃ ಮತಃ ಅಭಿಪ್ರೇತಃ ಸರ್ವಯೋಗಿನಾಂ ಮಧ್ಯೇ ॥ (ಗೀ. ಭಾ. ೬-೩೨)

ಸರಿಯಾಗಿ ಏಕತ್ವವನ್ನು ಕಂಡುಕೊಂಡಿರುವ (ಸಮ್ಯಗ್ದರ್ಶೀ) ಯೋಗಿಯು ಹೇಗೇ ಇರಲಿ, ಯಾವ ಯಾವ ಪ್ರಕಾರಗಳಿಂದ ಇರುತ್ತಿದ್ದರೂ ನನ್ನಲ್ಲಿಯೇ

ವಿಷ್ಣುವಿನ ಪರಮರೂಪದಲ್ಲಿಯೇ ಇರುವನು. ಅವನು ಎಂದೆಂದಿಗೂ ಮುಕ್ತನೇ. ಅವನ ಮೋಕ್ಷಕ್ಕೆ ಯಾವದೂ ಅಡ್ಡಿ ಇರುವದಿಲ್ಲ, ಎಂದರ್ಥ.

61. ಸಃ ಅಪ್ರಾಪ್ಯ ಯೋಗಸಂಸಿದ್ಧಿಂ ಯೋಗಫಲಂ ಸಮ್ಯಗ್ದರ್ಶನಂ ಕಾಂ ಗತಿಂ ಹೇ ಕೃಷ್ಣ ಗಚ್ಛತಿ ? (ಗೀ.ಭಾ. ೬-೩೭)

ಅವನು ಯೋಗಸಂಸಿದ್ಧಿಯನ್ನು ಎಂದರೆ ಯೋಗದ ಫಲವಾದ ಸಮ್ಯಗ್ದರ್ಶನವನ್ನು ಪಡೆಯದೆ ಇರುವದರಿಂದ ಯಾವ ಗತಿಯನ್ನು ಹೊಂದುತ್ತಾನೆ ?

62. ಅನೇಕಜನ್ಮಸಂಸಿದ್ಧಃ ತತಃ ಲಬ್ಧಸಮ್ಯಗ್ದರ್ಶನಃ ಸನ್ ಯಾತಿ ಪರಾಂ ಪ್ರಕೃಷ್ಟಾಂ ಗತಿಮ್ ॥ (ಗೀ.ಭಾ. ೬ ೪೫)

ಅನೇಕ ಜನ್ಮಸಂಸಿದ್ಧನಾಗಿ, ಅದರಿಂದ ಸಮ್ಯಗ್ದರ್ಶನವನ್ನು ಪಡೆದುಕೊಂಡವನಾಗಿ ಪರವಾದ ಹೆಚ್ಚಿನ ಗತಿಯನ್ನು ಹೊಂದುವನು.

63. ನ ಹಿ ಸದ್ಯೋಮುಕ್ತಿಭಾಜಾಂ ಸಮ್ಯಗ್ದರ್ಶನ ನಿಷ್ಠಾನಾಂ ಗತಿಃ ಆಗತಿರ್ವಾ ಕ್ವಚಿತ್ ಅಸ್ತಿ । 'ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ' (ಬೃ. ೪-೪-೬) ಇತಿ ಶ್ರುತೇಃ । ಬ್ರಹ್ಮಸಂಲೀನ ಪ್ರಾಣಾ (ಏವ ತೇ) ಬ್ರಹ್ಮಮಯಾ ಬ್ರಹ್ಮಭೂತಾ ಏವ ತೇ ॥ (ಗೀ. ಭಾ. ೮-೨೪)

ಏಕೆಂದರೆ ಸದ್ಯೋಮುಕ್ತಿಯನ್ನು ಹೊಂದುವವರಾದ ಸಮ್ಯಗ್ದರ್ಶನ ನಿಷ್ಠರಿಗೆ ಎಲ್ಲಿಗಾದರೂ ಹೋಗುವದಾಗಲಿ, ಮತ್ತೆ ಬರುವದಾಗಲಿ ಇರುವದಿಲ್ಲ. "ಆತನ ಪ್ರಾಣಗಳು ದೇಹವನ್ನು ಬಿಟ್ಟು ಮೇಲಕ್ಕೆ ಹೊರಡುವದಿಲ್ಲ." (ಬೃ. ೪-೪-೬) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಅವರು ಬ್ರಹ್ಮದಲ್ಲಿಯೇ ಅಡಗಿಹೋಗಿರುವ ಪ್ರಾಣವುಳ್ಳವರು. ಬ್ರಹ್ಮಮಯರಾಗಿ ಬ್ರಹ್ಮವೇ ಆಗಿರುತ್ತಾರೆ. ಅಲ್ಲವೆ ?

64. ತಚ್ಚ ಜ್ಞಾನಮ್ ಏಕತ್ವೇನ 'ಏಕಮೇವ ಪರಂ ಬ್ರಹ್ಮ' ಇತಿ ಪರಮಾರ್ಥದರ್ಶನೇನ ಯಜನ್ತಃ ಉಪಾಸತೇ ॥ (ಗೀ. ಭಾ. ೯-೧೫)

ಆ ಜ್ಞಾನವೆಂಬುದು ಏಕತ್ವದಿಂದ "ಪರಬ್ರಹ್ಮವು ಒಂದೇ" ಎಂಬ ಪರಮಾರ್ಥದರ್ಶನದಿಂದ ; ಅದರಿಂದ ಉಪಾಸನೆಮಾಡುತ್ತಾರೆ.

65. ಅನನ್ಯಾಃ....ನಾರಾಯಣಂ ಮಾಮ್ ಆತ್ಮತ್ವೇನ ....ಚಿನ್ತಯನ್ತಃ .... ಯೇ .... ಸಂನ್ಯಾಸಿನಃ ಪರ್ಯುಪಾಸತೇ ತೇಷಾಂ ಪರಮಾರ್ಥದರ್ಶಿನಾಂ ಸತತಾಭಿಯೋಗಿನಾಂ ಯೋಗ-ಕ್ಷೇಮಮ್ ವಹಾಮ್ಯಹಮ್ ॥ (ಗೀ. ಭಾ. ೯-೨೨)

ನನ್ನಿಂದ ಬೇರೆಯಾಗದವರಾಗಿ, ನಾರಾಯಣನಾದ ನನ್ನನ್ನು ಆತ್ಮನನ್ನಾಗಿ ಮಾಡಿಕೊಂಡವರಾಗಿ, ಧ್ಯಾನಿಸುತ್ತಾ ನನ್ನನ್ನು ಯಾವ ಸಂನ್ಯಾಸಿಗಳು ಉಪಾಸನೆ ಮಾಡುತ್ತಲಿರುವರೋ ಪರಮಾರ್ಥದರ್ಶಿಗಳಾದ ಅವರ ಯೋಗಕ್ಷೇಮವನ್ನು ನಾನು ವಹಿಸುವೆನು.

66. ಸಃ ಅವಿಕಮ್ಪೇನ ಅಪ್ರಚಲಿತೇನ ಯೋಗೇನ ಸಮ್ಯಗ್ದರ್ಶನಸ್ಥೈರ್ಯಲಕ್ಷಣೇನ ಯುಜ್ಯತೇ ಸಂಬಧ್ಯತೇ । ನಾತ್ರ ಸಂಶಯಃ ॥ (ಗೀ. ಭಾ. ೧೦-೭)

ಅವನು ಸ್ವಲ್ಪವೂ ಅಲುಗಾಡದ ಸಮ್ಯಗ್ದರ್ಶನವು ನೆಲೆನಿಲ್ಲುವದೆಂಬ ಯೋಗದಿಂದ ಕೂಡಿಸಲ್ಪಡುವನು; ಇದರಲ್ಲಿ ಸಂಶಯವಿಲ್ಲ.

67. ದದಾಮಿ ಬುದ್ಧಿಯೋಗಂ ಬುದ್ಧಿಃ ಸಮ್ಯಗ್ದರ್ಶನಂ ಮತ್ತತ್ತ್ವವಿಷಯಮ್ । ತೇನ....(ಬುದ್ಧಿಯೋಗೇನ) ಸಮ್ಯಗ್ದರ್ಶನಲಕ್ಷಣೇನ ಮಾಂ ಪರಮೇಶ್ವರಮ್ ಆತ್ಮತ್ವೇನ ಪ್ರತಿಪದ್ಯನ್ತೇ ॥ (ಗೀ. ಭಾ. ೧೦-೧೦)

ಅವರಿಗೆ ಬುದ್ಧಿಯೋಗವನ್ನು, ಬುದ್ಧಿ ಎಂದರೆ ನನ್ನ ತತ್ತ್ವದ ವಿಷಯವಾದ ಸಮ್ಯಗ್ದರ್ಶನವು; ಆ ಬುದ್ಧಿಯೋಗವನ್ನು ಕೊಡುವೆನು. ಆ ಸಮ್ಯಗ್ದರ್ಶನಯೋಗದಿಂದ ತಮ್ಮ ಆತ್ಮನಾಗಿರುವ ಪರಮೇಶ್ವರನಾದ ನನ್ನನ್ನು ತಮ್ಮ ಆತ್ಮನೆಂದು (ಸೇರುವರು, ಎಂದರೆ) ಅರಿತುಕೊಳ್ಳುವರು. ಅವರು ಮಚ್ಚಿತ್ತರು, ಮದ್ಗತಪ್ರಾಣರು.

68. ನಿತ್ಯಪ್ರವೃತ್ತೈಕಾಗ್ರ್ಯಧ್ಯಾನಜನಿತಸಮ್ಯಗ್ದರ್ಶನ-ಭಾಸ್ವತಾ ಜ್ಞಾನದೀಪೇನ ॥ (ಗೀ. ಭಾ. ೧೦-೧೧)

ಯಾವಾಗಲೂ ಸಾಧನೆಮಾಡಿದ ಏಕಾಗ್ರತೆಯ ಧ್ಯಾನದಿಂದುಂಟಾದ ಸಮ್ಯಗ್ದರ್ಶನದಿಂದ ಬೆಳಗುತ್ತಿರುವದಾಗಿಯೂ ಇರುವ ಜ್ಞಾನದೀಪದಿಂದ ಮೋಹದ ಕತ್ತಲೆಯನ್ನು ನಾಶಗೊಳಿಸುವೆನು.

69. ಶ್ರೀಭಗವಾನ್ ಉವಾಚ– ಯೇ ಅಕ್ಷರೋಪಾಸಕಾಃ ಸಮ್ಯಗ್ದರ್ಶಿನಃ ನಿವೃತ್ತೈಷಣಾಃ, ತೇ ತಾವತ್ ತಿಷ್ಠನ್ತು ॥ (ಗೀ. ಭಾ. ೧೨-೨ ಅವ)

ಶ್ರೀ ಭಗವಂತನಿಂತೆಂದನು :– ಯಾರು ಸಮ್ಯಗ್ದರ್ಶಿಗಳಾಗಿ ಏಷಣೆಗಳನ್ನೆಲ್ಲ ತೊರೆದು ಅಕ್ಷರವನ್ನು ಉಪಾಸನೆಮಾಡುತ್ತಿರುವರೋ ಅವರು ಮೊದಲು ಹಾಗಿರಲಿ.

**70.** ಅಕ್ಷರಾತ್ಮನಾಂ ಪರಮಾರ್ಥದರ್ಶಿನಾಂ ದೇಹಾಭಿಮಾನಪರಿತ್ಯಾಗನಿಮಿತ್ತಃ ಅವ್ಯಕ್ತಾಸಕ್ತಚೇತಸಾಮ್ ಅಧಿಕತರಸ್ತು ಕ್ಲೇಶಃ ॥ (ಗೀ. ಭಾ. ೧೨-೫)

ಆದರೆ, ಅಕ್ಷರದಲ್ಲಿಯೇ ಮನಸ್ಸಿಟ್ಟವರಾಗಿ ಪರಮಾರ್ಥದರ್ಶಿಗಳಾದ ಅವ್ಯಕ್ತಾಸಕ್ತಚಿತ್ತರಿಗೆ ದೇಹಾಭಿಮಾನವನ್ನು ಬಿಡುವದೆಂಬ ಕಾರಣದಿಂದ ಕ್ಲೇಶವು ಅಧಿಕತರವಾಗುತ್ತದೆ.

**71.** ತಸ್ಮಾತ್ ಅಕ್ಷರೋಪಾಸಕಾನಾಂ ಸಮ್ಯಗ್ದರ್ಶನನಿಷ್ಠಾನಾಂ ಸಂನ್ಯಾಸಿನಾಂ ತ್ಯಕ್ತಸರ್ವೈಷಣಾನಾಮ್ 'ಅದ್ವೇಷ್ಟಾ ಸರ್ವಭೂತಾನಾಮ್' ಇತ್ಯಾದಿಧರ್ಮಪೂಗಂ ಸಾಕ್ಷಾತ್ ಅಮೃತತ್ವಕಾರಣಂ ವಕ್ಷ್ಯಾಮಿ ॥ (ಗೀ. ಭಾ. ೧೨-೧೩)

ಆದ್ದರಿಂದ ಸಮ್ಯಗ್ದರ್ಶನದಲ್ಲಿಯೇ ನೆಲೆನಿಂತಿರುವ, ಹಾಗೂ ಏಷಣೆಗಳನ್ನೆಲ್ಲಾ ತೊರೆದಿರುವ ಸಂನ್ಯಾಸಿಗಳಾದ ಅಕ್ಷರೋಪಾಸಕರಿಗೆ (ಜ್ಞಾನಿಭಕ್ತರಿಗೆ) ನೇರಾಗಿ (ವಿಶ್ವರೂಪದ ಉಪಾಸಕರಿಗೆ ಆಗುವಂತೆ ಕಾಲಾಂತರದಲ್ಲಿ-ಮರಣಾನಂತರ-ಫಲವಲ್ಲ) ಈಗಲೇ ಮೋಕ್ಷಕ್ಕೆ (ಸದ್ಯೋಮುಕ್ತಿಗೆ) ಸಾಧನವಾಗಿರುವ "ಅದ್ವೇಷ್ಟಾ ಸರ್ವಭೂತಾನಾಂ" ಯಾವ ಪ್ರಾಣಿಗಳನ್ನೂ ದ್ವೇಷಮಾಡದೆಇರುವದು- ಮುಂತಾದ ಧರ್ಮಸಮೂಹವನ್ನು ಹೇಳುವೆನೆಂದು ಭಗವಂತನು ಹೊರಟಿರುತ್ತಾನೆ.

**72.** 'ಅದ್ವೇಷ್ಟಾ ಸರ್ವಭೂತಾನಾಮ್' ಇತ್ಯಾದಿನಾ ಅಕ್ಷರೋಪಾಸಕಾನಾಂ ನಿವೃತ್ತಸರ್ವೈಷಣಾನಾಂ ಸಂನ್ಯಾಸಿನಾಂ ಪರಮಾರ್ಥಜ್ಞಾನನಿಷ್ಠಾನಾಂ ಧರ್ಮಜಾತಂ ಪ್ರಕ್ರಾನ್ತಮ್ ಉಪಸಂಹ್ರಿಯತೇ ॥ (ಗೀ. ಭಾ. ೧೨-೨೦)

ಎಲ್ಲಾ ಏಷಣೆಗಳನ್ನೂ ತೊರೆದು ಪರಮಾರ್ಥಜ್ಞಾನದಲ್ಲಿಯೇ ನೆಲೆನಿಂತಿರುವ ಸಂನ್ಯಾಸಿಗಳಾದ ಅಕ್ಷರೋಪಾಸಕರ ಧರ್ಮಸಮೂಹವನ್ನು "ಅದ್ವೇಷ್ಟಾ ಸರ್ವಭೂತಾನಾಮ್" ಮುಂತಾದ ಶ್ಲೋಕಗಳಿಂದ ಪ್ರಾರಂಭಿಸಿತ್ತಷ್ಟೆ, ಈಗ ಅದನ್ನು ಉಪಸಂಹಾರಮಾಡಲಾಗುತ್ತದೆ.

ಈ ಭಾಷ್ಯಭಾಗ (೧೨-೨೦ಅವ)ದಿಂದಲೂ ಇದರ ಹಿಂದೆಯೇ ಉದಾಹರಿಸಿರುವ (ಗೀ. ಭಾ. ೧೨-೧೩ಅವ) ಭಾಷ್ಯಭಾಗದಿಂದಲೂ 'ಸಮ್ಯಗ್ದರ್ಶನನಿಷ್ಠೆ' ಎಂದರೆ, ಏಷಣಾತ್ರಯತ್ಯಾಗಮಾಡಿರುವ ಸಂನ್ಯಾಸಿಗಳ ಕೇವಲ ವಸ್ತುತಂತ್ರವಾದ 'ಪರಮಾರ್ಥಜ್ಞಾನನಿಷ್ಠೆ' ಎಂದೇ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಆದ್ದರಿಂದ, ಸಂನ್ಯಾಸ(ಪಾರಿವ್ರಾಜ್ಯ)ಧರ್ಮವನ್ನು ತಿಳಿಸಿ, ಸಂನ್ಯಾಸ ಸ್ವೀಕಾರಮಾಡುವದಕ್ಕಾಗಿಯೇ ಉತ್ತಮಾಧಿಕಾರಿಯಾದ ಮೈತ್ರೇಯಿಗೆ (ಕರ್ತೃತಂತ್ರವಾದ ಉಪಾಸನಾದಿಗಳನ್ನು ಹೇಳದೆ) ಕೇವಲ ವಸ್ತು ತಂತ್ರವಾದ ಆತ್ಮಜ್ಞಾನವನ್ನೇ ಬೋಧಿಸಿರುವ ಈ ಪ್ರಬಂಧಕ್ಕೆ 'ಸಮ್ಯಗ್ದರ್ಶನ' ಎಂಬ ಹೆಸರಿಟ್ಟಿರುವದು ಎಷ್ಟು ಉಚಿತವೂ ಸಾರ್ಥಕವೂ ಆದುದು- ಎಂಬಿದು ಸ್ಪಷ್ಟವಾಗುತ್ತದೆ.

73. ತಸ್ಮಾತ್ ಕ್ಷೇತ್ರಕ್ಷೇತ್ರಜ್ಞಯೋಃ ಜ್ಞೇಯಭೂತಯೋಃ ಯತ್ ಜ್ಞಾನಂ ಕ್ಷೇತ್ರಕ್ಷೇತ್ರಜ್ಞೌ ಯೇನ ಜ್ಞಾನೇನ ವಿಷಯೀಕ್ರಿಯೇತೇ ತತ್ ಜ್ಞಾನಂ ಸಮ್ಯಗ್ಜ್ಞಾನಮ್ ಇತಿ ॥

(ಗೀ. ಭಾ. ೧೩-೨)

ಆದ್ದರಿಂದ ಜ್ಞೇಯರೂಪವಾಗಿರುವ ಕ್ಷೇತ್ರಕ್ಷೇತ್ರಜ್ಞರ ಯಾವ ಜ್ಞಾನವುಂಟೋ, ಕ್ಷೇತ್ರಕ್ಷೇತ್ರಜ್ಞರು ಯಾವ ಜ್ಞಾನದಿಂದ ವಿಷಯೀಕರಿಸಲ್ಪಡುತ್ತಾರೋ ಅದು ಜ್ಞಾನವು, ಸಮ್ಯಗ್ಜ್ಞಾನವು (ಸರಿಯಾದ ಜ್ಞಾನವು) ಎಂದು ನನ್ನ ಈಶ್ವರನಾದ ವಿಷ್ಣುವಿನ ಮತವು, ಅಭಿಪ್ರಾಯವು.

74. ಏತಾವಾನ್ ಹಿ ಸರ್ವೋ ವೇದಾರ್ಥಃ ಗೀತಾರ್ಥಶ್ಚ ಉಪಸಂಹೃತ್ಯ ಉಕ್ತಃ । ಅಸ್ಮಿನ್ ಸಮ್ಯಗ್ದರ್ಶನೇ ಕಃ ಅಧಿಕ್ರಿಯತೇ ಇತಿ ?....ಯಥೋಕ್ತಂ ಸಮ್ಯಗ್ದರ್ಶನಂ ವಿಜ್ಞಾಯ ಪರಮಾತ್ಮಭಾವಾಯ ಉಪಪದ್ಯತೇ ಮೋಕ್ಷಂ ಗಚ್ಛತಿ ॥

(ಗೀ.ಭಾ. ೧೩-೧೮)

ಹೀಗೆ, ಮಹಾಭೂತಗಳಿಂದ ಮೊದಲಾಗಿ ಧೃತಿಯವರೆಗಿನ ಕ್ಷೇತ್ರವನ್ನೂ (೧೩-೬), ಹಾಗೂ ಅಮಾನಿತ್ವವು ಮೊದಲಾಗಿ ತತ್ತ್ವಜ್ಞಾನಾರ್ಥದರ್ಶನದ ವರೆಗಿನ ಜ್ಞಾನವನ್ನೂ (೧೩-೭ರಿಂದ ೧೧), 'ಯಾವದು ಜ್ಞೇಯವೋ ಅದನ್ನು' (೧೩-೧೨) ಎಂದು ಮೊದಲಾಗಿ, 'ತಮಸಃ ಪರಮುಚ್ಯತೇ-ತಮಸ್ಸಿನ ಆಚೆಯಿರುವದೆನಿಸುವದು' (೧೩-೧೭)- ಎಂಬವರೆಗಿನ ಜ್ಞೇಯವನ್ನೂ ಸಂಕ್ಷಿಪ್ತವಾಗಿ ಹೇಳಿದ್ದಾಯಿತು. ಸಕಲವೇದಾರ್ಥವೂ ಗೀತಾರ್ಥವೂ ಇಷ್ಟೇ ಎಂದು ಒಟ್ಟುಗೂಡಿಸಿ ಹೇಳಿದ್ದಾಯಿತು.

ಈ ಸಮ್ಯಗ್ದರ್ಶನಕ್ಕೆ ಯಾವನು ಅಧಿಕಾರಿಯಾಗಿರುವನು ? ಎಂದರೆ ಭಗವಂತನು ಹೇಳುತ್ತಾನೆ : ಈಶ್ವರನೂ ಸರ್ವಜ್ಞನೂ ಪರಮಗುರುವೂ ಆದ ವಾಸುದೇವನೆಂಬ ನನ್ನಲ್ಲಿ ಸರ್ವಾತ್ಮಭಾವವನ್ನು ಸಮರ್ಪಿಸಿದವನಾಗಿ ಯಾವ ಯಾವದನ್ನು ಕಾಣುತ್ತಾನೋ, ಕೇಳುತ್ತಾನೋ ಅಥವಾ ಮುಟ್ಟುತ್ತಾನೋ ಅದೆಲ್ಲವೂ ಭಗವಂತನಾದ ವಾಸುದೇವನೇ ಎಂಬೀ ಬಗೆಯ ತಿಳಿವಳಿಕೆಯು ತುಂಬಿರುವ ಬುದ್ಧಿಯುಳ್ಳ ನನ್ನ ನಿಜವಾದ ಭಕ್ತನೇ ಈ ಸಮ್ಯಗ್ದರ್ಶನಕ್ಕೆ

ಅಧಿಕಾರಿಯು. ಅವನು ಈ ಹಿಂದೆ ಹೇಳಿರುವ ಸಮ್ಯಗ್ದರ್ಶನವನ್ನು ಅರಿತು ಕೊಂಡು ಮದ್ಭಾವವನ್ನು-ಪರಮಾತ್ಮಭಾವವನ್ನು ಪಡೆಯಲು ಯೋಗ್ಯನಾಗಿ ಮೋಕ್ಷವನ್ನು ಹೊಂದುತ್ತಾನೆ.

(ಇಲ್ಲಿ 'ವಿಜ್ಞಾಯ'- ಅರಿತುಕೊಂಡಮೇಲೆ 'ಮದ್ಭಾವಾಯ' ಎಂದಿರು ವದರಿಂದ ಇದು ಭಾವನಾಮಯವಾದ ಉಪಾಸನೆಯಲ್ಲ; ಇದು ವಸ್ತುತಂತ್ರ ವಾದ ಸ್ವರೂಪಜ್ಞಾನವೇ. ಮದ್ಭಾವ ಎಂದರೆ ನನ್ನ ಸ್ವರೂಪ.)

**75. ಅಸ್ಯ ಚ ನಿವೃತ್ತಿಕಾರಣಂ ಜ್ಞಾನಂ ಸವೈರಾಗ್ಯ-ಸಂನ್ಯಾಸಂ ಗೀತಾಶಾಸ್ತ್ರೇ ಪ್ರಸಿದ್ಧಮ್ ॥ (ಗೀ.ಭಾ. ೧೩-೨೧)**

ಅಂತೂ ಇದುವರೆಗೆ ಇಷ್ಟನ್ನು ಹೇಳಿದಂತಾಯಿತು : ಪ್ರಕೃತಿಯಲ್ಲಿರುವ ದೆಂಬ ಅವಿದ್ಯೆಯೂ ಗುಣಗಳಲ್ಲಿರುವ ಸಂಗವೆಂಬ ಕಾಮವೂ ಸಂಸಾರಕ್ಕೆ ಕಾರಣವು. ಈ ಕಾರಣವನ್ನು (ಅವಿದ್ಯಾಕಾಮಗಳನ್ನು) ಬಿಡುವದಕ್ಕಾಗಿ ಹೇಳಿರುತ್ತದೆ. ಇವನ್ನು ತೊಲಗಿಸುವದಕ್ಕೆ ವೈರಾಗ್ಯದಿಂದ ಸರ್ವಕರ್ಮ ಸಂನ್ಯಾಸವನ್ನು ಮಾಡಿ ಪಡೆದುಕೊಂಡ ಜ್ಞಾನವೇ ಕಾರಣವೆಂದೂ ಗೀತಾಶಾಸ್ತ್ರ ದಲ್ಲಿ ಪ್ರಸಿದ್ಧವಾಗಿರುತ್ತದೆ.

ಮುಂದಿನ ಮುಖ್ಯವಾದ ಗ್ರಂಥಭಾಗದಲ್ಲಿ ಬರುವ ಯಾಜ್ಞವಲ್ಕ್ಯರ ಉಪದೇಶದಲ್ಲಿ ಈ ವಿಚಾರಕ್ರಮವೇ ಅಡಗಿದೆ.

**76. "ನ ಸತ್ತನ್ನಾಸದುಚ್ಯತೇ" (ಗೀ. ೧೩-೧೨) ಇತ್ಯನೇನ ನಿರಸ್ತಸರ್ವೋಪಾಧಿವಿಶೇಷಂ ಜ್ಞೇಯಂ ಬ್ರಹ್ಮ ಸ್ವರೂಪೇಣ ಯಃ ಪಶ್ಯತಿ ಕ್ಷೇತ್ರಂ ಚ ಮಾಯಾನಿರ್ಮಿತಹಸ್ತಿಸ್ವಪ್ನದೃಷ್ಟವಸ್ತು ಗನ್ಧರ್ವನಗರಾದಿವತ್ ಅಸದೇವ ಸದಿವ ಅವಭಾಸತೇ ಇತ್ಯೇವಂ ನಿಶ್ಚಿತವಿಜ್ಞಾನೋ ಯಃ, ತಸ್ಯ ಯಥೋಕ್ತಸಮ್ಯಗ್ದರ್ಶನ ವಿರೋಧಾತ್ ಅಪಗಚ್ಛತಿ ಮಿಥ್ಯಾಜ್ಞಾನಮ್ ॥ (ಗೀ.ಭಾ. ೧೩-೨೬)**

'ಅದು ಸತ್ತೆನಿಸುವದಿಲ್ಲ, ಅಸತ್ತೆನಿಸುವದಿಲ್ಲ' (ಗೀ. ೧೩-೧೨) ಎಂಬೀ ಶ್ಲೋಕದ ರೀತಿಯಿಂದ ಯಾವದೊಂದು ಉಪಾಧಿಯೂ ಇಲ್ಲದ ಜ್ಞೇಯವಾದ ಬ್ರಹ್ಮವನ್ನು ತನ್ನ ಸ್ವರೂಪವಾಗಿ ಯಾವನು ಕಂಡುಕೊಳ್ಳುವನೋ ಮತ್ತು ಕ್ಷೇತ್ರವನ್ನು ಮಾಯೆಯಿಂದ ನಿರ್ಮಿತವಾದ ಆನೆ, ಕನಸಿನಲ್ಲಿ ಕಂಡ ವಸ್ತು, ಗಂಧರ್ವನಗರ- ಮುಂತಾದವುಗಳಂತೆ ಅಸತ್ತಾಗಿಯೇ ಇದ್ದರೂ ಸತ್ತಿನಂತೆ ಕಾಣುತ್ತದೆ- ಎಂದೀಬಗೆಯಲ್ಲಿ ಯಾವನಿಗೆ ನಿಶ್ಚಿತವಾದ ಅರಿವು ಉಂಟಾಗು ವದೋ ಅವನ ನಿಶ್ಚಿತಜ್ಞಾನವೇ ಸಮ್ಯಗ್ದರ್ಶನವು. ಈ ಸಮ್ಯಗ್ದರ್ಶನಕ್ಕೆ ವಿರುದ್ಧವಾಗಿರುವದರಿಂದ ಮಿಥ್ಯಾಜ್ಞಾನವು ತೊಲಗುತ್ತದೆ. (ಪ್ರಕೃತಿಪುರುಷರ ಸಂಯೋಗವೇ ಅನ್ಯೋನ್ಯಾಧ್ಯಾಸವೇ ಮಿಥ್ಯಾಜ್ಞಾನವು.)

6

77. 'ನ ಸ ಭೂಯೋಽಭಿಜಾಯತೇ' (ಗೀ. ೧೩-೨೩) ಇತಿ ಸಮ್ಯಗ್ದರ್ಶನಫಲಮ್ ಅವಿದ್ಯಾದಿಬೀಜನಿವೃತ್ತಿದ್ವಾರೇಣ ಜನ್ಮಾಭಾವಃ ಉಕ್ತಃ । ಜನ್ಮಕಾರಣಂ ಚ ಅವಿದ್ಯಾನಿಮಿತ್ತಕಃ ಕ್ಷೇತ್ರಕ್ಷೇತ್ರಜ್ಞಸಂಯೋಗಃ ಉಕ್ತಃ । ಅತಃ ತಸ್ಯಾ ಅವಿದ್ಯಾ-ಯಾಃ ನಿವರ್ತಕಂ ಸಮ್ಯಗ್ದರ್ಶನಮ್ ಉಕ್ತಮಪಿ ಪುನಃ ಶಬ್ದಾನ್ತರೇಣ ಉಚ್ಯತೇ ॥ (ಗೀ. ಭಾ. ೧೩-೧೭ ಅವತರಣಿಕೆ)

'ಅವನು ಮತ್ತೆ ಹುಟ್ಟುವದಿಲ್ಲ' (ಗೀ. ೧೩-೨೩) ಎಂಬ ಶ್ಲೋಕದಲ್ಲಿ ಸಮ್ಯಗ್ದರ್ಶನಕ್ಕೆ ಫಲವು, ಅವಿದ್ಯೆಯೇ ಮುಂತಾದ ಸಂಸಾರಬೀಜವನ್ನು ಹೋಗಲಾಡಿಸುವದರ ಮೂಲಕ ಜನ್ಮವಿಲ್ಲದಂತೆ ಆಗುವದೇ ಆಗಿದೆ- ಎಂದು ಹೇಳಿರುತ್ತದೆ. ಮತ್ತು ಜನ್ಮಕ್ಕೆ ಕಾರಣವು ಅವಿದ್ಯೆಯೆಂಬ ನಿಮಿತ್ತದಿಂದ ಆಗಿರುವ ಕ್ಷೇತ್ರಕ್ಷೇತ್ರಜ್ಞಸಂಯೋಗವು ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದ್ದಾಗಿದೆ. ಆದ್ದರಿಂದ ಆ ಅವಿದ್ಯೆಯನ್ನು ಕಳೆಯುವ ಸಮ್ಯಗ್ದರ್ಶನವನ್ನು ಈ ಮೊದಲೇ ಹೇಳಿದ್ದರೂ ಅದನ್ನು ಮತ್ತೂ ಬೇರೆಯ ಮಾತುಗಳಿಂದ ಹೇಳಲಾಗುತ್ತದೆ.

78. ತಥಾ ಆತ್ಮಾನಂ ಕ್ಷೇತ್ರಜ್ಞಮ್ ಅಕರ್ತಾರಂ ಸರ್ವೋಪಾಧಿವಿವರ್ಜಿತಮ್ ಪಶ್ಯತಿ । ಸ ಪರಮಾರ್ಥದರ್ಶೀ ಇತ್ಯಭಿಪ್ರಾಯಃ ॥ (ಗೀ. ಭಾ. ೧೩-೨೯)

ಹಾಗೂ ಆತ್ಮನು ಕ್ಷೇತ್ರಜ್ಞನು ಕರ್ತೃವಲ್ಲವೆಂದೂ ಯಾವ ಉಪಾಧಿಯೂ ಇಲ್ಲವೆಂದೂ ಯಾವನು ಅರಿತುಕೊಂಡಿರುತ್ತಾನೋ ಅವನೇ( ಸಮ್ಯಗ್ದರ್ಶಿಯು) ನಿಜವನ್ನು ಕಂಡಿರುತ್ತಾನೆ ; ಅವನೇ ಪರಮಾರ್ಥದರ್ಶಿಯು- ಪರಮಾರ್ಥವನ್ನು ಕಂಡಿರುವಾತನು.

79. ಅತಃ ಏತಸ್ಮಿನ್ ಪರಮಾರ್ಥಸಾಙ್ಖ್ಯದರ್ಶನೇ ಸ್ಥಿತಾನಾಂ ಜ್ಞಾನನಿಷ್ಠಾನಾಂ ಪರಮಹಂಸಪರಿವ್ರಾಜಕಾನಾಂ ತಿರಸ್ಕೃತಾವಿದ್ಯಾವ್ಯವಹಾರಾಣಾಂ ಕರ್ಮಾಧಿಕಾರೋ ನಾಸ್ತಿ ಇತಿ ತತ್ರ ತತ್ರ ದರ್ಶಿತಂ ಭಗವತಾ ॥ (ಗೀ. ಭಾ. ೧೩-೩೧)

ಆದ್ದರಿಂದ ಈ ಪರಮಾರ್ಥವಾದ ಸಾಂಖ್ಯದರ್ಶನದಲ್ಲಿ ನಿಂತಿರುವ ಜ್ಞಾನನಿಷ್ಠರಾದ ಪರಮಹಂಸಪರಿವ್ರಾಜಕರಾದವರು ಅವಿದ್ಯಾವ್ಯವಹಾರವನ್ನು ಹೋಗಲಾಡಿಸಿಕೊಂಡಿರುವದರಿಂದ ಕರ್ಮಕ್ಕೆ ಅಧಿಕಾರಿಗಳಲ್ಲ ಎಂದು ಅಲ್ಲಲ್ಲಿ ಭಗವಂತನು ತೋರಿಸಿಕೊಟ್ಟಿರುತ್ತಾನೆ.

80. ಇತ್ಯೇತತ್ ಸರ್ವಂ ಮಿಥ್ಯಾಜ್ಞಾನಮೂಲಂ ಲಬ್ಧ ಕಾರಣಂ ವಿಸ್ತರೇಣ ಉಕ್ತ್ವಾ ಅಧುನಾ ಸಮ್ಯಗ್ದರ್ಶನಾತ್ ಮೋಕ್ಷೋ ವಕ್ತವ್ಯಃ ಇತ್ಯತಃ ಆಹ ಭಗವಾನ್ ॥
(ಗೀ.ಭಾ. ೧೪-೧೯ ಅವ)

ಎಂಬೀ ಮಿಥ್ಯಾಜ್ಞಾನದ ಮೂಲಕವಾಗಿರುವ ಈ ಬಂಧಕಾರಣವೆಲ್ಲವನ್ನೂ ವಿಸ್ತಾರವಾಗಿ ಹೇಳಿ, ಈಗ ಸಮ್ಯಗ್ದರ್ಶನದಿಂದ ಮೋಕ್ಷವಾಗುವದೆಂಬುದನ್ನು ಹೇಳಬೇಕೆಂದು ಭಗವಂತನು ಹೀಗೆಂದು ಹೇಳುತ್ತಿದ್ದಾನೆ :

81. ಅಮೃತಾದಿಸ್ವಭಾವಸ್ಯ ಪರಮಾನನ್ದರೂಪಸ್ಯ ಪರಮಾತ್ಮನಃ ಪ್ರತ್ಯಗಾತ್ಮಾ ಪ್ರತಿಷ್ಠಾ ಸಮ್ಯಗ್ಜ್ಞಾನೇನ ಪರಮಾತ್ಮತಯಾ ನಿಶ್ಚೀಯತೇ । ತದೇತತ್ 'ಬ್ರಹ್ಮಭೂಯಾಯ' (೧೪-೨೬) ಇತಿ ಉಕ್ತಮ್ ॥
(ಗೀ. ಭಾ. ೧೪-೨೭)

ಅಮೃತವೇ ಮುಂತಾದ ಸ್ವಭಾವವುಳ್ಳ ಪರಮಾನಂದರೂಪವಾದ ಪರಮಾತ್ಮನಿಗೆ ಪ್ರತ್ಯಗಾತ್ಮನು ಪ್ರತಿಷ್ಠೆಯು; ಸಮ್ಯಗ್ಜ್ಞಾನದಿಂದ (ಸರಿಯಾದ ಜ್ಞಾನದಿಂದ) ಪ್ರತ್ಯಗಾತ್ಮನೇ ಪರಮಾತ್ಮನೆಂದು ನಿಶ್ಚಯವಾಗುತ್ತದೆ. ಇದನ್ನೇ "ಬ್ರಹ್ಮಭೂಯಾಯ ಕಲ್ಪತೇ" (೧೪-೧೬) ಎಂದು ಹಿಂದಿನ ಶ್ಲೋಕದಲ್ಲಿ ಹೇಳಿರುತ್ತದೆ.

82. ತಸ್ಮಾತ್ ಪರಮಾರ್ಥದರ್ಶಿನೈವ ಅದೇಹಭೃತಾ ದೇಹಾತ್ಮಭಾವರಹಿತೇನ ಅಶೇಷಕರ್ಮಸಂನ್ಯಾಸಃ ಶಕ್ಯತೇ ಕರ್ತುಮ್ ॥
(ಗೀ. ಭಾ. ೧೮-೧೧)

ಆದ್ದರಿಂದ ಪರಮಾರ್ಥದರ್ಶಿಯು (ಪರಮಾರ್ಥವನ್ನು ಕಂಡುಕೊಂಡಿರುವವನು) ಮಾತ್ರವೇ ದೇಹಧಾರಿಯಲ್ಲದ್ದರಿಂದ-ದೇಹವೇ ತಾನೆಂಬ ಅಭಿಮಾನವಿಲ್ಲದ್ದರಿಂದ-ಒಂದಿಷ್ಟೂ ಉಳಿಯದಂತೆ ಕರ್ಮಗಳನ್ನು ಅವನು ಸಂನ್ಯಾಸಮಾಡಲು ಶಕ್ತನಾದವನು.

83. ನ ತು ಸಂನ್ಯಾಸಿನಾಂ ಪರಮಾರ್ಥಸಂನ್ಯಾಸಿನಾಂ ಪರಮಹಂಸಪರಿವ್ರಾಜಕಾನಾಂ ಕೇವಲಂ ಜ್ಞಾನನಿಷ್ಠಾನಾಂ ಕ್ವಚಿತ್ । ನ ಹಿ ಕೇವಲಸಮ್ಯಗ್ದರ್ಶನನಿಷ್ಠಾ ಅವಿದ್ಯಾದಿಸಂಸಾರ ಬೀಜಂ ನ ಉನ್ಮೂಲಯತಿ ಕದಾಚಿತ್ ಇತ್ಯರ್ಥಃ । ಅತಃ ಪರಮಾರ್ಥದರ್ಶಿನ ಏವ ಅಶೇಷಕರ್ಮಸಂನ್ಯಾಸಿತ್ವಂ ಸಮ್ಭವತಿ। ಅವಿದ್ಯಾಧ್ಯಾರೋಪಿತತ್ವಾತ್ ಆತ್ಮನಿ ಕ್ರಿಯಾಕಾರಕಫಲಾ-

ನಾಮ್ । ನ ತು ಅಜ್ಞಸ್ಯ ಅಧಿಷ್ಠಾನಾದೀನಿ ಕ್ರಿಯಾಕರ್ತೄ ಕಾರಕಾಣಿ ಆತ್ಮತ್ವೇನೈವ ಪಶ್ಯತಃ ಅಶೇಷಕರ್ಮಸಂನ್ಯಾಸಃ ಸಮ್ಭವತಿ ॥ ' (ಗೀ. ಭಾ. ೧೮-೧೨)

ಆದರೆ, ಸಂನ್ಯಾಸಿಗಳಿಗೆ–ಪರಮಾರ್ಥಸಂನ್ಯಾಸಿಗಳಾದ, ಪರಮಹಂಸ ಪರಿವ್ರಾಜಕರಾದ ಕೇವಲ ಜ್ಞಾನನಿಷ್ಠರಿಗೆ–ಇಷ್ಟಾನಿಷ್ಟಮಿಶ್ರವೆಂಬ ಧರ್ಮಾ ಧರ್ಮರೂಪವಾದ ಕರ್ಮದ ಫಲವು ಎಂದಿಗೂ ಆಗುವದಿಲ್ಲ. ಏಕೆಂದರೆ, ಬರಿಯ ಸಮ್ಯಗ್ದರ್ಶನದಲ್ಲಿಯೇ ನೆಲೆನಿಂತಿರುವ (ನಿಷ್ಠಾ) ಬಲವು ಅವಿದ್ಯಾ ಕಾಮಕರ್ಮ ಗಳೆಂಬ ಸಂಸಾರಬೀಜವನ್ನು ನಾಶಮಾಡುವದಿಲ್ಲವೆಂಬುದು ಎಂದಿಗೂ ಇಲ್ಲವೇ ಇಲ್ಲ. (ಇವನ್ನು ಆತ್ಮವಿಜ್ಞಾನವು ಅವಶ್ಯವಾಗಿ ನಾಶಮಾಡಿಯೇ ಮಾಡುತ್ತದೆ.)

ಆದ್ದರಿಂದ ಪರಮಾರ್ಥದರ್ಶಿಯಾದವನಿಗೆ ಎಲ್ಲಾ ಕರ್ಮಗಳನ್ನೂ ಬಿಡುವದೆಂಬುದು ಸಾಧ್ಯವಾಗುತ್ತದೆ: ಏಕೆಂದರೆ, ಆತ್ಮನಲ್ಲಿ ಕ್ರಿಯಾಕಾರಕ ಫಲಗಳು ಅವಿದ್ಯೆಯಿಂದ ಆರೋಪಿತವಾಗಿರುತ್ತವೆ. ಆದರೆ, ಅಧಿಷ್ಠಾನವೇ (ಶರೀರವೇ) ಮುಂತಾದ ಕ್ರಿಯೆ, ಕರ್ತೃ, ಕಾರಕ ಇವುಗಳನ್ನು ತಾನೆಂದೇ ಕಾಣುತ್ತಿರುವ ಅಜ್ಞನಿಗೆ ಎಲ್ಲಾ ಕರ್ಮಗಳನ್ನೂ ಸಂನ್ಯಾಸಮಾಡುವದು ಆಗಲಾರದು.

84. ....ತತ್ ಆತ್ಮವಸ್ತು । ವ್ಯೋಮವತ್ ನಿರನ್ತರಮ್ ಇತ್ಯರ್ಥಃ । ತತ್ ಜ್ಞಾನಂ ಸಾಕ್ಷಾತ್ ಸಮ್ಯಗ್ದರ್ಶನಮ್ ಅದ್ವೈತಾತ್ಮವಿಷಯಂ ಸಾತ್ತ್ವಿಕಂ ವಿದ್ಧಿ ಇತಿ ॥ (ಗೀ. ಭಾ. ೧೮-೨೦)

ಬೇರೆಬೇರೆಯ ದೇಹಗಳು ವಿಂಗಡವಾಗಿರುತ್ತಿದ್ದರೂ ಆ ಆತ್ಮವಸ್ತುವು ವಿಭಕ್ತವಾಗಿಲ್ಲವೆಂದೂ (ಕಡಿವಡೆಯದೆ ಸರ್ವವ್ಯಾಪಕವಾಗಿರುವದೆಂದೂ) ಯಾವ ಜ್ಞಾನದಿಂದ ಕಾಣುತ್ತಾನೋ ಆ ಜ್ಞಾನವನ್ನು–ಅದ್ವೈತಾತ್ಮವಿಷಯವಾಗಿರುವ, ಸಾಕ್ಷಾತ್ತಾಗಿ ಸಮ್ಯಗ್ದರ್ಶನವೇ ಆಗಿರುವ ಜ್ಞಾನವನ್ನು ಸಾತ್ತ್ವಿಕವೆಂದು ತಿಳಿ.

85. ....ತಾಂ ನೈಷ್ಕರ್ಮ್ಯಸಿದ್ಧಿಂ ಪರಮಾಂ ಪ್ರಕೃಷ್ಟಾಂ ಕರ್ಮಜಸಿದ್ಧಿವಿಲಕ್ಷಣಾಂ ಸದ್ಯೋಮುಕ್ತ್ಯವಸ್ಥಾನರೂಪಾಮ್। ಸಂನ್ಯಾಸೇನ ಸಮ್ಯಗ್ದರ್ಶನೇನ ತತ್ಪೂರ್ವಕೇಣ ವಾ ಸರ್ವಕರ್ಮ ಸಂನ್ಯಾಸೇನ ಅಧಿಗಚ್ಛತಿ ಪ್ರಾಪ್ನೋತಿ ॥ (ಗೀ. ಭಾ. ೧೮-೪೯)

ಅಂಥ ನೈಷ್ಕರ್ಮ್ಯಸಿದ್ಧಿಯನ್ನು–ಅದು ಪರಮವಾದದ್ದು, ಕರ್ಮಜಸಿದ್ಧಿ ಗಿಂತ ಬೇರೆಯ ತೆರನಾದದ್ದು, ಈಗಲೇ ಮುಕ್ತಿಯನ್ನು (ಸದ್ಯೋಮುಕ್ತಿಯನ್ನು) ಪಡೆದು ನಿಲ್ಲುವ ರೂಪವಾದುದು. ಇದನ್ನು ಸಂನ್ಯಾಸದಿಂದ ಸಮ್ಯಗ್ದರ್ಶನದಿಂದ–ಅಥವಾ ಆ ದರ್ಶನಪೂರ್ವಕವಾದ ಸರ್ವಕರ್ಮಸಂನ್ಯಾಸ ದಿಂದ ಪಡೆದುಕೊಳ್ಳುತ್ತಾನೆ, (ದೊರಕಿಸಿಕೊಳ್ಳುತ್ತಾನೆ.)

86. ಈ ಭಾಷ್ಯಭಾಗದಲ್ಲಿ ಶಂಕರರು ಸದ್ಯೋಮುಕ್ತಿಗೆ, ಸರ್ವಕರ್ಮ ಸಂನ್ಯಾಸದ ಮೂಲಕ ಸಮ್ಯಗ್ದರ್ಶನವೇ ಸಾಧನವಾಗಿದೆ-ಎಂಬಿದನ್ನು ಸ್ಪಷ್ಟಪಡಿಸಿದ್ದಾರೆ; ಇದನ್ನು ನಾವು ಮುಖ್ಯವಾಗಿ ಗಮನಿಸಬೇಕು. ಮುಂದೆ ಬರುವ "ಮೈತ್ರೇಯೀ-ಯಾಜ್ಞವಲ್ಕ್ಯಸಂವಾದ" ಎಂಬ ಮೂಲ ಗ್ರಂಥದಲ್ಲಿ-ಮೈತ್ರೇಯಿಯು :

ಯನ್ನು ಮ ಇಯಂ ಭಗೋಃ ಸರ್ವಾ ಪೃಥಿವೀ ವಿತ್ತೇನ ಪೂರ್ಣಾ ಸ್ಯಾತ್ ಕಥಂ ತೇನ ಅಮೃತಾ ಸ್ಯಾಮಿತಿ....

(ಬೃ. ಉ. ೨-೪-೨)

"ಭಗವಂತನೆ, ಈ ಪೃಥ್ವಿಯೆಲ್ಲವೂ ವಿತ್ತದಿಂದ ತುಂಬಿರುವದಾದರೆ, ಅದ ರಿಂದ ನಾನು ಅಮೃತಳಾದೇನೋ ಹೇಗೆ?" ಎಂದು ಕೇಳಿದಳು. ಇದಕ್ಕೆ ಯಾಜ್ಞವಲ್ಕ್ಯನು 'ನೇತಿ' 'ಇಲ್ಲ' ಎಂದು ಹೇಳಿದನು. ಅದಕ್ಕೆ ಪುನಃ ಮೈತ್ರೇಯಿಯು :

....ಯೇನಾಹಂ ನಾಮೃತಾ ಸ್ಯಾಂ ಕಿಮಹಂ ತೇನ ಕುರ್ಯಾಂ ಯದೇವ ಭಗವಾನ್ ವೇದ ತದೇವ ಮೇ ಬ್ರೂಹಿ....

(ಬೃ. ಉ. ೨-೪-೩)

"ಯಾವದರಿಂದ ನಾನು ಅಮೃತಳಾಗಲಾರೆನೋ, ಅದರಿಂದ ನಾನು ಏನು ಮಾಡಿಕೊಳ್ಳಲಿ? ಭಗವಂತನೆ, ನೀನು ಯಾವದನ್ನು ಅಮೃತತ್ವಕ್ಕೆ ಸಾಧನ ವೆಂದು ತಿಳಿದುಕೊಂಡು ಅಮೃತತ್ವವನ್ನು ಪಡೆದಿರುವೆಯೋ ಅದನ್ನೇ ನನಗೆ ಹೇಳು" ಎಂದು ಕೇಳಿದಳು. ಇದಕ್ಕೆ ಯಾಜ್ಞವಲ್ಕ್ಯನು,

....ಪ್ರಿಯಾ ಬತಾರೇ....ಏಹ್ಯಾಸ್ಸ್ವ ವ್ಯಾಖ್ಯಾಸ್ಯಾಮಿ,....

(ಬೃ. ಉ. ೨-೪-೪)

"ಆಹಾ! ನಮಗೆ ಈ ಸತಿಯು ಎಂಥ ಪ್ರಿಯಳು! ಬಾ, ಕುಳಿತುಕೊ. ನಿನಗೆ ವ್ಯಾಖ್ಯಾನಮಾಡುವೆನು." "(ಬೃ. ಉ. ೨-೪-೪) ಹೀಗೆಂದು ಬಂದಿದೆ." ಇಲ್ಲಿ ಮೈತ್ರೇಯಿಯ ಪ್ರಶ್ನೆಯಲ್ಲಿರುವ ಅಮೃತತ್ವವೆಂದರೆ, ಜನನಮರಣರಹಿತ ವಾದಂಥ ಮುಕ್ತಿಯೇ. ಅದೂ ಬ್ರಹ್ಮೋಪಾಸಕರಿಗೆ ಮರಣಾನಂತರ, ಕಾಲಾಂ- ತರದಲ್ಲಿ ಬರಬಹುದಾದ ಬ್ರಹ್ಮಲೋಕಪ್ರಾಪ್ತಿರೂಪವಾದ ಕ್ರಮಮುಕ್ತಿ ಇದಲ್ಲ. ವಿವೇಕವೈರಾಗ್ಯಸಂಪನ್ನೆಯಾದ ಮೈತ್ರೇಯಿಯು ಉತ್ತಮಾಧಿಕಾರಿಯಾಗಿರುವದ ರಿಂದ, ಆ ತೀವ್ರ ಮುಮುಕ್ಷುವಿಗೆ ಯಾಜ್ಞವಲ್ಕ್ಯರು ಶ್ರವಣ-ಮನನ-ನಿದಿ ಧ್ಯಾಸನಗಳೆಂಬ ನೇರಾದ ಸಾಧನೆಯಿಂದ ಈಗಲೇ ಇಲ್ಲಿಯೇ ಪಡೆದುಕೊಳ್ಳಬಹು ದಾದ ಸದ್ಯೋಮುಕ್ತಿಗೆ ಕಾರಣವಾದ ಆತ್ಮಜ್ಞಾನವನ್ನೇ ಬೋಧಿಸಿದರು. ಮತ್ತು ಶ್ರವಣಮನನನಿದಿಧ್ಯಾಸನಗಳು ಸಮೀಚೀನವಾಗಿ ಒಟ್ಟುಗೂಡುವದ

ರಿಂದ ಉಂಟಾಗುವ ಸಮ್ಯಗ್ದರ್ಶನವೇ ಬ್ರಹ್ಮಾತ್ಮವಿಜ್ಞಾನಕ್ಕೆ ಸಾಧನವೆಂದೂ (ಬೃ. ಭಾ. ೨-೪-೫) ಯಾಜ್ಞವಲ್ಕ್ಯರು ಹೇಳಿದ್ದಾರೆ. (ಈ ಪೀಠಿಕೆಯಲ್ಲಿ ಇದರ ವಿವರವಿದೆ.)

ಆ ಬ್ರಹ್ಮಾತ್ಮಜ್ಞಾನವಾದರೋ,

87. ....ತಸ್ಮಾತ್ ಸರ್ವಕರ್ಮಸಂನ್ಯಾಸೇನೈವ ಜ್ಞಾನನಿಷ್ಠಾ ಕಾರ್ಯಾ ಇತಿ ಸಿದ್ಧಮ್ ॥ (ಗೀ. ಭಾ. ೧೮-೫೫)

ಆದ್ದರಿಂದ ಸರ್ವಕರ್ಮಸಂನ್ಯಾಸದೊಡನೆಯೇ ಆ ಜ್ಞಾನನಿಷ್ಠೆಯನ್ನು ಮಾಡಿಕೊಳ್ಳಬೇಕು-ಎಂದು ಸಿದ್ಧವಾಯಿತು.

ಇನ್ನು ಆ ಜ್ಞಾನನಿಷ್ಠೆಯನ್ನು ಸಂಪಾದಿಸುವದು ಹೇಗೆ ? ಎಂದರೆ,

....ಅತಃ ಅತ್ಯಂತಪ್ರಸಿದ್ಧಂ ಜ್ಞಾನಮ್ । ಜ್ಞಾತಾಪಿ ಅತ ಏವ ಪ್ರಸಿದ್ಧಃ ಇತಿ । ತಸ್ಮಾತ್ ಜ್ಞಾನೇ ಯತ್ನೋ ನ ಕರ್ತವ್ಯಃ, ಕಿಂತು ಅನಾತ್ಮನಿ ಆತ್ಮಬುದ್ಧಿನಿವೃತ್ತಾವೇವ । ತಸ್ಮಾತ್ ಜ್ಞಾನನಿಷ್ಠಾ ಸುಸಂಪಾದ್ಯಾ ॥ (ಗೀ. ಭಾ. ೧೮-೫೦)

ಆದ್ದರಿಂದ ಜ್ಞಾನವು ಅತ್ಯಂತ ಪ್ರಸಿದ್ಧವಾಗಿರುತ್ತದೆ. (ಜ್ಞಾನವು ಸಾಕ್ಷಿಚೈತನ್ಯಕ್ಕೆ ವಿಷಯವಾಗಿ ಬೆಳಗಲ್ಪಡುತ್ತದೆ.) ಆದ್ದರಿಂದಲೇ ಜ್ಞಾತೃವೂ ಪ್ರಸಿದ್ಧನಾಗಿರುತ್ತಾನೆ, ಎಂದು ತಿಳಿಯಬೇಕು. (ತಾನೇ ಜ್ಞಾತೃವಾಗಿರುವದರಿಂದಲೇ-ಇಷ್ಟು ಪ್ರಸಿದ್ಧನಾದ-ತನ್ನನ್ನು ಅರಿಯಲು ಯಾರೂ ಇಚ್ಛಿಸುವದಿಲ್ಲ.) ಆದ್ದರಿಂದ ಜ್ಞಾನಕ್ಕಾಗಿ ಯತ್ನವನ್ನು ಮಾಡಬೇಕಾಗಿಲ್ಲ. ಮತ್ತೇನೆಂದರೆ, ಅನಾತ್ಮದಲ್ಲಿರುವ ಆತ್ಮಬುದ್ಧಿಯನ್ನು ತೊಲಗಿಸಿಕೊಳ್ಳುವದಕ್ಕಾಗಿಯೇ ಪ್ರಯತ್ನವನ್ನು ಮಾಡಬೇಕಾಗಿರುತ್ತದೆ. ಆದ್ದರಿಂದ ಜ್ಞಾನನಿಷ್ಠೆಯನ್ನು ಸುಲಭವಾಗಿ ಪಡೆದುಕೊಳ್ಳಬಹುದು.

88. ....ತತಶ್ಚ ಸರ್ವಕರ್ಮಸಂನ್ಯಾಸಸಹಿತಜ್ಞಾನನಿಷ್ಠಯಾ ಅತ್ಯನ್ತಿಕಃ ಸಂಸಾರೋಪರಮಃ ಇತಿ ಸಿದ್ಧಮ್ । ಅವಿದ್ಯಾತ್ಮಕತ್ವಾಚ್ಚ ದೇಹಾಭಿಮಾನಸ್ಯ ತನ್ನಿವೃತ್ತೌ ದೇಹಾನುಪಪತ್ತೇಃ ಸಂಸಾರಾನುಪಪತ್ತಿಃ । ದೇಹಾದಿಸಙ್ಘಾತೇ ಆತ್ಮಾಭಿಮಾನಃ ಅವಿದ್ಯಾತ್ಮಕಃ.... (ಗೀ. ಭಾ. ೧೮-೬೬ ಉಪಸಂಹಾರ ಚರ್ಚೆ)

ಆದ್ದರಿಂದಲೂ ಸರ್ವಕರ್ಮಸಂನ್ಯಾಸಸಹಿತವಾದ ಜ್ಞಾನನಿಷ್ಠೆಯಿಂದ ಸಂಸಾರವು ಅತ್ಯಂತವಾಗಿ ನಾಶವಾಗುತ್ತದೆ-ಎಂದು ಏರ್ಪಡುತ್ತದೆ. ದೇಹಾಭಿಮಾನವು ಅವಿದ್ಯಾತ್ಮಕವಾಗಿರುವದರಿಂದಲೂ (ತಪ್ಪುತಿಳಿವಳಿಕೆಯಿಂದ ದೇಹವೇ ತಾನೆಂದು ತೋರುತ್ತಿದೆ ; ಆದರೆ, ಶರೀರವೇ ಇಲ್ಲವೆಂದು ಶ್ರುತಿಯು ಹೇಳುತ್ತಿದೆ.) ವಿದ್ಯೆಯಿಂದ ಅವಿದ್ಯೆಯು

ತೊಲಗಿದರೆ ದೇಹವೇ ಇಲ್ಲವಾಗುವದರಿಂದಲೂ ಸಂಸಾರವು ಮುಂದೆ ಉಂಟಾಗಲಾರದು. ದೇಹಾದಿಸಂಘಾತದಲ್ಲಿ ತಾನೆಂಬ ಅಭಿಮಾನವು ಅವಿದ್ಯಾತ್ಮಕವಾಗಿರುತ್ತದೆ.

....ಕರ್ಮಯೋಗನಿಷ್ಠಾಯಾಃ ಪರಮರಹಸ್ಯಮ್ ಈಶ್ವರ ಶರಣತಾಮ್ ಉಪಸಂಹೃತ್ಯ ಅಥ ಇದಾನೀಂ ಕರ್ಮಯೋಗ ನಿಷ್ಠಾಫಲಂ ಸಮ್ಯಗ್ದರ್ಶನಮ್ ಸರ್ವವೇದಾನ್ತವಿಹಿತಂ ವಕ್ತವ್ಯಮ್ ಇತ್ಯಾಹ- ಸರ್ವಧರ್ಮಾನ್ ಪರಿತ್ಯಜ್ಯ....

(ಗೀ. ಭಾ. ೧೮-೬೬ ಅವತರಣಿಕಾ)

ಕರ್ಮಯೋಗನಿಷ್ಠೆಯ ಪರಮರಹಸ್ಯವಾದ ಈಶ್ವರಶರಣಾಗತಿಯನ್ನು (ಪ್ರಪತ್ತಿಯೋಗವನ್ನು) ಉಪಸಂಹಾರಮಾಡಿ, ಇನ್ನು ಈಗ ಕರ್ಮಯೋಗ ನಿಷ್ಠೆಯ ಫಲವಾದ ಸರ್ವವೇದಾಂತಗಳಲ್ಲಿಯೂ (ಸಾರಸರ್ವವಾಗಿ) ಹೇಳಿ ರುವ ಸಮ್ಯಗ್ದರ್ಶನವನ್ನು (ಸಮ್ಯಗ್ಜ್ಞಾನವನ್ನು) ಹೇಳಬೇಕೆಂದು ಭಗವಂತನು "ಸರ್ವಧರ್ಮಾನ್ ಪರಿತ್ಯಜ್ಯ" ಎಂದು ಈ ಮುಂದಿನ ವಾಕ್ಯವನ್ನು ಹೇಳುತ್ತಾನೆ.

....ಸರ್ವಧರ್ಮಾನ್ ಪರಿತ್ಯಜ್ಯ । ಸಂನ್ಯಸ್ಯ ಸರ್ವಕರ್ಮಾಣಿ ಇತ್ಯೇತತ್ । ಮಾಮ್ ಏಕಂ ಸರ್ವಾತ್ಮಾನಂ ಸಮಂ ಸರ್ವ ಭೂತಸ್ಥಮ್ ಈಶ್ವರಮ್ ಅಚ್ಯುತಂ ಗರ್ಭಜನ್ಮಜರಾಮರಣ ವರ್ಜಿತಮ್ ಅಹಮೇವ ಇತ್ಯೇವಂ ಶರಣಂ ವ್ರಜ ॥

(ಗೀ. ಭಾ. ೧೮-೬೬)

''ಸರ್ವಧರ್ಮಗಳನ್ನೂ ಬಿಟ್ಟು ಎಂದರೆ, ಸರ್ವಕರ್ಮಗಳನ್ನೂ ಸಂನ್ಯಾಸ ಮಾಡಿ, ಎಂದು ಅಭಿಪ್ರಾಯ. ಏಕೆಂದರೆ ''ತ್ಯಜ ಧರ್ಮಮಧರ್ಮಂ ಚ'' (ಮೋಕ್ಷಧರ್ಮ. ೩೨೯-೪೦) "ಧರ್ಮವನ್ನು ಬಿಡು, ಅಧರ್ಮವನ್ನೂ ಬಿಡು, ಸತ್ಯಾನೃತಗಳನ್ನೂ ಬಿಡು, ಯಾವ ಅಹಂಕಾರದಿಂದ ಇವುಗಳನ್ನೆಲ್ಲಾ ಬಿಟ್ಟೆ ನೆಂದು ತಿಳಿಯುತ್ತೀಯೋ ಆ ಅಹಂಕಾರವನ್ನೂ ಬಿಡು" ಎಂದು (ಶ್ರುತಿ) ಸ್ಮೃತಿ ಗಳಲ್ಲಿ ಹೇಳಿದೆ. ಸರ್ವರ ಆತ್ಮನೂ ಸರ್ವರಲ್ಲಿಯೂ ಸಮನೂ ಸರ್ವಭೂತಗಳಲ್ಲಿ ಯೂ ಇರುವವನೂ ಈಶ್ವರನೂ-ಅಚ್ಯುತನೂ ಗರ್ಭ, ಜನ್ಮ, ಮುಪ್ಪು, ಸಾವು -ಗಳಿಲ್ಲದವನೂ ಆಗಿರುವ ನನ್ನೊಬ್ಬನನ್ನೇ 'ನಾನೇ ಆತನು' ಎಂದು ಶರಣು ಹೊಂದು ; ನನಗಿಂತ ಬೇರೆ ಯಾವದೂ ಇಲ್ಲ ಎಂದು ನಿಶ್ಚಯಿಸಿಕೊ-ಎಂದರ್ಥ. (ನಿಜವಾದ ಉಪಾಸನೆಯಲ್ಲಿ ಉಪಾಸ್ಯ-ಉಪಾಸಕಭೇದವು ಅಳಿಯುವದರಿಂದಲೂ ಇದರಿಂದ ತಾನು ಜ್ಞಾತೃವೂ ಧ್ಯಾತೃವೂ ಅಲ್ಲ, ಕರ್ತೃವೂ ಭೋಕ್ತೃವೂ ಅಲ್ಲ, ಪರಮಾತ್ಮನೊಬ್ಬನೇ ಸತ್ಯ-ಎಂಬ ನಿಶ್ಚಯಜ್ಞಾನವು ಉಂಟಾಗುವದರಿಂದಲೂ

"ಶರಣಂ ವ್ರಜ'' ಎಂಬಿದಕ್ಕೆ ಇದೇ ಸರಿಯಾದ ಅರ್ಥ.) ಹೀಗೆ ಬುದ್ಧಿಯಲ್ಲಿ ನಿಶ್ಚಯಿಸಿಕೊಂಡಿರುವ ನಿನ್ನನ್ನು ನಾನು ಧರ್ಮಗಳ ಮತ್ತು ಅಧರ್ಮಗಳ ಬಂಧನ ರೂಪವಾದ ಎಲ್ಲಾ ಪಾಪಗಳಿಂದಲೂ ನಿನ್ನ ಆತ್ಮಸ್ವರೂಪವನ್ನು ಬೆಳಗಿಸಿ ಕೊಡುವದರಿಂದ ಬಿಡುಗಡೆ ಮಾಡುವೆನು; ಆದ್ದರಿಂದ ಶೋಕಮಾಡಬೇಡ.'' ಇದು ಭಗವಂತನ ಆಶ್ವಾಸನೆ!

89. ....ನ ಚ ದೇಹಾದ್ಯಾತ್ಮಪ್ರತ್ಯಯಭ್ರಾನ್ತಿಸನ್ತಾನ ವಿಚ್ಛೇದೇಷು ಸುಷುಪ್ತಿಸಮಾಧ್ಯಾದಿಷು ಕರ್ತೃತ್ವಭೋಕ್ತೃತ್ವಾದ್ಯನರ್ಥಃ ಉಪಲಭ್ಯತೇ। ತಸ್ಮಾತ್ ಭ್ರಾನ್ತಿಪ್ರತ್ಯಯನಿಮಿತ್ತ ಏವಾಯಂ ಸಂಸಾರಭ್ರಮಃ ನ ತು ಪರಮಾರ್ಥಃ ಇತಿ ಸಮ್ಯಗ್ದರ್ಶನಾತ್ ಅತ್ಯನ್ತಮೇವ ಉಪರಮಃ ಇತಿ ಸಿದ್ಧಮ್ ॥

(ಗೀ. ಭಾ. ೧೮ ೬೬ ಉಪಸಂಹಾರ ಚರ್ಚೆ)

ದೇಹಾದಿಗಳೇ ತಾನೆಂಬ ಅರಿವಿನ ಭ್ರಾಂತಿಸಂತತಿಯು ಕಡಿದುಹೋಗಿರುವ ಸುಷುಪ್ತಿ, ಸಮಾಧಿ (ಮದ, ಮೂರ್ಛೆ)- ಮುಂತಾದ ಅವಸ್ಥೆಗಳಲ್ಲಿ ಕರ್ತೃತ್ವ ಭೋಕ್ತೃತ್ವವೇ ಮುಂತಾದ ಅನರ್ಥವು ಕಂಡುಬರುವದೂ ಇಲ್ಲ. ಆದ್ದರಿಂದ ಈ ಸಂಸಾರಭ್ರಮೆಯು ಭ್ರಾನ್ತಿಪ್ರತ್ಯಯದ ನಿಮಿತ್ತದಿಂದಲೇ ಉಂಟಾಗುತ್ತದೆಯೇ ಹೊರತು ಪರಮಾರ್ಥವಲ್ಲ. ಆದ್ದರಿಂದ ಇದು ಸರಿಯಾದ ತಿಳಿವಳಿಕೆಯಿಂದ ಸಮ್ಯಗ್ದರ್ಶನದಿಂದ ಅತ್ಯಂತವಾಗಿ ನಾಶವಾಗುತ್ತದೆ-ಎಂದು ಸಿದ್ಧವಾಯಿತು.

90. ತದೇತತ್ ಸಮ್ಯಗ್ದರ್ಶನಮ್ ಸ್ತೂಯತೇ—

ಅಂಥ ಈ ಸಮ್ಯಗ್ದರ್ಶನವನ್ನು ಈಗ ಹೊಗಳಲಾಗುತ್ತದೆ:

ವೀತರಾಗಭಯಕ್ರೋಧೈರ್ಮುನಿಭಿರ್ವೇದಪಾರಗೈಃ ।
ನಿರ್ವಿಕಲ್ಪೋ ಹ್ಯಯಂ ದೃಷ್ಟಃ ಪ್ರಪಞ್ಚೋಪಶಮೋಽದ್ವಯಃ ॥

(ಗೌ. ಕಾ. ೨-೩೫)

ಅನುರಾಗ, ಭಯ, ಸಿಟ್ಟು ಮುಂತಾದ ಯಾವ ದೋಷವೂ ಇಲ್ಲದವರೂ ಯಾವಾಗಲೂ ತತ್ತ್ವವನ್ನು ಮನನಮಾಡುವ ಸ್ವಭಾವದವರಾದ ಮುನಿಗಳೂ (ವಿವೇಕಿಗಳೂ) ವೇದಾರ್ಥವನ್ನು ಮನಗಂಡವರೂ ಆಗಿರುವ ಜ್ಞಾನಿಗಳು ಸರ್ವ ವಿಕಲ್ಪಶೂನ್ಯನೂ (ಯಾವ ಹುಟ್ಟುಗಟ್ಟಿದ ಪದಾರ್ಥವೂ ಇಲ್ಲದವನೂ) ವಿಸ್ತೃತವಾದ ದ್ವೈತಭೇದರೂಪವಾದ ಪ್ರಪಂಚವಿಲ್ಲದಿರುವವನೂ ಆದ್ದರಿಂದಲೇ ಅದ್ವಯನೂ ಆಗಿರುವ ಆತ್ಮನನ್ನು ಅರಿತುಕೊಂಡಿರುತ್ತಾರೆ. ಯಾವ ದೋಷಗಳೂ ಇಲ್ಲದ, ವೇದಾಂತಾರ್ಥದಲ್ಲಿಯೇ ತತ್ಪರರಾಗಿರುವ ಸಂನ್ಯಾಸಿಗಳಿಗೇ ಈ ಆತ್ಮನ ಸಮ್ಯಗ್ದರ್ಶನವು ಶಕ್ಯವೇ ಹೊರತು, ರಾಗವೇ ಮುಂತಾದ ದೋಷಗಳಿಂದ ಚಿತ್ತವು ಕದಡಿರುವ, ತಮಗೆ ಇಷ್ಟವಾದ ದರ್ಶನಗಳನ್ನೇ ಇಟ್ಟುಕೊಂಡಿರುವ ತಾರ್ಕಿಕರೇ ಮುಂತಾದವರಿಗೆ ಆಗಲಾರದು.

**91.** ರಾಗಾದಿದೋಷಾನಾಸ್ಪದಂ ಸ್ವಭಾವಶಾನ್ತಮ್ ಅದ್ವೈತದರ್ಶನಮೇವ ಸಮ್ಯಗ್ದರ್ಶನಮ್ ಇತ್ಯುಪಸಂಹೃತಮ್॥
(ಮಾಂ. ಗೌ. ಕಾ ೪-೮೬)

ರಾಗಾದಿದೋಷಗಳಿಗೆ ಅವಕಾಶವಿಲ್ಲದ, ಸ್ವಭಾವದಿಂದಲೇ ಶಾಂತವಾಗಿರುವ ಅದ್ವೈತದರ್ಶನವೇ ಸಮ್ಯಗ್ದರ್ಶನವು (ಸರಿಯಾದ ದರ್ಶನವು) ಎಂದು ಉಪಸಂಹಾರಮಾಡಲಾಯಿತು

ಈಗ ದರ್ಶನ, ಸಮ್ಯಗ್ದರ್ಶನ, ವಿಜ್ಞಾನ, ಸಮ್ಯಗ್ಜ್ಞಾನ, ಸಂನ್ಯಾಸ ಈ ವಿಷಯಗಳ ಸಂಬಂಧವಾಗಿ ಕೇನೋಪನಿಷತ್ತಿನ ಶಾಂಕರಭಾಷ್ಯದಲ್ಲಿ ಹೇಳಿರುವದನ್ನು ವಿಚಾರಮಾಡೋಣ :

**92.** ವಿಶುದ್ಧಸತ್ತ್ವಸ್ಯ ತು ನಿಷ್ಕಾಮಸ್ಯೈವ....ವಿರಕ್ತಸ್ಯ ಪ್ರತ್ಯಗಾತ್ಮವಿಷಯಾ ಜಿಜ್ಞಾಸಾ ಪ್ರವರ್ತತೇ ।.... 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್....ಶ್ರೋತ್ರಿಯಂ ಬ್ರಹ್ಮನಿಷ್ಠಮ್' । (ಮುಂ. ೧-೨-೧೨) ಏವಂ ಹಿ ವಿರಕ್ತಸ್ಯ ಪ್ರತ್ಯಗಾತ್ಮವಿಷಯಂ ವಿಜ್ಞಾನಂ ಶ್ರೋತುಂ ಮನ್ತುಂ ವಿಜ್ಞಾತುಂ ಚ ಸಾಮರ್ಥ್ಯಮುಪಪದ್ಯತೇ, ನಾನ್ಯಥಾ ॥ (ಕೇ.ಭಾ. ಅವತರಣಿಕಾ)

ಆದರೆ ಯಾವನು ಸತ್ತ್ವಶುದ್ಧಿಯನ್ನು (ಕರ್ಮೋಪಾಸನೆಗಳಿಂದ ಅಂತಃಕರಣಶುದ್ಧಿಯನ್ನು) ಪಡೆದುಕೊಂಡಿರುವನೋ, ಅದರಿಂದ ನಿಷ್ಕಾಮನಾಗಿರುವನೋ, ಹೊರಗಿನ ಅನಿತ್ಯವಾದ ಸಾಧನಗಳ (ಪುತ್ರ, ಕರ್ಮ, ಉಪಾಸನೆ- ಇವು ಸಾಧನಗಳು. ಮನುಷ್ಯಲೋಕ, ಪಿತೃದೇವಲೋಕಗಳು, ಸಾಧ್ಯಗಳು) ಸಂಬಂಧವಿಷಯಕ್ಕೂ ವಿರಕ್ತನಾಗಿರುವನೋ ಅವನಿಗೇ ಪ್ರತ್ಯಗಾತ್ಮವಿಷಯದ ಜ್ಞಾನವನ್ನು ಹೊಂದಬೇಕೆಂಬ ಇಚ್ಛೆಯು ಉಂಟಾಗುತ್ತದೆ. "ಬ್ರಾಹ್ಮಣನಾದವನು ವೈರಾಗ್ಯವನ್ನು ತಳೆದು, ಅದನ್ನು (ಬ್ರಹ್ಮಾತ್ಮವನ್ನು) ಅರಿತುಕೊಳ್ಳುವದಕ್ಕಾಗಿ ಸಮಿತ್ಪಾಣಿಯಾಗಿ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಗೇ ಹೋಗಬೇಕು" ಎಂದು ಹೀಗೆ ವಿರಕ್ತನಾದವನಿಗೇ ಪ್ರತ್ಮಗಾತ್ಮನ ವಿಷಯದ ವಿಜ್ಞಾನವನ್ನು ಕುರಿತು ಶ್ರವಣಮಾಡುವದಕ್ಕೂ ಮನನಮಾಡುವದಕ್ಕೂ ಅರಿತುಕೊಳ್ಳುವದಕ್ಕೂ (ಅನುಭವಪಡೆಯುವದಕ್ಕೂ) ಸಾಮರ್ಥ್ಯವು ಉಂಟಾಗುವದೇ ಹೊರತು ಬೇರೆಯ ಮಾರ್ಗದಿಂದ ಉಂಟಾಗಲಾರದು.

ಏತಸ್ಮಾಚ್ಚ ಪ್ರತ್ಯಗಾತ್ಮಬ್ರಹ್ಮವಿಜ್ಞಾನಾತ್ ಸಂಸಾರಬೀಜಮಜ್ಞಾನಂ ಕಾಮಕರ್ಮಪ್ರವೃತ್ತಿಕಾರಣಮಶೇಷತೋ ನಿವರ್ತತೇ॥
(ಕೇ. ಭಾ. ಅವತರಣಿಕೆ)

ಈ ಪ್ರತ್ಯಗಾತ್ಮಬ್ರಹ್ಮದ (ನಮ್ಮ ಒಳಗಿರುವ ಆತ್ಮರೂಪವಾದ ಬ್ರಹ್ಮದ) ವಿಜ್ಞಾನದಿಂದ ಸಂಸಾರಕ್ಕೆ ಬೀಜವಾದ ಕಾಮಕರ್ಮಗಳು ಮುಂಬರಿಯುವದಕ್ಕೆ ಕಾರಣವಾದ ಅಜ್ಞಾನವು (ಅಧ್ಯಾಸವು) ಸ್ವಲ್ಪವೂ ಉಳಿಯದಂತೆ ತೊಲಗುವದು.

'ಪುತ್ರೇಣಾಯಂ ಲೋಕೋ ಜಯ್ಯೋ ನಾನ್ಯೇನ ಕರ್ಮಣಾ, ಕರ್ಮಣಾ ಪಿತೃಲೋಕೋ ವಿದ್ಯಯಾ ದೇವಲೋಕಃ' (ಬೃ. ೧-೫-೧೬) ನ ಚಾಸ್ಮಾಕಂ ಲೋಕತ್ರಯಮನಿತ್ಯಂ ಸಾಧನಸಾಧ್ಯಮಿಷ್ಟಮ್। ಯೇಷಾಮಸ್ಮಾಕಂ ಸ್ವಾಭಾವಿಕೋಽಜೋಽಜರೋಽಮೃತೋಽಭಯೋ ನ ವರ್ಧತೇ ಕರ್ಮಣಾ ನೋ ಕನೀಯಾನ್ ನಿತ್ಯಶ್ಚ ಲೋಕ ಇಷ್ಟಃ। ಸ ಚ ನಿತ್ಯತ್ವಾನ್ನಾವಿದ್ಯಾನಿವೃತ್ತಿವ್ಯತಿರೇಕೇಣಾನ್ಯಸಾಧನನಿಷ್ಪಾದ್ಯಃ । ತಸ್ಮಾತ್ ಪ್ರತ್ಯಗಾತ್ಮಬ್ರಹ್ಮವಿಜ್ಞಾನಪೂರ್ವಕಃ ಸರ್ವೈಷಣಾಸಂನ್ಯಾಸ ಏವ ಕರ್ತವ್ಯ ಇತಿ ॥

(ಕೇ. ಭಾ. ಅವತರಣಿಕೆ)

"ಈ ಲೋಕವು ಪುತ್ರನಿಂದ ಗೆಲ್ಲಬಹುದಾದುದೇ ಹೊರತು ಬೇರೆಯ ಕರ್ಮದಿಂದ ಗೆಲ್ಲಬಹುದಾದುದಲ್ಲ; ಪಿತೃಲೋಕವು ಕರ್ಮದಿಂದ ಗೆಲ್ಲಬಹುದಾದುದು; ದೇವಲೋಕವು ವಿದ್ಯೆಯಿಂದ'' (ಬೃ. ೧-೫-೧೬) ನಮಗೆ ಅನಿತ್ಯವಾದ ಸಾಧನಗಳಿಂದ ಪಡೆಯತಕ್ಕದ್ದಾಗಿರುವ ಲೋಕತ್ರಯವಂತೂ ಬೇಕಾಗಿರುವದಿಲ್ಲ; ಈ ನಮಗೆ ಸ್ವಾಭಾವಿಕವಾಗಿಯೂ (ಮತ್ತೊಂದರಿಂದ ಆಗದೆ ಸ್ವರೂಪವೇ ಆಗಿರುವ) ಜನ್ಮರಹಿತವಾಗಿಯೂ ಕರ್ಮದಿಂದ ಹೆಚ್ಚದೆ ಕುಂದದೆ ಇರುವದಾಗಿಯೂ ಇರುವ ನಿತ್ಯವಾದ ಆತ್ಮಲೋಕವೇ ಬೇಕಾಗಿರುತ್ತದೆ. ಅದು ನಿತ್ಯವಾಗಿರುವದರಿಂದ ಅವಿದ್ಯೆಯು ಹೋಗುವದೊಂದನ್ನು ಬಿಟ್ಟು ಮತ್ತೆ ಯಾವ ಸಾಧನದಿಂದಲೂ ಅದು ಹೊಸದಾಗಿ ಉಂಟಾಗುವಹಾಗಿಲ್ಲ. (ಆತ್ಮನು ನಮಗೆ ಅವಿದ್ಯೆಯಿಂದ ದೊರಕಿಲ್ಲವೆಂಬಂತೆ ಇರುವದರಿಂದ ಕೇವಲ ವಿದ್ಯೆಯಿಂದಲೇ-ಬರಿಯ ಜ್ಞಾನದಿಂದಲೇ-ಅವನು ದೊರಕಬೇಕಾದುದು ಸ್ವಾಭಾವಿಕ.) ಆದ್ದರಿಂದ ಪ್ರತ್ಯಗಾತ್ಮಬ್ರಹ್ಮವನ್ನರಿತುಕೊಂಡು ಸಕಲ ವಿಷಣೆಗಳ ಸಂನ್ಯಾಸವನ್ನೇ ನಾವು ಮಾಡಬೇಕು. (ನಮಗೆ ಲೋಕತ್ರಯವೂ ಬೇಕಿಲ್ಲವೆಂಬ ವಿರಕ್ತಿಯುಂಟಾದಮೇಲೆ, ವಿವೇಕವಿಜ್ಞಾನದಿಂದ ಅನಾತ್ಮವೆಲ್ಲವೂ ಬರಿ ಹುಸಿತೋರಿಕೆಯೆಂದರಿತುಕೊಂಡು, ಚಿನ್ಮಾತ್ರಸ್ವರೂಪಾತ್ಮನಲ್ಲಿಯೇ-ಬ್ರಹ್ಮಾತ್ಮನಲ್ಲಿಯೇ-ಮನಸ್ಸು ನೆಲೆನಿಲ್ಲಬೇಕು.) ಹೀಗೆ, ಸಂನ್ಯಾಸವು ಜ್ಞಾನಕ್ಕೆ ಸಾಧನೆಯಾಗಿದೆಯಲ್ಲದೆ, ಜ್ಞಾನದ ಫಲವೂ ಆಗಿದೆ.

93. ತೇ ಧೀರಾಃ ಧೀಮನ್ತಃ । ಪ್ರೇತ್ಯ ವ್ಯಾವೃತ್ಯ, ಅಸ್ಮಾತ್ ಲೋಕಾತ್ ಪುತ್ರಮಿತ್ರಕಲತ್ರಬನ್ಧುಷು ಮಮಾಹಂಭಾವ-

**ಸಂವ್ಯವಹಾರಲಕ್ಷಣಾತ್ ತ್ಯಕ್ತಸರ್ವೈಷಣಾ ಭೂತ್ವೇತ್ಯರ್ಥಃ। ಅಮೃತಾಃ ಅಮರಣಧರ್ಮಾಣೋ ಭವನ್ತಿ। "ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ''**

**(ತೈ ನಾ. ೨೮) (ಕೇ. ಭಾ. ೧-೨)**

ಅಂಥ ಬುದ್ಧಿವಂತರು ಈ ಲೋಕದಿಂದ ಹೊರಟುಹೋಗಿ, ಎಂದರೆ ಮಕ್ಕಳು, ಸ್ನೇಹಿತರು, ಹೆಂಡತಿ ನೆಂಟರು-ಇವರಲ್ಲಿ ನಾನು ನನ್ನದೆಂಬ ಭಾವನೆಯು ವ್ಯವಹಾರರೂಪವಾಗಿರುವ ಈ ಲೋಕದಿಂದ ಹಿಂತಿರುಗಿ, ಎಲ್ಲ ಏಷಣೆಗಳನ್ನೂ ಬಿಟ್ಟು ಅಮೃತರಾಗುವರು ಎಂದರೆ ಸಾವೆಂಬ ಧರ್ಮವಿಲ್ಲದವರಾಗುವರು. "ಕರ್ಮದಿಂದಲ್ಲ, ಪ್ರಜೆಯಿಂದಲ್ಲ, ಧನದಿಂದಲ್ಲ, ತ್ಯಾಗದಿಂದಲೇ ಕೆಲವರು ಅಮೃತತ್ವವನ್ನು ಪಡೆದಿರುತ್ತಾರೆ."

**94- ವಿಜ್ಞಾತಂ ವಿದಿತಂ ಬ್ರಹ್ಮ ಅವಿಜಾನತಾಮ್ ಅಸಮ್ಯಗ್ದರ್ಶಿನಾಮ್, ಇನ್ದ್ರಿಯಮನೋಬುದ್ಧಿಷ್ವೇವಾತ್ಮದರ್ಶಿನಾಮ್ ಇತ್ಯರ್ಥಃ। ಇತ್ಯತಃ ಅಸಮ್ಯಗ್ದರ್ಶನಂ ಪೂರ್ವಪಕ್ಷತ್ವೇನೋಪನ್ಯಸ್ಯತೇ 'ವಿಜ್ಞಾತಮವಿಜಾನತಾಮ್' ಇತಿ॥**

**(ಕೇ. ಭಾ. ೨-೩)**

ಬ್ರಹ್ಮವನ್ನು ಸರಿಯಾಗಿ ಬಲ್ಲವರಿಗೆ (ಸಮ್ಯಗ್ದರ್ಶಿಗಳಿಗೆ) ಬ್ರಹ್ಮವು ತಿಳಿವಿಗೆ ವಿಷಯವಲ್ಲವೆಂದು ತಿಳಿದಿರುತ್ತದೆ. ನಿಜವನ್ನು ಅರಿಯದವರಿಗೆ ಎಂದರೆ, (ಅಸಮ್ಯಗ್ದರ್ಶಿನಾಮ್) ಸರಿಯಾದ ತಿಳಿವಳಿಕೆಯಿಲ್ಲದೆ,-ನಿಜವನ್ನು ಕಾಣದೆ-ಇಂದ್ರಿಯ, ಮನಸ್ಸು, ಬುದ್ಧಿ- ಇವುಗಳಲ್ಲಿಯೇ ಆತ್ಮನನ್ನು ಕಾಣುವವರಿಗೆ ಬ್ರಹ್ಮವು ತಿಳಿದಿರುತ್ತದೆ, ಎಂದರೆ 'ಬ್ರಹ್ಮವನ್ನು ಅರಿತುಕೊಂಡಿರುವೆವು." ಎಂಬ ಭ್ರಾಂತಿಯುಂಟಾಗಬಹುದಾಗಿದೆ. ಆದ್ದರಿಂದ ಸರಿಯಲ್ಲದ ಈ ತಿಳಿವಳಿಕೆಯನ್ನೇ ಪೂರ್ವಪಕ್ಷವಾಗಿಟ್ಟುಕೊಂಡು, (ಅವರ ಭಾವನೆಯನ್ನು ಪೂರ್ವಪಕ್ಷವಾಗಿಟ್ಟುಕೊಂಡು ಆತ್ಮನು ಅವಿಷಯನೆಂಬುದನ್ನು ತಿಳಿಸಿರುತ್ತದೆ.) "ಅರಿಯುವವರಿಗೆ ತಿಳಿಯದೆ ಇರುತ್ತದೆ" ಎಂಬ ಮಾತನ್ನು ಹೇಳಿದೆಯೆಂದು ತಿಳಿಯಬೇಕು. (ಸಮ್ಯಗ್ದರ್ಶಿಗೆ-ನಿಜವನ್ನರಿತವನಿಗೆ ಬ್ರಹ್ಮವು ಎಂದಿಗೂ ವಿಷಯವಾಗಿರುವದಿಲ್ಲ; ಆದ್ದರಿಂದ ಅವನ ಮತವೇ ಸರಿಯಾದ ಮತವು.)

**95. ....ಕಥಂ ತು ತದ್ಬ್ರಹ್ಮ ಸಮ್ಯಗ್ ವಿದಿತಂ (ಸಮ್ಯಗ್ಜ್ಞಾತಂ) ಭವತಿ ? (ಕೇ. ಭಾ. ೨-೪ ಅವ.)**

ಆ ಬ್ರಹ್ಮವನ್ನು ಹೇಗೆ ಅರಿತರೆ ಸರಿಯಾಗಿ ಅರಿತಂತೆ (ಸಮ್ಯಗ್ದರ್ಶಿತವ್) ಆಗುವದು ? ಎಂಬುವದನ್ನು ತಿಳಿಸುವದಕ್ಕಾಗಿ ಈ ಮುಂದಿನ "ಪ್ರತಿಬೋಧ ವಿದಿತಂ ಮತಮ್" ಎಂಬ ಮಂತ್ರವು ಬಂದಿದೆ.

....ಸರ್ವೇ ಪ್ರತ್ಯಯಾ ವಿಷಯೀಭವನ್ತಿ ಯಸ್ಯ ಸ ಆತ್ಮಾ ಸರ್ವಬೋಧಾನ್ ಪ್ರತಿಬುಧ್ಯತೇ ಸರ್ವಪ್ರತ್ಯಯದರ್ಶೀ ಚಿಚ್ಛಕ್ತಿ ಸ್ವರೂಪಮಾತ್ರಃ ಪ್ರತ್ಯಯೈರೇವ ಪ್ರತ್ಯಯೇಷ್ವವಿಶಿಷ್ಟತಯಾ ಲಕ್ಷ್ಯತೇ ನಾನ್ಯದ್ ದ್ವಾರಮ್ ಅನ್ತರಾತ್ಮನೋ ವಿಜ್ಞಾನಾಯ । ಅತಃ ಪ್ರತ್ಯಯಪ್ರತ್ಯಗಾತ್ಮತಯಾ ವಿದಿತಂ ಬ್ರಹ್ಮ ಯದಾ ತದಾ ತತ್ ಮತಂ, ತತ್ ಸಮ್ಯಗ್ದರ್ಶನಮ್ ಇತ್ಯರ್ಥಃ ॥ (ಕೇ.ಭಾ. ೨-೪)

ಎಲ್ಲಾ ಪ್ರತ್ಯಯಗಳೂ ಯಾವಾತನಿಗೆ ವಿಷಯವಾಗುವವೋ ಆ ಆತ್ಮನು ಎಲ್ಲಾ ಬೋಧಗಳನ್ನೂ ಅರಿಯುತ್ತಾನೆ. ಎಲ್ಲಾ ಪ್ರತ್ಯಯಗಳನ್ನೂ ನೋಡುವ ಚೈತನ್ಯಶಕ್ತಿಯ ಸ್ವರೂಪವೇ ಆಗಿರುವ ಆ ಆತ್ಮನು ಪ್ರತ್ಯಯಗಳಿಂದಲೇ (ಪ್ರತ್ಯಯಗಳ ಮೂಲಕವೇ) ಎಲ್ಲಾ ಪ್ರತ್ಯಯಗಳಲ್ಲಿಯೂ ಸಮಾನವಾಗಿದ್ದು ಕೊಂಡು ತೋರುತ್ತಾನೆ. ಒಳಗಿರುವ ಆತ್ಮನನ್ನು ಅರಿಯುವದಕ್ಕೆ ಮತ್ತೊಂದು ದ್ವಾರವಿಲ್ಲ. ಆದ್ದರಿಂದ ಪ್ರತ್ಯಯಗಳ ಒಳ ಆತ್ಮನೆಂದು ಯಾವಾಗ ಬ್ರಹ್ಮವನ್ನು ಅರಿಯುತ್ತೇವೆಯೋ ಆಗ ಅದನ್ನು ಅರಿತಂತಾಗುವದು. ಅದೇ "ಸಮ್ಯಗ್ದರ್ಶನ"ವು ಸರಿಯಾದ ದರ್ಶನವು-ಎಂದರ್ಥ. (ಯಾವ ಪ್ರತ್ಯಯವೂ ತನ್ನನ್ನು ತಾನು ನೋಡಲಾರದು.) ಒಂದು ಪ್ರತ್ಯಯವು ಅಡಗಿದ ಮೇಲೆಯೇ ಇನ್ನೊಂದು ಪ್ರತ್ಯಯವು ತೋರಿಕೊಳ್ಳುವದರಿಂದ ಯಾವದೊಂದು ಪ್ರತ್ಯಯವನ್ನೂ ಇನ್ನೊಂದು ಪ್ರತ್ಯಯವು ನೋಡಲಾರದು. ಆದ್ದರಿಂದ ಎಲ್ಲಾ ಪ್ರತ್ಯಯಗಳ ತೋರುವಿಕೆಯನ್ನೂ ಅಡಗುವಿಕೆಯನ್ನೂ ನೋಡುವವನು ಸಾಕ್ಷಿಯೇ. ಅಹಂಕಾರವನ್ನು ನೋಡುತ್ತಿರುವ ಸಾಕ್ಷಿಯು ಎಲ್ಲಾ ಪ್ರತ್ಯಯಗಳನ್ನೂ ಬೆಳಗುತ್ತಿರುವ ಸಾಕ್ಷಿಯಾಗಿ, ಎಲ್ಲಾ ಪ್ರತ್ಯಯಗಳ ತಿರುಳಾದ ಚೈತನ್ಯರೂಪ ಆತ್ಮನಾಗಿದ್ದಾನೆ.

**96.** 'ಇಮೌ ದ್ವಾವೇವ ಪನ್ಥಾನಾವನುನಿಷ್ಕ್ರಾನ್ತತರೌ ಭವತಃ ಕ್ರಿಯಾಪಥಶ್ಚೈವ ಪುರಸ್ತಾತ್ ಸಂನ್ಯಾಸಶ್ಚೋತ್ತರೇಣ ನಿವೃತ್ತಿಮಾರ್ಗೇಣ ಏಷಣಾತ್ರಯಸ್ಯ ತ್ಯಾಗಃ । ತಯೋಃ ಸಂನ್ಯಾಸಪಥ ಏವಾತಿರೇಚಯತಿ' (?) 'ನ್ಯಾಸ ಏವಾತ್ಯರೇಚಯತ್' (ತೈ. ನಾರಾ. ೭೮, ಈಶಾ. ಭಾ. ೨)

'ಈ ಎರಡೇ ಹಾದಿಗಳು ಹೊರಟು ಬಂದಿವೆ. ಕರ್ಮದ ಹಾದಿಯೇ ಮೊದಲು, ಬಳಿಕ ಸಂನ್ಯಾಸವು ಎಂದರೆ ನಿವೃತ್ತಿಮಾರ್ಗದಿಂದ ಏಷಣಾತ್ರಯವನ್ನು ಬಿಡುವದು. ಇವೆರಡರಲ್ಲಿ ಸಂನ್ಯಾಸವೇ ಹೆಚ್ಚಿನದಾಗಿರುವದು.' (?) 'ಸಂನ್ಯಾಸವೇ ಹೆಚ್ಚಿನದು.'

**97.** ವೇದಾನ್ತಾರ್ಥತತ್ತ್ವಮ್ ಏಕತ್ವದರ್ಶನಮ್ ॥ (ಪ್ರ. ಭಾ. ೬-೩)

ಉಪನಿಷತ್ತುಗಳಲ್ಲಿರುವ ವಿಷಯದ ತತ್ತ್ವವು ಏಕತ್ವದರ್ಶನವು. (ಪ್ರಶ್ನ ಉ. ಭಾ. ೬-೩) ಈ ಏಕತ್ವದರ್ಶನವೇ ಸಮ್ಯಗ್ದರ್ಶನವು.

**98.** ತದಿದಂ ಮೋಕ್ಷಸಾಧನಂ ಜ್ಞಾನಂ ಸಾಧನಸಾಧ್ಯಾತ್ ಅನಿತ್ಯಾತ್ ಸರ್ವಸ್ಮಾತ್ ವಿರಕ್ತಾಯ ತ್ಯಕ್ತಪುತ್ರವಿತ್ತಲೋಕೈ-ಷಣಾಯ ಪ್ರತಿಪನ್ನಪರಮಹಂಸಪಾರಿವ್ರಾಜ್ಯಾಯ ಶಮದಮ ದಯಾದಿಯುಕ್ತಾಯ ಶಾಸ್ತ್ರಪ್ರಸಿದ್ಧಶಿಷ್ಯಗುಣಸಂಪನ್ನಾಯ ಶುಚಯೇ ಬ್ರಾಹ್ಮಣಾಯ ವಿಧಿವದುಪಸನ್ನಾಯ ಶಿಷ್ಯಾಯ ಬ್ರೂಯಾತ್ ಪುನಃ ಪುನಃ ಯಾವತ್ ಗ್ರಹಣಂ ದೃಢೀಭವತಿ ||
(ಉಪದೇಶಸಾಹಸ್ರಿ : ೨)

ಆ ಈ ಮೋಕ್ಷಸಾಧನವಾದ ಜ್ಞಾನವನ್ನು ಯಾವದಾದರೊಂದು ಸಾಧನ ದಿಂದ ಸಾಧ್ಯವಾಗಿ ಅನಿತ್ಯವಾಗಿರುವ ಎಲ್ಲದರಿಂದಲೂ ವಿರಕ್ತನಾಗಿ ಪುತ್ರ, ವಿತ್ತ ಲೋಕಗಳು-ಇವುಗಳ ಏಷಣೆಯನ್ನು ಬಿಟ್ಟು ಪರಮಹಂಸಪಾರಿವ್ರಾಜ್ಯವನ್ನು ಹೊಂದಿ, ಶಮ, ದಮ, ದಯೆ-ಮುಂತಾದವುಗಳಿಂದ ಕೂಡಿ, ಶಾಸ್ತ್ರಪ್ರಸಿದ್ಧ ವಾಗಿರುವ ಶಿಷ್ಯಗುಣಗಳಿಂದೊಡಗೂಡಿ ಶುಚಿಯಾದ ಬ್ರಾಹ್ಮಣನಾಗಿರುವ, ವಿಹಿತ ವಾದ ರೀತಿಯಲ್ಲಿ ಉಪಸನ್ನನಾಗಿರುವ ಶಿಷ್ಯನಿಗೆ ಅವನ ತಿಳಿವಳಿಕೆ ಗಟ್ಟಿಯಾಗುವ ವರೆಗೂ ಮತ್ತೆ ಮತ್ತೆ ವೇದಾಂತಾರ್ಥವನ್ನು ಬೋಧಿಸಬೇಕು.

**99.** "ಆಚಾರ್ಯಃ ಪ್ಲಾವಯಿತಾ ಸಮ್ಯಗ್ಜ್ಞಾನಂ ಪ್ಲವ ಇಹೋಚ್ಯತೇ" (?) ಇತ್ಯಾದಿಶ್ರುತಿಭ್ಯಃ || (ಉಪ. ೩)

'ಆಚಾರ್ಯನೇ ದಾಟಿಸತಕ್ಕವನು ಸಮ್ಯಗ್ಜ್ಞಾನವೇ ಸರಿಯಾದ ಜ್ಞಾನವೇ ಇಲ್ಲಿ ದೋಣಿ ಎನಿಸುತ್ತದೆ.' (?) ಮುಂತಾದ ಶ್ರುತಿಗಳಿಂದ ಇದು ಸಿದ್ಧವಾಗುತ್ತದೆ.

**100.** ತಚ್ಚೈತತ್ ಪರಮಾರ್ಥದರ್ಶನಮ್....ಪುತ್ರಮಿತ್ರ ಲೋಕೈಷಣಾದಿಭ್ಯೋ ವ್ಯುತ್ಥಾನಂ ಕರ್ತವ್ಯಮ್ | ಸಮ್ಯಕ್ ಪ್ರತ್ಯಯವಿರೋಧಾತ್ ತದಭಿಮಾನಸ್ಯ | ಪರಮಾರ್ಥದರ್ಶನ ನಿಷ್ಠೇನ ತ್ಯಾಗಃ ಕರ್ತವ್ಯಃ || (ಉಪ. ೪೯)

ಅಂಥ ಈ ಪರಮಾರ್ಥಜ್ಞಾನವನ್ನು (ಪರಮಾರ್ಥದರ್ಶನವನ್ನು = ಸಮ್ಯಗ್ದರ್ಶನವನ್ನು) ಪಡೆದುಕೊಳ್ಳಬೇಕೆಂದು ಬಯಸುವಾತನು ವರ್ಣ, ಆಶ್ರಮ - ಮುಂತಾದವುಗಳ ಅಭಿಮಾನದಿಂದಾಗಿರುವ ಪಾಙ್ಕ್ತರೂಪವಾದ (ತಾನು, ಹೆಂಡತಿ, ಪುತ್ರ, ಮಾನುಷವಿತ್ತ, ದೈವವಿತ್ತ) ಮಕ್ಕಳು, ವಿತ್ತ, ಲೋಕ- ಎಂಬ ಮೂರು ಏಷಣೆಗಳೇ (ಕಾಮಗಳೇ) ಮುಂತಾದವುಗಳನ್ನು

ಬಿಟ್ಟು ಮೇಲಕ್ಕೇಳಬೇಕು. (ಸಂನ್ಯಾಸಮಾಡಬೇಕು.) ಏಕೆಂದರೆ, ಆ ಅಭಿಮಾನವು (ಸಮ್ಯಕ್‌ಪ್ರತ್ಯಯಕ್ಕೆ- ಸಮ್ಯಗ್ಜ್ಞಾನಕ್ಕೆ) ಸರಿಯಾದ ಜ್ಞಾನಕ್ಕೆ ವಿರುದ್ಧವಾಗಿರುತ್ತದೆ. ಆದ್ದರಿಂದ ಎಲ್ಲಾ ಬಗೆಯ ಕರ್ಮಗಳೂ (ನಿತ್ಯಕರ್ಮಗಳನ್ನು ಕೂಡ ಸಂನ್ಯಾಸಮಾಡಬೇಕು.) ಅವುಗಳ ಸಾಧನವಾಗಿರುವ ಯಜ್ಞೋಪವೀತಾದಿಗಳೂ ಅವಿದ್ಯೆಯ ಕಾರ್ಯವಾಗಿರುವದರಿಂದ ಪರಮಾರ್ಥದರ್ಶನದಲ್ಲಿ (ಸಮ್ಯಗ್ದರ್ಶನದಲ್ಲಿ) ನಿಷ್ಠನಾದವನು ಅವುಗಳನ್ನು ಬಿಟ್ಟುಬಿಡಬೇಕು.

101. ತ್ವಂ ಪದಾರ್ಥವಿವೇಕಾಯ ಸಂನ್ಯಾಸಃ ಸರ್ವಕರ್ಮಣಾಮ್
ಸಾಧನತ್ವಂ ವ್ರಜತ್ಯೇವ ಶಾನ್ತೋ ದಾನ್ತಾನುಶಾಸನಾತ್ ॥
(ಉಪ. ೧೮-೨೧೧)

ತ್ವಂಪದಾರ್ಥವನ್ನು ವಿವೇಚಿಸುವದಕ್ಕೆ ಸರ್ವಕರ್ಮಗಳ ಸಂನ್ಯಾಸವು ಸಾಧನತ್ವವನ್ನು ಹೊಂದಿಯೇ ತೀರುತ್ತದೆ. ಏಕೆಂದರೆ, 'ಶಾನ್ತೋ ದಾನ್ತಃ' (ಬೃ. ೪-೪-೨೩) ಎಂದು ಶಾಸ್ತ್ರವಿಧಿಯಿದೆ.

ತಸ್ಮಾದೇವಂವಿಚ್ಛಾನ್ತೋ ದಾನ್ತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾಽಽತ್ಮನ್ಯೇವಾಽಽತ್ಮಾನಂ ಪಶ್ಯತಿ ಸರ್ವಮಾತ್ಮಾನಂ ಪಶ್ಯತಿ ॥ (ಬೃ. ಉ. ೪-೪-೨೩)

ಆದ್ದರಿಂದ ಹೀಗೆಂದರಿತವನು ಬಾಹ್ಯೇಂದ್ರಿಯವ್ಯಾಪಾರಗಳನ್ನು ಬಿಟ್ಟು ಉಪಶಾಂತನಾದವನೂ ಮತ್ತು ಅಂತಃಕರಣದಲ್ಲಿರುವ ಆಶೆಯನ್ನು ಬಿಟ್ಟವನೂ ಉಪರತನು ಎಂದರೆ ಉಪರತಃ ಸರ್ವೈಷಣಾವಿನಿರ್ಮುಕ್ತಃ ಸಂನ್ಯಾಸೀ, ತಿತಿಕ್ಷುಃ ದ್ವಂದ್ವಸಹಿಷ್ಣುಃ ಸಮಾಹಿತಃ ಇನ್ದ್ರಿಯಾನ್ತಃಕರಣಚಲನರೂಪಾತ್ ವ್ಯಾವೃತ್ತ ಐಕಾಗ್ರ್ಯರೂಪೇಣ ಸಮಾಹಿತೋ ಭೂತ್ವಾ। ಆತ್ಮಾನಂ ಪ್ರತ್ಯಕ್ಚೇತಯಿತಾರಂ ಪಶ್ಯತಿ॥ ಸಮಸ್ತಮ್ ಆತ್ಮಾನಮೇವ ಪಶ್ಯತಿ। (ಬೃ. ಭಾ. ೪-೪-೨೩) ಎಲ್ಲಾ ಏಷಣೆಗಳನ್ನೂ ಬಿಟ್ಟ ಸಂನ್ಯಾಸಿಯೂ ದ್ವಂದ್ವಗಳನ್ನು ಸಹಿಸಿಕೊಳ್ಳುವ ಸ್ವಭಾವದವನೂ ಸಮಾಹಿತನೂ ಎಂದರೆ, ಇಂದ್ರಿಯಾಂತಃಕರಣಗಳ ಚಾಂಚಲ್ಯವನ್ನು ಬಿಡಿಸಿಕೊಂಡು ಐಕಾಗ್ರ್ಯತೆಯಿಂದ ಸಮಾಧಾನವುಳ್ಳವನೂ ಆತ್ಮನನ್ನು ಎಂದರೆ, ಪ್ರತ್ಯಗ್‌ರೂಪನಾದ ಸಾಕ್ಷಿಚೈತನ್ಯಸ್ವರೂಪವನ್ನು ಕಂಡುಕೊಳ್ಳುತ್ತಾನೆ. ಆತ್ಮನಿಗಿಂತ ಬೇರೆಯಾಗಿ ಕೂದಲೆಳೆಯಷ್ಟು ಕೂಡ ಮತ್ತೊಂದು ಇರುವದಿಲ್ಲವೆಂದು ಕಂಡುಕೊಳ್ಳುತ್ತಾನೆ. ಎಚ್ಚರ, ಕನಸು, ತನಿನಿದ್ರೆ- ಎಂಬ ಅವಸ್ಥಾತ್ರಯವನ್ನು ಬಿಟ್ಟು ಆತ್ಮನನ್ನು ಅರಿತುಕೊಳ್ಳುವದರಿಂದ ಮುನಿಯಾಗುತ್ತಾನೆ.

102. ಅಜ್ಞಾನನಿವೃತ್ತೇಶ್ಚ ಸಮ್ಯಗ್ಜ್ಞಾನಸ್ವರೂಪಲಾಭಮಾತ್ರಹೇತುತ್ವಾತ್ ತದುಪಾದಾನಮ್। ಅಶೇಷಾನರ್ಥಹೇತ್ವಾತ್ಮಾನವಬೋಧವಿಷಯಸ್ಯ ಚ ಅನಾಗಮಿಕಪ್ರತ್ಯಕ್ಷಾದಿಲೌಕಿಕಪ್ರಮಾಣಾವಿಷಯತ್ವಾತ್ ವೇದಾನ್ತಾಗಮವಾಕ್ಯಾದೇವ ಸಮ್ಯಗ್ಜ್ಞಾನಮ್ ॥ (ನೈಷ್ಕರ್ಮ್ಯಸಿದ್ಧಿ. ೧ ಅವತರಣಿಕಾ)

ಅಜ್ಞಾನವನ್ನು ಕಳೆಯಲು ಸಮ್ಯಗ್ಜ್ಞಾನವು ಮಾತ್ರ ಕಾರಣವಾದ್ದರಿಂದ ಅದನ್ನು ಸ್ವೀಕರಿಸಬೇಕು. ಎಲ್ಲಾ ಅನರ್ಥಗಳಿಗೂ ಕಾರಣವಾದ ಅಜ್ಞಾನಕ್ಕೆ ವಿಷಯನಾದ ಆತ್ಮನು ಆಗಮಿಕವಲ್ಲದ ಪ್ರತ್ಯಕ್ಷಾದಿ ಲೌಕಿಕಪ್ರಮಾಣಗಳಿಗೆ ಗೋಚರನಲ್ಲವಾದ್ದರಿಂದ ವೇದಾಂತಾಗಮವಾಕ್ಯದಿಂದಲೇ ಸಮ್ಯಗ್ಜ್ಞಾನವಾಗುತ್ತದೆ.

103. ವೇದಾವಸಾನವಾಕ್ಯೋತ್ಥಸಮ್ಯಗ್ಜ್ಞಾನಾಶುಶುಕ್ಷಣಿಃ ।
ದಹೇದ್ಧೀತ್ಯಾತ್ಮನೋ ಮೋಹಂ ನ ಕರ್ಮಾಪ್ರತಿಕೂಲತಃ ॥
(ನೈ. ಸಿ. ೧ ೮)

ವೇದಾಂತವಾಕ್ಯದಿಂದ ಉಂಟಾದ ಸಮ್ಯಗ್ಜ್ಞಾನವೆಂಬ ಬೆಂಕಿಯು ಆತ್ಮನ ಅಜ್ಞಾನವನ್ನು ಸುಟ್ಟುಹಾಕಿಬಿಡುತ್ತದೆ ; ಕರ್ಮವು ಸುಡಲಾರದು ; ಏಕೆಂದರೆ ಕರ್ಮವು ಅಜ್ಞಾನಕ್ಕೆ ಪ್ರತಿಕೂಲವಲ್ಲ.

104. ಬಲವದ್ಧಿ ಪ್ರಮಾಣೋತ್ಥಂ ಸಮ್ಯಗ್ಜ್ಞಾನಂ ನ ಬಾಧ್ಯತೇ ।
ಆಕಾಙ್ಕ್ಷತೇ ನ ಚಾಪ್ಯನ್ಯದ್ ಬಾಧನಂ ಪ್ರತಿ ಸಾಧನಮ್ ॥
(ನೈ. ಸಿ. ೧-೩೬)

ಪ್ರಮಾಣದಿಂದ ಉಂಟಾಗಿ ಪ್ರಬಲವಾಗಿರುವದರಿಂದ ಸಮ್ಯಗ್ಜ್ಞಾನವು ಬಾಧಿತವಾಗುವದಿಲ್ಲ. ಅಜ್ಞಾನವನ್ನು ಬಾಧಿಸುವದಕ್ಕೆ ಮತ್ತೊಂದು ಸಾಧನವನ್ನೂ ಅದು ಬಯಸುವದಿಲ್ಲ.

105. ತತೋ ವೈರಾಗ್ಯಮ್, ತತೋ ಮುಮುಕ್ಷುತ್ವಮ್, ತತಸ್ತದುಪಾಯಪರ್ಯೇಷಣಮ್, ತತಃ ಸರ್ವಕರ್ಮತತ್ಸಾಧನಸಂನ್ಯಾಸಃ, ತತೋ ಯೋಗಾಭ್ಯಾಸಃ ॥ (ನೈ. ಸಿದ್ಧಿ. ೧-೫೨ ಅವ )

ಅದರಿಂದ ವೈರಾಗ್ಯವು, ಅದರಿಂದ ಮುಮುಕ್ಷುತ್ವವು, ಆ ಬಳಿಕ ಆ ಮೋಕ್ಷದ ಉಪಾಯವನ್ನು ಹುಡುಕುವದು, ಆಮೇಲೆ ಸರ್ವಕರ್ಮಗಳನ್ನೂ ಅವುಗಳ ಸಾಧನಗಳನ್ನೂ (ಯಜ್ಞೋಪವೀತಾದಿಗಳನ್ನು) ಸಂನ್ಯಾಸಮಾಡುವದು, ಆಮೇಲೆ ಯೋಗಾಭ್ಯಾಸವು, ಆಮೇಲೆ ಪ್ರತ್ಯಕ್ಪ್ರವಣತೆಯುಂಟಾಗುವದು,

ಆಮೇಲೆ ತತ್ತ್ವಮಸಿ ಮುಂತಾದ ವಾಕ್ಯಾರ್ಥವನ್ನು ಸರಿಯಾಗಿ ತಿಳಿದುಕೊಳ್ಳುವದು (ಸಮ್ಯಗ್ಜ್ಞಾನ). ಸ್ವಾತ್ಮನ್ಯೇವಾವಸ್ಥಾನಮ್ ||

106. ಏವಂ ತತ್ತ್ವಮಸೀತ್ಯಸ್ಮಾದ್ದ್ವೈತನುತ್ ಪ್ರತ್ಯಗಾತ್ಮನಿ |
ಸಮ್ಯಗ್ಜ್ಞಾತತ್ತ್ವಮರ್ಥಸ್ಯ ಜಾಯೇತೈವ ಪ್ರಮಾ ದೃಢಾ ||
(ನೈ. ಸಿದ್ಧಿ. ೩-೭೦)

ಇದರಂತೆ, "ಅದೇ ನೀನಾಗಿರುವೆ" ಎಂಬೀ ವಾಕ್ಯದಿಂದ ತ್ವಮರ್ಥವನ್ನು (ಅನ್ವಯವ್ಯತಿರೇಕದಿಂದ) ಚೆನ್ನಾಗಿ ಅರಿತುಕೊಂಡಿರುವವನಿಗೆ (ಸಮ್ಯಗ್ಜ್ಞಾನ ಪಡೆದಿರುವವನಿಗೆ) ಪ್ರತ್ಯಗಾತ್ಮನಲ್ಲಿ ದ್ವೈತವನ್ನು ಕಳೆಯುವ ಗಟ್ಟಿಯಾದ ಪ್ರಮೆಯು ಅವಶ್ಯವಾಗಿ ಉಂಟಾಗಿಯೇ ತೀರುತ್ತದೆ.

107. ಕಥಂ ಶಬ್ದಾತ್ 'ಅಹಂ ಬ್ರಹ್ಮಾಸ್ಮಿ' ಇತಿ ಸಮ್ಯಗ್ಬೋಧೋತ್ಪತ್ತಿಃ ? ಉಚ್ಯತೇ || (ನೈ. ಸಿದ್ಧಿ. ೩-೧೧೪ ಅವ)

ಶಬ್ದದಿಂದ 'ನಾನು ಬ್ರಹ್ಮನಾಗಿರುವೆನು' ಎಂಬ ಸಮ್ಯಗ್ಜ್ಞಾನವಾಗುವದು ಹೇಗೆ ? ಇದಕ್ಕೆ ಹೇಳುತ್ತೇವೆ :

108. ಸಮ್ಯಗ್ಜ್ಞಾನಶಿಖಿಪ್ಲುಷ್ಟಮೋಹತತ್ಕಾರ್ಯರೂಪಿಣಃ |
ಸಕೃನ್ನಿವೃತ್ತೇರ್ಬಾಧ್ಯಸ್ಯ ಕಿಂ ಕಾರ್ಯಮವಶಿಷ್ಯತೇ ||
(ನೈ. ಸಿದ್ಧಿ. ೪-೫೯)

ಸಮ್ಯಗ್ಜ್ಞಾನವೆಂಬ ಬೆಂಕಿಯಿಂದ ಅದರ ಅಜ್ಞಾನವೂ ಕಾರ್ಯವೂ ಸುಟ್ಟುಹೋದ ಸ್ವರೂಪವುಳ್ಳಾತನಿಗೆ ಬಾಧ್ಯವಾದದ್ದೆಲ್ಲವೂ ಒಮ್ಮೆಗೇ ನಿವೃತ್ತವಾಗಿರುವದರಿಂದ ಇನ್ನು ಮಾಡತಕ್ಕದ್ದು ಏನು ಉಳಿದಿರುತ್ತದೆ ? (ಜ್ಞಾನವುಂಟಾದಮೇಲೂ ಅಜ್ಞಾನಲೇಶವಿರುತ್ತದೆ, ಅಥವಾ ಮಿಥ್ಯಾಸಂಸ್ಕಾರವಿರುತ್ತದೆ, ಅದನ್ನು ಕಳೆಯಲು ಅಭ್ಯಾಸವು ಬೇಕು- ಎಂಬುವರ ಮತವು ಇದರಿಂದ ತಿರಸ್ಕೃತವಾಗುತ್ತದೆ.)

109. ನಾವಿರಕ್ತಾಯ ಸಂಸಾರಾನ್ನಾನಿರಸ್ತೈಷಣಾಯ ಚ |
ನ ಚಾಯಮವತೇ ದೇಯಂ ವೇದಾನ್ತಾರ್ಥಪ್ರವೇಶನಮ್ ||
ಜ್ಞಾತ್ವಾ ಯಥೋದಿತಂ ಸಮ್ಯಗ್ ಜ್ಞಾತವ್ಯಂ ನಾವಶಿಷ್ಯತೇ |
(ನೈ. ಸಿದ್ಧಿ. ೪-೭೧, ೭೨)

ಸಂಸಾರದಲ್ಲಿ ವಿರಕ್ತನಾಗದವನಿಗೂ ಏಷಣೆಯನ್ನು ಬಿಡದೆ ಇರುವವನಿಗೂ, ಯಮವಿಲ್ಲದವನಿಗೂ (ಮನಃಪ್ರಧಾನವಾದ ಅಹಿಂಸಾದಿ ಸಾಧನಗಳನ್ನು ಅಳವಡಿಸಿಕೊಳ್ಳದವನಿಗೂ) ವೇದಾಂತಾರ್ಥದಲ್ಲಿ ಪ್ರವೇಶವನ್ನು ಕೊಡಬಾರದು.

110. ವಸ್ತುವೃತ್ತಾತ್ಮಸಂಬೋಧಧ್ವಸ್ತಸಂಸಾರಕಾರಣಃ ।
ವ್ಯಾವಿದ್ಧಾಶೇಷಸಂಸಾರೋ ವಿಮುಕ್ತೋ ನಾ ವಿಮುಚ್ಯತೇ ॥
(ಸುರೇಶ್ವರರ ಬೃಹದಾರಣ್ಯಕೋಪನಿಷದ್ಭಾಷ್ಯವಾರ್ತಿಕ : ೨-೪-೫)

ವಸ್ತುತಂತ್ರವಾದ ಸಮ್ಯಗ್ಜ್ಞಾನದಿಂದ ಬಾಧಿತವಾದ (ಸಂಸಾರಕ್ಕೆ ಕಾರಣವಾದ) ಅಜ್ಞಾನವುಳ್ಳ ಜ್ಞಾನಿಯು ಜನನಮರಣರೂಪವಾದ ಸಂಸಾರವನ್ನು ಕಳೆದುಕೊಂಡು, ಸ್ವಭಾವದಿಂದಲೇ ವಿಮುಕ್ತನಾದವನು ಜೀವನ್ಮುಕ್ತನಾಗುತ್ತಾನೆ.

111. ಸಮ್ಯಗ್ಜ್ಞಾನಂ ಯದಾಶ್ರಿತ್ಯ ತನ್ಮೋಹೋಽಪಿ ತದಾಶ್ರಯಃ ।
ಅಬಾಧಿತಂ ತಮೋಽತ್ರಾಽಸ್ತಿ ಇತ್ಯುಕ್ತಿರ್ಜಡವಕ್ತೃಕಾ ॥
(ಬೃ. ಭಾ. ವಾ. ೨೦೯)

ಅಜ್ಞಾನಜನ್ಯವಾದ ಮೋಹವು ಯಾವ ಆತ್ಮನನ್ನು ಆಶ್ರಯಿಸಿದೆಯೋ ಆ ಆತ್ಮನಲ್ಲಿಯೇ ಉದಿಸಿದ ಸಮ್ಯಗ್ಜ್ಞಾನದಿಂದ ತಮೋರೂಪಅಜ್ಞಾನವು ಬಾಧಿತವಾಗಲಿಲ್ಲವೆನ್ನುವದು ಮೂಢರ ಮಾತಾಗುತ್ತದೆ.

112. ಬ್ರಹ್ಮೇತಿ ಜಾತಿನಿರ್ದೇಶಃ ಕ್ಷತ್ರಸಂನಿಧಿಕಾರಣಾತ್ ।
ಬ್ರಹ್ಮಜಾತಿಃ ಪರಾದಧ್ಯಾದಸಮ್ಯಗ್ದರ್ಶಿನಂ ನರಮ್ ॥
(ಬೃ. ಭಾ. ವಾ. ೨೫೦)

'ಕ್ಷತ್ರ' ಎಂಬ ಪದದ ಸನ್ನಿಧಾನದಿಂದ ಇಲ್ಲಿ ಬ್ರಹ್ಮ ಎಂಬ ಶಬ್ದಕ್ಕೆ ಬ್ರಾಹ್ಮಣಜಾತಿ ಎಂದು ಅರ್ಥವನ್ನು ಮಾಡಿಕೊಳ್ಳಬೇಕು. ಸಮ್ಯಗ್ದರ್ಶಿಯಲ್ಲದ ಮನುಷ್ಯನನ್ನು ಬ್ರಾಹ್ಮಣ್ಯವು ತಿರಸ್ಕರಿಸುತ್ತದೆ. (ಬ್ರಹ್ಮಸ್ವರೂಪದ ಸರಿಯಾದ ಜ್ಞಾನವನ್ನು ಪಡೆದಿರುವ ಸಮ್ಯಗ್ದರ್ಶಿಯೇ ನಿಜವಾದ ಬ್ರಾಹ್ಮಣ-ಎಂದು ಇದರಿಂದ ಅರ್ಥವಾಗುತ್ತದೆ.)

113. ಸಂಸರತ್ಯನ್ಯಥಾಜ್ಞಾನಾತ್ ಸಮ್ಯಗ್ಜ್ಞಾನಾದ್ವಿಮುಚ್ಯತೇ।
(ಬೃ. ಭಾ. ವಾ. ೨೬೦)

ತಪ್ಪು ತಿಳಿವಳಿಕೆಯಿಂದ ಸಂಸಾರದಲ್ಲಿ ಸಿಕ್ಕಿಕೊಳ್ಳುತ್ತಾನೆ. ಸರಿಯಾದ ತಿಳಿವಳಿಕೆಯಿಂದ ಮುಕ್ತನಾಗುತ್ತಾನೆ.

114. ಸ್ವಾಭಾವಿಕೋಽಯಂ ಪ್ರಲಯ ಇತಿ ಪೌರಾಣಿಕಾ ಜಗುಃ ।
ಬುದ್ಧಿಪೂರ್ವಸ್ತು ವಿಲಯಃ ಸಮ್ಯಗ್ಜ್ಞಾನೈಕಪೂರ್ವಕಃ ॥
(ಬೃ. ಭಾ. ವಾ. ೩೯೭)

ಕಾಲಾಂತರದಲ್ಲಿ ತಾನಾಗಿಯೇ ಆಗುವ ಪ್ರಪಂಚಪ್ರಲಯವನ್ನು ಪೌರಾಣಿಕರು ಪ್ರಾಕೃತ (ಸ್ವಾಭಾವಿಕ) ಪ್ರಳಯ-ಎನ್ನುವರು. (ಹೀಗೆ ಪ್ರಲಯವಾದ

ಮೇಲೂ ಕಾಲಾಂತರದಲ್ಲಿ ಪ್ರಪಂಚವು ಪುನಃ ಸೃಷ್ಟಿಯಾಗುವದಕ್ಕೆ ಅವಕಾಶ ವಿರುತ್ತದೆ.) ಆದರೆ, ಸಮ್ಯಗ್ಜ್ಞಾನ ಒಂದರಿಂದಲೇ ಜಗತ್ತಿಗೆ ಬುದ್ಧಿಪೂರ್ವಕ ವಾದ ಆತ್ಯಂತಿಕಪ್ರಳಯವಾಗುತ್ತದೆ.

115. ಸ್ವರೂಪಲಾಭಮಾತ್ರೇಣ ಸಮ್ಯಗ್ಬೋಧೋಽಖಿಲಂ ತಮಃ ।
ಯತೋ ಹನ್ತಿ ತತೋ ನಾಸಾವಭ್ಯಾಸಂ ಪ್ರತಿ ವೀಕ್ಷತೇ ॥
(ಬೃ. ಭಾ. ವಾ. ೪೩೭)

ಸಮ್ಯಗ್ಜ್ಞಾನದಿಂದ ಅಜ್ಞಾನವು ಪೂರ್ಣವಾಗಿ ನಾಶವಾಗಿ ಆತ್ಮ ಸ್ವರೂಪದ ಲಾಭವಾಗುವದರಿಂದ, ಜ್ಞಾನದ ಅಭ್ಯಾಸವನ್ನು ಅದು ಅಪೇಕ್ಷಿಸು ವದಿಲ್ಲ. (ಈ ಅಭಿಪ್ರಾಯವು ಪ್ರಸಂಖ್ಯಾನವಾದಕ್ಕೆ ವಿರೋಧವಾಗಿದೆಯೆಂಬುದು ಸ್ಪಷ್ಟವಾಗಿದೆ.)

116. ಸರ್ವಮಾತ್ಮೇತಿ ಸಮ್ಯಗ್ಧೀಜನ್ಮನೈವಾಖಿಲಂ ತಮಃ ।
ಧ್ವಂಸಮೇತಿ ತತಃ ಸಂಜ್ಞಾ ನಾವಿದ್ಯೋತ್ಥಾಽವಶಿಷ್ಯತೇ ॥
(ಬೃ. ಭಾ. ವಾ. ೪೩೭)

ಸಕಲವೂ ಚಿನ್ಮಾತ್ರಸ್ವರೂಪವಾದ ಆತ್ಮವೇ ಆಗಿದೆ-ಎಂಬ ಸಮ್ಯಗ್ಜ್ಞಾನ ದಿಂದ ಸಮಸ್ತತಮಸ್ಸೂ ನಾಶವಾಗುವದರಿಂದ ಅವಿದ್ಯಾಜನ್ಯವಾದ ವಿಶೇಷ ಜ್ಞಾನವು ಉಳಿಯುವದಿಲ್ಲ.

117. ವಿಶೇಷಸಂಜ್ಞಾ ಯಾಽಸ್ಯಾಭೂದ್ವಿಜ್ಞಾನಾತ್ಮಾದಿಲಕ್ಷಣಾ ।
ಸಮ್ಯಗ್ಧೀಧ್ವಸ್ತಮೋಹಸ್ಯ ಸಾ ಕೃತ್ಸ್ನಾ ವಿನಿವರ್ತತೇ ॥
(ಬೃ ಭಾ. ವಾ. ೪೪೯)

ಸಮ್ಯಗ್ಜ್ಞಾನದಿಂದ ನಷ್ಟವಾದ ಮೋಹವುಳ್ಳವನಿಗೆ ತಾನು ವಿಜ್ಞಾ ನಾತ್ಮನೆಂದು (ಜೀವನೆಂದು) ಅವನು ಹಿಂದೆ ಹೊಂದಿದ್ದ ತಪ್ಪುತಿಳಿವಳಿಕೆಯು ಬಾಧಿತವಾಗಿಬಿಡುತ್ತದೆ.

118. ಷಷ್ಠಗೋಚರವತ್ಸರ್ವಂ ಕಾರ್ಯಕಾರಣವಜ್ಜಗತ್ ।
ಧ್ವಸ್ತಾತ್ಮಾನ್ಧ್ಯಸ್ಯ ವಿದುಷಃ ಸಮ್ಯಗ್ಜ್ಞಾನೋದಯೇ ಭವೇತ್॥
(ಬೃ. ಭಾ. ವಾ. ೪೭೨)

ಸಮ್ಯಗ್ಜ್ಞಾನವು ಉದಿಸಿದ ಕೂಡಲೇ, ಆತ್ಮನ ವಿಷಯಕ್ಕಿದ್ದ ಅಜ್ಞಾನವು ನಾಶವಾಗಲಾಗಿ, ಕಾರ್ಯಕಾರಣರೂಪವಾದ ಜಗತ್ತು, ಅನುಪಲಬ್ಧಿ ಎಂಬ ಆರನೆಯ ಪ್ರಮಾಣಕ್ಕೆ ಗೋಚರವಾದ ವಸ್ತುವಿನಂತೆ ಅಭಾವವಾಗುತ್ತದೆ.

119. ಸಂಜ್ಞೇಯಂ ಕಿಮು ವಿಧ್ವಸ್ತಸಂಸಾರಾನರ್ಥಕಾರಣೇ ।
ಉದಿತೈಕಾತ್ಮ್ಯಯಾಥಾತ್ಮ್ಯಸಮ್ಯಗ್ಜ್ಞಾನದಿವಾಕರೇ ॥
(ಬೃ. ಭಾ. ವಾ. ೪೮೨)

ಸ್ವಯಂಪ್ರಜ್ಞಾಪ್ರಭಾರೂಪನಾದ ಆತ್ಮನು ಒಬ್ಬನೇ ಸತ್ಯ-ಎಂಬ ಯಥಾವತ್ತಾದ ಸಮ್ಯಗ್ಜ್ಞಾನವೆಂಬ ಸೂರ್ಯಪ್ರಕಾಶವ ಉದಯದಿಂದ ಸಂಸಾರವೆಂಬ ಅನರ್ಥಕ್ಕೆ ಕಾರಣವಾದ ಅವಿದ್ಯಾ ತಮಸ್ಸು ನಾಶವಾಗಿರಲು ಆ ಜ್ಞಾನಿಯಲ್ಲಿ ಸಂಜ್ಞೆಯು (ವಿಶೇಷಜ್ಞಾನವು) ಹೇಗೆ ತಾನೇ ಉಳಿಯಲು ಸಾಧ್ಯ ?

॥ ಓಂ ತತ್‌ಸದ್ ಬ್ರಹ್ಮಣೇ ನಮಃ ॥

# ಮೈತ್ರೇಯೀ-ಯಾಜ್ಞವಲ್ಕ್ಯಸಂವಾದ

ಪ್ರಸಿದ್ಧ ದೇವರಾತಮಹರ್ಷಿಗಳ ವರಪುತ್ರರಾದ ಯಾಜ್ಞವಲ್ಕ್ಯರು ಉಪನೀತರಾದ ಮೇಲೆ, ಬಾಲ್ಯದಲ್ಲಿ, ತಮ್ಮ ತಂದೆಯವರಲ್ಲಿ ಸಂಹಿತಾಧ್ಯಯನ ವನ್ನು ಪೂರ್ಣಗೊಳಿಸಿದರು. ಅನಂತರ ವೈಶಂಪಾಯನಮಹರ್ಷಿಗಳ ಗುರುಕುಲ ವಾಸದಲ್ಲಿ ಅಧ್ಯಯನಮಾಡಿ, ಅವರಿಂದ ಪಡೆದಿದ್ದ ವೇದವಿದ್ಯೆಯನ್ನು-ದೈವ ವಿಲಾಸವೆಂಬಂತೆ-ಅವರ ಆಜ್ಞಾನುಸಾರ ಅವರಿಗೇ ಗುರುದಕ್ಷಿಣೆಯಾಗಿ ಒಪ್ಪಿಸಿ, ಯಾಜ್ಞವಲ್ಕ್ಯರು ಸ್ವಾಭಿಮಾನದಿಂದ ಹೊರಟಿದ್ದು, ಸ್ವತಂತ್ರವಾದ ತಪಃಪೌರುಷ ದಿಂದ ಆದಿತ್ಯದೇವನ ಅನುಗ್ರಹವನ್ನು ಪಡೆದರು. ಅವರು ಸೂರ್ಯನಾರಾಯಣ ನಲ್ಲಿ ಅಂತರ್ಗತನಾದ ವೇದಪುರುಷ ಹಿರಣ್ಯಗರ್ಭನ ಕೃಪೆಯಿಂದ ಶುಕ್ಲಯಜು ರ್ವೇದವನ್ನೂ ಶತಪಥಬ್ರಾಹ್ಮಣವನ್ನೂ ಮತ್ತು ಈಶಾವಾಸ್ಯವೆಂಬ ಉಪ ನಿಷತ್ತನ್ನೂ ಲೋಕಕ್ಕೆ ಅನುಗ್ರಹಮಾಡಿ ಭಗವಾನ್ ಯಾಜ್ಞವಲ್ಕ್ಯರಾದರು.

ಯಾಜ್ಞವಲ್ಕ್ಯರಿಗೆ ಕಾತ್ಯಾಯನೀ ಮತ್ತು ಮೈತ್ರೇಯೀ ಎಂಬ ಇಬ್ಬರು ಪತ್ನಿಯರಿದ್ದರು. ಕಾತ್ಯಾಯನಿಯು ಭಾವನಾಪ್ರಧಾನಳೂ ಪ್ರೇಮಳಸ್ವಭಾವ ದವಳೂ ತನುಮನಗಳಲ್ಲಿ ಶುಚಿಭೂತಳೂ ನಯವಿನಯಸಂಪನ್ನಳೂ ಮೃದು ಮಧುರಭಾಷಿಣಿಯೂ ಗುರುಹಿರಿಯರಲ್ಲಿ ಭಕ್ತಿಯುಳ್ಳವಳೂ ಪತಿಭಕ್ತಿಪರಾಯಣೆ ಯೂ ಉದಾರಚರಿತೆಯೂ ಗೃಹಕೃತ್ಯದಲ್ಲಿಯೂ ಅತಿಥಿಸತ್ಕಾರದಲ್ಲಿಯೂ ದಕ್ಷಳೂ ಶ್ರದ್ಧಾಮಯಿಯೂ ಆಗಿದ್ದಳು. ಒಟ್ಟಿನಮೇಲೆ, ಯಾಜ್ಞವಲ್ಕ್ಯರು ಗೃಹಸ್ಥಾ ಶ್ರಮದಲ್ಲಿ ಸಂಪಾದಿಸಬೇಕಾದ ಧರ್ಮ, ಅರ್ಥ, ಕಾಮ-ಎಂಬ ಮೂರು ಪುರು ಷಾರ್ಥಗಳ ಸೇವನೆಗೆ ಸಹಾಯವಾದ ಸಕಲ ಸದ್ಗುಣಗಳ ಸಂಪತ್ತೂ ಭಗವತೀ ಕಾತ್ಯಾಯನಿಯಲ್ಲಿ ಸಮೃದ್ಧಿಯಾಗಿದ್ದಿತು.

ಆದರೆ, ಬ್ರಹ್ಮವಾದಿನಿಯಾದ ಗಾರ್ಗಿಯ ಪವಿತ್ರಸಹವಾಸದಲ್ಲಿ ಚಿಕ್ಕ ವಯಸ್ಸಿನಿಂದಲೂ ಬೆಳೆದಿದ್ದ ಮೈತ್ರೇಯೀಮಹಾದೇವಿಯಲ್ಲಿ ಅಚಲವಾದ ಶ್ರದ್ಧಾ ಭಕ್ತಿಗಳೊಡನೆ ಅಸಾಧಾರಣವಾದ ವಿವೇಕವೈರಾಗ್ಯಶಮದಮಾದಿಗಳೂ ಮೋಕ್ಷಾಪೇಕ್ಷೆಯೂ ಸೇರಿಕೊಂಡು, ಆ ಕಲ್ಯಾಣಿಯು ದೈವೀಸದ್ಗುಣಸಂಪತ್ತಿನ ಮಹಾನಿಧಿಯಾಗಿದ್ದಳು. ಇದರಿಂದ' ಪರಮಪುರುಷಾರ್ಥವಾದ ಮೋಕ್ಷಸಾಧನೆ ಯಲ್ಲಿ ಪತಿದೇವರಿಗೆ ಸಹಾಯಕಳಾಗಿಯೂ ಅವರು ತಮ್ಮ ಸ್ವರೂಪಾನಂದ ದಲ್ಲಿರಲು ಅನುಕೂಲೆಯಾಗಿಯೂ ಮೈತ್ರೇಯಿಯು ಇದ್ದಳು.

ಹೀಗೆ, ಸಾಕ್ಷಾತ್ ಮಹಾಲಕ್ಷ್ಮಿಯಂತೆಯೂ ಮಹಾಸರಸ್ವತಿಯಂತೆಯೂ ಬೆಳಗುತ್ತಿದ್ದ ಕಾತ್ಯಾಯನೀ-ಮೈತ್ರೇಯೀ ಪುಣ್ಯವತಿಯರಿಂದೊಡಗೂಡಿದ ಯಾಜ್ಞವಲ್ಕ್ಯರ ಸಂಸಾರವು ಪರಸ್ಪರ ವಿರೋಧಿಗಳೆಂಬಂತೆ ತೋರುವ ಪ್ರವೃತ್ತಿ-ನಿವೃತ್ತಿಧರ್ಮಗಳ ವಿಲಕ್ಷಣಸಮನ್ವಯವಾಗಿ ಶ್ರೇಯಃಪ್ರೇಯಗಳೆಂಬ ಅಮೃತ ಫಲಗಳಿಂದ ತುಂಬಿತುಳುಕುತ್ತಿತ್ತು.

ಮಿಥಿಲಾನಗರದ ಜನಕಮಹಾರಾಜನಿಂದ ವ್ಯವಸ್ಥಿತವಾಗಿದ್ದ ಮಹಾ ವಿದ್ವತ್ಸಭೆಯಲ್ಲಿ, ವಿಖ್ಯಾತ ಬ್ರಹ್ಮಜ್ಞರೊಡನೆ ನಡೆದ ವಾದದ ಫಲವಾಗಿ ಭಗವಾನ್ ಯಾಜ್ಞವಲ್ಕ್ಯರೇ ಸರ್ವಶ್ರೇಷ್ಠಬ್ರಹ್ಮವೇತ್ತರೆಂದು ನಿರ್ಣಯವಾಗಿದ್ದಿತು. ಇದರಿಂದ ಪರಮಸಂತುಷ್ಟನಾದ ಜನಕರಾಜನು ಯಾಜ್ಞವಲ್ಕ್ಯರಿಗೆ ಉತ್ಕೃಷ್ಟವಾದ ಸಹಸ್ರಸಾಲಂಕೃತ ಗೋವುಗಳನ್ನು ದಾನಮಾಡಿದುದಲ್ಲದೆ, ಭಗವಾನರನ್ನು ಸರ್ವಜ್ಞಪೀಠದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿ ತನ್ನ ಗುರುಗಳನ್ನಾಗಿ ಸ್ವೀಕರಿಸಿದ್ದನು.

ಭಗವಾನರು ಪರಮಸಾಧ್ವಿಯರಾದ ಪತ್ನಿಯರೊಡನೆ ಆದರ್ಶವಾದ ಗೃಹಸ್ಥಧರ್ಮವನ್ನು ನಡೆಸುತ್ತಲೇ ಈಶ್ವರಾನುಗ್ರಹದಿಂದಲೂ ಉಜ್ಜ್ವಲವಾದ ವಿವೇಕಬಲದಿಂದಲೂ ಜ್ಞಾನಸಾಧನಗಳ ಪರಿಪಾಕದಿಂದಲೂ ಗಾಢವಾದ ಬ್ರಹ್ಮಾನಂದದಲ್ಲಿ ಬಹುಕಾಲದಿಂದ ನೆಲೆನಿಂತವರಾಗಿದ್ದರು. ಆದರೂ ಅನುಭವರೂಪವಾದ ಆತ್ಮಾನಂದದಲ್ಲಿ ಮನಸ್ಸು ಪೂರ್ಣವಾಗಿ ಉಪಶಾಂತಿಯನ್ನು ಪಡೆಯುವದಕ್ಕೋಸ್ಕರ ಎಲ್ಲಾ ಬಗೆಯ ಲೌಕಿಕ ಹಾಗೂ ವೈದಿಕ ವ್ಯವಹಾರಗಳಿಂದಲೂ ಪೂರ್ಣವಿಶ್ರಾಂತಿಯನ್ನು ಪಡೆಯುವದೂ ಅವರಿಗೆ ಅಗತ್ಯವೆನಿಸಿತು. ಆದ್ದರಿಂದ ಸ್ವಾಭಾವಿಕವೂ ಶಾಸ್ತ್ರೀಯವೂ ಆದ ವಿದ್ವತ್ ಸಂನ್ಯಾಸವನ್ನು ಪರಿಗ್ರಹಿಸಲೋಸ್ಕರ ಅವರು ತಮ್ಮ ಪುಣ್ಯಪತ್ನಿಯರ ಸುಖಜೀವನಕ್ಕಾಗಿ ತಮ್ಮ ಲೌಕಿಕ ಸಂಪತ್ತೆಲ್ಲವನ್ನೂ ಎರಡು ಸಮಭಾಗಮಾಡಿ, ಇಬ್ಬರಿಗೂ ಹಂಚಿಕೊಟ್ಟು, ನಿಸ್ಸಂಗರಾಗಲು ಅವರ ಅನುಮತಿಯನ್ನು ಕೇಳಿದರು.

ಅನನ್ಯವಾದ ಉತ್ಕಟ ಪತಿಭಕ್ತಿಯುಳ್ಳ ಧರ್ಮಪತ್ನಿಯಾದ ಕಾತ್ಯಾಯನೀ ದೇವಿಗೆ ಪತಿದೇವನ ಈ ಬಗೆಯ ವಿಯೋಗವು ಸಹಿಸಲಾರದ ಆಘಾತವಾಯಿತು. ಆದರೂ ಸಂಪೂರ್ಣಸಮರ್ಪಣಭಾವದಿಂದ ಪತಿಯ ಇಚ್ಛೆಯನ್ನೇ ತನ್ನ ಇಚ್ಛೆಯೆಂದೂ ಪತಿಯ ಸಂತೋಷವನ್ನೇ ತನ್ನ ಸಂತೋಷವೆಂದೂ ನಂಬಿದವಳಾದ್ದರಿಂದ ಆಕೆಯು ನಿರ್ಮಲಪ್ರೇಮದ ಮೂಕಶೋಕದಿಂದ ಸುಮ್ಮನಿರಬೇಕಾಯಿತು. ತನ್ನ ಸಮ್ಮತಿಯ ಅಥವಾ ಅಸಮ್ಮತಿಯ ಹೊಣೆಯನ್ನು ಹೆಚ್ಚು ಜಾಣೆಯೂ ತನಗೆ ಪೂಜ್ಯಳೂ ಆಗಿದ್ದ ತನ್ನ ಅಕ್ಕನಾದ ಮೈತ್ರೇಯಿಗೆ ವಹಿಸಿ, ಆಕೆಯ ಪ್ರತಿಕ್ರಿಯೆಯನ್ನು ಕಾತರದಿಂದ ನಿರೀಕ್ಷಿಸುತ್ತಿದ್ದಳು.

ಆದರೆ ಮೋಕ್ಷಾರ್ಥಿನಿಯಾಗಿಯೇ ಸದ್ಗುರುಭಾವನೆಯಿಂದ ಶ್ರೋತ್ರಿಯ ಬ್ರಹ್ಮನಿಷ್ಠರಾದ ಭಗವಾನರ ಕೈಹಿಡಿದಿದ್ದ ತೀಕ್ಷ್ಣಮತಿಯೂ ವಿವೇಕಶಾಲಿನಿಯೂ ವಿಚಾರಪರಳೂ ವಿರಕ್ತಳೂ ಆದ ಮೋಕ್ಷಪತ್ನೀ ಮೈತ್ರೇಯಿಗೂ ಸಹ ಪತಿದೇವನ ಸರ್ವಸಂಗಪರಿತ್ಯಾಗಸೂಚಕವಾದ ನೂತನ ಪರಿವರ್ತನೆಯೂ ವರ್ತನೆಯೂ ಸಹನೆಯಾಗಲಿಲ್ಲ. ಆದ್ದರಿಂದ ಮೈತ್ರೇಯಿಯು ವಿವೇಕಿಯಾದರೂ ಸ್ತ್ರೀಸಹಜವಾದ ಪ್ರೇಮಳ ಸ್ವಭಾವದ ವಿರಹವಿಹ್ವಲತೆಯಿಂದ ವಿನಯವಾಗಿ ಭಗವಾನರಲ್ಲಿ ವಿಜ್ಞಾಪಿಸಿಕೊಂಡಳು :

ಗುರುದೇವ! ಕರ್ಮೋಪಾಸನೆಗಳೆಂಬ ಸಾಧನಗಳಿಂದ ಸಾಧಿಸಲ್ಪಡುವ (ಸಾಧನಸಾಧ್ಯಗಳಾದ) ಸಮಸ್ತಲೋಕಗಳನ್ನೂ ಅವುಗಳ ಐಶ್ವರ್ಯಗಳನ್ನೂ ಅನಿತ್ಯವಾದವುಗಳೆಂದೂ ದುಃಖಮಿಶ್ರಿತವಾದವುಗಳೆಂದೂ ನಿಮ್ಮ ದಯದಿಂದ ತಿಳಿದು, ಪುಣ್ಯಪಾಪಗಳನ್ನೂ ಇಷ್ಟಾನಿಷ್ಟಗಳನ್ನೂ ಮೀರಿರುವ ಜೀವನ್ಮುಕ್ತರಾದ ತಮ್ಮನ್ನು ಸದ್ಗುರುಗಳೆಂದು ಭಾವಿಸಿ, ನಾನು ಮೋಕ್ಷಾರ್ಥಿನಿಯಾದ ಶಿಷ್ಯಳಾಗಿ ತಮ್ಮೀ ಗುರುಕುಲದಲ್ಲಿ ಸೇವಿಸುತ್ತಿದ್ದೇನೆ. ತಾವು ನಮಗೆ ಪತಿದೇವರಾಗಿರುವದಕ್ಕಿಂತಲೂ ಹೆಚ್ಚಾಗಿ ಗುರುದೇವರಾಗಿದ್ದೀರಿ. ನಾವು ತಮಗೆ ಕೇವಲ ಪತ್ನಿಯರಾಗಿದ್ದರೆ ನಿಮ್ಮ ಲೌಕಿಕವಾದ ಐಶ್ವರ್ಯವನ್ನು ನಮಗೆ ಹಂಚಿಕೊಟ್ಟು ತಾವು ನಮ್ಮಿಂದ ಬಿಡುಗಡೆಯನ್ನು ಸುಲಭವಾಗಿ ಪಡೆಯಬಹುದಾಗಿತ್ತು. ಆದರೆ ಮಹಾತ್ಮರಾದ ತಮ್ಮ ದೀರ್ಘಕಾಲದ ಸಹವಾಸದಿಂದಲೂ ಉಪದೇಶಬಲದಿಂದಲೂ ಪರಮಾತ್ಮನ ಹೊರತು ಮಿಕ್ಕದ್ದೆಲ್ಲವೂ ಅನಿತ್ಯವೆಂದೂ ಅಸತ್ಯವೆಂದೂ ನಮ್ಮ ಮನಸ್ಸಿಗೆ ನಿಶ್ಚಯವಾಗಿರುವದರಿಂದ ಯಾವ ವಿತ್ತಕ್ಕೂ ಯಾವ ವೈಭವಕ್ಕೂ ನಾವು ಮರುಳಾಗಲಾರೆವು. ಯಾವದರಿಂದ ನಾವು ಹುಟ್ಟುಸಾವುಗಳಿಂದ ಬಿಡುಗಡೆ ಹೊಂದಿ ಅಮೃತರಾಗಲಾರೆವೋ ಅವುಗಳಿಂದ ನಮಗೆ ಆಗಬೇಕಾದ ಪ್ರಯೋಜನವೇನು ? ಮಹಾಸ್ವಾಮಿ! ತಾವು ಮೊದಲಿಂದಲೂ ತ್ಯಾಗಶೀಲರು ಹಾಗೂ ಸಂನ್ಯಾಸಪ್ರಿಯರು. ಸಂನ್ಯಾಸವೆಂದರೆ ತ್ಯಾಗವೆಂದು ತಾವೇ ಹೇಳಿದ್ದೀರಿ. ತಮ್ಮ ಅನುಗ್ರಹದಿಂದ ಇಷ್ಟು ಕಾಲವೂ ನಮ್ಮ ಗೃಹಸ್ಥಧರ್ಮದಂತೆ ತಮ್ಮ ಸಹಧರ್ಮಿಣಿಯರಾಗಿ ಕರ್ತವ್ಯರೂಪವಾಗಿ ನಡೆಸುತ್ತಿದ್ದ ಯಜ್ಞ-ದಾನ-ತಪಃ ಕರ್ಮಗಳನ್ನು ಕೂಡ ಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಣಭಾವದಿಂದ ಆಚರಿಸುವಂತೆ ನಮಗೆ ಚಿತ್ತಶುದ್ಧಿಯನ್ನೂ ಮನೋಬಲವನ್ನೂ ಕೊಟ್ಟು, ಫಲತ್ಯಾಗದ ಪ್ರಭಾವದಿಂದ ನಮ್ಮನ್ನೂ ಸಂನ್ಯಾಸಿನಿಯರೆಂಬಂತೆ ಮಾಡಿದ್ದೀರಿ. ತಾವು ನಮ್ಮೊಡನೆ ಆಶ್ರಮದಿಂದ ಗೃಹಸ್ಥರಾಗಿಯೇ ಇದ್ದರೂ ಯಾವ ಅಭಿಮಾನವನ್ನೂ ವಹಿಸದೆ, ದ್ವಂದ್ವಗಳಿಂದ ಹರ್ಷವಿಷಾದಗಳನ್ನು ಹೊಂದದೆ, ಏನನ್ನೂ ಅಂಟಿಸಿಕೊಳ್ಳದೆ, ಸಹಜವಾದ ಬ್ರಹ್ಮನಿಷ್ಠೆಯಿಂದ ಸ್ವರೂಪಸ್ಥವಾದ ಸಂತತ ಸಮತಾನಂದದಲ್ಲಿಯೇ ತಾವು ಓಲಾಡುತ್ತಿದ್ದೀರೆಂಬುದು ನಮ್ಮ ನಿರಂತರವಾದ

ಅನುಭವ. ಹೀಗೆ, ಸಮಸ್ತ ಅನಾತ್ಮಗಳ ಮೋಹವನ್ನೂ ತ್ಯಾಗಮಾಡಿ ಆತ್ಮ ಸ್ವರೂಪದಲ್ಲಿಯೇ ಅಚಲವಾಗಿ ನೆಲೆನಿಂತಿರುವದೇ ಪರಮಾರ್ಥದೃಷ್ಟಿಯಿಂದ ನಿಜವಾದ ಸಂನ್ಯಾಸವೆಂದು ತಾವೇ ನಮಗೆ ಆಗಾಗ ಹೇಳುತ್ತಿರುತ್ತೀರಿ ಅಲ್ಲವೆ? ಆದ್ದರಿಂದ ತಾವೇ ನಿಜವಾದ ಸಂನ್ಯಾಸಿಗಳು ಆಗಿಯೇ ಇದ್ದೀರಿ, ಅಲ್ಲವೆ? ನಮ್ಮನ್ನೆಲ್ಲಾ ತ್ಯಾಗಮಾಡಿ ದೂರ ಹೋಗಿ, ಏಕಾಂಗಿಗಳಾಗಿ ತಾವು, ಈಗ ತಮಗಿರುವ ಬ್ರಹ್ಮಜ್ಞಾನಕ್ಕಿಂತಲೂ ಆನಂದಾನುಭವಕ್ಕಿಂತಲೂ ಹೆಚ್ಚಿನ ದೇನನ್ನು ಸಂಪಾದಿಸಬಲ್ಲಿರಿ? ಸ್ವಾಮಿ! ಪ್ರೇಮಾನಂದಘನರಾದ ತಮ್ಮ ವಿಯೋಗವನ್ನು ಸಹಿಸಲಾರದ ಸಂಕಟದಿಂದ, ಈ ದೀನಳು ತಮ್ಮಿಂದ ಕಲಿತ ಪಾಠವನ್ನೇ ತಮಗೆ ಒಪ್ಪಿಸುತ್ತಿರುವ ಧಾರ್ಷ್ಟ್ಯವನ್ನು ಕ್ಷಮಿಸಬೇಕು. ಎಷ್ಟೋ ಕೋಟಿಜನ್ಮಗಳ ಪುಣ್ಯ ಪರಿಪಾಕದಿಂದಲೂ ಈಶ್ವರಾನುಗ್ರಹದಿಂದಲೂ ಮಹಾತ್ಮರಾದ ತಮ್ಮ ಪವಿತ್ರಸನ್ನಿಧಿಯನ್ನು ಸೇರಿದ್ದೇವೆ. ಸಂಸಾರಧರ್ಮದ ಪತ್ನೀಸಂಬಂಧವನ್ನು ಪರಿತ್ಯಾಗಮಾಡಲು ತಾವು ಇಚ್ಛಿಸಿರುವಿರಾದರೆ, ಸದ್ಗುರು ಗಳಾದ ತಾವು ನಮ್ಮನ್ನು ಶಿಷ್ಯರನ್ನಾಗಿ ಪರಿಗ್ರಹಿಸಿ ಉದ್ಧರಿಸಬೇಕು. ಯಾವ ಪರತತ್ತ್ವವನ್ನು ತಿಳಿದಿರುವದರಿಂದ ತಾವು ಅಕ್ಷಯವೂ ಅಮೃತವೂ ಆದ ನಿತ್ಯಾ ನಂದಸ್ವರೂಪರಾಗಿದ್ದೀರೋ ಆ ದಿವ್ಯತತ್ತ್ವವನ್ನೇ ಕರುಣೆಯಿಂದ ನಮಗೂ ಬೋಧಿಸಬೇಕು. ಸಕಲಸಂಪತ್ತಿನಿಂದ ತುಂಬಿದ ಈ ಪೃಥ್ವಿಯೇ ನಮ್ಮ ಕೈವಶವಾದರೂ ಅದರಿಂದ ಅಮೃತತ್ತ್ವವು ಲಭಿಸಬಲ್ಲದೆ ಹೇಗೆ? ಸಕಲ ಭೂತ ಗಳಲ್ಲಿರುವ ಆತ್ಮವೇ ಸ್ತ್ರೀಯರಲ್ಲಿಯೂ ಸಮವಾಗಿ ಇರುವದರಿಂದ, ಜಿಜ್ಞಾಸಾ ಪ್ರೀತಿಯೂ ವೈರಾಗ್ಯವೂ ಮುಮುಕ್ಷುತ್ವವೂ ಮಾತ್ರ ಇದ್ದರೆ ನಾವೂ ಆತ್ಮ ಜ್ಞಾನಕ್ಕೂ ಕೈವಲ್ಯಪ್ರಾಪ್ತಿಗೂ ಅಧಿಕಾರಿಗಳಾಗಬಲ್ಲೆವಲ್ಲವೆ?

ಕಾತ್ಯಾಯನಿ: ಭಗವನ್! ನನಗೆ ಪೂಜ್ಯಳೂ ಜಾಣೆಯೂ ಆದ ನಮ್ಮ ಅಕ್ಕನು ಜ್ಞಾನಿಗಳಾದ ತಮಗೆ ಅನುಗುಣೆಯಾದ ಮೋಕ್ಷಪತ್ನಿಯಾಗಿದ್ದಾಳೆ. ನನ್ನ ಮೃದುಹೃದಯದಲ್ಲಿ ಮೊರೆಯುತ್ತಿದ್ದ ಮೂಕವೇದನೆಗಳಿಗೆ ಭವತಾರಿಣಿ ಯಾದ ನನ್ನ ನಲ್ಮೆಯ ಅಕ್ಕನು ಉಚಿತೋಕ್ತಿಗಳನ್ನೂ ಚತುರೋಕ್ತಿಗಳನ್ನೂ ಒದಗಿಸಿ ಅನುಗ್ರಹಿಸಿದ್ದಾಳೆ. ಈ ಮಹಾಮಾತೆಯ ಭಾವನೆಯೇ ನನ್ನ ಭಾವನೆ ಯೂ ಈ ಮಹಾದೇವಿಯ ಪ್ರಾರ್ಥನೆಯೇ ನನ್ನ ಪ್ರಾರ್ಥನೆಯೂ ಆಗಿವೆ. ಶಾಂತಿಪ್ರದಾತರಾದ ತಾವು ಗಂಗಾಯಮುನೆಯರಂತಿರುವ ನಮ್ಮನ್ನು ತಮ್ಮ ಆನಂದಸಾಗರದಲ್ಲಿ ವಿಲೀನಗೊಳಿಸಿಕೊಳ್ಳಬೇಕು.

ಯಾಜ್ಞವಲ್ಕ್ಯ: ಆಹಾ! ಪ್ರಿಯತಮೆಯರಾದ ಮೈತ್ರೇಯೀ ಕಾತ್ಯಾಯನೀ ದೇವಿಯರೆ, ಲೋಕದಲ್ಲಿಯೇ ಅಪೂರ್ವ ದಿವ್ಯರತ್ನಗಳಾದ ನೀವು ಎಂಥಾ ಅಸಾಧಾರಣ ಸತ್ಯವನ್ನೇ ನುಡಿಯುತ್ತಿದ್ದೀರಿ! ಬನ್ನಿ, ಬನ್ನಿ,

ಕುಳಿತುಕೊಳ್ಳಿ. ನಿಮ್ಮಿಬ್ಬರಲ್ಲಿಯೂ ಸಂಸ್ಕಾರಭೇದವೂ ಅಧಿಕಾರಭೇದವೂ ಸ್ವಾಭಾವಿಕವಾಗಿದ್ದರೂ ನಿಮ್ಮ ಅನನ್ಯಭಕ್ತಿಯಿಂದಲೂ ಅಸಾಧಾರಣಶ್ರದ್ಧೆಯಿಂದಲೂ ದೈವೀಸದ್ಗುಣಸಂಪತ್ತಿನಿಂದಲೂ ನೀವು ನಮಗೆ ಅತ್ಯಂತಪ್ರಿಯರಾಗಿದ್ದೀರಿ, ಹಾಗೂ ಬ್ರಹ್ಮವಿದ್ಯೆಯ ಉಪದೇಶಕ್ಕೆ ಸತ್ಪಾತ್ರರಾಗಿದ್ದೀರಿ. ಕರ್ಮೋಪಾಸನೆಗಳೆಂಬ ಸಾಧನೆಗಳನ್ನು ಮಾಡಿ ಹೊಸದಾಗಿ ಪಡೆಯಬಹುದಾದ ಬ್ರಹ್ಮಲೋಕದವರೆಗಿನ ಭೋಗೈಶ್ವರ್ಯಗಳೆಲ್ಲವೂ ಅನಿತ್ಯಗಳೆಂದೂ ಅನೃತಗಳೆಂದೂ ಅಸತ್ಯಗಳೆಂದೂ ಅಲ್ಪವಾದವುಗಳೆಂದೂ ಘೋಷಿಸಿ ನಿತ್ಯವೂ ಸತ್ಯವೂ ಮಹತ್ತೂ ಆದ ಬ್ರಹ್ಮದ ಜ್ಞಾನವನ್ನೇ ನೀಡಬೇಕೆಂದು ನೀವು ಅಪೇಕ್ಷಿಸಿದ್ದೀರಿ. ಲೌಕಿಕವಾದ ಸಂಪತ್ತಿನಿಂದ ನಿಮಗೆ ಇಷ್ಟವಾದ ಅಮೃತತ್ವವು ಎಂದೂ ಲಭಿಸಲಾರದೆಂಬುದನ್ನು ನಿಮಗೆ ಹೇಳಬೇಕಾಗಿಯೇ ಇಲ್ಲ. ವಿದ್ಯಾವಿನಯಸಂಪನ್ನರೂ ವಿಧೇಯರೂ ಭಾಗ್ಯಶಾಲಿಗಳೂ ಆದ ಪುತ್ರರಿಂದ ಈ ಲೋಕದ ಸಕಲಸುಖಗಳೂ ಸಿಕ್ಕಬಹುದು. ವಿಶೇಷವಾದ ಧನಲಾಭದಿಂದ ಯಜ್ಞ-ದಾನ-ತಪಸ್ಸುಗಳನ್ನು ಆಚರಿಸಿ, ಆ ಪುಣ್ಯದಿಂದ ಪಿತೃಲೋಕ-ಸ್ವರ್ಗಲೋಕಗಳನ್ನು ಪಡೆಯಬಹುದು. ಶಾಸ್ತ್ರೀಯವಾದ ಉಪಾಸನೆಗಳನ್ನು ಮಾಡಿ ಇಷ್ಟದೇವತೆಯ ಸಾಕ್ಷಾತ್ಕಾರವನ್ನು ಹೊಂದಿ ಕಲ್ಪಾಂತಚಿರಸ್ಥಾಯಿಯಾದ ಬ್ರಹ್ಮಲೋಕವನ್ನೇ ಪಡೆಯಬಹುದು. ಇವುಗಳಲ್ಲಿ ಯಾವದರಿಂದಲೂ ನಿಜವಾದ ಅಮೃತತ್ವವು ಪ್ರಾಪ್ತಿಯಾಗುವದಿಲ್ಲ. ವಿಚಾರದಿಂದ ಹೀಗೆ ನಿಶ್ಚಯಿಸಿ, ವೈರಾಗ್ಯದಿಂದ, ಶ್ರೋತ್ರಿಯಬ್ರಹ್ಮನಿಷ್ಠನಾದ ಸದ್ಗುರುವಿನ ಬಳಿಸಾರುವದೇ ಪರಮಶ್ರೇಯಸ್ಸಿಗೆ ಸಾಧನೆ.

ಆದ್ದರಿಂದ ಕೇವಲ ನಿಮ್ಮ ಸುಖಜೀವನಕ್ಕಾಗಿಯೇ ಅಲ್ಲವಾದರೂ ಲೋಕಕಲ್ಯಾಣಕರವಾದ ಭಗವದ್ಭಕ್ತಿಯನ್ನೂ ಜ್ಞಾನವನ್ನೂ ಪ್ರಸಾರಮಾಡುವದಕ್ಕಾಗಿ ಇರುವ ಗುರುಕುಲಾಶ್ರಮಧರ್ಮವನ್ನು ನಡೆಸುವದಕ್ಕಾಗಿ ದೈವದತ್ತವಾದ ನಮ್ಮ ಲೌಕಿಕಧನವನ್ನು ನಿಮಗೆ ಕೊಡುತ್ತಿದ್ದೇವೆ. ಇಷ್ಟು ಕಾಲವೂ ನಮ್ಮ ಸಹವಾಸದಲ್ಲಿದ್ದು ವಿವೇಕವೈರಾಗ್ಯಸಂಪನ್ನರಾದ ನಿಮ್ಮ ಗುರುಕುಲವಾಸವು ಸಾರ್ಥಕವಾಗುವ ಸಮಯವು ಒದಗಿದೆಯೆಂದು ನಮಗೆ ಅಪಾರವಾದ ಸಂತೋಷವಾಗಿದೆ. ನಿಮಗೆ ಬೇಕಾಗಿರುವ ಅಮೃತತತ್ವಸಾಧನವಾದ ಆತ್ಮಜ್ಞಾನವನ್ನು ಹಿಂದೆ ಆಗಾಗ ಹೇಳಿದ್ದರೂ ಪುನಃ ಅದನ್ನೇ ವಿವರವಾಗಿ ಹೊಸಬಗೆಯಿಂದ ಹೇಳುತ್ತೇವೆ. ಜಿಜ್ಞಾಸುವಿನ ಮನಸ್ಸು ಹೆಚ್ಚು ಹೆಚ್ಚು ನಿರ್ಮಲವೂ ಸೂಕ್ಷ್ಮವೂ ಏಕಾಗ್ರವೂ ಆದಂತೆ ಪುನಃಪುನಃ ಶ್ರವಣಮಾಡುತ್ತಿರುವ ತತ್ತ್ವಬೋಧೆಯೇ ಹೆಚ್ಚು ಹೆಚ್ಚು ಆಳವಾಗಿ ಅರ್ಥವಾಗುತ್ತಾ ಅನುಭವದಲ್ಲಿ ಅಳವಡುತ್ತಾ ಬೆಳಗುತ್ತದೆ. ಆದ್ದರಿಂದ ಸ್ವಯಂಸಿದ್ಧ, ಅಮೃತಸ್ವರೂಪನಾದ ಬ್ರಹ್ಮಾತ್ಮನನ್ನು ಅನುಭವದಲ್ಲಿ ಕಂಡುಕೊಳ್ಳುವದಕ್ಕಾಗಿ, ಸಾಧನಚತುಷ್ಟಯ ಸಂಪನ್ನರಾದ

ಜಿಜ್ಞಾಸುಗಳು, ಸಾವಧಾನಚಿತ್ತದಿಂದ ಗುರುಬೋಧೆಯನ್ನು ಶ್ರವಣಮಾಡಬೇಕು. ಶ್ರವಣಮಾಡಿದ ತತ್ತ್ವಾರ್ಥವನ್ನು ಮನನಪೂರ್ವಕವಾಗಿ ನಿಶ್ಚಯಿಸಿ, ಏಕಾಗ್ರತೆಯಿಂದ ಚಿಂತನೆಮಾಡಬೇಕು.

ಈಗ ಪ್ರಾರಂಭದಲ್ಲಿ, ನಿಮ್ಮ ಸಮಸ್ಯೆಗೂ ಸಂದೇಹಕ್ಕೂ ಸಂಕಟಕ್ಕೂ ಕಾರಣವಾಗಿ, ನಮ್ಮ ಸಂಭಾಷಣೆಗೆ ಅವಕಾಶವಿತ್ತ ಸಂನ್ಯಾಸದೀಕ್ಷೆಯ ವಿಚಾರ: ನೀವು ಹೇಳಿದಂತೆ, ಹೆಚ್ಚು ವಿರಕ್ತರಲ್ಲದ ಗೃಹಸ್ಥರಾದ ಮುಮುಕ್ಷುಗಳು, ನಡೆಸುವ ಈಶ್ವರಾರಾಧನಾರೂಪಕರ್ಮಯೋಗದಲ್ಲಿ ಮಾಡುವ ಫಲತ್ಯಾಗವೇ ಒಂದು ರೀತಿಯ ಸಂನ್ಯಾಸವೆನ್ನಬಹುದು. ಮತ್ತು ಪ್ರಿಯೆ, ಮೈತ್ರೇಯಿ, ನಿನ್ನ ವಿವೇಕಪೂರ್ಣವಾದ ನಿಶ್ಚಯದಂತೆ, ಗೃಹಸ್ಥಧರ್ಮದಲ್ಲಿಯೇ ಇದ್ದರೂ ಈಶ್ವರಾನುಗ್ರಹದಿಂದಲೂ ಗುರುಕೃಪೆಯಿಂದಲೂ ಲಭಿಸಿದ (ಬ್ರಹ್ಮನಿಷ್ಠೆಯಿಂದ) ಆತ್ಮಾನಂದದಲ್ಲಿಯೇ ನೆಲೆನಿಂತ ಬಲದಿಂದ, ಸಮಸ್ತ ಅನಾತ್ಮಗಳ ಸತ್ಯತಾಭ್ರಮೆಯನ್ನು (ಮೋಹವನ್ನು) ತ್ಯಾಗಮಾಡಿರುವದೇ ಪರಮಾರ್ಥದೃಷ್ಟಿಯಿಂದ ನಿಜವಾದ ಸಂನ್ಯಾಸ ಎಂಬಿದೂ ಸತ್ಯವೇ ! ಆದರೆ, ಶಾಸ್ತ್ರೋಕ್ತವಾದ ಬೇರೆ ಬಗೆಯ ಸಂನ್ಯಾಸಪ್ರಕಾರಗಳ ಅಗತ್ಯವೂ ಇದೆ.

1.....ಯದ್ಧಿ ತದೇಷಣಾಭ್ಯೋ ವ್ಯುತ್ಥಾನಲಕ್ಷಣಂ ಪಾರಿವ್ರಾಜ್ಯಂ ತತ್ ಆತ್ಮಜ್ಞಾನಾಙ್ಗಮ್ । ಆತ್ಮಜ್ಞಾನವಿರೋಧ್ಯೇಷಣಾ-ಪರಿತ್ಯಾಗರೂಪತ್ವಾತ್ । ಅವಿದ್ಯಾವಿಷಯತ್ವಾಚ್ಚೈಷಣಾಯಾಃ । ತದ್ವ್ಯತಿರೇಕೇಣ ಚಾಸ್ತಿ ಆಶ್ರಮರೂಪಂ ಪಾರಿವ್ರಾಜ್ಯಂ ಬ್ರಹ್ಮಲೋಕಾದಿಫಲಪ್ರಾಪ್ತಿಸಾಧನಮ್ । ಯದ್ವಿಷಯಂ ಯಜ್ಞೋಪವೀತಾದಿಸಾಧನವಿಧಾನಂ ಲಿಙ್ಗವಿಧಾನಂ ಚ ॥ (ಬೃ. ಭಾ. ೩-೫-೧)

ಏಷಣೆಗಳನ್ನು (ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ–ಇವುಗಳನ್ನೂ) ಬಿಟ್ಟೇಳುವ ರೂಪದ ಪಾರಿವ್ರಾಜ್ಯವಿದೆಯಲ್ಲ, ಅದು ಆತ್ಮಜ್ಞಾನಾಂಗವು; ಏಕೆಂದರೆ, ಅದು ಆತ್ಮಜ್ಞಾನಕ್ಕೆ ವಿರುದ್ಧವಾಗಿರುವ ಏಷಣೆಯನ್ನು ಪರಿತ್ಯಾಗ ಮಾಡುವ ಸ್ವರೂಪದ್ದಾಗಿದೆ; ಮತ್ತು ಏಷಣೆಯು (ಇಚ್ಛೆಯು) ಅವಿದ್ಯಾವಿಷಯವಾಗಿರುತ್ತದೆ. ಇದಕ್ಕಿಂತಲೂ ಬೇರೆಯಾಗಿ, ಆಶ್ರಮರೂಪವಾಗಿರುವ, ಬ್ರಹ್ಮಲೋಕವೇ ಮುಂತಾದ ಫಲವನ್ನು ಪಡೆಯುವದಕ್ಕೆ ಸಾಧನವಾಗಿರುವ ಪಾರಿವ್ರಾಜ್ಯವೂ (ಸಂನ್ಯಾಸವೂ) ಇದೆ. ಅದರ ವಿಷಯದಲ್ಲಿಯೇ ಸ್ಮೃತಿಗಳಲ್ಲಿ ಯಜ್ಞೋಪವೀತವೇ ಮುಂತಾದ ಸಾಧನಗಳನ್ನು ವಿಧಿಸಿದೆ; ಲಿಂಗವನ್ನೂ (ತ್ರಿದಂಡ, ಕಮಂಡಲು-ಮುಂತಾದ ಸಂನ್ಯಾಸಿಯ ಚಿಹ್ನದ ವೇಷವನ್ನೂ) ವಿಧಿಸಿದೆ. ಇದು ಅಜ್ಞರಾದ ಸ್ಮಾರ್ತಸಂನ್ಯಾಸಿಗಳ ವಿಷಯ.

ಆತ್ಮಜ್ಞಾನದೊಡನೆ ಏಷಣಾತ್ಯಾಗವು ಸ್ವಾಭಾವಿಕವಾಗಿ ಇದ್ದೇ ಇರುವದರಿಂದ, ಆತ್ಮಜ್ಞಾನಕ್ಕಾಗಿ ಯತ್ನಿಸುವವರು ಅವಶ್ಯವಾಗಿ ಏಷಣಾತ್ಯಾಗವನ್ನು ಮಾಡಲೇಬೇಕು. ಜ್ಞಾನಸಾಧನಕ್ಕೆ ವಿರುದ್ಧವಾದುದನ್ನು ಇಟ್ಟುಕೊಂಡರೆ ಜ್ಞಾನಪ್ರಾಪ್ತಿಗೆ ಅಡ್ಡಿಯಾಗುವದೆಂಬುದು ಸಹಜವೇ ಇದೆ.

2. ....ಯದೇವ ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ ತಂ ಮೇ ವ್ಯಾಚಕ್ಷ್ವ....ಏತಂ ವೈ ತಮಾತ್ಮಾನಂ ವಿದಿತ್ವಾ ಬ್ರಾಹ್ಮಣಾಃ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯ ಅಥ ಭಿಕ್ಷಾಚರ್ಯಂ ಚರನ್ತಿ ....ತಸ್ಮಾದ್ ಬ್ರಾಹ್ಮಣಃ ಪಾಣ್ಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್ । ಬಾಲ್ಯಂ ಚ ಪಾಣ್ಡಿತ್ಯಂ ಚ ನಿರ್ವಿದ್ಯ ಅಥ ಮುನಿಃ ಅಮೌನಂ ಚ ಮೌನಂ ಚ ನಿರ್ವಿದ್ಯ ಅಥ ಬ್ರಾಹ್ಮಣಃ ಸ ಬ್ರಾಹ್ಮಣಃ.... (ಬೃ. ೩-೫ ೧)

"ಯಾವದು ಸಾಕ್ಷಾತ್ ಅಪರೋಕ್ಷವಾಗಿರುವ ಬ್ರಹ್ಮವೋ, ಯಾವನು ಸರ್ವಾಂತರನಾದ ಆತ್ಮನೋ ಯಾವನನ್ನು ಅರಿತುಕೊಂಡರೆ ಅಮೃತನಾಗುತ್ತಾನೋ ಮುಕ್ತನಾಗುತ್ತಾನೋ ಅವನನ್ನೇ ನನಗೆ ವಿವರಿಸಿ ಹೇಳು. ಎಂದು ಕಹೋಲಕೌಷೀತಕೇಯನು ಹಿಂದೊಮ್ಮೆ ನನ್ನನ್ನು ಕೇಳಿದನು. ಮೈತ್ರೇಯಿ, ಅದಕ್ಕೆ ನಾನು ಹೀಗೆ ಉತ್ತರವನ್ನು ಹೇಳಿದೆ : ಯಾವನು ಹಸಿವುಬಾಯಾರಿಕೆಗಳನ್ನೂ ಶೋಕವನ್ನೂ ಮೋಹವನ್ನೂ ಜರೆಯನ್ನೂ ಮೃತ್ಯುವನ್ನೂ ಅತಿಕ್ರಮಿಸಿರುವನೋ ಅವನೇ ನಮ್ಮೆಲ್ಲರ ಸರ್ವಾಂತರನಾದ ಆತ್ಮನು. ಆ ಈ ಆತ್ಮನನ್ನೇ ಅರಿತುಕೊಂಡು ಪೂರ್ವಕಾಲದ ಬ್ರಾಹ್ಮಣರು ಪುತ್ರೈಷಣೆಯಿಂದಲೂ ವಿತ್ತೈಷಣೆಯಿಂದಲೂ ಲೋಕೈಷಣೆಯಿಂದಲೂ ಬಿಟ್ಟಿದ್ದು ಇನ್ನು ಭಿಕ್ಷಾಚರ್ಯೆಯನ್ನು ಮಾಡುತ್ತಿದ್ದರು. ಯಾವದು ಪುತ್ರೈಷಣೆಯೋ ಅದೇ ವಿತ್ತೈಷಣೆ; ಯಾವದು ವಿತ್ತೈಷಣೆಯೋ ಅದೇ ಲೋಕೈಷಣೆ; ಇವೆರಡೂ ಏಷಣೆಗಳೇ ಆಗಿರುತ್ತವೆ. ಆದ್ದರಿಂದ ಬ್ರಾಹ್ಮಣನು ಪಾಂಡಿತ್ಯವನ್ನು ಪೂರ ತಿಳಿದು ಬಾಲ್ಯದಿಂದ ನಿಲ್ಲಲೆಳಿಸಬೇಕು; ಬಾಲ್ಯವನ್ನೂ ಪಾಂಡಿತ್ಯವನ್ನೂ ಪೂರ ತಿಳಿದು ಇನ್ನು ಮುನಿ; ಅಮೌನವನ್ನೂ ಮೌನವನ್ನೂ ಪೂರಾ ತಿಳಿದು ಇನ್ನು ಬ್ರಾಹ್ಮಣನು, ತನ್ನ ಸ್ವರೂಪಸ್ಥಿತಿಯಿಂದ ನಿಜವಾದ ಬ್ರಾಹ್ಮಣನಾಗುವನು.

ಮೈತ್ರೇಯಿ! "ಈ ನಾನು (ನಾನಲ್ಲದ ತನ್ನ ಸ್ವರೂಪವಾದ ತಾನು) ಹಸಿವು, ಬಾಯಾರಿಕೆ ಮುಂತಾದ ಸರ್ವಸಂಸಾರಧರ್ಮಗಳಿಂದಲೂ ಎಂದೆಂದಿಗೂ ವಿನಿರ್ಮುಕ್ತವಾಗಿರುವ ನಿತ್ಯತೃಪ್ತವಾದ ಪರಬ್ರಹ್ಮವೇ" ಎಂದು ನೇರಾಗಿ ಅರಿತುಕೊಂಡು, ಪೂರ್ವಕಾಲದ ಬ್ರಾಹ್ಮಣರು ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ

ಎಂಬ ಬಯಕೆಗಳನ್ನು ಬಿಟ್ಟು ಪರಮಹಂಸರಾಗಿ ಭಿಕ್ಷಾಚರ್ಯೆಯನ್ನು ಮಾಡುತ್ತಿದ್ದರು. ಬ್ರಾಹ್ಮಣರಿಗೇ ಮಾತ್ರ ಸಂನ್ಯಾಸದಲ್ಲಿ ಅಧಿಕಾರವಿರುವದರಿಂದ ಇಲ್ಲಿ ಬ್ರಾಹ್ಮಣ ಎಂದು ಹೇಳಿದೆ. ಈ ಲೋಕದ ಸಕಲಸಂಪತ್ತನ್ನೂ ಗೆದ್ದುಕೊಳ್ಳುವದಕ್ಕಾಗಿ ಪುತ್ರೇಚ್ಛೆಯಿದೆ. ಪತ್ನಿಯ ಮೇಲಿನ ಇಚ್ಛೆಯೂ ಇದಕ್ಕಾಗಿಯೇ ಇದೆ. ಸತ್ತಮೇಲೆ ಪಿತೃಲೋಕವನ್ನೂ ಸ್ವರ್ಗಾದಿಲೋಕಗಳನ್ನೂ ಪಡೆಯುವದಕ್ಕೆ ಸಾಧನವಾದ ಪುಣ್ಯಸಂಪಾದನೆಗಾಗಿ ಯಜ್ಞ, ದಾನ, ತಪಃಕರ್ಮಗಳನ್ನು ಮಾಡಬೇಕು. ಇದಕ್ಕಾಗಿ ಧನವು ಬೇಕು ಎಂಬ ಇಚ್ಛೆ. ಇನ್ನು, ಇದಕ್ಕೂ ಹೆಚ್ಚಿನ ಉಪಾಸನಾದಿಗಳನ್ನು ಮಾಡಿ, ದೇವತಾಸಾಕ್ಷಾತ್ಕಾರವನ್ನು ಪಡೆದು, ಬ್ರಹ್ಮಲೋಕದವರೆಗಿನ ಕಲ್ಪಾಂತಚಿರಸ್ಥಾಯಿಯಾದ ಉತ್ತಮೋತ್ತಮ ಸ್ಥಿತಿ- ಗತಿಗಳನ್ನು ಸಾಧಿಸುವ ಇಚ್ಛೆಯೇ ಲೋಕೈಷಣೆ.

ಬ್ರಹ್ಮಜ್ಞನಾದ ಬ್ರಾಹ್ಮಣನು ಅವಿದ್ಯಾವಿಷಯವಾದ ಈ ಮೂರು ಏಷಣೆಗಳ ಸಾಧ್ಯ-ಸಾಧನೆಗಳನ್ನೂ ಪರಿತ್ಯಾಗಮಾಡಿ, ಆತ್ಮಜ್ಞಾನವೆಂಬ ಪಾಂಡಿತ್ಯವನ್ನೂ, ಆತ್ಮವಿಜ್ಞಾನಬಲದಿಂದ ಅನಾತ್ಮಭ್ರಮನಿರಾಕರಣವೆಂಬ ಬಾಲ್ಯವನ್ನೂ ಪರಮಾತ್ಮಚಿಂತನವೆಂಬ ಮೌನವನ್ನೂ ಪೂರ್ಣವಾಗಿ ಅಳವಡಿಸಿಕೊಂಡರೆ ಕೃತಕೃತ್ಯನಾಗಿ ಮುಖ್ಯಾರ್ಥದಲ್ಲಿ ಬ್ರಾಹ್ಮಣನಾಗುವನು.

"ಪ್ರಜ್ಞಾನಘನಃ ಪ್ರತ್ಯಗರ್ಥೋ ಬ್ರಹ್ಮೈವಾಹಮಸ್ಮಿ"

'ಬ್ರಹ್ಮೈವ ಸರ್ವಮ್' ಎಂಬ ದೃಢಜ್ಞಾನವುಳ್ಳ ಬ್ರಾಹ್ಮಣನು ತನ್ನ ಜ್ಞಾನವನ್ನಾಗಲೀ ಪಾಂಡಿತ್ಯವನ್ನಾಗಲೀ ಧಾರ್ಮಿಕತೆಯನ್ನಾಗಲೀ ತೋರಿಸಿಕೊಳ್ಳದೆ, ದಂಭ ದರ್ಪಗಳಿಲ್ಲದೆ, ಹಸುಗೂಸಿನಂತೆ ಸರಳತೆಯಿಂದಲೂ ಸಹಜತೆಯಿಂದಲೂ ಸಾಮಾನ್ಯರಂತೆ ಇರುವದೇ ಬಾಲ್ಯಭಾವವು. ಪ್ರತಿಷ್ಠೆಗೂ ಗೌರವಕ್ಕೂ ಕಾರಣವಾದ ಯಾವ ಬಗೆಯ ವಿಶೇಷವನ್ನೂ ತನ್ನಲ್ಲಿ ತೋರಿಸಿಕೊಳ್ಳದಿರುವದೇ ನಿರ್ವಿಶೇಷನಾದ ಆತ್ಮನಲ್ಲಿ ಮನಸ್ಸು ನೆಲೆನಿಂತಿರುವದಕ್ಕೆ ಗುರುತಾಗಿದೆ.

ಯಂ ನ ಸನ್ತಂ ನ ಚಾಸನ್ತಂ ನಾಶ್ರುತಂ ನ ಬಹುಶ್ರುತಮ್ ।
ನ ಸುವೃತ್ತಂ ನ ದುರ್ವೃತ್ತಂ ವೇದ ಕಶ್ಚಿತ್ ಸ ಬ್ರಾಹ್ಮಣಃ ॥ (?)
ಗೂಢಧರ್ಮಾಶ್ರಿತೋ ವಿದ್ವಾನ್ ಅಜ್ಞಾತಚರಿತಂ ಚರೇತ್ ।
ಅನ್ಧವಜ್ಜಡವಚ್ಚಾಪಿ ಮೂಕವಚ್ಚ ಮಹೀಂ ಚರೇತ್ ॥
ಅವ್ಯಕ್ತಲಿಙ್ಗೋಽವ್ಯಕ್ತಾಚಾರಃ । (ಸೂ. ಭಾ. ೩-೪-೫೦)
ಅವ್ಯಕ್ತಲಿಙ್ಗೋ ನಿಜಲಾಭತುಷ್ಟೋ । ವೃತಃ ಸ್ತ್ರೀಬಾಲೈರವಧೂತವೇಷಃ ॥

"ಯಾವನನ್ನು ಸತ್ಪುರುಷನೆಂದಾಗಲೀ ಅಸತ್ಪುರುಷನೆಂದಾಗಲೀ ತಿಳಿಯದವನೆಂದಾಗಲೀ ಬಹಳ ತಿಳಿದವನೆಂದಾಗಲೀ ಒಳ್ಳೆಯ ನಡತೆಯುವನೆಂದಾಗಲೀ

ಕೆಟ್ಟ ನಡತೆಯುವನೆಂದಾಗಲೀ ಯಾವನೊಬ್ಬನೂ ಅರಿತುಕೊಳ್ಳಲಾರದೆ ಇರುವನೋ ಅವನು ಬ್ರಾಹ್ಮಣನು."

"ಗೂಢವಾದ ಧರ್ಮವನ್ನಾಶ್ರಯಿಸಿ ಜ್ಞಾನಿಯು ಯಾರಿಗೂ ತಿಳಿಯದ ನಡತೆಯಿಂದ ನಡೆಯಬೇಕು. ಕುರುಡನಂತೆಯೂ ಜಡನಂತೆಯೂ ಮೂಕನಂತೆಯೂ ಭೂಮಿಯಲ್ಲಿ ಸಂಚರಿಸುತ್ತಿರಬೇಕು."

"ಯಾವ ಆಶ್ರಮದ ಚಿಹ್ನೆಯೂ ಗುರುತೂ ವೇಷವೂ ನಡತೆಯೂ ಇಲ್ಲದೆ ಇರಬೇಕು."

"ಯಾವ ಆಶ್ರಮದ ಲಾಂಛನವೂ ಇಲ್ಲದೆ, ಆತ್ಮಜ್ಞಾನದಿಂದಲೇ ಸಂತುಷ್ಟನಾಗಿ, ಅವಧೂತವೇಷದ ಶುಕಮಹರ್ಷಿಯು ಕುತೂಹಲಿಗಳಾದ ಸ್ತ್ರೀಬಾಲಕರಿಂದ ಸುತ್ತುವರಿಯಲ್ಪಟ್ಟಿದ್ದನು."

ಇದೆಲ್ಲಾ ಬ್ರಹ್ಮಜ್ಞಾನವಾದ ಬಳಿಕ ಮಾಡುವ ವಿದ್ವತ್‌ಸಂನ್ಯಾಸದ ವಿಷಯವು.

> 3. ತಸ್ಮಾತ್ ಪೂರ್ವೇ ಬ್ರಾಹ್ಮಣಾಃ ಬ್ರಹ್ಮವಿದೋ ವ್ಯುತ್ಥಾಯ ಕರ್ಮಭ್ಯಃ ಕರ್ಮಸಾಧನೇಭ್ಯಶ್ಚ ಯಜ್ಞೋಪವೀತಾದಿಭ್ಯಃ ಪರಮಹಂಸಪಾರಿವ್ರಾಜ್ಯಂ ಪ್ರತಿಪದ್ಯ ಭಿಕ್ಷಾಚರ್ಯಂ ಚರನ್ತಿ । ...."ವಿದ್ವಾಲ್ಲಿಙ್ಗವರ್ಜಿತಃ" (?), ತಸ್ಮಾದಲಿಙ್ಗೋ ಧರ್ಮಜ್ಞಃ (ಅಶ್ವ. ೪೬-೫೧) "ಅವ್ಯಕ್ತಲಿಙ್ಗೋಽವ್ಯಕ್ತಾಚಾರಃ" (ವಸಿಷ್ಠಸ್ಮೃತಿ. ೧೦-೧೨) ಅಥ ಪರಿವ್ರಾಡ್ವಿವರ್ಣವಾಸಾ ಮುಣ್ಡೋಽಪರಿಗ್ರಹಃ ॥ (ಜಾ. ೫) "ಸ ಶಿಖಾನ್ ಕೇಶಾನ್ನಿಕೃತ್ಯ ವಿಸೃಜ್ಯ ಯಜ್ಞೋಪವೀತಮ್ ॥ (ಕಠರುದ್ರೋಪನಿಷತ್. ೧) ॥
>
> (ಬೃ. ಭಾ. ೩-೫-೧)

"ಆದ್ದರಿಂದ, ಪೂರ್ವಕಾಲದ ಬ್ರಾಹ್ಮಣರು, ಎಂದರೆ, ಬ್ರಹ್ಮಜ್ಞಾನಿಗಳು ಕರ್ಮಗಳನ್ನೂ ಯಜ್ಞೋಪವೀತವೇ ಮುಂತಾದ ಕರ್ಮಸಾಧನಗಳನ್ನೂ ಬಿಟ್ಟು ಪರಮಹಂಸಪಾರಿವ್ರಾಜ್ಯವನ್ನು ಹೊಂದಿ, ಭಿಕ್ಷಾಚರ್ಯೆಯನ್ನು ಮಾಡಿದರು. ಭಿಕ್ಷಾರ್ಥವಾಗಿ ಸಂಚರಿಸುವದು ಭಿಕ್ಷಾಚರ್ಯವು. 'ಜ್ಞಾನಿಯು ಲಿಂಗರಹಿತನು'; 'ಆದ್ದರಿಂದ ಅಲಿಂಗನಾದ ಧರ್ಮಜ್ಞನು' (ಅಶ್ವಮೇಧಪರ್ವ ೪೬-೫೧); 'ಅವ್ಯಕ್ತಲಿಂಗನಾಗಿ ಅವ್ಯಕ್ತಾಚಾರನಾಗಿ'; 'ಇನ್ನು ಪರಿವ್ರಾಜಕನು ವಿವರ್ಣವಾದ ವಸ್ತ್ರವನ್ನು ಧರಿಸಿ, ತಲೆಯನ್ನು ಬೋಳಿಸಿಕೊಂಡವನಾಗಿ, ಯಾವ ಸ್ವತ್ತೂ ಇಲ್ಲದವನಾಗಿ'; 'ಶಿಖೆಯಿಂದ ಕೂಡಿದ ತಲೆಗೂದಲುಗಳನ್ನು ಕಿತ್ತುಹಾಕಿ, ಯಜ್ಞೋಪವೀತವನ್ನು ಬಿಟ್ಟು....'

ಇವೇ ಮೊದಲಾದ ಶ್ರುತಿಸ್ಮೃತಿವಚನಗಳಿಂದ ಜ್ಞಾನಿಗಳು ಮಾಡುವ ವಿದ್ವತ್ಸಂನ್ಯಾಸವು ಶಾಸ್ತ್ರೋಕ್ತವಾದುದೆಂದು ಸಿದ್ಧವಾಗುತ್ತದೆ.

ಪುತ್ರೈಷಣೆಯನ್ನು ಬಿಟ್ಟಿದ್ದು ಎಂದರೆ, ಬ್ರಹ್ಮಚರ್ಯದಿಂದಲೇ ಸಂನ್ಯಾಸವನ್ನು ಮಾಡಬಹುದು ; ಅಥವಾ ಗೃಹಸ್ಥನು ಪುತ್ರೋತ್ಪಾದನೆಯನ್ನು ಮಾಡದೆಯೂ ಸಂನ್ಯಾಸವನ್ನು ಮಾಡಬಹುದು-ಎಂದೂ ಸಿದ್ಧವಾಗುತ್ತದೆ.

ತಸ್ಮಾತ್ ಪರಮಹಂಸಪಾರಿವ್ರಾಜ್ಯಮೇವ ವ್ಯುತ್ಥಾನಲಕ್ಷಣಂ ಪ್ರತಿಪದ್ಯೇತ ಆತ್ಮವಿತ್ ಸರ್ವಕರ್ಮಸಾಧನಪರಿತ್ಯಾಗರೂಪಮಿತಿ ॥ (ಬೃ. ಭಾ. ೩-೫-೧)

"ಆದ್ದರಿಂದ ಏಷಣೆಗಳನ್ನು ಬಿಟ್ಟೇಳುವ ಸ್ವರೂಪದ ಪರಮಹಂಸಪಾರಿವ್ರಾಜ್ಯವನ್ನೇ, ಸರ್ವಕರ್ಮಗಳನ್ನೂ ಸಾಧನಗಳನ್ನೂ ಪರಿತ್ಯಜಿಸುವ ಪಾರಿವ್ರಾಜ್ಯವನ್ನೇ ಆತ್ಮಜ್ಞಾನಿಯು ಸ್ವೀಕರಿಸಬೇಕು."

ಆತ್ಮಜ್ಞಾನಿಗೆ ಕಾಮನೆಯಿಲ್ಲವಾದ್ದರಿಂದಲೂ ವಿಧಿ ಬೇಕಿಲ್ಲವಾದ್ದರಿಂದಲೂ ಅವನು ಪರಮಹಂಸಪಾರಿವ್ರಾಜ್ಯವನ್ನೇ ಸ್ವೀಕರಿಸುತ್ತಾನೆ. ಆದ್ದರಿಂದ ಮುಮುಕ್ಷುವೂ ವಿರಕ್ತನೂ ಆದ ಸಾಧಕನೂ ಸಹ ಪಾರಿವ್ರಾಜ್ಯವನ್ನೇ (ಸಂನ್ಯಾಸವನ್ನೇ) ಸ್ವೀಕರಿಸಬೇಕೆಂದು ಸಿದ್ಧವಾಗುತ್ತದೆ ; ಏಕೆಂದರೆ, ಕೃತಾರ್ಥನಾದ ಜ್ಞಾನಿಯ ಲಕ್ಷಣವೇ ಜಿಜ್ಞಾಸು ವಿರಕ್ತರಿಗೆ ಸಾಧನವಾಗಿರುತ್ತದೆ. ಹೀಗೆ ವಿರಕ್ತಸಾಧಕರು ಮಾಡುವ ಸಂನ್ಯಾಸವೇ ವಿವಿದಿಷಾಸಂನ್ಯಾಸವೆನಿಸುತ್ತದೆ.

ತಸ್ಮಾತ್ ಸಿದ್ಧಂ ನಿವೃತ್ತಕರ್ಮಾ ಭಿಕ್ಷುಕ ಏವ ಬ್ರಹ್ಮಸಂಸ್ಥಃ ಇತಿ । (ಛಾಂ. ಭಾ. ೨-೨೩-೧)

"ಆದ್ದರಿಂದ ಕರ್ಮಗಳನ್ನೆಲ್ಲಾ ಬಿಟ್ಟ ಭಿಕ್ಷುಕನೇ ಬ್ರಹ್ಮಸಂಸ್ಥನು ಎಂದು ಸಿದ್ಧವಾಯಿತು."

....ನ ಚ ಕರ್ಮವಿಧಿಪ್ರವೃತ್ತಿನಿಮಿತ್ತೇ ಭೇದಪ್ರತ್ಯಯೇ ಬಾಧಿತೇ ಅಗ್ನಿಹೋತ್ರಾದೌ ಪ್ರವರ್ತಕಂ ನಿಮಿತ್ತಮಸ್ತಿ ಪರಿವ್ರಾಜಕಸ್ಯೇವ ಭಿಕ್ಷಾಚರಣಾದೌ ಬುಭುಕ್ಷಾದಿಪ್ರವರ್ತಕಮ್ ॥ (ಛಾಂ. ಭಾ. ೨-೨೩-೧)

"ಕರ್ಮವಿಧಿಗೆ ನಿಮಿತ್ತವಾದ ಭೇದಪ್ರತ್ಯಯವು (ಅದ್ವೈತಜ್ಞಾನದಿಂದ) ಬಾಧಿತವಾದ ಮೇಲೆ ಪರಿವ್ರಾಜಕನಿಗೆ ಭಿಕ್ಷಾಚರಣೆಯೇ ಮುಂತಾದುದಕ್ಕೆ ಹಸಿವು ಮುಂತಾದುದು ನಿಮಿತ್ತವಾಗಿರುವಂತೆ, ಅಗ್ನಿಹೋತ್ರಾದಿಯಲ್ಲಿ ತೊಡಗುವಂತೆ ಮಾಡುವ ನಿಮಿತ್ತವು ಯಾವದೂ ಇರುವದಿಲ್ಲ.

"ಆತ್ಮೈವೇದಂ ಸರ್ವಮ್" (೭-೨೬-೨) "ಬ್ರಹ್ಮೈವೇದಂ ಸರ್ವಮ್" (?) ಇತಿ ಶಾಸ್ತ್ರಜನ್ಯಃ ಪ್ರತ್ಯಯೋ ವಿದ್ಯಾರೂಪಃ ಸ್ವಾಭಾವಿಕಂ ಕ್ರಿಯಾಕಾರಕಫಲಭೇದಪ್ರತ್ಯಯಂ ಕರ್ಮವಿಧಿನಿಮಿತ್ತಮ್ ಅನುಪಮೃದ್ಯ ನ ಜಾಯತೇ । ಭೇದಾಭೇದಪ್ರತ್ಯಯಯೋರ್ವಿರೋಧಾತ್ । 'ಸದೇಕಮೇವಾದ್ವಿತೀಯಮ್' (೬-೨-೧) 'ತತ್ ಸತ್ಯಮ್ (೬-೮-೭) 'ವಿಕಾರಭೇದೋಽನೃತಮ್' (೬-೧-೪) ಇತ್ಯೇತದ್ವಾಕ್ಯಪ್ರಮಾಣಜನಿತೇನ ಏಕತ್ವಪ್ರತ್ಯಯೇನ ಸ ಸರ್ವಕರ್ಮಭ್ಯೋ ನಿವೃತ್ತಃ । ನಿಮಿತ್ತನಿವೃತ್ತೇಃ । ಸ ಚ ನಿವೃತ್ತಕರ್ಮಾ ಬ್ರಹ್ಮಸಂಸ್ಥ ಉಚ್ಯತೇ । ಸ ಚ ಪರಿವ್ರಾಡೇವ । ಅನ್ಯಸ್ಯ ಅಸಂಭವಾತ್ ॥ (ಛಾಂ. ಭಾ. ೨-೨೩-೧)

"....ಇದೆಲ್ಲವೂ ಆತ್ಮನೇ (೭-೨೬-೨) 'ಇದೆಲ್ಲವೂ ಬ್ರಹ್ಮವೇ' ಎಂಬ ಶಾಸ್ತ್ರದಿಂದುಂಟಾಗುವ ವಿದ್ಯಾರೂಪವಾದ ಪ್ರತ್ಯಯವು ಸ್ವಾಭಾವಿಕವಾದ (ಅವಿದ್ಯೆಯಿರುವವರಿಗೆಲ್ಲಾ ಸ್ವಭಾವದಿಂದಿದ್ದುಕೊಂಡಿರುವ) ಕ್ರಿಯಾಕಾರಕಫಲಗಳ ಭೇದದ ಪ್ರತ್ಯಯವೆಂಬ ಕರ್ಮವಿಧಿನಿಮಿತ್ತವನ್ನು ಅರೆದುಹಾಕದೆ (ನಾಶಮಾಡದೆ) ಹುಟ್ಟುವದಿಲ್ಲ. ಏಕೆಂದರೆ, ಭೇದಪ್ರತ್ಯಯ ಮತ್ತು ಅಭೇದಪ್ರತ್ಯಯ-ಇವುಗಳಿಗೆ ವಿರೋಧವಿರುತ್ತದೆ. ಕಣ್ಣುಪರೆಯುಳ್ಳವನಿಗೆ ಉಂಟಾಗುವ ಇಬ್ಬರು ಚಂದ್ರರೆಂಬ ಭೇದಪ್ರತ್ಯಯವನ್ನು ಕಳೆಯದೆ, ಕಣ್ಣುಪರೆಯು ಹೋದಬಳಿಕ, ಚಂದ್ರನು ಒಂದೇ ಎಂಬ ಪ್ರತ್ಯಯವು ಉಂಟಾಗಲಾರದಷ್ಟೆ ? (ಕನಸಿನಲ್ಲಿ ತನಗಿಂತ ಬೇರೆಯಾಗಿ ಕಾಣುತ್ತಿರುವ ಅನೇಕರಿರುವರೆಂಬ ಭೇದಪ್ರತ್ಯಯವು ಅಡಗದೆ, ಎಚ್ಚರದಲ್ಲಿರುವದು ತಾನೊಬ್ಬನೇ ಎಂಬ ಅಭೇದಪ್ರತ್ಯಯವು ಉಂಟಾಗಲಾರದಷ್ಟೆ !) ಏಕೆಂದರೆ ವಿದ್ಯೆ ಮತ್ತು ಅವಿದ್ಯೆ ಎಂಬ ಎರಡು ಪ್ರತ್ಯಯಗಳಿಗೆ ವಿರೋಧವಿರುತ್ತದೆ. ಹೀಗಿರುವಲ್ಲಿ, ಯಾವ ಭೇದಪ್ರತ್ಯಯವನ್ನು ತೆಗೆದುಕೊಂಡು ಕರ್ಮವಿಧಿಗಳು (ನಿಷೇಧಗಳು ಕೂಡ) ಪ್ರವೃತ್ತವಾಗಿರುವವೋ, ಆ ಭೇದಪ್ರತ್ಯಯವು ಯಾವನಿಗೆ 'ತನಗೆರಡನೆಯದಿಲ್ಲದ ಸತ್ತೊಂದೇ ಇತ್ತು' (೬-೨-೧) 'ಅದೇ ಸತ್ಯವು' (೬-೮-೭) 'ವಿಕಾರಭೇದವು ಅನೃತವು' (೬-೧-೪)-ಎಂಬೀ ವಾಕ್ಯಪ್ರಮಾಣಜನಿತವಾದ ಏಕತ್ವಪ್ರತ್ಯಯದಿಂದ ನಾಶವಾಗಿರುವದೋ, ಅವನು ಸರ್ವಕರ್ಮಗಳಿಂದಲೂ ನಿವೃತ್ತನಾಗಿರುತ್ತಾನೆ ; ಏಕೆಂದರೆ, ಆ ಕರ್ಮಗಳ ನಿಮಿತ್ತವು ತೊಲಗಿಹೋಗಿರುತ್ತದೆ. ಆ ನಿವೃತ್ತಕರ್ಮನೇ ಬ್ರಹ್ಮಸಂಸ್ಥನೆನಿಸುತ್ತಾನೆ. (ಬ್ರಹ್ಮಸಂಸ್ಥನು ಎಂದರೆ, ಅದ್ವಿತೀಯಬ್ರಹ್ಮಸ್ವರೂಪದಲ್ಲಿ ನೆಲೆನಿಂತಿರುವವನು.) ಇವನೇ ಪಾರಿವ್ರಾಜಕನು-ಪರಮಹಂಸನು ; ಏಕೆಂದರೆ, ಮತ್ತೊಬ್ಬನಿಗೆ ಬ್ರಹ್ಮಸಂಸ್ಥತ್ವವು ಸಂಭವಿಸುವದಿಲ್ಲ. ಆ ಮತ್ತೊಬ್ಬನಿಗೆ ಭೇದಪ್ರತ್ಯಯವು

ತೊಲಗದಿರುವದರಿಂದ, ಅವನು ಮತ್ತೊಂದನ್ನು ಕಾಣುತ್ತಲೂ, ಕೇಳುತ್ತಲೂ ಯೋಚಿಸುತ್ತಲೂ, ಅರಿಯುತ್ತಲೂ ಇದನ್ನು ಮಾಡಿ ಇದನ್ನು ಪಡೆದು ಕೊಳ್ಳುವೆನು ಎಂದಲ್ಲವೆ ಭಾವಿಸಿಕೊಂಡಿರುತ್ತಾನೆ ? ಹೀಗೆ ಮಾಡುತ್ತಿರುವ (ಮತ್ತೊಂದನ್ನು ನೋಡುತ್ತಲೂ ಅರಿಯುತ್ತಲೂ ಇರುವ) ಅವನಿಗೆ ಬ್ರಹ್ಮ ಸಂಸ್ಥತ್ವವು ಸಂಭವಿಸಲಾರದು.

ಮೈತ್ರೇಯಿ :

ಬರಿಯ ಏಷಣಾತ್ಯಾಗವೇ ಸಂನ್ಯಾಸವಲ್ಲದೆ, ಅದು ಆಶ್ರಮಮಾತ್ರವಲ್ಲ. ಆದ್ದರಿಂದ, ಯಾವನೊಬ್ಬನಿಗೆ-ಗೃಹಸ್ಥನಾಗಿದ್ದಾಗಲೇ ಬ್ರಹ್ಮಜ್ಞಾನವಾದರೆ, ಅವನು ಗಾರ್ಹಸ್ಥ್ಯದಲ್ಲಿಯೇ ಏಷಣೆಗಳನ್ನೂ ಕರ್ಮಗಳನ್ನೂ ಬಿಟ್ಟು ಇದ್ದು ಕೊಂಡಿರಲಿ. ಅವನು ಹೆಂಡತಿ ಮಕ್ಕಳನ್ನು ಬಿಟ್ಟುಹೋಗಿ ಬೇರೆಯಾದ ಸಂನ್ಯಾಸವೆಂಬ ಆಶ್ರಮವನ್ನೇಕೆ ತೆಗೆದುಕೊಳ್ಳಬೇಕು ?

ಯಾಜ್ಞವಲ್ಕ್ಯ :

....ನ । ಕಾಮಪ್ರಯುಕ್ತತ್ವಾದ್ ಗಾರ್ಹಸ್ಥ್ಯಸ್ಯ । "ಏತಾವಾನ್ ವೈ ಕಾಮಃ....।....ಜಾಯಾಪುತ್ರವಿತ್ತಕರ್ಮಾಣಿ ಸಾಧನಲಕ್ಷಣಾ ಏಷಣಾ । ಲೋಕಾಶ್ಚ ತ್ರಯಃ.... (ಬೃ. ೧-೪-೧) "....ಉಭೇ ಹ್ಯೇತೇ ಏಷಣೇ ಏವ ಭವತಃ । (ಬೃ. ೩-೫-೧೨) ಇತ್ಯವಧಾರ- ಣಾತ್ । ಕಾಮನಿಮಿತ್ತಪುತ್ರವಿತ್ತಾದಿಸಮ್ಬನ್ಧನಿಯಮಾಭಾವ ಮಾತ್ರಮ್ । (ಐತರೇಯ-ಉ. ಭಾಷ್ಯ ಅವತರಣಿಕಾ)

ಹಾಗಲ್ಲ ; ಏಕೆಂದರೆ, ಗಾರ್ಹಸ್ಥ್ಯವೆಂಬಿದು ಕಾಮವೆಂಬ ನಿಮಿತ್ತದಿಂದ ಉಂಟಾಗಿರುತ್ತದೆ. 'ಕಾಮವೆಂದರೆ ಇಷ್ಟೇ. ಹೆಂಡತಿ, ಮಗ, ಧನ, ಕರ್ಮ ಎಂಬ ಸಾಧನಾರೂಪವಾದ ಏಷಣೆ, ಮನುಷ್ಯಲೋಕ, ಪಿತೃಲೋಕ, ದೇವಲೋಕ- ಎಂದು ಮೂರು ಲೋಕಗಳಾಗಿ ಈ ಸಾಧನೈಷಣೆಗೆ ಫಲವಾಗಿರುವ ಏಷಣೆ- ಎಂಬ ಇಷ್ಟೇ ಅಲ್ಲವೆ ಕಾಮಿಸಬಹುದಾದ ವಿಷಯವು ? ಆ ಫಲರೂಪವಾದ ಏಷಣೆಗಾಗಿ ಅಲ್ಲವೆ ಹೆಂಡತಿ, ಮಗ, ಧನ, ಕರ್ಮ- ಎಂಬ ಸಾಧನೈಷಣೆ.... (ಬೃ. ಉ. ೧-೪-೧೭). "ಇವೆರಡೂ ಏಷಣೆಗಳೇ ಆಗಿರುತ್ತವೆ." (ಬೃ. ೩- ೫-೧) ಎಂದು ಶ್ರುತಿಯಲ್ಲಿ ಒತ್ತಿ ಹೇಳಿರುತ್ತದೆ. ಕಾಮವೆಂಬ ನಿಮಿತ್ತದಿಂದ ಆಗುವ ಮಕ್ಕಳು, ವಿತ್ತ, ಮುಂತಾದವುಗಳ ಸಂಬಂಧವು ನಿಯಮವಾಗಿ ಇರದೆ ಇರುವದೇ ಸಂನ್ಯಾಸವು.

ಏಷಣೆಯಿಲ್ಲದವನಿಗೆ ಮನೆಯಲ್ಲಿಯೇ ಇರಬೇಕೆಂಬ ನಿಯಮವು ಹೊಂದು ವದಿಲ್ಲ. ಮತ್ತೊಂದು ಆಶ್ರಮಕ್ಕೆ ಹೋಗಬೇಕೆಂದು ನಿಯಮವೂ ಜ್ಞಾನಿಗೆ ಇಲ್ಲವಾದರೂ ಮನೆಯಲ್ಲಿಯೇ ಇರಬೇಕೆಂಬುದು ಕಾಮನಿಮಿತ್ತವಾಗಿರುತ್ತದೆ. ಆದ್ದರಿಂದ ಜ್ಞಾನಿಗೆ ಪರಮಹಂಸಾಶ್ರಮವೇ ಸಹಜವಾಗಿರುತ್ತದೆ.

....ಸ್ವಗೃಹವಿಶೇಷಪರಿಗ್ರಹಾಭಾವೇ ಚ ಶರೀರಧಾರಣಮಾತ್ರಪ್ರಯುಕ್ತಾಶನಾಚ್ಛಾದನಾರ್ಥಿನಃ ಸ್ವಪರಿಗ್ರಹವಿಶೇಷಾಭಾವೇ ಅರ್ಥಾದ್ ಭಿಕ್ಷುತ್ವಮೇವ । (ಐ. ಭಾ. ಅವ.)

ತನ್ನದೇ ಆದ ಒಂದಾನೊಂದು ಮನೆಯನ್ನು ಸ್ವೀಕರಿಸದೇ ಇದ್ದರೆ ಶರೀರವನ್ನು ಧರಿಸಿಕೊಂಡಿರುವದಕ್ಕೆ ಬೇಕಾಗುವಷ್ಟು ಮಟ್ಟಿಗೆ ಅನ್ನವಸ್ತ್ರಗಳನ್ನು ಇಚ್ಛಿಸುವವನಿಗೆ ತನ್ನದೆಂಬುದೊಂದು ಗೊತ್ತಾಗಿ ಯಾವದೂ ಇಲ್ಲದ್ದರಿಂದ ಅವನು ಭಿಕ್ಷುಕನೇ ಆಗಬೇಕೆಂದಾಗುವದು. ಯಾವದಾದರೊಂದು ಕಾರಣದಿಂದ ಅವನು ಸಂನ್ಯಾಸಾಶ್ರಮವನ್ನು ಸ್ವೀಕರಿಸದೇ ಇದ್ದರೂ ಅವನು ಕರ್ಮಿಯಾದ ಗೃಹಸ್ಥನೆಂದು ಅವನನ್ನು ಭಾವಿಸಬಾರದು.

ಇನ್ನು ಕೆಲವು ಜ್ಞಾನಿಗಳು, ಕಾಮವಿಲ್ಲವಾದರೂ ಪ್ರಾರಬ್ಧಯೋಗದ ಪ್ರಾಬಲ್ಯದಿಂದ ಕೊನೆಯವರೆಗೂ ಗೃಹಸ್ಥರಾಗಿಯೇ ಉಳಿಯಬಹುದು. ವಸಿಷ್ಠರು, ಮೊದಲಾದವರು ಇದಕ್ಕೆ ಉದಾಹರಣೆಯಾಗಬಹುದು. ಅದರಿಂದ ಅವರಿಗೆ ಬಾಧಕವೇನಿಲ್ಲ. ಆದರೆ, ಗೃಹಸ್ಥಜ್ಞಾನಿಯು, ನಿಸ್ಸಂಗನಾದರೂ ಗೃಹಸ್ಥಾಶ್ರಮದಲ್ಲಿಯೇ ಉಳಿಯಬೇಕೆಂದು ಆಗ್ರಹಪಡಿಸುವದಕ್ಕೆ ಯಾರಿಗೂ ಅಧಿಕಾರವಿಲ್ಲ.

5. ಏಕತ್ವಜ್ಞಾನದಿಂದ ಭೇದಜ್ಞಾನವು (ಪ್ರತ್ಯಯವು) ಬಾಧಿತವಾಗುವದು ಸಂನ್ಯಾಸಕ್ಕೆ ಅಗತ್ಯವೇ ಹೊರತು - ಮುಖ್ಯವೇ ಹೊರತು - ಕೇವಲ ಕರ್ಮತ್ಯಾಗವಲ್ಲ. ಏಕೆಂದರೆ, ಸಾಂಖ್ಯದರ್ಶನಕಾರರೂ ಕರ್ಮತ್ಯಾಗವನ್ನು ಒಪ್ಪಿದ್ದಾರೆ. ಆದರೆ, ಪ್ರಕೃತಿ-ಪುರುಷ ವಿವೇಕವಾದ ಮೇಲೂ ಕ್ರಿಯಾಕಾರಕಫಲಭೇದವು ಸತ್ಯವಾಗಿದೆಯೆಂದೇ ಅವರು ಒಪ್ಪಿರುತ್ತಾರೆ. ಆದ್ದರಿಂದ ವಿವೇಕಿಗೂ ಮತ್ತೆ ಅವಿವೇಕದಿಂದ ಕರ್ಮವು ಅಂಟಿಕೊಳ್ಳಬಹುದು. ಮತ್ತು ಸಾಂಖ್ಯನ ಕರ್ಮತ್ಯಾಗವು ಪ್ರಯತ್ನಪೂರ್ವಕವಾದುದು. ಪ್ರಯತ್ನದಲ್ಲಿ ಅಹಂಕಾರವು (ಕರ್ತೃತ್ವಭಾವನೆಯು) ಗುಪ್ತವಾಗಿರುತ್ತದೆ. ಆದರೆ, ಹಗ್ಗದಲ್ಲಿ ತೋರುವ ಹುಸಿ ಹಾವಿನಂತೆ ಆತ್ಮನಲ್ಲಿ ಅವಿದ್ಯಾಕಾಮಕರ್ಮಗಳಾಗಲಿ, ಕ್ರಿಯಾ-ಕಾರಕ-ಫಲಭೇದವಾಗಲಿ ಕಲ್ಪಿತವಾಗಿ ತೋರುತ್ತಿವೆಯೇ ಹೊರತು ಎಷ್ಟು ಮಾತ್ರಕ್ಕೂ ಸತ್ಯವಲ್ಲವೆಂಬ ನಿಶ್ಚಯಜ್ಞಾನವುಳ್ಳ ಸಂನ್ಯಾಸಿಯ ಕರ್ಮತ್ಯಾಗವು ಸ್ವಾಭಾವಿಕವಾದುದು ; ಪ್ರಯತ್ನಪೂರ್ವಕವಾದುದಲ್ಲ. ತನಿನಿದ್ರೆಯಲ್ಲಿರುವವನಿಂದ ಯಾವ ಕರ್ಮವೂ ನಡೆಯದಿರುವದು ಅವನ ಪ್ರಯತ್ನದಿಂದಲ್ಲ, ಅದು ಸಹಜವಾದುದು. ಜ್ಞಾನಿಯಾದ ಸಂನ್ಯಾಸಿಯಲ್ಲಿ ಕರ್ತೃತ್ವಭಾವನೆಯಿಲ್ಲವಾದ್ದರಿಂದ ಕರ್ಮವೂ ಇಲ್ಲ. ಅವನು ಹಿಂದೆ ಕರ್ಮವನ್ನು ಹಿಡಿದವನೂ ಅಲ್ಲ ; ಅನಂತರ ಬಿಟ್ಟವನೂ ಅಲ್ಲ.

ಇನ್ನು ಶೂನ್ಯವಾದಿಗಳಾದ ಬೌದ್ಧರೂ ಕರ್ಮತ್ಯಾಗರೂಪಸಂನ್ಯಾಸವನ್ನು ಒಪ್ಪಿದ್ದಾರೆ ಎನ್ನಬಹುದು. ಶೂನ್ಯವಾದದಲ್ಲಿ ಆತ್ಮವೇ ಇಲ್ಲವಾದುದರಿಂದ ಕರ್ತೃವೂ ಇಲ್ಲವಾದ್ದರಿಂದ ಸಂನ್ಯಾಸವನ್ನು ಯಾರಿಗೆ ವಿಧಿಸಬೇಕು ? ಆದ್ದರಿಂದ ಕರ್ತೃಪೂರ್ವಕವಾದ ಕರ್ಮವೂ ಇಲ್ಲ. ಇದರಿಂದ ಬೌದ್ಧನ ಕರ್ಮತ್ಯಾಗಕ್ಕೂ ವೇದಾಂತಿಯ ಕರ್ಮತ್ಯಾಗಕ್ಕೂ ವ್ಯತ್ಯಾಸವೇನೂ ಇಲ್ಲ ಎನಿಸಬಹುದು. ಆದರೆ, ಇಬ್ಬರ ಕರ್ಮತ್ಯಾಗವೂ ಒಂದೇ ಆದರೂ, ಅವರ ತಿಳಿವಳಿಕೆ ಒಂದೇ ಅಲ್ಲ. "ಆತ್ಮೈವೇದಂ ಸರ್ವಮ್" "ಬ್ರಹ್ಮೈವೇದಂ ಸರ್ವಮ್" "ಸರ್ವಂ ಖಲ್ವಿದಂ ಬ್ರಹ್ಮ" ಎಂದು ವೇದಾಂತದ ವಾದವಾದರೆ, "ಸರ್ವಂ ಶೂನ್ಯಂ ಶೂನ್ಯಮ್" ಎಂದು ಬೌದ್ಧನ ವಾದವಿದೆ. ಒಂದು ವಾದವಿರಬೇಕಾದರೆ, ಅದನ್ನು ಪ್ರತಿಪಾದನಮಾಡುವ ವಾದಿ ಇರಲೇಬೇಕು. ವಾದಿಯು ಇಲ್ಲದೆ ಆ ವಾದವೇ ಸಿದ್ಧಿಸುವಂತಿಲ್ಲ. ಸರ್ವವೂ ಶೂನ್ಯವೆಂದು ವಾದಿಸುವ ವಾದಿ ಇದ್ದಾನೆಂದು ಒಪ್ಪುವದಾದರೆ ಆ ವಾಗ್ರೂಪವಾದ ಕರ್ಮಕ್ಕೆ ಅವನು ಕರ್ತೃ ಎಂದು ಒಪ್ಪಬೇಕಾಗುವದು. ಹೀಗೆಯೇ, ದೈಹಿಕವಾದ ಕರ್ಮವನ್ನು ಮಾಡುವದಕ್ಕಾಗಲಿ, ಬಿಡುವದಕ್ಕಾಗಲಿ ತಾನು ಕರ್ತೃವೆಂದು ಬೌದ್ಧನು ಒಪ್ಪಲೇಬೇಕು. ಆದ್ದರಿಂದ ಅವನ ಕರ್ಮತ್ಯಾಗದಲ್ಲಿ, ಕರ್ತೃತ್ವಭಾವನೆಯನ್ನು ಅವನು ಒಪ್ಪಿಕೊಳ್ಳದಿದ್ದರೂ ಅದು ಅಡಗಿಯೇ ಇರುತ್ತದೆ. ಆದರೆ, ವೇದಾಂತಿಯಾದ ಸಂನ್ಯಾಸಿಗೆ ಎಲ್ಲವೂ ಆತ್ಮವೇ ಆದುದರಿಂದ ಅದಕ್ಕಿಂತ ಬೇರೆಯಾಗಿ ಕರ್ತೃ, ಕರ್ಮ, ಕ್ರಿಯೆ, ಕಾರಕ, ಫಲ, ತ್ಯಾಗ, ಭೋಗ ಇತ್ಯಾದಿ ಯಾವದೂ ಸತ್ಯವಾಗಿಲ್ಲ.

ಇನ್ನು ಕೇವಲ ಆಲಸ್ಯದಿಂದ (ಮೈಗಳ್ಳತನದಿಂದ) ಕರ್ಮವನ್ನು ಬಿಟ್ಟು ಸಂನ್ಯಾಸವನ್ನು ತೆಗೆದುಕೊಳ್ಳುವ ಅಜ್ಞರೂ ಇದ್ದಾರೆ. ಆದರೆ, ಶಾಸ್ತ್ರಾಚಾರ್ಯರ ಉಪದೇಶದಿಂದಲೂ ಶ್ರವಣಾದಿಗಳಿಂದಲೂ ಕರ್ತೃ-ಕ್ರಿಯಾ-ಕಾರಕ-ಫಲಾದಿಗಳು ಬಾಧಿತವಾಗದೆ, ಸತ್ಯವೇ ಆಗಿರುವದರಿಂದ ಅವರ ಕರ್ಮತ್ಯಾಗವೂ ಒಂದು ಕರ್ಮವೇ ಆಗುತ್ತದೆ. ಶ್ರಮಪಡಲಾರದೆ, ಕರ್ಮವನ್ನು ಬಿಟ್ಟಿರುವ ಆಲಸಿಗಳೂ, ಅತಪಸ್ವಿಗಳೂ ಆದ ಅಜ್ಞಸಂನ್ಯಾಸಿಗಳು ಸುಖಭೋಗಗಳಿಗೆ ಸಾಧನವಾದ ಧನ, ಗೃಹ (ಮಠ) ವಾಹನಾದಿಗಳನ್ನು ಮಾತ್ರ ಬೇಡವೆನ್ನುವದಿಲ್ಲ. ಇವರು ನಿಜವಾದ ಸಂನ್ಯಾಸಿಗಳಲ್ಲ.

> ತಸ್ಮಾತ್ ವೇದಾನ್ತಪ್ರಮಾಣಜಸತ್ಯೈಕತ್ವಪ್ರತ್ಯಯವತ ಏವ ಕರ್ಮನಿವೃತ್ತಿಲಕ್ಷಣಂ ಪಾರಿವ್ರಾಜ್ಯಂ ಬ್ರಹ್ಮಸಂಸ್ಥತ್ವಂ ಚ ಇತಿ ಸಿದ್ಧಮ್ ॥ (ಛಾಂ. ಭಾ. ೨-೨೩-೧)

“ಆದ್ದರಿಂದ, ವೇದಾಂತಪ್ರಮಾಣದಿಂದ ಉಂಟಾದ ಏಕತ್ವಪ್ರತ್ಯಯವುಳ್ಳವನಿಗೆ ಮಾತ್ರವೇ ಕರ್ಮನಿವೃತ್ತಿರೂಪವಾದ ಪಾರಿವ್ರಾಜ್ಯವೂ ಬ್ರಹ್ಮಸಂಸ್ಥತ್ವವೂ ಹೊಂದುತ್ತದೆ, ಎಂದು ಸಿದ್ಧವಾಯಿತು.”

ಏಕತ್ವಪ್ರತ್ಯಯವುಳ್ಳವನಿಗೆ, ಹಿಂದೂ, ಇಂದೂ, ಮುಂದೂ, ಎಂದೆಂದೂ ನಾನು ಕರ್ತೃವಲ್ಲ ಎಂದೇ ನಿಶ್ಚಯವಾಗಿರುತ್ತದೆ :

6. ....ಪೂರ್ವಸಿದ್ಧಕರ್ತೃತ್ವಭೋಕ್ತೃತ್ವವಿಪರೀತಂ ಹಿ ತ್ರಿಷ್ವಪಿ ಕಾಲೇಷು ಅಕರ್ತೃತ್ವಾಭೋಕ್ತೃತ್ವಸ್ವರೂಪಂ ಬ್ರಹ್ಮಾಹಮಸ್ಮಿ ನೇತಃ ಪೂರ್ವಮಪಿ ಕರ್ತಾ ಭೋಕ್ತಾ ವಾ ಅಹಮಾಸಮ್ ನೇದಾನೀಂ ನಾಪಿ ಭವಿಷ್ಯತ್ಕಾಲೇ ಇತಿ ಬ್ರಹ್ಮವಿದವಗಚ್ಛತಿ। ಏವಮೇವ ಚ ಮೋಕ್ಷ ಉಪಪದ್ಯತೇ। ಅನ್ಯಥಾ ಹಿ ಅನಾದಿಕಾಲಪ್ರವೃತ್ತಾನಾಂ ಕರ್ಮಣಾಂ ಕ್ಷಯಾಭಾವೇ ಮೋಕ್ಷಾಭಾವಃ ಸ್ಯಾತ್। ನ ಚ ದೇಶಕಾಲನಿಮಿತ್ತಾಪೇಕ್ಷೋ ಮೋಕ್ಷಃ ಕರ್ಮಫಲವತ್ ಭವಿತುಮರ್ಹತಿ। ಅನಿತ್ಯತ್ವಪ್ರಸಙ್ಗಾತ್। ಪರೋಕ್ಷತ್ವಾನುಪಪತ್ತೇಶ್ಚ ಜ್ಞಾನಫಲಸ್ಯ ॥ (ಸೂ. ಭಾ. ೪-೧-೧೩)

ಹಿಂದೆ ಸಿದ್ಧವಾಗಿದ್ದ ಕರ್ತೃತ್ವಭೋಕ್ತೃತ್ವಗಳಿಗೆ ವಿಪರೀತವಾಗಿ ‘ಮೂರು ಕಾಲಗಳಲ್ಲಿಯೂ ಕರ್ತೃತ್ವವಿಲ್ಲದ, ಭೋಕ್ತೃತ್ವವಿಲ್ಲದ ಸ್ವರೂಪದ ಬ್ರಹ್ಮವೇ ನಾನಾಗಿರುವೆನು, ಇದಕ್ಕೆ ಹಿಂದೆಯೂ ಕರ್ತೃವಾಗಿ ಅಥವಾ ಭೋಕ್ತೃವಾಗಿ ನಾನಿರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರುವದಿಲ್ಲ, ಎಂದಲ್ಲವೆ, ಬ್ರಹ್ಮಜ್ಞಾನಿಯು ನಿಶ್ಚಯಿಸಿರುತ್ತಾನೆ? ಹೀಗೆಂದಾದರೇ ಮೋಕ್ಷವು (ಸಾಧ್ಯವೆಂಬಿದು) ಹೊಂದುತ್ತದೆ. ಹೀಗಲ್ಲದಿದ್ದರೆ, ಅನಾದಿಕಾಲದಿಂದ ಸಾಗುತ್ತಿರುವ ಕರ್ಮಗಳು ಕ್ಷಯವಾಗದೇ ಮೋಕ್ಷವೇ ಇಲ್ಲವೆಂದಾಗುತ್ತದೆ. ಮೋಕ್ಷವು ಕರ್ಮಫಲದಂತೆ ದೇಶಕಾಲನಿಮಿತ್ತಾಪೇಕ್ಷವಾಗಿಯೂ ಇರಲಾರದು ; ಏಕೆಂದರೆ, ಆಗ ಅದು ಅನಿತ್ಯವೆಂಬ ಪ್ರಸಂಗವು ಉಂಟಾಗುವದು. ಜ್ಞಾನದ ಫಲವು ಪರೋಕ್ಷವೆಂಬುದು ಹೊಂದುವದಿಲ್ಲವಾದ್ದರಿಂದಲೂ ಹೀಗೆಂದು ಒಪ್ಪಬೇಕು.

ಕುಂಬಾರನು ತಿರುಗಿಸುವದನ್ನು ಬಿಟ್ಟಮೇಲೂ ಹಿಂದಿನ ವೇಗದಿಂದಲೇ ತಿಗುರಿಯು ತಿರುಗುತ್ತಿರುವಂತೆ, ಆತ್ಮಜ್ಞಾನವಾಗಿ ಕರ್ತೃತ್ವಬುದ್ಧಿಯಿಲ್ಲವಾದ ಮೇಲೂ ಪ್ರಾರಬ್ಧಕರ್ಮದ ವೇಗದಿಂದಲೇ ಜ್ಞಾನಿಯ ಶರೀರವು ಇದ್ದುಕೊಂಡಿರುತ್ತದೆ. ಚಂದ್ರನು ಒಬ್ಬನೇ ಎಂದು ತಿಳಿದ ಬಳಿಕವೂ ಇಬ್ಬರು ಚಂದ್ರರಿರುವಂತೆ ಕಾಣುತ್ತಿರಬಹುದು. ದೂರದ ಬಯಲಲ್ಲಿ ಕಾಣುವ ಬಿಸಿಲ್

ಕುದುರೆಯು ಹುಸಿತೋರಿಕೆಯೆಂದು ನಿಶ್ಚಯವಾದ ಮೇಲೂ ಅದು ತೋರುತ್ತಲೇ ಇರಬಹುದು. ಅವುಗಳ ಸತ್ಯತ್ವಭ್ರಮೆಯಿಂದ ಬಾಧಕವೇ ಹೊರತು ಅವುಗಳ ತೋರಿಕೆಮಾತ್ರದಿಂದ ಬಾಧಕವಿಲ್ಲ. ಬಿಲ್ಲಿನಿಂದ ಚಿಮ್ಮಿದ ಬಾಣದಂತೆ ಪ್ರಾರಬ್ಧಕರ್ಮದ ವೇಗವು ಕ್ಷಯಿಸುವವರೆಗೂ ಜ್ಞಾನಿಯ ದೇಹವು ಇದ್ದುಕೊಂಡೇ ಇರುತ್ತದೆ. ಅದು ಸತ್ಯವೆಂಬ ಬುದ್ಧಿಯು ಮಾತ್ರ ಜ್ಞಾನದಿಂದ ಬಾಧಿತವಾಗಿರುತ್ತದೆ. ಜ್ಞಾನಿಯ ಲಕ್ಷಣವನ್ನೂ ಸ್ಥಿತಪ್ರಜ್ಞನ ಲಕ್ಷಣವನ್ನೂ ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ. ಆದ್ದರಿಂದ ಬದುಕಿರುವಾಗ ಮುಕ್ತನಾಗಿರುವ ಜ್ಞಾನಿಯ ವಿಷಯವೇ ಆ ಲಕ್ಷಣವೆಂಬುದು ಸ್ಪಷ್ಟವಾಗಿದೆ. ಆದ್ದರಿಂದಲೂ ಪ್ರಾರಬ್ಧಕಾರ್ಯವಾಗಿರುವ ಕರ್ಮವು ಜ್ಞಾನಿಗೆ ಇರಬಹುದಾಗಿದೆ. ಆದರೆ, ಯಾವಾಗಲೂ ಅಶರೀರತ್ವವೇ ಸ್ವಾಭಾವಿಕವೆಂಬಿದು ಪರಮಸಿದ್ಧಾಂತವಾದರೂ ಜ್ಞಾನಿಗಾದರೂ ಶರೀರವು ಇದ್ದುಕೊಂಡಿದೆ ಎಂದಿಟ್ಟುಕೊಂಡೇ ವ್ಯವಹಾರದೃಷ್ಟಿಯಿಂದ ಇಲ್ಲಿ ವಿಚಾರಮಾಡಿದೆ. ಮಿಥ್ಯಾಜ್ಞಾನವು ಸಮ್ಯಗ್ಜ್ಞಾನದಿಂದ ನಾಶವಾಗಿರುವದರಿಂದ ಜ್ಞಾನಿಗೆ ಜನ್ಮಾಂತರಕ್ಕೆ ಕಾರಣವೇ ಇರುವದಿಲ್ಲ.

7. ಅತಶ್ಚ ಇದಮೇವೈಕಂ ವೇದೋಕ್ತಂ ಪಾರಿವ್ರಾಜ್ಯಮ್, ನ ಯಜ್ಞೋಪವೀತತ್ರಿದಣ್ಡಕಮಣ್ಡಲ್ವಾದಿಪರಿಗ್ರಹಃ । "ಮುಣ್ಡೋಽಪರಿಗ್ರಹೋಽಸಙ್ಗಃ" (ಜಾಬಾಲ ೫) ಇತಿ ಚ ಶ್ರುತಿಃ। "ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಮ್" (ಶ್ವೇ.೬-೨೧) 'ನಿಸ್ತುತಿರ್ನಿರ್ನಮಸ್ಕಾರಃ ಪರಿತ್ಯಜ್ಯ ಶುಭಾಶುಭೇ।ಅರಣ್ಯೇ ವಿಚರೈಕಾಕೀ ಯೇನಕೇನಚಿದಾಶಿತಃ।ತಸ್ಮಾತ್ ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ' । (ಮೋಕ್ಷಧರ್ಮ ೨೪೧ ೭) (ಛಾಂ. ಉ. ೨-೨೩-೧)

"ಮತ್ತು ಈ ಕಾರಣದಿಂದಲೇ (ಜ್ಞಾನಿಯಾದ ಸರ್ವಕರ್ಮಸಂನ್ಯಾಸಿಯನ್ನೇ ಬ್ರಹ್ಮಸಂಸ್ಥನೆಂದು ಪರಿಗಣಿಸಬೇಕಾಗಿರುವದರಿಂದಲೇ) ಇದೊಂದೇ ವೇದೋಕ್ತವಾದ ಪಾರಿವ್ರಾಜ್ಯವೇ ಹೊರತು, ಯಜ್ಞೋಪವೀತ, ತ್ರಿದಂಡ, ಕಮಂಡಲು-ಮುಂತಾದವುಗಳನ್ನು ಪರಿಗ್ರಹಿಸುವದಲ್ಲ, ಎಂದಾಗುತ್ತದೆ. (ಏಕೆಂದರೆ, ಯಜ್ಞೋಪವೀತಾದಿಗಳು ಕರ್ಮಾರ್ಥವಾಗಿರುತ್ತವೆ, ಭೇದಪ್ರತ್ಯಯವುಳ್ಳವರಿಗೆ ಮಾತ್ರ ಸಂಭವಿಸುತ್ತವೆ. ಅವನ್ನುಳ್ಳ ಸಂನ್ಯಾಸವು ಅಮೃತತ್ವಫಲವುಳ್ಳ ವೈದಿಕಸಂನ್ಯಾಸವಾಗಲಾರದು.) "ಮುಂಡನು, ಅಪರಿಗ್ರಹನು, ಅಸಂಗನು." ಎಂದು ಶ್ರುತಿಯಿದೆ. "ಅತ್ಯಾಶ್ರಮಿಗಳಿಗೆ ಪರಮಪವಿತ್ರವಾದ ಈ ಜ್ಞಾನವನ್ನು ಹೇಳಿದನು." (ಶ್ವೇತಾಶ್ವತರ. ೬-೨೧) 'ಸ್ತುತಿಯಿಲ್ಲದವನೂ ನಮಸ್ಕಾರವಿಲ್ಲದವನೂ ಶುಭಾಶುಭವಿಲ್ಲದವನೂ ಆಗಿ ಯಾವದು ಸಿಕ್ಕರೆ ಅದನ್ನು ತಿಂದುಕೊಂಡು ಅರಣ್ಯದಲ್ಲಿ

ಸಂಚರಿಸು'– ಎಂಬೀ ಉಪದೇಶವು ಎಂದೂ ತ್ರಿದಂಡಿಸಂನ್ಯಾಸಕ್ಕೆ ಹೇಳಿದ್ದಲ್ಲ. ಆದ್ದರಿಂದ ಪಾರದರ್ಶಿಗಳಾದ ಯತಿಗಳು ಕರ್ಮವನ್ನು ಮಾಡುವದಿಲ್ಲ. ಇದರಿಂದ, ಯಾವ ಪರಿಗ್ರಹವೂ ಇಲ್ಲದ ಆತ್ಮಜ್ಞಾನಿಯ ಸರ್ವಕರ್ಮ ಸಂನ್ಯಾಸವೇ ವೇದೋಕ್ತವಾದ ಪಾರಿವ್ರಾಜ್ಯವೆಂದು ಸಿದ್ಧವಾಗುತ್ತದೆ.

8. ಅಸಕ್ತಬುದ್ಧಿಃ ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ ।
ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ ॥
(ಗೀತಾ. ೧೮–೪೯)

ಎಲ್ಲೆಲ್ಲಿಯೂ ಆಸಕ್ತಿಗೆ ಕಾರಣರಾದ ಮಕ್ಕಳು ಹೆಂಡತಿ ಮುಂತಾದವರಲ್ಲಿ ಸಂಗವಿಲ್ಲದ ಅಂತಃಕರಣವುಳ್ಳವನು; ಅಂತಃಕರಣವನ್ನು ಗೆದ್ದು ವಶಕ್ಕೆ ತಂದು ಕೊಂಡವನು; ದೇಹದಲ್ಲಿಯೂ ಬದುಕಿರುವಿಕೆಯಲ್ಲಿಯೂ ಭೋಗದಲ್ಲಿಯೂ ಬಯಕೆಯಿಲ್ಲದವನು; ನಿಷ್ಕ್ರಿಯನಾದ ಬ್ರಹ್ಮಾತ್ಮನನ್ನು ಅರಿತುಕೊಂಡದ್ದರಿಂದ ಕರ್ಮಗಳು ಯಾವನನ್ನು ಬಿಟ್ಟು ತೊಲಗಿರುವವೋ ಅವನು ನಿಷ್ಕರ್ಮನು; ಅವನ ಭಾವವು ನೈಷ್ಕರ್ಮ್ಯವು; ಈಗಲೇ ಮುಕ್ತಿಯನ್ನು ಪಡೆದು ನಿಲ್ಲುವ ರೂಪ ವಾದ ನೈಷ್ಕರ್ಮ್ಯಸಿದ್ಧಿಯನ್ನು,

....ತಾಂ ನೈಷ್ಕರ್ಮ್ಯಸಿದ್ಧಿಂ ಪರಮಾಂ....ಸದ್ಯೋಮುಕ್ತ್ಯ-ವಸ್ಥಾನರೂಪಾಮ್ । ಸಂನ್ಯಾಸೇನ ಸಮ್ಯಗ್‌ದರ್ಶನೇನ ತತ್-ಪೂರ್ವಕೇಣ ವಾ ಸರ್ವಕರ್ಮಸಂನ್ಯಾಸೇನ ಅಧಿಗಚ್ಛತಿ, ಪ್ರಾಪ್ನೋತಿ ॥ (ಗೀ. ಭಾ. ೧೮–೪೯)

ಸಂನ್ಯಾಸದಿಂದ ಎಂದರೆ ಸಮ್ಯಗ್‌ದರ್ಶನದಿಂದ ಅಥವಾ ಆ ದರ್ಶನಪೂರ್ವಕವಾದ ಸರ್ವಕರ್ಮಸಂನ್ಯಾಸದಿಂದ ಪಡೆದುಕೊಳ್ಳು ತ್ತಾನೆ. ಆದ್ದರಿಂದಲೇ "ಸರ್ವಕರ್ಮಗಳನ್ನೂ ಮನಸ್ಸಿನಿಂದ ಸಂನ್ಯಾಸ ಮಾಡಿ ಏನೂ ಮಾಡದೆಯೇ ಮಾಡಿಸದೆಯೇ ಕುಳಿತಿರುತ್ತಾನೆ. (ಗೀ. ೫–೧೩)–ಎಂದು ಹೇಳಿರುತ್ತದೆ.

(ಸಾಂಖ್ಯರ ಮತದಂತೆ) ಗುಣಗಳು ನಿಜವಾಗಿರಲಿ, ಅಥವಾ ವೇದಾಂತಿಗಳ ಮತದಂತೆ ಅವಿದ್ಯಾಕಲ್ಪಿತವಾಗಿಯೇ ಇರಲಿ, ಕರ್ಮವು ಗುಣಗಳ ಧರ್ಮವು. ಆ ಧರ್ಮವು ಆತ್ಮನಲ್ಲಿ ಅವಿದ್ಯೆಯಿಂದ ಆರೋಪಿತವಾದ್ದರಿಂದ ಅಜ್ಞನಾದವನು ಯಾವನೊಬ್ಬನೂ ಒಂದು ಕ್ಷಣವೂ ಅದನ್ನು ನಿಶ್ಶೇಷವಾಗಿ ಬಿಡಲಾರನು (ಗೀ. ೩–೪) ಎಂದು ಹೇಳಿರುತ್ತದೆ. ಆದರೆ, ಜ್ಞಾನಿಯು, ವಿದ್ಯೆಯಿಂದ ಅವಿದ್ಯೆಯು ತೊಲಗಲಾಗಿ ಕರ್ಮವನ್ನು ನಿಶ್ಶೇಷವಾಗಿ ಬಿಡುವದಕ್ಕೆ ಶಕ್ತನೇ ಆಗಿರುತ್ತಾನೆ. ಏಕೆಂದರೆ ಅವಿದ್ಯೆಯಿಂದ ಕಲ್ಪಿತವಾದುದು ವಿದ್ಯಾವಸ್ಥೆಯಲ್ಲಿ ಉಳಿದುಕೊಳ್ಳ ಲಾರದು.

....ಆತ್ಮಜ್ಞಾನವತ್ ಅಪ್ರಯೋಜಕಃ ಸಂನ್ಯಾಸಃ ಪಕ್ಷೇ
(ಬೃ. ೪-೪-೭)

ಮೋಕ್ಷಕ್ಕೆ ಆತ್ಮಜ್ಞಾನವು ಹೇಗೆ ನೇರಾದ ಸಾಧನವೋ ಹಾಗೆ ಸಂನ್ಯಾಸವು ನೇರಾದ ಸಾಧನವಲ್ಲ. ಸಂನ್ಯಾಸವು ಜ್ಞಾನಪರಿಪಾಕಕ್ಕೆ ಸಹಾಯಕವಾದ ಅಂತರಂಗಸಾಧನ. ಆದ್ದರಿಂದ ವಿವಿದಿಷಾಸಂನ್ಯಾಸವು ಜ್ಞಾನಕ್ಕೆ ಸಾಧನವೇ ಹೊರತು, ಮೋಕ್ಷಕ್ಕಲ್ಲ. ಜ್ಞಾನದಿಂದಲೇ ಮುಕ್ತಿಯಾಗುತ್ತದೆ. ಸಂನ್ಯಾಸವು ಜ್ಞಾನಕ್ಕೆ ಸಾಧನವಾದಂತೆ ಅದರ ಫಲವೂ ಆಗಬಹುದು. ವಿದ್ವತ್ ಸಂನ್ಯಾಸವು ಜ್ಞಾನದ ಫಲವೇ ಆಗಿದೆ. ಜ್ಞಾನ ಮತ್ತು ಸಂನ್ಯಾಸ ಈ ಎರಡರಲ್ಲಿ ಆತ್ಮಜ್ಞಾನವು ಪ್ರಧಾನವಾಗಿಯೂ ಸಂನ್ಯಾಸವು ಗೌಣವಾಗಿಯೂ ಅಂಗವಾಗಿಯೂ ಇವೆ.

ಜ್ಞಾನಸ್ಯ ಸ್ವಾತ್ಮೋತ್ಪತ್ತಿಪರಿಪಾಕಹೇತುಯುಕ್ತಸ್ಯ ಪ್ರತಿಪಕ್ಷವಿಹೀನಸ್ಯ ಯತ್ ಆತ್ಮಾನುಭವನಿಶ್ಚಯಾವಸಾನತ್ವಂ ತಸ್ಯ ನಿಷ್ಠಾ.... (ಗೀ. ಭಾ. ೧೮-೫೫)

ಜ್ಞಾನವುಂಟಾಗಿ ಅದು ಪರಿಪಕ್ವವಾಗುವದಕ್ಕೆ ಬೇಕಾದ ಕಾರಣದಿಂದೊಡಗೂಡಿ, ಪ್ರತಿಪಕ್ಷವಿಲ್ಲದ (ಅಜ್ಞಾನ ಅಥವಾ ಅದರ ಕಾರ್ಯದ ಅಡಚಣೆಯಿಲ್ಲದ) ಜ್ಞಾನವು ಆತ್ಮಾನುಭವನಿಶ್ಚಯರೂಪವಾಗಿ ಕೊನೆಗಾಣುವದನ್ನೇ ಇಲ್ಲಿ ನಿಷ್ಠೆ ಎಂಬ ಮಾತಿನಿಂದ ಕರೆದಿರುತ್ತದೆ. ಸರ್ವಕರ್ಮಸಂನ್ಯಾಸಸಹಿತವಾದ ಜ್ಞಾನವೇ ಫಲಕಾರಿ-ಎಂದು ಭಾವವು.

....ಶಾಸ್ತ್ರಾಚಾರ್ಯೋಪದೇಶೇನ ಜ್ಞಾನೋತ್ಪತ್ತಿಪರಿಪಾಕ-ಹೇತುಸಹಕಾರಿಕಾರಣಂ ಬುದ್ಧಿವಿಶುದ್ಧತ್ವಾದಿ ಅಮಾನಿತ್ವಾದಿ ಚ ಅಪೇಕ್ಷ್ಯ ಜನಿತಸ್ಯ ಕ್ಷೇತ್ರಜ್ಞಪರಮಾತ್ಮೈಕತ್ವಜ್ಞಾನಸ್ಯ ಕರ್ತೃತ್ವಾದಿಕಾರಕಭೇದಬುದ್ಧಿನಿಬನ್ಧನಸರ್ವಕರ್ಮಸಂನ್ಯಾಸಸಹಿತಸ್ಯ ಸ್ವಾತ್ಮಾನುಭವನಿಶ್ಚಯರೂಪೇಣ ಯತ್ ಅವಸ್ಥಾನಮ್ ಸಾ ಪರಾಜ್ಞಾನನಿಷ್ಠಾ ಇತ್ಯುಚ್ಯತೇ। ಸೇಯಂ ಜ್ಞಾನನಿಷ್ಠಾ ಆರ್ತಾದಿ ಭಕ್ತಿತ್ರಯಾಪೇಕ್ಷಯಾ ಪರಾ ಚತುರ್ಥೀ ಭಕ್ತಿಃ ಇತ್ಯುಕ್ತಾ। ಅತಃ ಜ್ಞಾನನಿಷ್ಠಾಲಕ್ಷಣಯಾ ಭಕ್ತ್ಯಾ ಮಾಮ್ ಅಭಿಜಾನಾತಿ॥
(ಭ. ಗೀ. ಭಾ. ೧೮-೫೫)

ಶಾಸ್ತ್ರಾಚಾರ್ಯರ ಉಪದೇಶದಿಂದ ಉತ್ಪನ್ನವಾದ ಆತ್ಮಜ್ಞಾನವು ಪರಿಪಕ್ವವಾಗುವದಕ್ಕೆ ಬುದ್ಧಿವಿಶುದ್ಧತ್ವಾದಿ(ಚಿತ್ತಶುದ್ಧಿ ಇತ್ಯಾದಿ)ಗಳೂ (ಗೀ. ೧೮-೫೧) ಅಮಾನಿತ್ವಾದಿಗಳೂ (ಗೀ. ೧೩-೭) ಸಹಕಾರಿಕಾರಣಗಳು. ಈ ಜ್ಞಾನವು ಕ್ಷೇತ್ರಜ್ಞ (ಜೀವಾತ್ಮ)ನಾದ ನನ್ನ ಸ್ವರೂಪವೇ ಪರಮಾತ್ಮನು- ಎಂಬ ನಿಶ್ಚಯರೂಪವಾಗಿ ಇದೆ. ಕರ್ತೃತ್ವವೇ ಮುಂತಾದ ಕಾರಕಗಳು ಬೇರೆಬೇರೆ ಎಂಬ

ಭೇದಬುದ್ಧಿಯಿಂದಲೇ ನಡೆಯುವ ಸರ್ವಕರ್ಮಗಳಿಗೂ ಕಾರಣವಾದ ಅಜ್ಞಾನಕ್ಕೆ ಈ ಏಕತ್ವಜ್ಞಾನವು (ಕತ್ತಲಿಗೆ ಬೆಳಕಿನಂತೆ) ವಿರುದ್ಧವಾಗಿದೆ. ಆದ್ದರಿಂದ ಸರ್ವಕರ್ಮಸಂನ್ಯಾಸವೆಂಬಿದು ಪರಿಪಕ್ವವಾದ ಜ್ಞಾನವುಳ್ಳ ಆತ್ಮಜ್ಞಾನಿಗೆ ಸ್ವಾಭಾವಿಕವಾದುದು. ಹೆಚ್ಚಿನ ಜ್ಞಾನನಿಷ್ಠನಿಗೆ ಸ್ವಾಭಾವಿಕವಾದ ಸರ್ವಕರ್ಮಸಂನ್ಯಾಸವು ಜ್ಞಾನಪರಿಪಾಕಕ್ಕೆ ಸಾಧನವೂ ಆಗಬಲ್ಲದು. ಸರ್ವಕರ್ಮಸಂನ್ಯಾಸಪೂರ್ವಕವಾಗಿ ಸ್ವಾತ್ಮಾನುಭವನಿಶ್ಚಯರೂಪದಿಂದ ಕೊನೆಗಾಣುವದಿದೆಯಲ್ಲ-ಇದನ್ನೇ (ನಿಷ್ಠಾ ಜ್ಞಾನಸ್ಯ ಯಾ ಪರಾ । ಗೀತೆ. ೧೮-೫೦) ಹೆಚ್ಚಿನ ಜ್ಞಾನನಿಷ್ಠೆ-ಎಂದು ಕರೆದಿರುತ್ತದೆ. ಜ್ಞಾನವು ಯಾವ ಅಡ್ಡಿಯೂ ಇಲ್ಲದೆ ಸ್ಫುಟವಾಗಿ ಬೆಳಗುವದೇ ಪರಿಪಾಕವು.

ಈ ಜ್ಞಾನನಿಷ್ಠೆಯು ಆರ್ತಭಕ್ತಿಯೇ ಮುಂತಾದ ಮೂರು ಭಕ್ತಿಗಳಿಗಿಂತ ಹೆಚ್ಚಿನದಾದ ನಾಲ್ಕನೆಯ ಭಕ್ತಿಯೆಂದು ಹೇಳಿರುತ್ತದೆ. ಆ ಪರಭಕ್ತಿಯಿಂದ ಭಗವಂತನನ್ನು ನಿಜವಾಗಿ ಗುರುತಿಸಿ ಅರಿಯುತ್ತಾನೆ. ಅದು ಉಂಟಾದ ಕೂಡಲೇ ಕ್ಷೇತ್ರಜ್ಞನೂ ಪರಮಾತ್ಮನೂ ಬೇರೆ ಬೇರೆ ಎಂಬ ತಿಳಿವಳಿಕೆಯು ಸ್ವಲ್ಪವೂ ಉಳಿಯದಂತೆ ತೊಲಗುತ್ತದೆ. ಆದ್ದರಿಂದ "ಜ್ಞಾನನಿಷ್ಠೆ ಎಂಬ ಭಕ್ತಿಯಿಂದ (ನನ್ನನ್ನು) ಪರಮಾತ್ಮನನ್ನು ಗುರುತಿಸಿ ಅರಿಯುತ್ತಾನೆ" ಎಂದು ಹೇಳಿದೆ. (ಗೀ. ೧೮-೫೫)

9. ....ತತಶ್ಚ ಸರ್ವಕರ್ಮಸಂನ್ಯಾಸಸಹಿತಜ್ಞಾನನಿಷ್ಠಯಾ ಆತ್ಯನ್ತಿಕಃ ಸಂಸಾರೋಪರಮಃ ಇತಿ ಸಿದ್ಧಮ್ । ಅವಿದ್ಯಾತ್ಮಕತ್ವಾಚ್ಚ ದೇಹಾಭಿಮಾನಸ್ಯ ತನ್ನಿವೃತ್ತೌ ದೇಹಾನುಪಪತ್ತೇಃ ಸಂಸಾರಾನುಪಪತ್ತಿಃ । ದೇಹಾದಿಸಙ್ಘಾತೇ ಆತ್ಮಾಭಿಮಾನಃ ಅವಿದ್ಯಾತ್ಮಕಃ ॥ (ಗೀ. ಭಾ. ೧೮-೬೬ ಉಪಸಂಹಾರ ಚರ್ಚೆ)

ಆದ್ದರಿಂದಲೂ ಸರ್ವಕರ್ಮಸಂನ್ಯಾಸಸಹಿತವಾದ ಜ್ಞಾನನಿಷ್ಠೆಯಿಂದ ಸಂಸಾರವು ಅತ್ಯಂತವಾಗಿ ನಾಶವಾಗುತ್ತದೆ-ಎಂದು ಏರ್ಪಡುತ್ತದೆ. ದೇಹಾಭಿಮಾನವು ಅವಿದ್ಯೆ (ತಪ್ಪುತಿಳಿವಳಿಕೆ)ಯಿಂದ ಆಗಿರುವದರಿಂದಲೂ, ಅದು ಹೋದರೆ, ದೇಹವೇ ಇಲ್ಲವಾಗುವದರಿಂದ ಸಂಸಾರವು ಮುಂದೆ ಉಂಟಾಗಲಾರದು. ದೇಹಾದಿ ಸಂಘಾತದಲ್ಲಿ ತಾನೆಂಬ ಅಭಿಮಾನವು ಅವಿದ್ಯಾತ್ಮಕವಾಗಿರುತ್ತದೆ.

10. ಶರೀರೇ ಪತಿತೇ ಅಶರೀರತ್ವಂ ಸ್ಯಾತ್ ನ ಜೀವತಃ ಇತಿ ಚೇತ್ । ನ । ಸಶರೀರತ್ವಸ್ಯ ಮಿಥ್ಯಾಜ್ಞಾನನಿಮಿತ್ತತ್ವಾತ್ । ನ ಹಿ ಆತ್ಮನಃ ಶರೀರಾತ್ಮಾಭಿಮಾನಲಕ್ಷಣಂ ಮಿಥ್ಯಾಜ್ಞಾನಂ ಮುಕ್ತ್ವಾ ಅನ್ಯತಃ ಸಶರೀರತ್ವಂ ಶಕ್ಯಂ ಕಲ್ಪಯಿತುಮ್ ।

ನಿತ್ಯಮ್ ಅಶರೀರತ್ವಮ್ ಅಕರ್ಮನಿಮಿತ್ತತ್ವಾತ್ ಇತಿ ಅವೋ
ಚಾಮ ॥ (ಸೂ. ಭಾ. ೧-೧-೪)

(ಪೂರ್ವಪಕ್ಷಿ) : ಶರೀರವು ಬಿದ್ದುಹೋದ ಬಳಿಕ ಅಶರೀರತ್ವವಾದೀತು ಬದುಕಿರುವವನಿಗೆ ಆಗಲಾರದು.

(ಸಿದ್ಧಾಂತಿ) : ಹಾಗಲ್ಲ, ಏಕೆಂದರೆ, ಸಶರೀರತ್ವವು ತೋರುತ್ತಿರುವದು ಮಿಥ್ಯಾಜ್ಞಾನದ (ಭ್ರಾಂತಿಯ) ನಿಮಿತ್ತದಿಂದ. ಆತ್ಮನಿಗೆ ಶರೀರವೇ ತಾನೆಂಬ ಅಭಿಮಾನರೂಪವಾದ ಮಿಥ್ಯಾಜ್ಞಾನವನ್ನು ಬಿಟ್ಟರೆ ಮತ್ತೇತರಿಂದಲೂ ಸಶರೀರತ್ವವು ಬಂದಿದೆ ಎಂದು ಕಲ್ಪಿಸುವದಕ್ಕೆ ಆಗುವ ಹಾಗೆಯೇ ಇಲ್ಲ. ಅಶರೀರತ್ವವು ಯಾವ ಕರ್ಮದ ನಿಮಿತ್ತದಿಂದಲೂ ಆಗಿರುವದಿಲ್ಲವಾದ್ದರಿಂದ ಅದು ನಿತ್ಯವಾಗಿರುತ್ತದೆ-ಎಂದು ಹಿಂದೆಯೇ ಹೇಳಿರುತ್ತೇವೆ.

(ಪೂರ್ವಪಕ್ಷಿ) : ಆ ಆತ್ಮನು ಮಾಡಿದ ಧರ್ಮಾಧರ್ಮಗಳ ನಿಮಿತ್ತದಿಂದ ಸಶರೀರತ್ವವಾಗಿದೆ, ಎನ್ನಬಹುದಲ್ಲ!

(ಸಿದ್ಧಾಂತಿ) : ಕೂಡದು. ಏಕೆಂದರೆ, ಆತ್ಮನಿಗೆ ಶರೀರದ ಸಂಬಂಧವಿರುವದೆಂಬುದೇ ಸಿದ್ಧವಾಗಿಲ್ಲವಾದ್ದರಿಂದ, ಅವನು ಮಾಡಿದ ಧರ್ಮಾಧರ್ಮಗಳು ಎಂಬುದು ಸಿದ್ಧವಾಗುವದಿಲ್ಲ. ಆತ್ಮನಿಗೆ ಶರೀರವಿದೆಯೆಂದು ಸಿದ್ಧವಾದರೆ, ಧರ್ಮಾಧರ್ಮಗಳನ್ನು ಮಾಡುತ್ತಾನೆ ಎಂದು ಏರ್ಪಡುತ್ತದೆ. ಧರ್ಮಾಧರ್ಮಗಳನ್ನು ಮಾಡುತ್ತಾನೆಂದು ಸಿದ್ಧವಾದರೆ, ಅವುಗಳ ಫಲವಾಗಿ ಆತ್ಮನಿಗೆ ಶರೀರವು ಬಂದಿದೆ ಎಂದು ಏರ್ಪಡುತ್ತದೆ. ಈ ತರ್ಕದಲ್ಲಿ ಅನ್ಯೋನ್ಯಾಶ್ರಯದೋಷವು ಉಂಟಾಗುವದಾದ್ದರಿಂದ ಇದು ಸರಿಯಲ್ಲ. "ಹೀಗಾದರೂ ಅಡ್ಡಿಯಿಲ್ಲ, ದೇಹಧಾರಣವೂ ಧರ್ಮಾಧರ್ಮಗಳ ಆಚರಣೆಯೂ ಅನಾದಿಕಾಲದಿಂದ ನಡೆಯುತ್ತಲೇ ಬಂದಿದೆ" ಎಂದೇ ಕಲ್ಪಿಸಬಹುದೆಂದರೆ, ಇದು ಕೇವಲ ಅಂಧಪರಂಪರೆಯೇ ಆಗುವದು. (ಹುಟ್ಟುಕುರುಡರಲ್ಲಿ ಒಬ್ಬನಿಗೆ ಇನ್ನೊಬ್ಬನು ದಾರಿತೋರಿಸುವದೇ ಸಾಧ್ಯವಿಲ್ಲ.) ಇದಲ್ಲದೆ ಆತ್ಮನಿಗೆ ಕ್ರಿಯೆಯ ಸಂಬಂಧವೇ ಇಲ್ಲವಾದ್ದರಿಂದ, ಇವನು ಕರ್ತೃ ಎಂಬುದೂ ಹೊಂದುವದಿಲ್ಲ.

....ತಸ್ಮಾತ್ ಮಿಥ್ಯಾಪ್ರತ್ಯಯನಿಮಿತ್ತತ್ವಾತ್ ಸಶರೀರತ್ವಸ್ಯ
ಸಿದ್ಧಂ ಜೀವತೋಽಪಿ ವಿದುಷಃ ಅಶರೀರತ್ವಮ್ ॥
(ಸೂ. ಭಾ. ೧-೧-೪)

ಆದ್ದರಿಂದ ಸಶರೀರತ್ವವೆಂಬಿದು ಮಿಥ್ಯಾಪ್ರತ್ಯಯದ ನಿಮಿತ್ತದಿಂದಾಗಿರುವದರಿಂದ ಜ್ಞಾನಿಗೆ ಬದುಕಿರುವಾಗಲೂ ಶರೀರವಿಲ್ಲವೆಂದು ಸಿದ್ಧವಾಯಿತು.

ಪ್ರಿಯೆ ಮೈತ್ರೇಯಿ! ಹೀಗೆ ಗೃಹಸ್ಥಾಶ್ರಮದಲ್ಲಿದ್ದರೂ ಬದುಕಿರುವಾಗಲೇ ಅಶರೀರಿಯಾಗಿರುವ ಬ್ರಹ್ಮಜ್ಞಾನಿಯಲ್ಲಿ, ಅವಿದ್ಯಾಕಾಮಕರ್ಮಗಳ ಸಂಸಾರವು ನಾಶವಾಗಿರುವದರಿಂದ, ಅವನು ಕಾಮಕರ್ಮಗಳಿಗೆ ಕಾರಣವಾದ ಗೃಹಸ್ಥಾಶ್ರಮವನ್ನು ಪರಿತ್ಯಜಿಸಿ, ಸಂನ್ಯಾಸವನ್ನು ಸ್ವೀಕರಿಸುವದೇ ಸ್ವಾಭಾವಿಕವಾಗಿದೆ. ಆದ್ದರಿಂದ, ಈ ರೀತಿಯಲ್ಲಿ ವಿದ್ವತ್‌ಸಂನ್ಯಾಸವನ್ನು ಸ್ವೀಕರಿಸುವದಕ್ಕೆ ಮುಂಚೆ, ನಿಮ್ಮ ಪ್ರಾರ್ಥನೆಯಂತೆ, ಅಮೃತತ್ವಕ್ಕೆ ಸಾಧನವಾದ ಬ್ರಹ್ಮವಿದ್ಯೆಯನ್ನು ಈಗಲೇ ನಿಮಗೆ ಉಪದೇಶಿಸಿ, ಅನಂತರ ನಿಮ್ಮ ಅನುಮತಿಯಿಂದ, ಗೃಹವನ್ನು ಬಿಟ್ಟು ಹೊರಡುತ್ತೇನೆ.

### 11. ಪ್ರೇಮ (ಪ್ರಿಯ) ಸಂಸೂಚಿತವಾದ ಆತ್ಮಬೋಧಪ್ರಕ್ರಿಯೆ

ಪ್ರಿಯೆ, ಮೈತ್ರೇಯಿ! ಸಾಮಾನ್ಯವಾಗಿ, ಪುರುಷರು ಬುದ್ಧಿಪ್ರಧಾನರಾಗಿಯೂ ಆದ್ದರಿಂದಲೇ ವಿಚಾರಪ್ರಧಾನರಾಗಿಯೂ ಇರುವಂತೆ ಸ್ತ್ರೀಯರು ಶ್ರದ್ಧಾಪ್ರಧಾನರೂ ಭಾವನಾಪ್ರಧಾನರೂ ಪ್ರೇಮಪ್ರಧಾನರೂ ಆಗಿದ್ದಾರೆ. ಆದ್ದರಿಂದ ಪ್ರೇಮಸ್ವಭಾವದ ನೀವು, ನಿಮ್ಮಲ್ಲಿ ಸ್ವಭಾವಸಿದ್ಧವಾಗಿರುವ ಪ್ರೇಮದಿಂದಲೇ ಆತ್ಮನನ್ನು ಶೋಧಿಸಿ ಕಂಡುಕೊಳ್ಳುವ ಉಪಾಯವನ್ನು ತಿಳಿಸುತ್ತೇನೆ. ಪ್ರಭುಸಂಮಿತ, ಮಿತ್ರಸಂಮಿತ, ಕಾಂತಾಸಂಮಿತ-ಮೊದಲಾದ ಬೋಧಪ್ರಕಾರಗಳಲ್ಲಿ ಪ್ರೇಮಸಂಸೂಚಿತವಾದ ಈ ಕಾಂತಾಸಂಮಿತಕ್ರಮವೇ ಅತ್ಯಂತ ಪ್ರಿಯವೂ ಮಧುರವೂ ಸುಲಭವೂ ಆದುದು. ತನ್ನ ನಾಭಿಯಲ್ಲಿಯೇ ಕಸ್ತೂರಿ ಇರುವದನ್ನರಿಯದ ಕಸ್ತೂರಿಮೃಗವು ತನ್ನ ಮೂಗಿಗೆ ಬರುತ್ತಿರುವ ಕಸ್ತೂರಿಯ ಸುಗಂಧವು ಹೊರಗಿನ ಬೇರೆಬೇರೆಯ ವಸ್ತುಗಳಲ್ಲಿರಬಹುದೆಂದು ಭ್ರಮಿಸಿ, ಅವುಗಳ ಬೆನ್ನುಹತ್ತಿ ಅಂಡಲೆದು ವ್ಯರ್ಥವಾಗಿ ಬಳಲುತ್ತದೆ.

ಬಟ್ಟಲಲ್ಲಿರುವ ತುಪ್ಪವನ್ನು ನೆಕ್ಕಿ ಬರಿದುಮಾಡಿರುವ ಬೆಕ್ಕು ತನ್ನ ಮೂತಿಗೇ ಹತ್ತಿರುವ ತುಪ್ಪವನ್ನು ಕಾಣದೆ, ಆ ತುಪ್ಪದ ಸುವಾಸನೆಗೆ ಮರುಳಾಗಿ ಅದು ಇನ್ನೂ ಬೇರೆಬೇರೆಯ ಪಾತ್ರೆಗಳಲ್ಲಿರಬಹುದೆಂದು ನೆಕ್ಕುತ್ತಾ ಹೋಗುತ್ತದೆ. ರಕ್ತದ ರುಚಿಗಾಗಿ ಒಣಮೂಳೆಯೊಂದನ್ನು ಕಡಿಯುತ್ತಿರುವ ನಾಯಿಗೆ ತಾನು ಸವಿಯುತ್ತಿರುವ ರಕ್ತವು, ಒಡೆದೊಡೆದು ಗಾಯಗೊಂಡ ತನ್ನ ಬಾಯಿ-ನಾಲಿಗೆಗಳಿಂದಲೇ ಸ್ರವಿಸುತ್ತಿದೆ ಎಂಬಿದು ತಿಳಿಯದು. ಸಂಸಾರದಲ್ಲಿ ಗೊತ್ತುಗುರಿಯಿಲ್ಲದೆ ಹರಿದಾಡುತ್ತಿರುವ ನಮ್ಮ ಕುರುಡುಪ್ರೇಮದ ಹಣೆಯಬರಹವೂ ಇದೇ ಆಗಿದೆ. ನಮ್ಮ ಒಳಗಿನಿಂದ ಎಡೆಬಿಡದೆ ಹೊರಚಿಮ್ಮಿ ಹರಿಯುತ್ತಿರುವ ಪ್ರೇಮದ ಮೂಲವು ಯಾವದೆಂದು ನಮಗೆ ತಿಳಿಯದು. ಅಲ್ಲದೆ, ನಮ್ಮಿಂದ ಬೇರೆಯಾದ ಇನ್ನೊಂದು ವಸ್ತುವನ್ನು ಅಥವಾ ವ್ಯಕ್ತಿಯನ್ನು ನಾವೇಕೆ ಪ್ರೇಮಿಸುತ್ತೇವೆ-ಎಂಬಿದನ್ನೂ ವಿಚಾರಿಸುವದಿಲ್ಲ. ಗಂಡನನ್ನು ಪ್ರೀತಿಸುವ ಹೆಂಡತಿ,

ತನ್ನ ಪ್ರೀತಿಯು ಗಂಡನಿಗಾಗಿ, ಗಂಡನ ಸುಖಕ್ಕಾಗಿ ಎಂದು ತಿಳಿಯುತ್ತಾಳೆ ಅಥವಾ ಹೇಳಿಕೊಳ್ಳುತ್ತಾಳೆ. ಇದು ನಿಜವಲ್ಲ. ಇದು ಆತ್ಮವಂಚನೆ. ಏಕೆಂದರೆ ತನ್ನ ಇಚ್ಛೆಗೆ ವಿರುದ್ಧವಾಗಿ ಗಂಡನು ನಡೆದುಕೊಂಡು, ತನಗೆ ದುಃಖವನ್ನೇ ಕೊಡುವವದಾದರೆ, ಯಾವ ಹೆಂಡತಿಯೂ ತನ್ನ ಗಂಡನನ್ನು ಪ್ರೀತಿಸುವದಿಲ್ಲ. ತನ್ನ ಸುಖಕ್ಕಾಗಿಯೇ ಹೆಂಡತಿಯು ಗಂಡನನ್ನು ಪ್ರೀತಿಸುವದೇ ಹೊರತು ಗಂಡನ ಸುಖಕ್ಕಾಗಿ ಅಲ್ಲ. ತನ್ನ ಸುಖದಲ್ಲಿ ಗಂಡನ ಸುಖವೂ ಸೇರಿಕೊಂಡಿದ್ದರೂ ಹೆಂಡತಿಗೆ ಗಂಡನಿಂದಾಗುವ ತನ್ನ ಸುಖವೇ ಮುಖ್ಯ. ಒಂದು ವೇಳೆ ತನ್ನಿಂದ ಗಂಡನಿಗೆ ಕಷ್ಟವಾಗುವದೆಂದು ತಿಳಿದರೂ ಆ ಗಂಡನಿಂದ ತನಗೆ ಸುಖವೇ ಆಗ ಬೇಕೆಂದು ಹೆಂಡತಿಯು ಬಯಸುತ್ತಾಳೆ. ಗಂಡನ ಸುಖಕ್ಕಾಗಿಯೇ ಹೆಂಡತಿಯು ಪ್ರೀತಿಸುತ್ತಿದ್ದರೆ, ತನ್ನ ಗಂಡನು ತನಗೆ ಚಿತ್ರಹಿಂಸೆಯನ್ನು ಕೊಟ್ಟರೂ ಹೆಂಡತಿಯು ಅವನನ್ನು ಪ್ರೀತಿಸುತ್ತಲೇ ಇರಬೇಕಾಗಿತ್ತು. ಆದರೆ, ಇದು ಯಾವ ಹೆಂಡತಿಗೂ ಸಾಧ್ಯವಿಲ್ಲ. ಇದರಿಂದ ಪ್ರೀತಿಗೆ ತನ್ನ ಸುಖವು ಮುಖ್ಯವೇ ಹೊರತು ಇನ್ನೊಬ್ಬರ ಸುಖವಲ್ಲ– ಎಂದು ನಿಶ್ಚಯವಾಗುತ್ತದೆ. ಗಂಡನಿಗೆ ತನ್ನ ಹೆಂಡತಿಯಲ್ಲಿರುವ ಪ್ರೀತಿಯ ಸ್ವಭಾವವೂ ಹೀಗೆಯೇ. ಗಂಡನು ತನ್ನ ಸುಖಕ್ಕಾಗಿ ಹೆಂಡತಿಯನ್ನು ಪ್ರೀತಿಸುವದೇ ಹೊರತು, ಹೆಂಡತಿಯ ಸುಖಕ್ಕಾಗಿ ಅಲ್ಲ. ಹೀಗೆಯೇ ಪುತ್ರ–ವಿತ್ತಾದಿಗಳ ಮೇಲೆ ನಮಗಿರುವ ಪ್ರೇಮವೂ ನಮ್ಮ ಸುಖಕ್ಕಾಗಿಯೇ ಹೊರತು ಅವುಗಳ ಸುಖಕ್ಕಾಗಿ ಅಲ್ಲ. ಇದರಂತೆ ಬ್ರಾಹ್ಮಣಜಾತಿಯ ಮೇಲೂ ಕ್ಷತ್ರಿಯಜಾತಿಯಮೇಲೂ ಲೋಕಗಳಮೇಲೂ ದೇವತೆಗಳಮೇಲೂ ವೇದಗಳಮೇಲೂ ಭೂತಗಳಮೇಲೂ ನಮಗಿರುವ ಪ್ರೀತಿಯು ನಮ್ಮ ಸುಖಕ್ಕಾಗಿಯೇ ಹೊರತು ಅವುಗಳ ಪ್ರಯೋಜನಕ್ಕಾಗಿ ಅಲ್ಲ. ಹೀಗೆ ಯಾವ ವಸ್ತುವನ್ನಾಗಲೀ ನಾವು ಪ್ರೀತಿಸುವದು ನಮ್ಮ ಸುಖಕ್ಕಾಗಿಯೇ ಹೊರತು ಅದರ ಏಳಿಗೆಗಾಗಿ ಅಲ್ಲ. ಈ ವಿವೇಚನೆಯಿಂದ ಏನು ಸಿದ್ಧವಾಗುವದೆಂದರೆ : ಸಮಸ್ತ ಜಗತ್ತಿಗಿಂತಲೂ ತನಗೆ ತಾನೇ, ತನ್ನ ಆತ್ಮನೇ ಅತಿ ಹೆಚ್ಚು ಪ್ರಿಯನು ಅಥವಾ ಅತ್ಯಂತ ಪ್ರಿಯನು. ಆದ್ದರಿಂದ ಮಿಕ್ಕ ಎಲ್ಲವುಗಳ ಮೇಲಿನ ಅಭಿಮಾನವನ್ನೂ ಬಿಟ್ಟು ನಾವು ದೃಢವಾದ ವೈರಾಗ್ಯದಿಂದ, ಎಲೌ ಮೈತ್ರೇಯಿ, ನಮ್ಮ ಆತ್ಮನನ್ನೇ ಕಂಡುಕೊಳ್ಳಬೇಕು, ಇದಕ್ಕಾಗಿ ಬಲ್ಲವರಿಂದ ಆತ್ಮವಿಚಾರವನ್ನು ಶ್ರವಣ ಮಾಡಬೇಕು. ಶಾಸ್ತ್ರಾಚಾರ್ಯರಿಂದ ಶ್ರವಣಮಾಡಿದ ವಿಷಯವನ್ನೇ ಅನುಭವಾನುಸಾರಿಯಾದ ಯುಕ್ತಿಯಿಂದ ಮನನಮಾಡಿ (ವಿಚಾರಮಾಡಿ) ಆ ತತ್ತ್ವವನ್ನೇ (ಇದು ಹೀಗೆಯೇ ಹೊರತು ಮತ್ತೊಂದು ಪ್ರಕಾರವಲ್ಲ– ಎಂಬ) ನಿಶ್ಚಯಜ್ಞಾನದಿಂದ ಧ್ಯಾನಮಾಡಿ ಅನುಭವದಲ್ಲಿ ಅಳವಡಿಸಿಕೊಳ್ಳಬೇಕು' ಹೀಗೆ ಶ್ರವಣ, ಮನನ, ನಿದಿಧ್ಯಾಸನಗಳಿಂದ ಆತ್ಮನನ್ನು ಚೆನ್ನಾಗಿ ಅರಿತದ್ದಾದರೆ (ಆತ್ಮನ ಸಮ್ಯಗ್‌ದರ್ಶನವಾದರೆ) ಇದೆಲ್ಲವೂ ಅರಿಯಲ್ಪಟ್ಟದ್ದಾಗುವದು. ಹಗ್ಗ

ದಲ್ಲಿ ತೋರುವ ಹಾವು, ಬರಿಯ: ಹುಸಿತೋರಿಕೆ ಎಂಬ ಅರಿವಿನಿಂದ ಹೇಗೆ ಹಗ್ಗವೊಂದೇ ಸತ್ಯವೆಂಬ ಜ್ಞಾನವಾಗುವದೋ ಹಾಗೆ ಆತ್ಮನಲ್ಲಿ ಅವಿದ್ಯಾಕಲ್ಪಿತವಾದ ನಾಮರೂಪಕರ್ಮವೆಂಬ ಜಗತ್ತು ಕೇವಲ ಹುಸಿತೋರಿಕೆ ಎಂಬ ಅರಿವಿನಿಂದ ಅದ್ವಿತೀಯನಾದ ಆತ್ಮನೊಬ್ಬನೇ ಸತ್ಯನೆಂಬ ಜ್ಞಾನವಾಗುವದು.

ಈ ಬ್ರಹ್ಮವಿದ್ಯೆಯು ತನ್ನ ಸಹಾಯಕ್ಕಾಗಿ ಬೇರೆ ಸಾಧನೆಗಳನ್ನು ಅಪೇಕ್ಷಿಸುವದಿಲ್ಲ. ಅದು ಸ್ವತಂತ್ರವಾಗಿಯೂ ನಿರಪೇಕ್ಷವಾಗಿಯೂ ಫಲದಾಯಕವಾಗುತ್ತದೆ, ಬ್ರಹ್ಮಾತ್ಮವನ್ನು ತಿಳಿಯಬೇಕೆಂಬ ಉತ್ಕಟವಾದ ಇಚ್ಛೆ ಒಂದೇ ಮುಮುಕ್ಷುವಿಗೆ ಬೇಕಾದುದು. ಮೈತ್ರೇಯಿ, ನಿನಗೆ ವೇದಾಧಿಕಾರ, ಕರ್ಮಾಧಿಕಾರಾದಿಗಳು ಇಲ್ಲವಾದರೂ ನೀನು ಉತ್ತಮ ಜಿಜ್ಞಾಸುವೂ ಮುಮುಕ್ಷುವೂ ಆಗಿರುವದರಿಂದ ಬ್ರಹ್ಮವಿದ್ಯೆಗೆ ನೀನು ಉತ್ತಮಾಧಿಕಾರಿ ಆಗಿದ್ದೀಯೆ. ಆದ್ದರಿಂದ ನಿನಗೆ ಪ್ರೀತಿಯಿಂದ ಉಪದೇಶಿಸುತ್ತೇವೆ.

> ತಸ್ಮಾತ್ ನ ಸಾಧನಾನ್ತರಸಹಿತಾ ಬ್ರಹ್ಮವಿದ್ಯಾ ಪುರುಷಾರ್ಥಸಾಧನಮ್ ।। ಸರ್ವವಿರೋಧಾತ್ । ಸಾಧನನಿರಪೇಕ್ಷೈವ ಪುರುಷಾರ್ಥಸಾಧನಮ್ ।। (ಬೃ. ೨-೪-೧)

ಮೈತ್ರೇಯಿ : ನಾವು ಯಾವದೊಂದನ್ನು ಅರಿತರೆ, ಅದೊಂದರ ಅರಿವು ನಮಗಾಗುವದೇ ಹೊರತು, ಇನ್ನೊಂದರ ಅರಿವು ನಮಗಾಗುವದು ಸಾಧ್ಯವಿಲ್ಲ. ಆದ್ದರಿಂದ, ಆತ್ಮ ಒಂದನ್ನೇ ಅರಿತಮಾತ್ರಕ್ಕೆ ಆತ್ಮನಲ್ಲದ ಮಿಕ್ಕ ಎಲ್ಲದರ ಅರಿವೂ ನಮಗಾಗುವದು ಹೇಗೆ ಸಾಧ್ಯ ?

ಯಾಜ್ಞವಲ್ಕ್ಯ : ಆತ್ಮ ಒಂದೇ ನಿಜವಾಗಿರುವದರಿಂದಲೂ ಇದನ್ನು ತಿಳಿಯದಿರುವಾಗ ಆತ್ಮವೇ ಬೇರೆ ಬೇರೆ ಅನೇಕ ಅನಾತ್ಮರೂಪ (ಅಹಂಕಾರಾದಿ ದೇಹಾಂತವಾದ) ಜಗತ್ತಾಗಿ ತೋರುವದರಿಂದಲೂ ಆತ್ಮ ಒಂದನ್ನು ಅರಿತರೆ ಎಲ್ಲವನ್ನೂ ಅರಿತಂತೆ ಆಗುತ್ತದೆ. ಇದರಲ್ಲಿ ಎಲ್ಲ ಎನ್ನುವದು ನಿಜವಲ್ಲ, ಅದು ಅವಿದ್ಯಾಕಲ್ಪಿತವಾದ ಹುಸಿತೋರಿಕೆ. ಪ್ರತ್ಯಗಾತ್ಮನೇ ಪರಮಾತ್ಮ. ಪರಮಾತ್ಮ ಎಂದರೆ, ದೇಹಾತ್ಮ, ಇಂದ್ರಿಯಾತ್ಮ, ಬುದ್ಧ್ಯಾತ್ಮ ಮೊದಲಾದ ಮಿಥ್ಯಾತ್ಮಗಳಲ್ಲದ ನಿಜವಾದ ಆತ್ಮ. ಅಜ್ಞಾತನಾದ ಪರಮಾತ್ಮನೇ ಪ್ರಪಂಚವಾಗಿ ತೋರುತ್ತಿದ್ದಾನೆ. ನಸುಗತ್ತಲೆಯಲ್ಲಿ (ನಸುಬೆಳಕಿನಲ್ಲಿ) ಬಿದ್ದಿರುವ ಹಗ್ಗವೇ ಒಮ್ಮೆ ಹಾವಾಗಿಯೂ, ಇನ್ನೊಮ್ಮೆ ಹೂವಿನ ಹಾರವಾಗಿಯೂ ಮತ್ತೊಮ್ಮೆ ನೀರಿನ ಹರಿಯಾಗಿಯೂ ಅಥವಾ ನೆಲದ ಬಿರುಕಾಗಿಯೂ ಕಾಣುವದುಂಟು. ಹಾವು ಮೊದಲಾದವುಗಳು ಇಲ್ಲವೇ ಇಲ್ಲ, ಅವು ಎಷ್ಟು ಮಾತ್ರಕ್ಕೂ ಇಲ್ಲ, ಅವು ತೋರುತ್ತಿರುವಾಗಲೂ ನಿಜವಾಗಿ ಇಲ್ಲವೇ ಇಲ್ಲ. ನಿಜವಾಗಿರುವ ಹಗ್ಗವು ಸ್ಪಷ್ಟವಾಗಿ ಕಾಣುವಷ್ಟು, ಅಲ್ಲಿ ಬೆಳಕಿಲ್ಲದಿರುವದೇ ಆ ಹುಸಿತೋರಿಕೆಗಳಿಗೆ ಕಾರಣ.

ಈ ದೃಷ್ಟಾಂತದಲ್ಲಿರುವ ಹಗ್ಗವೇ ನಮ್ಮೆಲ್ಲರ ಆತ್ಮ, ಹಗ್ಗವು ಕಾಣದಂತೆ ಮುಸುಕಿರುವ ನಸುಗತ್ತಲೆಯೇ ಅಜ್ಞಾನ. ಆ ಕತ್ತಲೆಯೇ ದಟ್ಟವಾಗಿದ್ದಿದ್ದರೆ ನಮಗೆ ಹಗ್ಗವೇ ಕಾಣುತ್ತಿರಲಿಲ್ಲ, ಅದರಿಂದ ಹಾವೂ ಕಾಣುತ್ತಿರಲಿಲ್ಲ. ಆದರೆ ಅಲ್ಲಿರುವ ನಸುಬೆಳಕು ನಮ್ಮ ಕಣ್ಣಿಗೆ ನಸುಗತ್ತಲೆಯಾಗಿಯೂ ಕಾಣುತ್ತಿರುವದರಿಂದ ಒಂದು ಇನ್ನೊಂದಾಗಿ ತೋರುವಂತೆ ಹಗ್ಗವು ಹಾವಾಗಿ ತೋರುತ್ತದೆ. ಇದರಿಂದ ನಾವು ಹಗ್ಗವನ್ನು ತಿಳಿಯಲಿಲ್ಲ ಮಾತ್ರವಲ್ಲ, ಅದನ್ನು ತಪ್ಪಾಗಿ ಹಾವೆಂದು ತಿಳಿಯುತ್ತಿದ್ದೇವೆ. ಇದು ಅಜ್ಞಾನ ಮಾತ್ರವಲ್ಲ, ಇದು ಮಿಥ್ಯಾಜ್ಞಾನ, ಮಿಥ್ಯಾಪ್ರತ್ಯಯ, ಅಥವಾ ಅಧ್ಯಾಸ, ತಪ್ಪುತಿಳಿವಳಿಕೆ. ತಪ್ಪು ತಿಳಿವಳಿಕೆಯಿಂದ ತೋರುವ ಹುಸಿಹಾವಿನಂತೆ ನಾಮ, ರೂಪ, ಕರ್ಮಗಳಾಗಿ ವಿಂಗಡವಾದ ಅಥವಾ ಕ್ರಿಯಾಕಾರಕಫಲರೂಪವಾದ ಜಗತ್ತು ಇದೆ. ಆದ್ದರಿಂದ, ಆತ್ಮನನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ ಆಗುತ್ತದೆ–ಎಂದರೆ, ಎಲ್ಲ ಎನ್ನುವದು ಇಲ್ಲವೇ ಇಲ್ಲ, ಇರುವದು ಆತ್ಮ ಒಂದೇ ಎಂಬ ನಿಶ್ಚಯವಾಗುತ್ತದೆ- ಎಂದೇ ಅರ್ಥ. ಗಾಢವಾದ ಕತ್ತಲೆಯಲ್ಲಿ ಹಗ್ಗವು ಪೂರಾ ಕಾಣದಿದ್ದರೆ ಅದರಿಂದ ಯಾವ ಬಾಧಕವೂ ಇಲ್ಲ, ಆದರೆ ತೆಳುವಾದ ಕತ್ತಲೆಯಲ್ಲಿ ಹಗ್ಗವು ಹಾವಾಗಿ ತೋರುವದೇ ಭಯಕಂಪಾದಿಗಳಿಗೆ ಕಾರಣವಾಗುತ್ತದೆ. ಹೀಗೆ, ಗಾಢನಿದ್ರೆಯಲ್ಲಿರುವಂತೆ ಆತ್ಮಜ್ಞಾನವೇ ಇಲ್ಲದಿದ್ದಿದ್ದರೆ ಬಾಧಕವೇನೂ ಇರುತ್ತಿರಲಿಲ್ಲ. ಆದರೆ, ಮಿಥ್ಯಾಜ್ಞಾನನಿಮಿತ್ತದಿಂದ ಎಚ್ಚರಕನಸುಗಳ ಹುಸಿಜಗತ್ತು ತೋರುತ್ತಿರುವದೇ ಭಯ–ದುಃಖಗಳ ಸರ್ವಾನರ್ಥಗಳಿಗೂ ಕಾರಣವಾಗಿದೆ. ಆದ್ದರಿಂದ ಆತ್ಮಜ್ಞಾನದಿಂದಲೇ ಸರ್ವಾನರ್ಥಗಳ ನಿವೃತ್ತಿಯಾಗುತ್ತದೆ. ಇದಕ್ಕೆ ಶಾಸ್ತ್ರ ಗುರುಗಳ ಉಪದೇಶದ ಶ್ರವಣ-ಮನನ–ನಿದಿಧ್ಯಾಸನವೇ ನೇರವಾದ ಸಾಧನ. ಮನನ–ನಿದಿಧ್ಯಾಸನಗಳ ಸಾಧನೆಯಿಂದ ಪರಿಪುಷ್ಟಿಗೊಳ್ಳದೆ ಶ್ರವಣಮಾತ್ರದಿಂದ ಜ್ಞಾನವಾಗುವದಿಲ್ಲ. ಈ ಮೂರೂ ಕೂಡಿದಾಗಲೇ ಆತ್ಮದರ್ಶನವಾಗುವದು. ಉತ್ತಮಾಧಿಕಾರಿಗೆ ಶ್ರವಣಸಮಕಾಲದಲ್ಲಿ ಆತ್ಮಾನುಭವವು ಆಗುವಾಗ ಮನನ ನಿದಿಧ್ಯಾಸನಗಳು ಸೂಕ್ಷ್ಮವಾಗಿಯೂ ಗೂಢವಾಗಿಯೂ ಸೇರಿಕೊಂಡೇ ಇರುತ್ತವೆ.

ದ್ವೈತಪ್ರಪಂಚದ ಯಾವದೇ ವಸ್ತುವಾಗಲಿ ಆತ್ಮನಿಗಿಂತ ಬೇರೆಯಿಲ್ಲ ; ಆತ್ಮನನ್ನು ಬಿಟ್ಟು ಬೇರೆ ಯಾವದಕ್ಕೂ ಸ್ವತಂತ್ರವಾದ ಇರುವಿಕೆ (ಸತ್ತೆ) ಇಲ್ಲ. ಅರಿಯದ ಆತ್ಮನನ್ನೇ ನಾವು ಹಾಗೆ ತಪ್ಪಾಗಿ ತಿಳಿಯುತ್ತಿದ್ದೇವೆ. ಬ್ರಾಹ್ಮಣಜಾತಿಯಾಗಲಿ, ಕ್ಷತ್ರಿಯಜಾತಿಯಾಗಲಿ, ಲೋಕಗಳಾಗಲಿ, ದೇವತೆಗಳಾಗಲಿ, ವೇದಗಳಾಗಲಿ, ಭೂತಗಳಾಗಲಿ, ಯಾವದೇ ಆಗಲಿ, ಆತ್ಮನಿಗಿಂತ ಬೇರೆಯಿಲ್ಲ. ಯಾವದನ್ನಾಗಲೀ ಆನಂದಸ್ವರೂಪನಾದ ಆತ್ಮನಿಂದ ಬೇರೆಯಾದ ದುಃಖರೂಪವಾದ ಅನಾತ್ಮವೆಂದು ತಿಳಿದರೆ ಆ ತಪ್ಪಿಗಾಗಿ, ಹಾಗೆ ತಿಳಿದವನೇ ದುಃಖಿಯಾಗಿ, ಕೈವಲ್ಯದಿಂದ ವಂಚಿತನಾಗುತ್ತಾನೆ.

## ಆತ್ಮಾನನ್ಯತ್ವಪ್ರಕ್ರಿಯೆ

**12. ಯಸ್ಮಾತ್ ಆತ್ಮನೋ ಜಾಯತೇ ಆತ್ಮನ್ಯೇವ ಲೀಯತೇ ಆತ್ಮಮಯಂ ! ಚ ಸ್ಥಿತಿಕಾಲೇ ಆತ್ಮವ್ಯತಿರೇಕೇಣ ಅಗ್ರಹಣಾತ್ ಆತ್ಮೈವ ಸರ್ವಮ್ ॥** (ಬೃ. ಭಾ. ೨-೪-೬)

ಎಲ್ಲವೂ ಆತ್ಮನಿಂದ ಹುಟ್ಟುತ್ತವೆ ; ಆತ್ಮನಲ್ಲಿಯೇ ಅಡಗುತ್ತವೆ ; ಮತ್ತು ಸ್ಥಿತಿಕಾಲದಲ್ಲಿ ಆತ್ಮಮಯವಾಗಿಯೇ ಇರುತ್ತವೆ. ಯಾವದೇ ಆಗಲೀ ಆತ್ಮನನ್ನು ಬಿಟ್ಟು ತಿಳಿಯಬರುವದಿಲ್ಲವಾದ್ದರಿಂದ ಈ ಎಲ್ಲವೂ ಆತ್ಮನೇ ಆಗಿವೆ. 'ಇದಂ ಸರ್ವಂ ಯದಯಮಾತ್ಮಾ' (೨-೪-೬) ಆದ್ದರಿಂದ, ಮೈತ್ರೇಯಿ, ಈ ಆತ್ಮನನ್ನೇ ಶ್ರವಣ, ಮನನ, ನಿದಿಧ್ಯಾಸನಗಳಿಂದ ಕಂಡುಕೊಳ್ಳಬೇಕು.

**ಮೈತ್ರೇಯಿ :** ಇನ್ನು, ಈಗ ಇದೆಲ್ಲವೂ ಚಿತ್‌ಸ್ವರೂಪವಾದ ಆತ್ಮನೇ ಎಂದು ತಿಳಿದುಕೊಳ್ಳುವದು ಹೇಗೆ ?

**ಯಾಜ್ಞವಲ್ಕ್ಯ :** ಸ್ಥಿತಿಕಾಲದಲ್ಲಿ ಅರಿವಿನ ಸ್ವರೂಪವಾದ ಆತ್ಮಕ್ಕಿಂತ ಬೇರೆ ಸ್ವತಂತ್ರವಾಗಿ ಯಾವದೂ ಇಲ್ಲವೆಂಬುದಕ್ಕೆ ದೃಷ್ಟಾಂತಗಳನ್ನು ಕೊಡಬಹುದು.

ನಗಾರಿಯನ್ನು ಬಾರಿಸುತ್ತಿರುವಾಗ ನಮಗೆ ಕೇಳಿಬರುವ ನಗಾರಿಯ ಶಬ್ದವಿಶೇಷಗಳು, (ಈ ಬಗೆಬಗೆಯ ಶಬ್ದಗಳೆಲ್ಲಾ ಒಂದು ನಗಾರಿಯ ಶಬ್ದವಿಶೇಷಗಳೇ ಎಂಬ) ನಗಾರಿಯ ಶಬ್ದಸಾಮಾನ್ಯವನ್ನು ಬಿಟ್ಟು ಬೇರೆ ಸ್ವತಂತ್ರವಾಗಿಲ್ಲ. ಶಂಖವನ್ನು ಊದುವಾಗ ಕೇಳಿಬರುವ ಶಂಖದ ಶಬ್ದವಿಶೇಷಗಳು ಶಂಖದ ಶಬ್ದವೆಂಬ ಸಾಮಾನ್ಯದಿಂದ ಬೇರೆ ಇರುವದಿಲ್ಲ. ವೀಣಾವಾದನದಿಂದ ಉದಿಸುವ ವೀಣಾನಾದವಿಶೇಷಗಳೂ, (ಎಲ್ಲವೂ) ವೀಣಾನಾದವೆಂಬ ಸಾಮಾನ್ಯದಿಂದ ಬೇರೆಯಾಗಿರುವದಿಲ್ಲ. ಆದರೆ, ನಗಾರಿಯ ಶಬ್ದವೂ ಶಂಖಧ್ವಾನವೂ ವೀಣಾನಾದವೂ ಒಂದರಿಂದ ಇನ್ನೊಂದು ಬೇರೆಬೇರೆಯಾದರೂ ಅವೆಲ್ಲವೂ ಒಂದು ಶಬ್ದವೇ ಎಂಬ ಶಬ್ದವಿಷಯದ ಮಹಾಸಾಮಾನ್ಯದಿಂದ ಯಾವದೂ ಬೇರೆಯಿಲ್ಲ. ಶ್ರೋತ್ರೇಂದ್ರಿಯಕ್ಕೆ ವಿಷಯವಾದ ಕೇವಲ ಶಬ್ದವೆಂಬ, ಶಬ್ದತ್ವವೆಂಬ, ಮಹಾಸಾಮಾನ್ಯದ ರೂಪಾಂತರಗಳೇ (ವಿಷಯಗಳೇ) ಮಿಕ್ಕೆಲ್ಲ ಶಬ್ದಸಾಮಾನ್ಯವಿಶೇಷಗಳೂ ಆಗಿವೆ.

ಇದರಿಂದ ತಿಳಿಯುವದೇನೆಂದರೆ : ಎಚ್ಚರ-ಕನಸುಗಳಲ್ಲಿ ನಮ್ಮ ಅರಿವಿಗೆ ವಿಷಯವಾಗಿ ತೋರುವ ಯಾವ ವಸ್ತುವೂ ಅರಿವಿನಿಂದ ಬೇರೆ ಸ್ವತಂತ್ರವಾಗಿ ಇಲ್ಲ. ಜ್ಞಾತೃವಿಗೆ ಅಧೀನವಾಗಿ ಅಂತಃಕರಣದಲ್ಲಿ ಮಿಂಚುವ ಜ್ಞಾನವೆಂಬುವ ವೃತ್ತಿಗಳಿಗೆ ವಿಷಯವಾಗಿರುವ ಜ್ಞೇಯಗಳು ಅನೇಕವಾಗಿವೆ. ಆದ್ದರಿಂದ, ಜ್ಞೇಯದಲ್ಲಿರುವ ವಿಶೇಷಗಳು, ಅವುಗಳಲ್ಲೆಲ್ಲ ವ್ಯಾಪಿಸಿ ಅವೆಲ್ಲವನ್ನೂ ಬೆಳಗು

ತ್ತಿರುವ ಜ್ಞಾನಸಾಮಾನ್ಯದಿಂದ ಬೇರೆ ಇಲ್ಲ. ಜ್ಞೇಯತ್ವವೆಂಬ ಸಾಮಾನ್ಯದಲ್ಲಿ ಚೇತನಾಚೇತನಗಳೆಂಬ ವಿಶೇಷಗಳಿವೆ. ಚೇತನತ್ವವೆಂಬ ಸಾಮಾನ್ಯದಲ್ಲಿಯೂ ಅಚೇತನತ್ವವೆಂಬ ಸಾಮಾನ್ಯದಲ್ಲಿಯೂ ಅನೇಕ ವಿಶೇಷಗಳಿವೆ. ಆದರೆ, ಈ ಯಾವ ವಿಶೇಷಗಳೂ ಜ್ಞೇಯತ್ವವೆಂಬ ಸಾಮಾನ್ಯದಿಂದ ಬೇರೆ ಇಲ್ಲ. ವೃತ್ತಿಗೆ ವಿಷಯವಾದ ಜ್ಞೇಯವು ವೃತ್ತಿಯ ಮೂಲಕವೇ ವೃತ್ತಿರೂಪದಿಂದ ಅನುಭವಕ್ಕೆ ಬರುವದರಿಂದ, ಜ್ಞೇಯವೆಂಬ ವಿಶೇಷವು ಜ್ಞಾನವೃತ್ತಿ ಎಂಬ ಸಾಮಾನ್ಯದಿಂದ ಬೇರೆ ಇಲ್ಲ. ವೃತ್ತಿಗಳು ಅನೇಕವಾಗಿರುವದರಿಂದ ವೃತ್ತಿಗಳೆಂಬ ವಿಶೇಷಗಳು, ಅವುಗಳಲ್ಲೆಲ್ಲ ವ್ಯಾಪಿಸಿ ಅವನ್ನು ಜ್ಞಾತೃವಿನ ಮೂಲಕ ಬೆಳಗುತ್ತಿರುವ ಜ್ಞಾನವೆಂಬ ಸಾಮಾನ್ಯದಿಂದ ಬೇರೆ ಇಲ್ಲ. ಜ್ಞಾತೃವಾದ 'ನಾನು' ಎಂಬ ಜೀವನಿಂದ ಹೊರಚಿಮ್ಮಿ ಹರಿಯುತ್ತಿರುವ ಜ್ಞಾನವೆಂಬ ವೃತ್ತಿರೂಪವಿಶೇಷವು ಜ್ಞಾತೃತ್ವವೆಂಬ ಸಾಮಾನ್ಯದಿಂದ ಬೇರೆ ಇಲ್ಲ. ಜ್ಞಾತೃತ್ವವನ್ನೂ ವಿಷಯಮಾಡಿಕೊಂಡು ನೇರಾಗಿ ಬೆಳಗುತ್ತಿರುವ ಸಾಕ್ಷಿಯಾದ ಚಿನ್ಮಾತ್ರಸ್ವರೂಪವೆಂಬ ಮಹಾಸಾಮಾನ್ಯದಿಂದ ಜ್ಞಾತೃತ್ವವೆಂಬ ವಿಶೇಷವು ಬೇರೆಯಾಗಿಲ್ಲ. ಜ್ಞೇಯಸರ್ವಸ್ವವನ್ನೂ ನುಂಗಿರುವ ಜ್ಞಾನವನ್ನೂ ಜ್ಞಾತೃವೆಂಬ ತಿಮಿಂಗಿಲ ನುಂಗುತ್ತದೆ. ಜ್ಞಾತೃ ತಿಮಿಂಗಿಲವನ್ನು ಚಿನ್ಮಾತ್ರಸ್ವರೂಪವೆಂಬ ಬ್ರಹ್ಮಾತ್ಮರೂಪ ಮಹಾತಿಮಿಂಗಿಲವು ನುಂಗಿರುತ್ತದೆ. ಪ್ರಿಯೆ, ಮೈತ್ರೇಯಿ, ಜ್ಞಾತೃತ್ವವು ನಮ್ಮ ಸ್ವರೂಪದಲ್ಲಿ ಅವಿದ್ಯೆಯಿಂದ ನಾವೇ ಕಲ್ಪಿಸಿಕೊಂಡ ಹುಸಿತೋರಿಕೆ- ಎಂಬ ಅರಿವು ಶಾಸ್ತ್ರಾಚಾರ್ಯರ ಉಪದೇಶಾನುಗ್ರಹದಿಂದ ಮೂಡಿದೊಡನೆ, ಜ್ಞಾತೃ-ಜ್ಞಾನ-ಜ್ಞೇಯಗಳೆಂಬ ವಿಶೇಷವಾದ ಮಾಯಾಜಾಲವು ಬಾಧಿತವಾಗಿ, ಸ್ವಯಂಸಿದ್ಧಪ್ರಜ್ಞಾನಘನಸ್ವರೂಪವಾದ ಮಹಾಸಾಮಾನ್ಯವೇ ಬೆಳಗಲು ತೊಡಗುತ್ತದೆ. ಸರೋವರದಲ್ಲಿರುವ ನೀರೇ ತೆರೆಗಳಾಗಿಯೂ ನೊರೆಗಳಾಗಿಯೂ ಗುಳ್ಳೆಗಳಾಗಿಯೂ ತೋರುವಂತೆ, ಆತ್ಮವೆಂಬ ಚಿನ್ಮಾತ್ರಸ್ವರೂಪವೇ ಜ್ಞಾತೃ-ಜ್ಞಾನ-ಜ್ಞೇಯಗಳೆಂಬ ಮಾಯಾಪ್ರಪಂಚದ ವಿಲಾಸವಾಗಿ ತೋರುತ್ತಿದೆ. ಸರೋವರದಲ್ಲಿ ಅನಂತವಾದ ತೆರೆನೊರೆಗಳು ತೋರುವ ಮೊದಲು ನೀರು ಒಂದೇ ಇತ್ತು ; ತೆರೆನೊರೆಗಳು ಅಡಗಿದಮೇಲೂ ನೀರು ಒಂದೇ ಉಳಿದಿರುತ್ತದೆ. ತೆರೆನೊರೆಗಳಾಗಿ ತೋರುವಾಗಲೂ ವಿಚಾರದಿಂದ ಕಣ್ಣಿಟ್ಟು ನೋಡಿದರೆ ನೀರು ಒಂದೇ ತೆರೆನೊರೆಗಳಲ್ಲಿ ತುಂಬಿದೆಯೆನಿಸುತ್ತದೆ. ಅಥವಾ ನೀರೇ ಅನಂತವಾದ ತೆರೆನೊರೆಗಳಾಗಿ ತೋರುತ್ತದೆ. ಆದ್ದರಿಂದ ನೀರನ್ನು ಬಿಟ್ಟು ತೆರೆನೊರೆಗಳು ಬೇರೆ ಸ್ವತಂತ್ರವಾಗಿ ಇರಲಾರವು, ಅಥವಾ ತೋರಿಕೊಳ್ಳಲಾರವು. ಆದರೆ ತೆರೆನೊರೆಗಳಿಲ್ಲದೆ ನೀರು ಸ್ವತಂತ್ರವಾಗಿ ಇರಬಲ್ಲದು. ಆದ್ದರಿಂದ ನೀರು ಒಂದೇ ವಾಸ್ತವ ಅಥವಾ ವಸ್ತುರೂಪವಾದುದು. ನೀರು ಒಂದೇ ಸತ್ಯ ಎನಿಸುತ್ತದೆ. ತೆರೆನೊರೆಗಳು ವಸ್ತುಗಳಲ್ಲ. ಅವು ಕೇವಲ ನಾಮರೂಪಗಳೆಂಬ ಹುಸಿತೋರಿಕೆ

ಗಳು. ಇದನ್ನೇ ಮಿಥ್ಯೆ ಅಥವಾ ಮಾಯೆ ಎನ್ನುತ್ತಾರೆ. ಒಂದು ಹನಿ ನೀರೂ ಸೇರದಂತೆ ಬರಿಯ ತೆರೆನೊರೆಗಳನ್ನು ಬೊಗಸೆಯಿಂದ ಬಳಿದು ತುಂಬಿ ತರಲಾಗುವದಿಲ್ಲ. ನೀರಿನಲ್ಲಿಯೇ ತೋರುವದು, ನೀರಿನಲ್ಲಿಯೇ ಅಡಗುವದು ಎಂಬ ಎರಡು ರೂಪಗಳು ತೆರೆನೊರೆಗಳಿಗೆ ಇವೆ. ತೋರಿಕೆಯೇ ನಾಮರೂಪಗಳ ವ್ಯಾಕೃತರೂಪ; ಅಡಗುವಿಕೆಯೇ ನಾಮರೂಪಗಳ ಅವ್ಯಾಕೃತರೂಪ. ಆದ್ದರಿಂದ ಮಾಯೆಗೆ ವ್ಯಾಕೃತ ಮತ್ತು ಅವ್ಯಾಕೃತ ಎಂಬ ಎರಡು ರೂಪಗಳಿವೆ. ಸರೋವರವು ಅಥವಾ ಸಾಗರವು ಬಿರುಗಾಳಿಯಿಂದ ಅಲ್ಲೋಲಕಲ್ಲೋಲವಾಗಿ ವೈಭವದಿಂದ ವಿಜೃಂಭಿಸುತ್ತಿರುವಾಗ ನಮಗೆ ಸರ್ವತೋಮುಖವಾದ ತೆರೆಗಳು ಕಾಣಿಸುತ್ತವೆಯೇ ಹೊರತು ನೀರೇ ಕಾಣಿಸುವದಿಲ್ಲ. ವಿಚಾರದಿಂದ ತೆರೆಗಳನ್ನು ಲಕ್ಷ್ಯವಿಟ್ಟು ನೋಡಿದಾಗ ಮಾತ್ರ ನೀರು ಕಾಣಿಸುತ್ತದೆ; ಅಥವಾ ಗಾಳಿಯಿಲ್ಲದೆ ಸಾಗರದಲ್ಲಿ ತೆರೆಗಳು ಏಳದಿರುವಾಗ ಮಾತ್ರ ಆ ಶಾಂತಸಾಗರದಲ್ಲಿ ನಿಜವಾದ ನೀರು ಒಂದೇ ಕಾಣಿಸುತ್ತದೆ. ಆದರೆ, ಹೆದ್ದೆರೆಗಳೇ ಭೋರ್ಗರೆದು ಮೆರೆಯುತ್ತಿರುವಾಗ, ನಿಜವಾದ ನೀರೇ ಕಣ್ಣಿಗೆ ಕಾಣದಂತೆ, ನಾಮರೂಪಾತ್ಮಕ ಮಾಯಾಜಾಲವೊಂದು ಇಡೀ ಸಾಗರವನ್ನು ಮುಸುಕಿದೆಯೋ ಎನ್ನುವಂತೆ ವಿಚಿತ್ರವಾಗಿ ತೋರುತ್ತಿದೆ. ಆದ್ದರಿಂದ ತೆರೆನೊರೆಗಳೆಂದರೆ ನೀರೇ ಸರಿ– ಎಂದು ನಿಶ್ಚಿತವಾಗಿ ಹೇಳಲು ಬರುವದಿಲ್ಲ. ಉಪಾದಾನಕಾರಣವಾದ ನೀರಿನ ಪ್ರಕ್ಷುಬ್ಧಕಾರ್ಯವಾದ ತೆರೆನೊರೆಗಳ ನಾಮರೂಪಾತ್ಮಕವಿಕಾರದಲ್ಲಿ, ಅದರ ಸೂಕ್ಷ್ಮಕಾರಣವಾದ ನೀರನ್ನು ಸುಲಭವಾಗಿ ಗುರುತಿಸಲಾಗುವದಿಲ್ಲ. ಇದರಿಂದ ನೀರೇ ತೆರೆನೊರೆಗಳಾಗಿ ತೋರುತ್ತಿದೆ ಎಂದು ಸುಲಭವಾಗಿ ಹೇಳಲಾಗುವದಿಲ್ಲ. ಆದರೆ, ತೆರೆನೊರೆಗಳ ಹುಸಿತೋರಿಕೆಯಲ್ಲಿ ಇಂಥ ಅದ್ಭುತ ಮಾಯಾಶಕ್ತಿಯಿದ್ದರೂ ಇದಕ್ಕೆ ಕಾರಣವಾದ ತೆರೆನೊರೆಗಳು ನೀರಿನಿಂದ ಬೇರೆಯೇ ಇವೆ- ಎಂಬಿದಂತೂ ಎಳ್ಳಷ್ಟೂ ನಿಜವಲ್ಲ. ಆದ್ದರಿಂದ ಆತ್ಮನಲ್ಲಿ ಅವಿದ್ಯೆಯಿಂದ ತೋರುತ್ತಾ ಅಡಗುತ್ತಾ ಇರುವ ನಾಮರೂಪಾತ್ಮಕವಾದ ವ್ಯಾಕೃತ–ಅವ್ಯಾಕೃತ ಮಾಯಾಸ್ವರೂಪವು ಆತ್ಮನೇ ಎಂದಾಗಲಿ, ಅಥವಾ ಇದು ಆತ್ಮನಿಂದ ಬೇರೆ ಎಂದಾಗಲಿ ನಿಶ್ಚಿತವಾಗಿ ಹೇಳಲಾಗುವದಿಲ್ಲ. ಆದ್ದರಿಂದಲೇ ಇವು "ತತ್ತ್ವಾನ್ಯತ್ವಾಭ್ಯಾಂ ಅನಿರ್ವಚನೀಯೇ...." ಅನಿರ್ವಚನೀಯ ಎನಿಸಿವೆ.

ನಾಮರೂಪಾತ್ಮಕವಾದ ಮಾಯೆಯು ಎಚ್ಚರಕನಸುಗಳಲ್ಲಿ ಬಗೆಬಗೆಯಿಂದ ತೋರಿ, ಗಾಢನಿದ್ರೆಯಲ್ಲಿಯೂ ಮರಣದಲ್ಲಿಯೂ ಜಗತ್ತಿನ ಪ್ರಳಯದಲ್ಲಿಯೂ ಅಡಗುತ್ತದೆ. ವ್ಯವಹಾರದೃಷ್ಟಿಯಿಂದ, ಗಾಢನಿದ್ರೆಯಲ್ಲಿಯೂ ಮರಣದಲ್ಲಿಯೂ ವ್ಯಷ್ಟಿಜೀವನ ವಾಸನಾಬೀಜರೂಪವಾಗಿಯೂ ಪ್ರಳಯದಲ್ಲಿ ಸಮಷ್ಟಿಜೀವರ ವಾಸನಾಬೀಜರೂಪವಾಗಿಯೂ ಈ ಮಾಯೆಯು ಅಡಗಿದ್ದು ಮುಂದಿನ ಜನ್ಮಕ್ಕೂ ಮುಂದಿನ ಸೃಷ್ಟಿಗೂ ಇದು ಕಾರಣವೆನಿಸುತ್ತದೆ.

ಹಿಂದೆ ವಿಚಾರಮಾಡಿರುವಂತೆ, ಒಂದು ಚಿನ್ಮಾತ್ರಸ್ವರೂಪವೇ (ಬಚ್ಚಬರಿ ಅರಿವೇ) ಎಚ್ಚರದಲ್ಲಿ ಜ್ಞಾತೃ-ಜ್ಞಾನ-ಜ್ಞೇಯಗಳಾಗಿ ತೋರುತ್ತಿದೆ ಎಂಬುದಕ್ಕೆ ನಮ್ಮ ಕನಸಿನ ಅನುಭವವೇ ಸಾಕ್ಷಿಯಾಗಿದೆ. ನಿದ್ರೆ ಬಂದಾಗ ತೋರುವ ಕನಸಿನಲ್ಲಿ ನಮ್ಮ ಮನಸ್ಸಿನ ಹೊರತು ಬೇರೇನೂ ಇರುವದಿಲ್ಲ. ಒಂದು ಮನಸ್ಸೇ ವಾಸನಾವಶದಿಂದ ಜ್ಞಾತೃ-ಜ್ಞಾನ-ಜ್ಞೇಯರೂಪವಾದ ಸಕಲಪ್ರಪಂಚವಾಗಿ ತೋರುತ್ತದೆ. ಕನಸು ತೋರುವಷ್ಟು ಕಾಲವೂ ಅದು ಎಚ್ಚರದಂತೆಯೇ ಇರುತ್ತದೆ. ಆದ್ದರಿಂದ ಈಗ ಅನುಭವದಲ್ಲಿರುವದು ಎಚ್ಚರವೆಂದೂ ಕಳೆದುಹೋಗಿ ನೆನಪಿನಲ್ಲಿ ಉಳಿದಿರುವದು ಕನಸೆಂದೂ ಹೇಳಬೇಕೇ ಹೊರತು ಎಚ್ಚರಕನಸುಗಳಿಗೆ ಹೆಚ್ಚು ಭೇದವಿಲ್ಲ. ಇದರಿಂದ ಎಚ್ಚರಕನಸುಗಳಲ್ಲಿ ತೋರುವ ಜ್ಞಾತೃ-ಜ್ಞಾನ-ಜ್ಞೇಯಗಳು ಚಿನ್ಮಾತ್ರಸ್ವರೂಪದಿಂದ ಬೇರೆಯಲ್ಲ ಎಂಬಿದು ಇಷ್ಟೇ ಅಲ್ಲ, ಗಾಢನಿದ್ರೆಯಲ್ಲಿ ಏನೂ ತೋರದಿರುವದೂ ಎಚ್ಚರಕನಸುಗಳಲ್ಲಿ ಏನೇನೋ ತೋರುತ್ತಿರುವದೂ ಅರಿವಿನ ರೂಪವಾದ ಯಾವ ಅನುಭವಕ್ಕೆ ಗೋಚರವಾಗುತ್ತಿದೆಯೋ ಆ ಅನುಭವರೂಪವಾದ ಅರಿವಿನಿಂದ-ಚಿನ್ಮಾತ್ರಸ್ವರೂಪದಿಂದ-ಎಚ್ಚರ ಕನಸು ನಿದ್ರೆಗಳು ಬೇರೆಯಾಗಿಲ್ಲ. ಅಥವಾ ಪ್ರಜ್ಞಾನಘನವಾದ (ಅರಿವಿನ ಗಟ್ಟಿಯಾದ) ನಮ್ಮ ಸ್ವರೂಪವನ್ನು ಅರಿಯದ್ದರಿಂದ ನಮ್ಮ ಸ್ವರೂಪವನ್ನೇ ಎಚ್ಚರ, ಕನಸು, ನಿದ್ರೆಗಳೆಂದು ವಿಕಲ್ಪಿಸಿಕೊಳ್ಳುತ್ತಿದ್ದೇವೆ. ವಿಶೇಷಗಳಾದ ಎಚ್ಚರ, ಕನಸು, ನಿದ್ರೆಗಳು ಅವುಗಳಲ್ಲೆಲ್ಲಾ ವ್ಯಾಪಿಸಿ, ಅವುಗಳಿಗೆ ಆಧಾರವೂ ಆಗಿ, ಅವುಗಳಿಂದ ಯಾವ ವಿಕಾರವನ್ನೂ ಹೊಂದದೆ ಅಸಂಗವೂ ಅದ್ವಿತೀಯವೂ ಆಗಿರುವ ಪ್ರಜ್ಞಾನಘನವಾದ ಮೂಲ-ಮಹಾ ಸಾಮಾನ್ಯದಿಂದ ಬೇರೆಯಾಗಿಲ್ಲ.

> ಚಿನ್ಮಾತ್ರಾನುಗಮಾತ್ ಸರ್ವತ್ರ ಚಿತ್ಸ್ವರೂಪತೈವ ಇತಿ ಗಮ್ಯತೇ । ....ಪ್ರಜ್ಞಾನವ್ಯತಿರೇಕೇಣ ಸ್ವಪ್ನಜಾಗರಿತಯೋಃ ನ ಕಶ್ಚಿತ್ ವಸ್ತುವಿಶೇಷೋ ಗೃಹ್ಯತೇ । ತಸ್ಮಾತ್ ಪ್ರಜ್ಞಾನವ್ಯತಿರೇಕೇಣ ಅಭಾವೋ ಯುಕ್ತಸ್ತೇಷಾಮ್ ॥ (ಬೃ. ಭಾ. ೨-೪-೭)

ಇದೆಲ್ಲವೂ ಆತ್ಮನೇ ಎಂದು ತಿಳಿದುಕೊಳ್ಳಬಹುದೆಂಬಿದು ಹೇಗೆಂದರೆ : ಚಿನ್ಮಾತ್ರವೇ (ಬರೀ ಅರಿವೇ) ಎಲ್ಲೆಲ್ಲಿಯೂ ಹಾಸುಹೊಕ್ಕಾಗಿ ತುಂಬಿತುಳುಕುತ್ತಿರುವದರಿಂದ ಎಲ್ಲವೂ ಚಿತ್ಸ್ವರೂಪವೇ ಎಂದು ಗೊತ್ತುಮಾಡಿಕೊಳ್ಳಬಹುದಾಗಿದೆ. ಹೀಗೆಯೇ ಪ್ರಜ್ಞಾನವನ್ನು (ತಿಳಿಯಾದ ತಿಳಿವನ್ನು) ಬಿಟ್ಟು ಕನಸು-ಎಚ್ಚರಗಳಲ್ಲಿ ಯಾವದೊಂದು ವಸ್ತುವಿಶೇಷವನ್ನೂ ತಿಳಿಯಲಾಗುವದಿಲ್ಲ. ಆದ್ದರಿಂದ ನಾವು ಮಹಾಸಾಮಾನ್ಯವಾದ ಪ್ರಜ್ಞಾನವನ್ನು ಬಿಟ್ಟು ಬೇರೆಯಾಗಿಲ್ಲವೆಂಬುದೇ ಯುಕ್ತವು. ಅದಂತಿರಲಿ ; ಕನಸು, ಎಚ್ಚರ, ನಿದ್ರೆಗಳೆಂಬ ಅವಸ್ಥಾವಿಶೇಷಗಳು ಸಹ ಅವನ್ನು ಬೆಳಗುತ್ತಿರುವ ಮೂಲ ಸಾಮಾನ್ಯವಾದ ಪ್ರಜ್ಞಾನದಿಂದ ಬೇರೆಯಾಗಿಲ್ಲವೆಂದೇ ಸಿದ್ಧವಾಗುತ್ತದೆ. ಇದನ್ನು ಮನಗಾಣುವದಕ್ಕಾಗಿ

ಹಿಂದೆಯೇ ಭೇರಿ, ಶಂಖ, ವೀಣಾ ಮೊದಲಾದ ದೃಷ್ಟಾಂತಗಳನ್ನು ಕೊಟ್ಟಿದೆ. ಇದರಿಂದ, ಇದುವರೆಗೆ ಹೇಳಿದುದೆಲ್ಲಾ ಲೋಕದಲ್ಲಿರುವ ಯಾವ ಸಾಮಾನ್ಯ ವಿಶೇಷಗಳಾಗಲಿ, ಸರ್ವಸಾಮಾನ್ಯವಾದ ಆತ್ಮನಿಂದ ಬೇರೆಯಲ್ಲ- ಎಂಬಿದನ್ನು ತಿಳಿಸುವದಕ್ಕಾಗಿ.

## ಆತ್ಮಜತ್ವಪ್ರಕ್ರಿಯೆ

13. ಮೈತ್ರೇಯಿ, ಉತ್ಪತ್ತಿಕಾಲದಲ್ಲಿಯೂ ಎಲ್ಲವೂ ಹೇಗೆ ಬ್ರಹ್ಮವೇ ಆಗಿತ್ತು ಎನ್ನುವದನ್ನು ದೃಷ್ಟಾಂತಗಳ ಮೂಲಕ ಈಗ ತಿಳಿಸುತ್ತೇನೆ. ಹಸಿ ಕಟ್ಟಿಗೆಯ ಬೆಂಕಿಯಿಂದ ಅದಕ್ಕೆ ವಿಲಕ್ಷಣವಾದ ಛಟ್ ಛಟ ಶಬ್ದ, ಹೊಗೆ, ಕಿಡಿ, ಉರಿ- ಮುಂತಾದವು ಹೊರಹೊಮ್ಮಿ ಬರುವಂತೆ, ಉತ್ಪತ್ತಿಕಾಲದಲ್ಲಿ ಪರಮಾತ್ಮ ನಿಂದಲೇ ಆತ್ಮವಿಲಕ್ಷಣವೆನಿಸುವ ಋಗ್ವೇದಾದಿರೂಪದಲ್ಲಿರುವ ಮಂತ್ರ ಬ್ರಾಹ್ಮ ಣಾದಿಗಳೂ ಸಕಲ ನಾಮರೂಪಗಳೂ ನಿಃಶ್ವಾಸದಂತೆ, ಆಯಾಸವಿಲ್ಲದೆ, ಪ್ರಯತ್ನ ವಿಲ್ಲದೆ, ಲೀಲಾಜಾಲವಾಗಿ ಊದಿಸಿ ಬಂದಿವೆ. ಆದ್ದರಿಂದ ನಾಮರೂಪಾತ್ಮಕವಾದ ಜಗತ್ತು, ಕಾರಣವಾದ ಬ್ರಹ್ಮಾತ್ಮಕ್ಕಿಂತ ಬೇರೆಯಾಗಿಲ್ಲ. ವೇದವು ಹುಟ್ಟುವ ಮುಂಚೆ ಆತ್ಮನೇ ಆಗಿದ್ದು, ಇರುವಾಗ ಆತ್ಮನನ್ನೇ ಹೇಳಿ, ಕೊನೆಯಲ್ಲಿ ಆತ್ಮನಲ್ಲಿ ಯೇ ಲಯವಾಗುತ್ತದೆ. ಆದ್ದರಿಂದ ವೇದವೂ ಆತ್ಮಕ್ಕಿಂತ ಬೇರೆಯಾಗಿಲ್ಲ.

> ಪ್ರಾಗುತ್ಪತ್ತೇಃ ಬ್ರಹ್ಮೈವ ಇತಿ ಶಕ್ಯಮ್ ಅವಗನ್ತುಮ್ । "ಅಸದ್ವಾ ಇದಮಗ್ರ ಆಸೀತ್" (ತೈ. ೨-೭) ...."ಸದೇವ ಸೋಮ್ಯ ಇದಮಗ್ರ ಆಸೀತ್ ಏಕಮೇವಾದ್ವಿತೀಯಮ್" ।
> (ಛಾಂ. ೬-೨-೧)

ಹುಟ್ಟುವ ಮುಂಚೆ ಇದೆಲ್ಲವೂ ಬ್ರಹ್ಮವೇ (ಆಗಿತ್ತು) ಎಂದು ನಿಶ್ಚಯಿಸ ಬಹುದು. 'ಇದು ಮೊದಲು ಅಸತ್ತೇ ಆಗಿತ್ತು' (ತೈ. ೨-೭) 'ಸೋಮ್ಯನೆ, ಇದು ಮೊದಲು ಎರಡನೆಯದಿಲ್ಲದ ಒಂದೇ ಆದ ಸತ್ತೇ ಆಗಿತ್ತು. ಸತ್ತು ಎಂದರೆ, ಬರಿಯ ಇರುವಿಕೆಯಾಗಿರುವ ವಸ್ತು. ಇದು, ಅತ್ಯಂತ ಸೂಕ್ಷ್ಮವೂ (ಅತೀಂದ್ರಿ ಯವೂ) ನಿರ್ವಿಶೇಷವೂ (ದ್ರವ್ಯ, ಗುಣ, ಕರ್ಮ ಮುಂತಾದ ಯಾವ ವಿಶೇಷವೂ ಇಲ್ಲದ), ಸರ್ವಗತವೂ ಒಂದೇ ಒಂದೂ ಮತ್ತೊಂದರ ಸೋಂಕು ಇಲ್ಲದ್ದೂ ನಿರವಯವವೂ ಆದ ಆತ್ಮಚೈತನ್ಯವು. ನಾಮರೂಪಾತ್ಮಕವಾದ ಈ ವ್ಯಕ್ತಜಗತ್ತು ಸೃಷ್ಟಿಗೆ ಮೊದಲು, (ವ್ಯಕ್ತಾವ್ಯಕ್ತಗಳಿಗೆ ಮೀರಿದ) -ಅಸತ್-ಅವ್ಯಕ್ತವಾದ (ಬ್ರಹ್ಮವೇ) ಬೀಜವೇ ಆಗಿತ್ತು.

> ನಾಮರೂಪಯೋರೇವ ಹಿ ಪರಮಾತ್ಮೋಪಾಧಿಭೂತಯೋಃ ಸಲಿಲಫೇನವತ್ ತತ್ತ್ವಾನ್ಯತ್ವೇನ ಅನಿರ್ವಕ್ತವ್ಯಯೋಃ ಸರ್ವಾ. ವಸ್ಥಯೋಃ ಸಂಸಾರತ್ವಮ್....। (ಬೃ. ಭಾ. ೨-೪-೧೦)

ಪರಮಾತ್ಮನಿಗೆ ಉಪಾಧಿಯಾಗಿರುವ ವ್ಯಾಕೃತವಾದ ನಾಮರೂಪಗಳೇ ಅಲ್ಲವೇ ಎಲ್ಲಾ ಅವಸ್ಥೆಗಳಲ್ಲಿಯೂ ಸಂಸಾರವೆನಿಸುವವು ? ನೀರು ಮತ್ತು ಅದರ ನೊರೆಯ ದೃಷ್ಟಾಂತದಂತೆ, ವ್ಯಾಕೃತ ಮತ್ತು ಅವ್ಯಾಕೃತ ಅವಸ್ಥೆಗಳಲ್ಲಿರುವ ನಾಮರೂಪಾತ್ಮಕವಾದ ಮಾಯೆಯು ಆತ್ಮನೇ ಎಂದಾಗಲೀ ಆತ್ಮನಿಂದ ಬೇರೆ ಎಂದಾಗಲೀ ಹೇಳಲಿಕ್ಕೆ ಬಾರದ ಅನಿರ್ವಚನೀಯವೆನಿಸುತ್ತದೆ. ಆದರೆ, ಪರಮಾರ್ಥದೃಷ್ಟಿಯಿಂದ ಮಾಯಾಮಯವಾದ ಈ ಜಗತ್ತು ನಿಸ್ಸಂದೇಹವಾಗಿ ಪರಮಾತ್ಮನೇ ಆಗಿದೆ.

ನಾಮರೂಪಜಗತ್ತಿನ ಸೃಷ್ಟಿಕಾಲದಲ್ಲಿ ಮೊದಲು ನಾಮವೇ ಎಂದರೆ ಶಬ್ದಾತ್ಮಕವಾದ ವೇದಮಂತ್ರಗಳೂ ಇತಿಹಾಸ, ಪುರಾಣ, ವಿದ್ಯಾ, ಉಪನಿಷತ್ತುಗಳು, ಶ್ಲೋಕಗಳು, ಸೂತ್ರಗಳು, ಅನುವ್ಯಾಖ್ಯಾನಗಳು, ವ್ಯಾಖ್ಯಾನಗಳು-ಎಂಬ ಎಂಟು ಬಗೆಯ ಬ್ರಾಹ್ಮಣಗಳೂ ಪ್ರಯತ್ನವಿಲ್ಲದೆ, ಸ್ವಾಭಾವಿಕವಾಗಿ, ಉಸಿರಾಡಿದಂತೆ ಪರಮಾತ್ಮನಿಂದ ಹೊರಬಂದವು. ಹೀಗೆ ವೇದಾದಿಗಳು ಪುರುಷಬುದ್ಧಿಯಿಂದ, ಪ್ರಯತ್ನಪೂರ್ವಕವಾಗಿ ರಚಿತವಾಗಿಲ್ಲವಾದ್ದರಿಂದ ಅಪೌರುಷೇಯವೆನಿಸುತ್ತವೆ.

ತತ್ರ ತತ್ರ ಶಬ್ದಪೂರ್ವಿಕಾ ಸೃಷ್ಟಿಃ ಶ್ರಾವ್ಯತೇ ।....
ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ ।
ಆದೌ ವೇದಮಯೀ ದಿವ್ಯಾ ಯತಃ ಸರ್ವಾಃ ಪ್ರವೃತ್ತಯಃ ॥
(ಮೋಕ್ಷಧರ್ಮ ೨೩೨-೨೪)

ನಾಮ ರೂಪಂ ಚ ಭೂತಾನಾಂ ಕರ್ಮಣಾಂ ಚ ಪ್ರವರ್ತನಮ್ ।
ವೇದಶಬ್ದೇಭ್ಯ ಏವಾದೌ ನಿರ್ಮಮೇ ಸ ಮಹೇಶ್ವರಃ ॥
(ಮೋಕ್ಷಧರ್ಮ ೨೩೨-೨೫)

ತಥಾ ಪ್ರಜಾಪತೇರಪಿ ಸ್ರಷ್ಟುಃ ಸೃಷ್ಟೇಃ ಪೂರ್ವಂ ವೈದಿಕಾಃ ಶಬ್ದಾಃ ಮನಸಿ ಪ್ರಾದುರ್ಬಭೂವುಃ । ಪಶ್ಚಾತ್ ತದನುಗತಾನ್ ಅರ್ಥಾನ್ ಸಸರ್ಜ ಇತಿ ಗಮ್ಯತೇ ॥ (ಸೂ. ಭಾ. ೧-೩-೨೮)

ಅಲ್ಲಲ್ಲಿ ಶಬ್ದಪೂರ್ವಕವಾದ ಸೃಷ್ಟಿಯನ್ನೇ ಶ್ರುತಿಯಲ್ಲಿ ಹೇಳಿದೆ. "ಆದಿಯಾಗಲಿ, ಅಂತ್ಯವಾಗಲಿ ಇಲ್ಲದ ನಿತ್ಯವಾದ ವೇದರೂಪವಾದ ದಿವ್ಯವಾಕ್ಕನ್ನು ಸ್ವಯಂಭುವು ಮೊದಲು ಉಂಟುಮಾಡಿದನು. ಅದರಿಂದ ಎಲ್ಲಾ ಪ್ರವೃತ್ತಿಗಳೂ ಆಗಿರುತ್ತವೆ.'' "ಹೀಗೆಯೇ ಭೂತಗಳ ನಾಮವನ್ನೂ ರೂಪವನ್ನೂ ಕರ್ಮಗಳ ಪ್ರವೃತ್ತಿಯನ್ನೂ ಆ ಮಹೇಶ್ವರನು ಆದಿಯಲ್ಲಿ ವೇದಶಬ್ದಗಳಿಂದಲೇ ನಿರ್ಮಿಸಿದನು.'' ಇದರಂತೆ ಸ್ರಷ್ಟೃವಾದ ಪ್ರಜಾಪತಿಗೂ ಸೃಷ್ಟಿಗೆ ಮುಂಚೆ

ವೈದಿಕಶಬ್ದಗಳು ಮನಸ್ಸಿನಲ್ಲಿ ತೋರಿಕೊಂಡವು ; ಆ ಬಳಿಕ ಅವುಗಳಿಂದ ಅನುಗತವಾದ ಪದಾರ್ಥಗಳನ್ನು ಸೃಷ್ಟಿಸಿದನು ಎಂದು ನಿಶ್ಚಯವಾಗುತ್ತದೆ.

ತಥಾ ಚ ಶ್ರುತಿಃ "ಸ ಭೂರಿತಿ ವ್ಯಾಹರತ್ । ಸ ಭೂಮಿ-
ಮಸೃಜತ" ॥ (ತೈ. ಬ್ರಾ. ೨-೨-೪) (ಸೂ. ಭಾ. ೧-೩-೨೮)

ಆದ್ದರಿಂದಲೇ "ಅವನು ಭೂಃ" ಎಂದು ಉಚ್ಚರಿಸಿದನು; ಅವನು ಭೂಮಿಯನ್ನು ಸೃಷ್ಟಿಸಿದನು'' ಎಂದು ಮುಂತಾಗಿರುವ ಶ್ರುತಿಯು ಮನಸ್ಸಿನಲ್ಲಿ ಹೊರ ತೋರಿಕೊಂಡ ಭೂರಾದಿ ಶಬ್ದಗಳಿಂದಲೇ ಭೂರಾದಿಲೋಕಗಳ ಸೃಷ್ಟಿಯಾಯಿತೆಂದು ತಿಳಿಸುತ್ತದೆ.

ಅನಾದೌ ಚ ಸಂಸಾರೇ ಯಥಾ ಸ್ವಾಪಪ್ರಬೋಧಯೋಃ
ಪ್ರಲಯಪ್ರಭವಶ್ರವಣೇऽಪಿ ಪೂರ್ವಪ್ರಬೋಧವದ್ ಉತ್ತರ
ಪ್ರಬೋಧೇऽಪಿ ವ್ಯವಹಾರಾತ್ ನ ಕಶ್ಚಿದ್ ವಿರೋಧಃ, ಏವಂ
ಕಲ್ಪಾಂತರಪ್ರಭವಪ್ರಲಯಯೋರಪಿ ಇತಿ ದ್ರಷ್ಟವ್ಯಮ್ ॥
(ಸೂ ಭಾ. ೧-೩-೩೦)

''ಹೀಗೆ, ಸಂಸಾರವು ಅನಾದಿಯಾಗಿರುವಲ್ಲಿ, ಹೇಗೆ ತನಿನಿದ್ರೆ ಮತ್ತು ಎಚ್ಚರ ಇವುಗಳಲ್ಲಿ (ಪ್ರಲಯೋತ್ಪತ್ತಿಗಳನ್ನು ಶ್ರುತಿಯಲ್ಲಿ ಹೇಳಿದ್ದಾಗ್ಯೂ) ಹಿಂದಿನ ಎಚ್ಚರದಂತೆ ಮುಂದಿನ ಎಚ್ಚರದಲ್ಲಿಯೂ ವ್ಯವಹಾರವಿರುವದರಿಂದ ಯಾವ ವಿರೋಧವೂ ಇರುವದಿಲ್ಲವೋ ಹಾಗೆಯೇ ಮತ್ತೊಂದುಕಲ್ಪದಲ್ಲಿ ಆಗುವ ಸೃಷ್ಟಿಪ್ರಲಯಗಳ ವಿಷಯದಲ್ಲಿಯೂ ಯಾವ ವಿರೋಧವೂ ಇಲ್ಲ, ಎಂದು ತಿಳಿಯಬೇಕು. ಸುಷುಪ್ತಿಯಲ್ಲಿ ಪ್ರಲಯವಾದರೂ ಎಚ್ಚರದಲ್ಲಿ ಅದೇ ಜಗತ್ತು ಕಾಣಬರುತ್ತದೆಯಾದ್ದರಿಂದ ಅಲ್ಲಿ ಶಬ್ದಾರ್ಥಸಂಬಂಧದ ನಿತ್ಯತ್ವಕ್ಕೆ ಯಾವ ವಿರೋಧವೂ ಬರುವದಿಲ್ಲ.

ಅತ ಏವ ನಿಯತಾಕೃತೇರ್ದೇವಾದೇಃ ಜಗತಃ ವೇದಶಬ್ದ
ಪ್ರಭವತ್ವಾತ್ ವೇದಶಬ್ದೇ ನಿತ್ಯತ್ವಮಪಿ ಪ್ರತ್ಯೇತವ್ಯಮ್ ।....
ವೇದವ್ಯಾಸಶ್ಚ ಏವಮೇವ ಸ್ಮರತಿ,
"ಯುಗಾನ್ತೇऽನ್ತರ್ಹಿತಾನ್ ವೇದಾನ್ ಸೇತಿಹಾಸಾನ್ ಮಹರ್ಷಯಃ।
ಲೇಭಿರೇ ತಪಸಾ ಪೂರ್ವಮನುಜ್ಞಾತಾಃ ಸ್ವಯಂಭುವಾ ॥
(ಸೂ. ಭಾ. ೧-೩-೨೯) (ಮೋ. ಧ. ೨೧೦-೧೯)

''ಆದ್ದರಿಂದಲೇ ಎಂದರೆ ಗೊತ್ತಾದ ಆಕೃತಿಯುಳ್ಳ ದೇವಾದಿಜಗತ್ತು ವೇದಶಬ್ದದಿಂದ ಹುಟ್ಟುವದರಿಂದಲೇ ವೇದಶಬ್ದವು ನಿತ್ಯವಾಗಿದೆ ಎಂದೂ ತಿಳಿಯಬೇಕು. ವೇದವ್ಯಾಸರೂ ''ಯುಗಾಂತದಲ್ಲಿ ಮರೆಯಾಗಿದ್ದ ಇತಿಹಾಸಸಹಿತ

ವಾದ ವೇದಗಳನ್ನು ಮಹರ್ಷಿಗಳು ಪೂರ್ವದಲ್ಲಿ ಸ್ವಯಂಭುವಿನ ಅನುಜ್ಞೆಯಂತೆ ತಪಸ್ಸಿನಿಂದ ಪಡೆದುಕೊಂಡರು" ಎಂದು ಹೀಗೆಯೇ ಸ್ಮರಿಸುತ್ತಾರೆ.

ಮೈತ್ರೇಯಿ : ಸುಷುಪ್ತಿಯಲ್ಲಿ ವ್ಯವಹಾರವು ಪೂರ್ಣವಾಗಿ ಕಡಿದು ಹೋಗದೇ ಇರುವದರಿಂದ ನಿದ್ರಿಸಿ ಎಚ್ಚತ್ತಮೇಲೆ ಹಿಂದಿನ ಎಚ್ಚರದ ನೆನಪು ಬರುವದು ಸ್ವಾಭಾವಿಕವಾಗಿದೆ. ಆದರೆ ಮಹಾಪ್ರಲಯದಲ್ಲಿ ಎಲ್ಲಾ ವ್ಯವಹಾರವೂ ಪೂರಾ ನಾಶವಾಗುವದರಿಂದಲೂ ಹಿಂದಿನ ಜನ್ಮದ ವ್ಯವಹಾರವನ್ನು ನೆನಪಿಡುವದು ಅಸಾಧ್ಯವಾದ್ದರಿಂದಲೂ ಯುಗಾಂತದಲ್ಲಿ ಮರೆಯಾಗಿದ್ದ ವೇದಾದಿಗಳನ್ನು ಮಹರ್ಷಿಗಳಾದರೂ ಪಡೆಯುವದು ಹೇಗೆ ಸಾಧ್ಯ ?

14. ಯಾಜ್ಞವಲ್ಕ್ಯ: ಸತ್ಯಪಿ ಸರ್ವವ್ಯವಹಾರೋಚ್ಛೇದಿನಿ ಮಹಾಪ್ರಲಯೇ ಪರಮೇಶ್ವರಾನುಗ್ರಹಾತ್ ಈಶ್ವರಾಣಾಂ ಹಿರಣ್ಯಗರ್ಭಾದೀನಾಂ ಕಲ್ಪಾನ್ತರವ್ಯವಹಾರಾನುಸನ್ಧಾನೋಪಪತ್ತೇಃ । ತತಶ್ಚಾತೀತಕಲ್ಪಾನುಷ್ಠಿತಪ್ರಕೃಷ್ಟಜ್ಞಾನಕರ್ಮಣಾಮೀಶ್ವರಾಣಾಂ ಹಿರಣ್ಯಗರ್ಭಾದೀನಾಂ ವರ್ತಮಾನಕಲ್ಪಾದೌ ಪ್ರಾದುರ್ಭವತಾಂ ಪರಮೇಶ್ವರಾನುಗೃಹೀತಾನಾಂ ಸುಪ್ತಪ್ರತಿಬುದ್ಧವತ್ ಕಲ್ಪಾನ್ತರವ್ಯವಹಾರಾನುಸನ್ಧಾನೋಪಪತ್ತಿಃ। "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ । ತಗ್ಂ ಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" (ಶ್ವೇ. ೬-೧೮) ಇತಿ ॥ (ಸೂ. ಭಾ. ೧-೩-೩೦)

ಎಲ್ಲಾ ವ್ಯವಹಾರವನ್ನೂ ನಾಶಗೊಳಿಸುವ ಮಹಾಪ್ರಲಯವು ಆದಬಳಿಕವೂ ಪರಮೇಶ್ವರನ ಅನುಗ್ರಹದಿಂದ ಈಶ್ವರರಾಗಿರುವ ಹಿರಣ್ಯಗರ್ಭನೇ ಮೊದಲಾದವರಿಗೆ ಕಲ್ಪಾಂತರದ ವ್ಯವಹಾರದ ನೆನಪು ಇರಬಹುದಾಗಿದೆ. (ಆದ್ದರಿಂದಲೇ ಅವರು ಆ ನೆನಪಿನ ಬಲದಿಂದ ಮತ್ತೆ ಸೃಷ್ಟಿಮಾಡುತ್ತಾರೆಂದು ಶ್ರುತಿಯಲ್ಲಿ ಹೇಳಿದೆ.) ಜ್ಞಾನ- ಐಶ್ವರ್ಯ ಮುಂತಾದವುಗಳ ಅಭಿವ್ಯಕ್ತಿಗೆ ಸಾಮಾನ್ಯಜೀವರಲ್ಲಿ ಅಡ್ಡಿಗಳು ಹೆಚ್ಚಾಗಿರುವದರಿಂದ ಅವರು ಜನ್ಮಾಂತರದ ವ್ಯವಹಾರಗಳನ್ನು ನೆನಪಿಗೆ ತಂದುಕೊಳ್ಳುವದು ಕಂಡುಬರುವದಿಲ್ಲವಾದರೂ ಈಶ್ವರರಾದವರು ಸಾಮಾನ್ಯರಂತೆ ಇರಬೇಕೆಂಬುದು ಸರಿಯಲ್ಲ. ಆದ್ದರಿಂದ ಹಿಂದಿನ ಕಲ್ಪದಲ್ಲಿ ಅನುಷ್ಠಾನಮಾಡಿದ್ದ ಹೆಚ್ಚಿನ ಜ್ಞಾನಕರ್ಮಗಳುಳ್ಳ (ಉಪಾಸನೆಯ ಮತ್ತು ಕರ್ಮದ ಸಂಸ್ಕಾರವುಳ್ಳ) ಈಶ್ವರರಾದ ಹಿರಣ್ಯಗರ್ಭನೇ ಮೊದಲಾದವರಿಗೆ, ಈಗಿನ ಕಲ್ಪದ ಆದಿಯಲ್ಲಿ ಅವರು ಹುಟ್ಟುವಾಗ (ಅವರ ಹೆಚ್ಚಿನ ಕರ್ಮೋಪಾಸನೆಗಳ ಫಲವಾಗಿ) ಪರಮೇಶ್ವರನ ಅನುಗ್ರಹದಿಂದ, ನಿದ್ರಿಸಿ ಎಚ್ಚತ್ತವರಿಗೆ ಹಿಂದಿನ

ಎಚ್ಚರದ ನೆನಪಾಗುವಂತೆ-ಕಲ್ಪಾಂತರದ ವ್ಯವಹಾರವನ್ನು ನೆನಪಿಗೆ ತಂದು ಕೊಳ್ಳುವದು ಸಾಧ್ಯವಾಗಿರುತ್ತದೆ. ಆದ್ದರಿಂದಲೇ ಶ್ರುತಿಯು, 'ಯಾವನು ಬ್ರಹ್ಮನನ್ನು ಮೊದಲು ಸೃಷ್ಟಿಸುವನೋ ಯಾವನೇ ಅವನಿಗೆ ವೇದಗಳನ್ನು ಕಳುಹಿಸಿ ಕೊಡುವನೋ, ಆ ಆತ್ಮಬುದ್ಧಿಯನ್ನು ಪ್ರಕಾಶಗೊಳಿಸುವ ದೇವನನ್ನು ಮುಮುಕ್ಷುವಾದ ನಾನು ಶರಣುಹೊಂದುತ್ತೇನೆ.' (ಶ್ವೇ. ಉ. ೬ ೧೮) ಎಂದು ಹೇಳುತ್ತದೆ. ಹಿರಣ್ಯಗರ್ಭನಿಗೆ ಪರಮೇಶ್ವರನ ಅನುಗ್ರಹದಿಂದ ಈ ಕಲ್ಪದಲ್ಲಿ ಅಧ್ಯಯನವಿಲ್ಲದೆಯೇ ವೇದಸ್ಮರಣೆಯು ಉಂಟಾಗುತ್ತದೆ.

"ಯಾರು ಯಾರು ಯಾವ ಯಾವ ಗುಣಕರ್ಮಗಳನ್ನು ಹಿಂದಿನ ಸೃಷ್ಟಿಯಲ್ಲಿ ಹೊಂದಿಕೊಂಡಿದ್ದರೋ ಮತ್ತೆ ಮತ್ತೆ ಸೃಷ್ಟಿಯಾದಾಗಲೂ ಅವರವರು ಅವವುಗಳನ್ನೇ ಹೊಂದಿಕೊಳ್ಳುತ್ತಾರೆ. ಹಿಂಸಾಕರವಾದ ಅಥವಾ ಅಹಿಂಸಾಕರವಾದ, ಮೃದುವಾದ ಅಥವಾ ಕ್ರೂರವಾದ ಜನ್ಮಗಳನ್ನೂ ಧರ್ಮಾಧರ್ಮಗಳನ್ನೂ ಸತ್ಯಾನೃತಗಳನ್ನೂ ಅದೇ ಭಾವನೆಯಿಂದ ಕೂಡಿ ಪಡೆದುಕೊಳ್ಳುತ್ತಾರೆ, ಆದ್ದರಿಂದ ಅದದು ಅವನವನಿಗೆ ಇಷ್ಟವಾಗಿರುತ್ತದೆ." (ಮೋಕ್ಷಧರ್ಮ : ೨೩೨-೧೬-೧೭) ಈ ಜಗತ್ತು ಪ್ರಲಯವಾಗುವಾಗಲೂ-ಮತ್ತೆ ಅದೇ ಆಕಾರದಲ್ಲಿ ಹುಟ್ಟುವದಕ್ಕೆ ಬೇಕಾದ-ತನ್ನ ಶಕ್ತಿಯನ್ನು ಉಳಿಸಿಕೊಂಡೇ ಪ್ರಲಯವಾಗುತ್ತದೆ, ಶಕ್ತಿಯೆಂಬ ಮೂಲದಿಂದಲೇ ಹುಟ್ಟುತ್ತದೆ ಎನ್ನಬೇಕು. ಏಕೆಂದರೆ, ಹಾಗಿಲ್ಲದಿದ್ದರೆ, ಯಾವ ಕಾರಣವೂ ಇಲ್ಲದೆಯೇ ಸೃಷ್ಟಿಪ್ರಲಯಗಳು ಆಗುವವು-ಎನ್ನಬೇಕಾದೀತು. ಶಕ್ತಿರೂಪವಾಗಿ ಕಾರಣರೂಪದಿಂದ ಉಳಿದುಕೊಳ್ಳುವದೇ ಪ್ರಲಯವು, ಶಕ್ತಿಯಿಂದ ಕಾರ್ಯರೂಪವಾಗಿ ತೋರಿಕೊಳ್ಳುವದೇ ಸೃಷ್ಟಿಯು. ಮೇಲಿನ ಲೋಕಗಳೂ ಕೆಳಗಿನ ಲೋಕಗಳೂ ಪ್ರವಾಹರೂಪದಿಂದ ಪ್ರತಿ ಸೃಷ್ಟಿಯಲ್ಲಿಯೂ ಒಂದೇ ರೂಪವಾಗಿ ಉಂಟಾಗುತ್ತಿರುವವು. ಒಂದು ಕಲ್ಪದಲ್ಲಿ ಶ್ರೋತೃವು ಶಬ್ದವನ್ನು ಗ್ರಹಿಸುವದು, ಇನ್ನೊಂದು ಕಲ್ಪದಲ್ಲಿ ಅದು ರೂಪವನ್ನೋ ಸ್ಪರ್ಶವನ್ನೋ ಗ್ರಹಿಸುವದು- ಎಂಬುದಿಲ್ಲ. ಇದರಂತೆಯೇ ಲೋಕಾದಿಗಳೂ ವ್ಯವಸ್ಥಿತವಾಗಿರುವವು, ದೇವತೆಗಳೂ ನಿಯಮಿತರಾಗಿರುವರು. ಆರನೆಯದೊಂದು ಜ್ಞಾನೇಂದ್ರಿಯವಾಗಲಿ ಅದಕ್ಕೆ ತಕ್ಕ ವಿಷಯವಾಗಲಿ ಹೊಸದಾಗಿ ತೋರಿಕೊಳ್ಳುವದು ಸಾಧ್ಯವಿಲ್ಲ.

ನಿಯತರಚನಾವತೋ ವಿದ್ಯಮಾನಸ್ಯೈವ ವೇದಸ್ಯ ಅಭಿವ್ಯಕ್ತಿಃ ಪುರುಷನಿಃಶ್ವಾಸವತ್, ನ ಚ ಪುರುಷಬುದ್ಧಿಪ್ರಯತ್ನಪೂರ್ವಕಃ। ಅತಃ ಪ್ರಮಾಣಂ ನಿರಪೇಕ್ಷ ಏವ ಸ್ವಾರ್ಥೇ । ತಸ್ಮಾತ್ ಯತ್ ತೇನೋಕ್ತಂ ತತ್ ತಥೈವ ಪ್ರತಿಪತ್ತವ್ಯಮ್ ಆತ್ಮನಃ ಶ್ರೇಯ ಇಚ್ಛದ್ಭಿಃ ಜ್ಞಾನಂ ವಾ ಕರ್ಮ ವಾ ಇತಿ । ....ತೇನ ವೇದಸ್ಯ

ಅಪ್ರಾಮಾಣ್ಯಮ್ ಆಶಙ್ಕ್ಯೇತ । ತದಾಶಂಕಾನಿವೃತ್ತ್ಯರ್ಥಮಿದ-
ಮುಕ್ತಂ ಪುರುಷನಿಃಶ್ವಾಸವತ್ ಅಪ್ರಯತ್ನೋತ್ಥಿತತ್ವಾತ್
ಪ್ರಮಾಣಂ ವೇದಃ ನ ಯಥಾನ್ಯೋ ಗ್ರನ್ಥಃ ಇತಿ ॥
(ಬೃ. ಭಾ. ೨-೪-೧೦)

ಗೊತ್ತಾದ ರಚನೆಯುಳ್ಳದ್ದಾಗಿ ಮೊದಲೂ ಇದ್ದೇ ಇರುವ ವೇದಕ್ಕೆ ಪುರುಷನ ನಿಃಶ್ವಾಸದಂತೆ ಪರಮಾತ್ಮನಿಂದ ಅಭಿವ್ಯಕ್ತಿಯಾಗುವದೇ ಹೊರತು, ವೇದವು ಪುರುಷಬುದ್ಧಿಪ್ರಯತ್ನಪೂರ್ವಕವಾಗಿ ಆದದ್ದಲ್ಲ. ಆದ್ದರಿಂದ ಅದು ನಿರಪೇಕ್ಷವಾಗಿಯೇ ತನ್ನ ಅರ್ಥದಲ್ಲಿ ಪ್ರಮಾಣವಾಗಿರುತ್ತದೆ. ಆದ್ದರಿಂದ ತಮಗೆ ಶ್ರೇಯಸ್ಸು ಆಗಬೇಕೆಂದು ಬಯಸುವವರು, ಅದು ಜ್ಞಾನವನ್ನೇ ಆಗಲಿ, ಕರ್ಮವನ್ನೇ ಆಗಲಿ, ಯಾವದನ್ನು ಹೇಳುತ್ತದೆಯೋ ಅದನ್ನು ಹಾಗೆಯೇ ಅರಿತುಕೊಳ್ಳಬೇಕು. ಮೀಮಾಂಸಕರಂತೆ ಕರ್ಮವನ್ನು ಮಾತ್ರ ಸ್ವೀಕರಿಸಿ, ಜ್ಞಾನವನ್ನು ಕೈಬಿಟ್ಟು, ಜ್ಞಾನಕಾಂಡದಲ್ಲಿಯ ವೇದದ ಪ್ರಾಮಾಣ್ಯವನ್ನು ತಿರಸ್ಕರಿಸಿ ಶ್ರೇಯಸ್ಸಿನಿಂದ ಚ್ಯುತರಾಗಬಾರದು. ಎಲ್ಲಾ ದ್ವೈತವೂ ಅವಿದ್ಯಾವಿಷಯವೇ ಎಂದುದರಿಂದ ವೇದಕ್ಕೆ ಅಪ್ರಾಮಾಣ್ಯವನ್ನು ಶಂಕಿಸಬಹುದು. ಆ ಶಂಕೆಯನ್ನು ಕಳೆಯುವದಕ್ಕೋಸ್ಕರ, ಪುರುಷನಿಃಶ್ವಾಸದಂತೆ ಯಾವ ಪ್ರಯತ್ನವೂ ಇಲ್ಲದೆ ಇದ್ದುಕೊಂಡಿರುವದರಿಂದ ವೇದವು ಪ್ರಮಾಣವು, ಮಿಕ್ಕ ಯಾವದಾದರೊಂದು ಪುರುಷಕೃತವಾದ ಗ್ರಂಥದಂತೆ ಅದಲ್ಲ-ಎಂದು ಇಲ್ಲಿ ಹೇಳಿರುತ್ತದೆ.

ಸಮಾನನಾಮರೂಪತಾಂ ಚ ಶ್ರುತಿಸ್ಮೃತೀ ದರ್ಶಯತಃ-
"ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್।
ದಿವಂ ಚ ಪೃಥಿವೀಂ ಚಾನ್ತರಿಕ್ಷಮಥೋ ಸ್ವಃ" ॥
(ಋ. ಸಂ. ೧೦-೧೯೦-೩) (ಸೂ. ಭಾ. ೧-೩-೩೦)

ಸೃಷ್ಟಿಗಳಲ್ಲಿ ವಿಶೇಷಗಳು ಸಮಾನನಾಮರೂಪವುಳ್ಳವಾಗಿಯೇ ಇರುವದೆಂಬುದನ್ನು ಶ್ರುತಿಸ್ಮೃತಿಗಳು ತಿಳಿಸುತ್ತವೆ. 'ಧಾತನು ಸೂರ್ಯಚಂದ್ರರನ್ನೂ ದ್ಯುಲೋಕವನ್ನೂ ಪೃಥಿವಿಯನ್ನೂ ಅಂತರಿಕ್ಷವನ್ನೂ ಮತ್ತೂ ಸ್ವರ್ಲೋಕವನ್ನೂ ಎಂದಿನಂತೆ ಉಂಟುಮಾಡಿದನು' -ಎಂದು ಶ್ರುತಿಯು ಹೇಳುತ್ತದೆ.

ಸತ್ತಮೇಲೆ ಅನುಭವಕ್ಕೆ ಬರುವ ಸ್ವರ್ಗಾದಿಫಲಗಳನ್ನು ಹೇಳುವ ಕರ್ಮಕಾಂಡದ ವಿಧಿಪ್ರಧಾನವಾದ ವೇದವಾಕ್ಯಗಳಂತಲ್ಲದೆ, (ಉತ್ತಮಾಧಿಕಾರಿಗೆ) ಇಲ್ಲಿಯೇ ಈಗಲೇ ಅನುಭವಕ್ಕೆ ಬರುವ ಮೋಕ್ಷಫಲವನ್ನು ಹೇಳುವ ಜ್ಞಾನಕಾಂಡದ ವಸ್ತುಬೋಧಕವಾಕ್ಯಗಳೂ ಇರುವದರಿಂದ ವೇದಪ್ರಾಮಾಣ್ಯವನ್ನು ಶಂಕಿಸುವಂತಿಲ್ಲ.

15. ....ಯದ್ಯಪಿ ಅನ್ಯತ್ರ ವೇದವಾಕ್ಯಾನಾಂ ವಿಧಿಸಂಸ್ಪರ್ಶ
ಮನ್ತರೇಣ ಪ್ರಮಾಣತ್ವಂ ನ ದೃಷ್ಟಮ್, ತಥಾಪಿ ಆತ್ಮ-

ವಿಜ್ಞಾನಸ್ಯ ಫಲಪರ್ಯನ್ತತ್ವಾತ್ ನ ತದ್ವಿಷಯಸ್ಯ ಶಾಸ್ತ್ರಸ್ಯ ಪ್ರಾಮಾಣ್ಯಂ ಶಕ್ಯಂ ಪ್ರತ್ಯಾಖ್ಯಾತುಮ್ । ನ ಚ ಅನುಮಾನ ಗಮ್ಯಂ ಶಾಸ್ತ್ರಪ್ರಾಮಾಣ್ಯಮ್,.... । ತಸ್ಮಾತ್ ಸಿದ್ಧಂ ಬ್ರಹ್ಮಣಃ ಶಾಸ್ತ್ರಪ್ರಮಾಣಕತ್ವಮ್ ॥ (ಸೂ. ಭಾ. ೧ ೧-೪)

ಬೇರ ಸ್ಥಳಗಳಲ್ಲಿ ವೇದವಾಕ್ಯಗಳು ವಿಧಿಯ ಸಂಬಂಧವಿಲ್ಲದೆ ಪ್ರಮಾಣ ವಾಗಿರುವದನ್ನು ನಾವು ಕಂಡಿಲ್ಲವಾದರೂ ಆತ್ಮಜ್ಞಾನವು (ನಾನು ಬ್ರಹ್ಮವಾಗಿ ದ್ದೇನೆಂಬ ಅನುಭವರೂಪವಾದ) ಫಲದಲ್ಲಿ ಕೊನೆಗಾಣುತ್ತಿರುವದರಿಂದ, ಅದರ ವಿಷಯವಾದ ಶಾಸ್ತ್ರವು ಪ್ರಮಾಣವೆಂಬುದನ್ನು ನಿರಾಕರಿಸುವದಕ್ಕೆ ಆಗುವದಿಲ್ಲ. ಇದಲ್ಲದೆ, ಶಾಸ್ತ್ರಪ್ರಾಮಾಣ್ಯವೆಂಬುದು ಅನುಮಾನದಿಂದ ಗೊತ್ತುಪಡಿಸಬೇಕಾದ ದ್ದಲ್ಲ, (ಶಾಸ್ತ್ರವು ಸ್ವತಃ ಪ್ರಮಾಣವಾಗಿರುತ್ತದೆ, ಅದು ಏಕೆ, ಹೇಗೆ, ಪ್ರಮಾಣ ವೆಂಬುದನ್ನು ಮತ್ತೊಂದರ ಸಹಾಯದಿಂದ ತೋರಿಸಿಕೊಡಬೇಕಾಗಿಲ್ಲ.) ಆದ್ದ ರಿಂದ ಬ್ರಹ್ಮಜ್ಞಾನಕ್ಕೆ ಶಾಸ್ತ್ರವೇ ಪ್ರಮಾಣವು ಎಂಬುದು ಸಿದ್ಧವಾಯಿತು. ಹೀಗೆ ಈಗಲೇ ಇಲ್ಲಿಯೇ ಅನುಭವದಲ್ಲಿ ಕೊನೆಗೊಳ್ಳುವ ಆತ್ಮಾನುಭವವನ್ನು ಬೋಧಿಸು ವದರಿಂದಲೇ ವೇದವು ಸ್ವತಃ (ಸ್ವತಂತ್ರ) ಪ್ರಮಾಣವೆನಿಸಿದೆ. ಅನುಭವ ದಲ್ಲಿ ಕೊನೆಗಾಣುವ ವಸ್ತುತಂತ್ರಜ್ಞಾನವನ್ನು ಬೋಧಿಸುವದರಿಂದಲೇ ವೇದವು ಪ್ರಮಾಣವೆನಿಸುತ್ತದೆ-ಎನ್ನುವದರಿಂದ ವೇದಕ್ಕಿಂತಲೂ ಅನುಭವಕ್ಕೇ ಹೆಚ್ಚಿನ ಗೌರವವನ್ನು ತೋರಿಸಿದಂತೆ ಕಾಣುತ್ತದೆ ; ಆದರೆ, ಪ್ರತ್ಯಕ್ಷಾದಿಗಳಲ್ಲಿ ಯಾವ ದೊಂದು ಪ್ರಮಾಣವೂ ನಿಜವಾದ ಪ್ರಮಾಣವೆನಿಸಬೇಕಾದರೆ, ಅದು ಅನುಭವ ದಿಂದಲೇ ಸಮರ್ಥನೆಯನ್ನು ಪಡೆಯಬೇಕಾಗಿರುವದರಿಂದ ವೇದದ ವಿಷಯದಲ್ಲಿ ಮಾತ್ರ ಅನುಭವದ ಸಮರ್ಥನೆಯು ವಿಶೇಷವೇನಲ್ಲ.

"ತತ್ತ್ವಮಸಿ" (ಛಾಂ. ೬-೮-೭) ಇತಿ ಬ್ರಹ್ಮಾತ್ಮಭಾವಸ್ಯ ಶಾಸ್ತ್ರಮನ್ತರೇಣಾನವಗಮ್ಯಮಾನತ್ವಾತ್ ॥ (ಸೂ ಭಾ. ೧-೧-೪)

"ಅದೇ ನೀನಾಗಿರುವೆ" ಎಂಬ ಶ್ರುತಿಯಲ್ಲಿ ಹೇಳಿರುವ ಬ್ರಹ್ಮಾತ್ಮಭಾವ ವನ್ನು ಶಾಸ್ತ್ರವಿಲ್ಲದೆ ತಿಳಿಯುವದಕ್ಕೆ ಆಗುವದಿಲ್ಲ.

ಜೀವನವನ್ನು ಪರಿಪೂರ್ಣದೃಷ್ಟಿಯಿಂದ ನೋಡಿ, ತತ್ತ್ವವನ್ನು ನಿರ್ಣಯಿ ಸುವ ಅನುಭವಪೂರ್ಣವಾದ ವೇದೋಕ್ತಜ್ಞಾನವು ಬೇರೆ ಯಾವ ತಾರ್ಕಿಕರಿಗೂ ದಕ್ಕಲಾರದು. ಎಚ್ಚರದ ಅವಸ್ಥೆಗೇ ಹೆಚ್ಚು ಮಹತ್ವವನ್ನು ಕೊಡುವ ತಾರ್ಕಿಕರ ದೃಷ್ಟಿಯು ಪಕ್ಷಪಾತದಿಂದ ಕೂಡಿದೆ.

16. ಅವಿದ್ಯಾಕೃತನಾಮರೂಪೋಪಾಧಿನಿಮಿತ್ತೋ ಹಿ ವಿಶೇಷಃ ಅಭ್ಯುಪಗಮ್ಯತೇ ಆತ್ಮನೋ ಬನ್ಧಮೋಕ್ಷಾದಿಶಾಸ್ತ್ರ ಕೃತಸಂವ್ಯವಹಾರಾಯ । ಪರಮಾರ್ಥತೋಽನುಪಾಧಿಕೃತಂ ಚ

ತತ್ತ್ವಮ್ ಏಕಮೇವಾದ್ವಿತೀಯಮ್ ಅಹೇಯಮನುಪಾದೇಯಂ ಸರ್ವತಾರ್ಕಿಕಬುದ್ಧ್ಯನವಗಾಹ್ಯಂ ಹ್ಯಜಮಭಯಂ ಶಿವಮ್ ಇಷ್ಯತೇ । ನ ತತ್ರ ಕರ್ತೃತ್ವಂ ಭೋಕ್ತೃತ್ವಂ ವಾ ಕ್ರಿಯಾಕಾರಕಫಲಂ ವಾ ಅಸ್ತಿ । ಅದ್ವೈತತ್ವಾತ್ ಸರ್ವಭಾವಾನಾಮ್ ॥ (ಪ್ರ. ಭಾ. ೬-೩)

ಆತ್ಮನಿಗೆ ಬಂಧ, ಮೋಕ್ಷ ಮುಂತಾದ, ಶಾಸ್ತ್ರವು ಹೇಳುವ ವ್ಯವಹಾರಕ್ಕಾಗಿ, ಅವಿದ್ಯೆಯಿಂದಾಗಿರುವ ನಾಮರೂಪಗಳೆಂಬ ಉಪಾಧಿನಿಮಿತ್ತದಿಂದಾಗುವ ವಿಶೇಷವುಂಟೆಂದು ನಾವು ಒಪ್ಪಿರುತ್ತೇವೆ. ಆದರೆ, ನಿಜವಾಗಿ ಯಾವ ಉಪಾಧಿಯೂ ಇಲ್ಲದ. ತನಗೆರಡನೆಯದಿಲ್ಲದ ಒಂದೇ ಒಂದಾದ, ಬಿಡುವದಕ್ಕಾಗಲೀ ತೆಗೆದುಕೊಳ್ಳುವದಕ್ಕಾಗಲೀ ಬಾರದ, ಹುಟ್ಟಿಲ್ಲದ, ಭಯವಿಲ್ಲದ ಮಂಗಲಕರವಾದ ಆ ಬ್ರಹ್ಮಾತ್ಮತತ್ತ್ವವು ಯಾವ ತಾರ್ಕಿಕರ ಬುದ್ಧಿಗೂ ನಿಲುಕದ ವಸ್ತುವೆಂದು ಅಭಿಪ್ರಾಯಪಡುತ್ತೇವೆ.

(ಬಂಧ. ಮೋಕ್ಷ, ವಿದ್ಯೆ, ಅವಿದ್ಯೆ ಮೊದಲಾದ ಕಲ್ಪನೆಗಳ ವ್ಯವಹಾರವನ್ನು ಶಾಸ್ತ್ರವು ಉಪದೇಶಕ್ಕಾಗಿ ಇಟ್ಟುಕೊಂಡಿದೆಯೇ ಹೊರತು ಅದು ಪರಮಾರ್ಥವೆಂದೇನೂ ಅದು ಹೇಳುವದಿಲ್ಲ.)

ಉಪಾಧಿರಹಿತನಾದ ಆತ್ಮನಲ್ಲಿ ಕರ್ತೃತ್ವವಾಗಲೀ ಭೋಕ್ತೃತ್ವವಾಗಲೀ ಕ್ರಿಯಾಕಾರಕಫಲಗಳಾಗಲೀ ಇರುವದಿಲ್ಲ. ಏಕೆಂದರೆ, ಎಲ್ಲಾ ಭಾವಗಳೂ ಅದ್ವೈತವಾಗಿರುತ್ತವೆ.

**17.** ಪ್ರಿಯೆ ಮೈತ್ರೇಯಿ ! ಇದುವರೆಗೆ, ಪ್ರಪಂಚದ ಸ್ಥಿತಿಕಾಲದಲ್ಲಿಯೂ ಉತ್ಪತ್ತಿಕಾಲದಲ್ಲಿಯೂ ಎಲ್ಲವೂ ಚಿನ್ಮಾತ್ರಸ್ವರೂಪವಾದ ಬ್ರಹ್ಮವೇ ಆಗಿವೆ-ಎಂಬುದನ್ನು ನಿನಗೆ ದೃಷ್ಟಾಂತಗಳ ಮೂಲಕ ಸಯುಕ್ತಿಕವಾಗಿ ಹೇಗೆ ತೋರಿಸಿಕೊಟ್ಟೆನೋ ಹಾಗೆ, ಈಗ, ಜಗತ್ತಿನ ಪ್ರಳಯಕಾಲದಲ್ಲಿಯೂ ಎಲ್ಲವೂ ಪ್ರಜ್ಞಾನಘನವಾದ ಬ್ರಹ್ಮವೇ ಆಗಿದೆ ಎಂಬುದನ್ನು ತಿಳಿಸುತ್ತೇನೆ.

## ಏಕಾಯನಪ್ರಕ್ರಿಯೆ

ನದೀನದ ಮೊದಲಾದ ಜಲಾಶಯಗಳಲ್ಲಿರುವ ಎಲ್ಲಾ ನೀರುಗಳಿಗೂ ಸಮುದ್ರವು ಒಂದೇ ಹೇಗೆ ಆಶ್ರಯಸ್ಥಾನವೋ ಹಾಗೆ ಸ್ಪರ್ಶಾದಿ ಸಕಲವಿಷಯಗಳಿಗೂ ಶ್ರೋತ್ರ, ತ್ವಕ್ಕು ಮೊದಲಾದ ಇಂದ್ರಿಯಗಳು ಆಶ್ರಯಸ್ಥಾನವು. ಅಂದರೆ, ಮೃದು, ಕಠಿನ ಮೊದಲಾದ ಬಗೆಬಗೆಯ ಸ್ಪರ್ಶಗಳು ಸ್ಪರ್ಶವೆಂಬ ಸಾಮಾನ್ಯವನ್ನು ಬಿಟ್ಟು ಬೇರೆಯಿಲ್ಲ. ನದೀ ಮೊದಲಾದವುಗಳು ನೀರು ಹರಿದುಹೋಗಿ ಕೊನೆಗೆ ಸೇರುವ ಸಮುದ್ರದ ನೀರನ್ನು ಬಿಟ್ಟು ಬೇರೆ ಹೇಗಿಲ್ಲವೋ ಹಾಗೆ ಶಬ್ದಸ್ಪರ್ಶಾದಿವಿಷಯಗಳು, ಅವನ್ನು ಗ್ರಹಿಸುವ ಶ್ರೋತ್ರ,

ತ್ವಕ್ಕು ಮೊದಲಾದ ಇಂದ್ರಿಯಗಳು ಸಂಕಲ್ಪರೂಪವಾದ ಮನಸ್ಸಿನಿಂದ ಬೇರೆ ಇಲ್ಲ. ಮನಸ್ಸು ಬುದ್ಧಿಗಿಂತ ಬೇರೆಯಿಲ್ಲ, ಬುದ್ಧಿಯೂ ತನಗೆ ಸಾಕ್ಷಿಯಾಗಿ ತನ್ನನ್ನು ಬೆಳಗುತ್ತಿರುವ ಪ್ರಜ್ಞಾನಘನಕ್ಕಿಂತ ಬೇರೆಯಾಗಿಲ್ಲ. ಆದ್ದರಿಂದ,

> ....ವಿಜ್ಞಾನಮಾತ್ರಮೇವ ಭೂತ್ವಾ ಪ್ರಜ್ಞಾನಘನೇ ಪರೇ ಬ್ರಹ್ಮಣಿ ಆಪ ಇವ ಸಮುದ್ರೇ ಪ್ರಲೀಯತೇ । ಏವಂ ಪರಂ-ಪರಾಕ್ರಮೇಣ ಶಬ್ದಾದೌ ಸಹ ಗ್ರಾಹಕೇಣ ಕರಣೇನ ಪ್ರಲೀನೇ ಪ್ರಜ್ಞಾನಘನೇ ಉಪಾಧ್ಯಭಾವಾತ್ ಸೈನ್ಧವಘನವತ್ ಪ್ರಜ್ಞಾನ ಘನಮ್ ಏಕರಸಮ್ ಅನನ್ತಮ್ ಅಪಾರಂ ನಿರನ್ತರಂ ಬ್ರಹ್ಮ ವ್ಯವತಿಷ್ಠತೇ । ತಸ್ಮಾತ್ ಆತ್ಮೈವೈಕಮ್ ಅದ್ವಯಮಿತಿ ಪ್ರತಿ-ಪತ್ತವ್ಯಮ್ ॥ (ಬೃ. ಭಾ. ೨-೪-೧೧)

ಬುದ್ಧಿಯು ಬರಿಯ ವಿಜ್ಞಾನವೇ ಆಗಿ ಪ್ರಜ್ಞಾನಘನವಾದ ಪರಬ್ರಹ್ಮದಲ್ಲಿ -ನೀರುಗಳು ಸಮುದ್ರದಲ್ಲಿ ಅಡಗುವಂತೆ- ಲಯವಾಗುತ್ತದೆ. ಹೀಗೆಯೇ ಪರಂಪರೆಯ ಕ್ರಮದಿಂದ ಶಬ್ದಾದಿಗಳೂ ಗ್ರಾಹಕವಾದ ಇಂದ್ರಿಯಗಳು ಮತ್ತು ಅಂತಃಕರಣಸಹಿತವಾಗಿ ಪ್ರಜ್ಞಾನಘನದಲ್ಲಿ ಪ್ರಲಯವಾಗಲು ಉಪಾಧಿಯೇ ಇಲ್ಲದ್ದರಿಂದ, (ಬ್ರಹ್ಮಕ್ಕೆ ಅಧ್ಯಾತ್ಮಿಕವಾದ ಅಥವಾ ಆಧಿಭೌತಿಕವಾದ ಯಾವ ಉಪಾಧಿಯೂ ಇಲ್ಲವಾದ್ದರಿಂದ) ಉಪ್ಪಿನ ಹರಳಿನಂತೆ ಪ್ರಜ್ಞಾನಘನವಾಗಿ ಏಕರಸವೂ ಅನಂತವೂ ಅಪಾರವೂ ನಿರಂತರವೂ ಆದ ಬ್ರಹ್ಮವಾಗಿ ನಿಂತುಕೊಳ್ಳುವದು. ಆದ್ದರಿಂದ ಆತ್ಮನೇ ತನಗೆರಡನೆಯದಿಲ್ಲದ ಏಕತತ್ತ್ವವೆಂದು ತಿಳಿಯತಕ್ಕದ್ದು.

ಪ್ರಜ್ಞಾನಘನವಾದ ಬ್ರಹ್ಮದಿಂದ ಸಮಷ್ಟಿಬುದ್ಧಿರೂಪವಾದ ಮಹತ್ ತತ್ತ್ವವೂ, ಬುದ್ಧಿಯಿಂದ ಮನಸ್ಸೂ, ಮನಸ್ಸಿನಿಂದ ಇಂದ್ರಿಯಗಳೂ ಇಂದ್ರಿಯಗಳಿಂದ ವಿಷಯಗಳೂ ಕ್ರಮವಾಗಿ ಸೃಷ್ಟಿಯಾದಂತೆ ತೋರುತ್ತಿರುವದರಿಂದ, ಪ್ರಳಯದಲ್ಲಿ ಇದಕ್ಕೆ ವಿಪರೀತಕ್ರಮದಿಂದ ವಿಷಯಗಳೆಲ್ಲವೂ ಇಂದ್ರಿಯಗಳಲ್ಲಿಯೂ ಇಂದ್ರಿಯಗಳು ಮನಸ್ಸಿನಲ್ಲಿಯೂ ಮನಸ್ಸು ಬುದ್ಧಿಯಲ್ಲಿಯೂ ಬುದ್ಧಿಯ ವಿಷಯಸಾಮಾನ್ಯವಾದ ವಿಜ್ಞಾನ(ಬಿಡಿಬಿಡಿಯಾದ ಅರಿವು)ಮಾತ್ರವು-ಚೈತನ್ಯ ಸ್ವರೂಪವಾದ ಬ್ರಹ್ಮದಲ್ಲಿಯೂ ಲಯವಾಗಿ, ಜಗತ್ತೆಲ್ಲವೂ ಬ್ರಹ್ಮವೇ ಆಗುವದು ಸ್ವಾಭಾವಿಕವಾಗಿದೆ. ಬ್ರಹ್ಮವು ಸರ್ವಕಾರಣವಾಗಿರುವದರಿಂದ ಮಿಕ್ಕದ್ದೆಲ್ಲವೂ ಅದರ ಕಾರ್ಯವೇ. ಕ್ರಿಯಾಶಕ್ತಿ, ಜ್ಞಾನಶಕ್ತಿ-ಈ ಎರಡೂ ಪರಮಾತ್ಮನ ಉಪಾಧಿಗಳಾದುದರಿಂದ, ಕರ್ಮೇಂದ್ರಿಯಜ್ಞಾನೇಂದ್ರಿಯಗಳೆರಡೂ ಪ್ರಾಣದಲ್ಲಿಯೂ ಪ್ರಾಣವು ಪರಮಾತ್ಮನಲ್ಲಿಯೂ ಲಯವಾಗುವವು.

"ಯೋ ವೈ ಪ್ರಾಣಃ ಸಾ ಪ್ರಜ್ಞಾ; ಯಾ ವಾ ಪ್ರಜ್ಞಾ ಸ ಪ್ರಾಣಃ" (ಕೌಷೀತಕಿ. ಉ. ३-३)

ಪ್ರಾಣವೆಂಬುದು ಯಾವದೋ ಅದು ಪ್ರಜ್ಞೆಯೇ; ಪ್ರಜ್ಞೆ ಎಂಬುದು ಯಾವದೋ ಅದು ಪ್ರಾಣವೇ.

ವಿಚಾರಕ್ಕಾಗಿ ಇಲ್ಲಿ ಕ್ರಮವನ್ನು ಹೇಳಿದ್ದರೂ ಕರಣಗಳೂ ವಿಷಯಗಳೂ ಒಟ್ಟಿಗೆ ಹೊರತೋರಿಕೊಂಡು, ಒಟ್ಟಿಗೆ ಲಯವಾಗುವವು-ಎಂದೇ ತಿಳಿಯಬೇಕು. ಇದು ನೈಸರ್ಗಿಕಪ್ರಳಯ, ಅಥವಾ ಸ್ವಾಭಾವಿಕಪ್ರಳಯ.

ಜಗತ್ತಿನ ನೀರುಗಳೆಲ್ಲಾ ಹೋಗಿ ಸೇರಲು ಸಮುದ್ರವು ಒಂದೇ ಹೇಗೆ (ಕೊನೆಯ ಗತಿಯೋ) ಏ ಕಾ ಯ ನ ವೋ ಹಾಗೆ, ನಾಮರೂಪಕರ್ಮಗಳ ಜಗತ್ತೆಲ್ಲವೂ ಲಯವಾಗಲು ಬ್ರಹ್ಮವೊಂದೇ ಕೊನೆಯ ಏಕಾಯನವು (ಒಂದೇ ಆದ ಆಶ್ರಯ-ಆಸ್ಪದ-ಸ್ಥಾನವು) ಬ್ರಹ್ಮಾತ್ಮಜ್ಞಾನಕ್ಕೆ ಉಪಾಯವಾದ ಈ ಪ್ರಕ್ರಿಯೆಯೇ ಏಕಾಯನ ಪ್ರಕ್ರಿಯೆ ಎನಿಸುತ್ತದೆ.

ಇದರಲ್ಲಿ ಮಾದರಿಗಾಗಿ, ಹೊರಗಿನ ರೂಪವು ಕಣ್ಣಿನಲ್ಲಿ, ಕಣ್ಣು ಮನಸ್ಸಿನಲ್ಲಿ, ಮನಸ್ಸು ಬುದ್ಧಿಯಲ್ಲಿ, ಬುದ್ಧಿಯು ಪ್ರಜ್ಞಾನಘನವಾದ (ಬ್ರಹ್ಮಾತ್ಮರೂಪ) ತನ್ನಲ್ಲಿ ಸ್ವಾಭಾವಿಕವಾಗಿ ಲಯಹೊಂದುವದನ್ನು ವಿಚಾರದಿಂದ ಲಕ್ಷಿಸಿದರೆ, ಚಿನ್ಮಾತ್ರಸ್ವರೂಪನಾದ ತಾನೊಬ್ಬನೇ ಉಳಿಯುವದು-ಅನುಭವಕ್ಕೆ ಬರುತ್ತದೆ.

....ಪ್ರಲಯಕಾಲೇ ಚ ಜಲಬುದ್ಬುದಫೇನಾದೀನಾಮಿವ ಸಲಿಲವ್ಯತಿರೇಕೇಣಾಭಾವಃ, ಏ ವ ಂ ಪ್ರಜ್ಞಾನವ್ಯತಿರೇಕೇಣ ತತ್ಕಾರ್ಯಾಣಾಂ ನಾಮರೂಪಕರ್ಮಣಾಂ ತಸ್ಮಿನ್ನೇವ ಲೀಯಮಾನಾನಾಮ್ ಅಭಾವಃ । ತಸ್ಮಾದೇಕನೇವ ಬ್ರಹ್ಮ ಪ್ರಜ್ಞಾನಘನಮ್ ಏಕರಸಂ ಪ್ರತಿಪತ್ತವ್ಯಮ್ ಇತಿ ॥ (ಬೃ. ಭಾ. ೨-೪-೧೧)

ನೀರಿನಲ್ಲಿ ತೋರಿ ಅಡಗುತ್ತಿರುವ, ನೀರಿನ ಗುಳ್ಳೆ, ನೊರೆ-ಮುಂತಾದವುಗಳು ಆ ನೀರನ್ನು ಬಿಟ್ಟು ಹೇಗೆ ಬೇರೆಯಾಗಿರುವದಿಲ್ಲವೋ ಹಾಗೆ ಪ್ರಜ್ಞಾನದ ಕಾರ್ಯವಾದ ನಾಮರೂಪಕರ್ಮಗಳು ಪ್ರಲಯಕಾಲದಲ್ಲಿಯೂ ಪ್ರಜ್ಞಾನದಲ್ಲಿಯೇ ಲಯವಾಗುವದರಿಂದ ಆ ಪ್ರಜ್ಞಾನಘನವನ್ನು ಬಿಟ್ಟು ನಾಮರೂಪಕರ್ಮಾತ್ಮಕವಾದ ಜಗತ್ತು ಬೇರೆ ಸ್ವತಂತ್ರವಾಗಿರುವದಿಲ್ಲ. ಆದ್ದರಿಂದ, ತನ್ನ ಸ್ವರೂಪವಾದ ಬ್ರಹ್ಮವು ಒಂದೇ, ಪ್ರಜ್ಞಾನಘನವು, ಏಕರಸವು ಎಂದು ತಿಳಿದುಕೊಳ್ಳಬೇಕು.

ತತ್ರ 'ಇದಂ ಸರ್ವಂ ಯದಯಮಾತ್ಮಾ' (೨-೪-೬) ಇತಿ ಪ್ರತಿಜ್ಞಾತಮ್ । ತತ್ರ ಹೇತುರಭಿಹಿತಃ ಆತ್ಮಸಾಮಾನ್ಯತ್ವಮ್ ಆತ್ಮಜತ್ವಮ್ ಆತ್ಮಪ್ರಲಯತ್ವಂ ಚ । ತಸ್ಮಾತ್ ಉತ್ಪತ್ತಿಸ್ಥಿತಿ

ಪ್ರಲಯಕಾಲೇಷು ಪ್ರಜ್ಞಾನವ್ಯತಿರೇಕೇಣ ಅಭಾವಾತ್ ಪ್ರಜ್ಞಾನಂ ಬ್ರಹ್ಮೈವ (ಇತಿ) ಆತ್ಮೈವೇದಂ ಸರ್ವಮಿತಿ ಪ್ರತಿಜ್ಞಾತಂ ಯತ್ ತತ್ತರ್ಕತಃ ಸಾಧಿತಮ್ । ಸ್ವಾಭಾವಿಕೋಽಯಂ ಪ್ರಲಯ ಇತಿ ಪೌರಾಣಿಕಾವದನ್ತಿ । ಯಸ್ತು ಬುದ್ಧಿಪೂರ್ವಕಃ ಪ್ರಲಯೋ ಬ್ರಹ್ಮವಿದಾಂ ಬ್ರಹ್ಮವಿದ್ಯಾನಿಮಿತ್ತಃ, ಅಯಮಾತ್ಯನ್ತಿಕ ಇತ್ಯಾಚಕ್ಷತೇ । ಅವಿದ್ಯಾನಿರೋಧದ್ವಾರೇಣ ಭವತಿ ॥ (ಬೃ. ಭಾ. ೨-೪-೧೨)

ಇಲ್ಲಿ "ಇದೆಲ್ಲವೂ ಈ ಆತ್ಮನೇ ಆಗಿದೆ" (೨-೪-೬) ಎಂದು ಪ್ರತಿಜ್ಞೆ ಮಾಡಲಾಗಿತ್ತು. ಆ ಪ್ರತಿಜ್ಞೆಗೆ ಆತ್ಮನೇ ಜಗತ್ತಿಗೆಲ್ಲಾ (ಜಗತ್ತಿನ ಸಾಮಾನ್ಯವಿಶೇಷಗಳಿಗೆಲ್ಲಾ) ಸಾಮಾನ್ಯವಾಗಿರುವದು ; ಆತ್ಮನಿಂದ ಜಗತ್ತೆಲ್ಲಾ ಜನಿಸುವದು, ಮತ್ತು ಆತ್ಮನಲ್ಲಿಯೇ ಎಲ್ಲವೂ ಪ್ರಲಯವಾಗುವದು-ಎಂಬ ಹೇತುವನ್ನು (ಯುಕ್ತಿಗಳನ್ನು ) ಹೇಳಿದ್ದಾಯಿತು. ಆದ್ದರಿಂದ ಉತ್ಪತ್ತಿಸ್ಥಿತಿಪ್ರಲಯಗಳಲ್ಲಿ ಪ್ರಜ್ಞಾನವನ್ನು ಬಿಟ್ಟು ಬೇರೇನೂ ಇಲ್ಲದಿರುವದರಿಂದ, 'ಪ್ರಜ್ಞಾನವು ಬ್ರಹ್ಮವೇ' ಎಂದೂ 'ಇದೆಲ್ಲವೂ ಆತ್ಮನೇ' ಎಂದೂ ಹಿಂದೆ ಪ್ರತಿಜ್ಞೆಮಾಡಿದ್ದನ್ನು ತರ್ಕದಿಂದ ಸಾಧನೆ ಮಾಡಿದ್ದಾಯಿತು. ಇದನ್ನು ಸ್ವಾಭಾವಿಕಪ್ರಲಯ ಎಂದು ಪೌರಾಣಿಕರು ಕರೆಯುತ್ತಾರೆ ; ಬ್ರಹ್ಮಜ್ಞಾನಿಗಳಿಗೆ ಬ್ರಹ್ಮವಿದ್ಯೆಯ ನಿಮಿತ್ತದಿಂದ ಆಗುವ ಬುದ್ಧಿಪೂರ್ವಕವಾದ ಪ್ರಲಯವಿಷಯವಲ್ಲ, ಇದನ್ನು ಆತ್ಯಂತಿಕಪ್ರಲಯವು- ಎಂದು ಕರೆಯುತ್ತಾರೆ. ಅವಿದ್ಯಾನಾಶದ ಮೂಲಕ ಇದು ಆಗುತ್ತದೆ.

ತತ್ತ್ವವಿಚಾರದ ವಿವೇಕಬಲದಿಂದಾಗುವ ಅಜ್ಞಾನಭ್ರಮೆಯ ಈ ಬಗೆಯ ಲಯವೇ ಜ್ಞಾನನಿಮಿತ್ತದಿಂದಾಗುವ ಆತ್ಯಂತಿಕಪ್ರಳಯವು. ಆತ್ಮಜ್ಞಾನದಿಂದ ಬ್ರಹ್ಮನಿಷ್ಠನಲ್ಲಿ ಜಗತ್ತಿನ ಭ್ರಮೆಯು ಒಮ್ಮೆ ನಾಶವಾಯಿತೆಂದರೆ, (ಅದು ಪುನಃ ತೋರಿಕೊಳ್ಳುವದಿಲ್ಲವಾದ್ದರಿಂದ) ಅದು ಆತ್ಯಂತಿಕನಾಶವೆನಿಸುತ್ತದೆ.

ಸ್ವಾಭಾವಿಕಪ್ರಳಯದಲ್ಲಿ ವೈಯಕ್ತಿಕಪ್ರಲಯ ಮತ್ತು ಸಾರ್ವತ್ರಿಕಪ್ರಲಯ -ಎಂದು ಎರಡು ಬಗೆಗಳಿವೆ. ವ್ಯಕ್ತಿಜೀವನದಲ್ಲಿ ನಿತ್ಯವೂ ಆಗುವ ನಿದ್ರೆಯ ಅನುಭವವು ದೈನಂದಿನಪ್ರಲಯ. ಮದ-ಮೂರ್ಛಾದಿಗಳಲ್ಲಿ ಆಗುವ ಶೂನ್ಯದ ಅನುಭವವು ನೈಮಿತ್ತಿಕವೂ ತಾತ್ಕಾಲಿಕವೂ ಆದ ಪ್ರಲಯವೆನ್ನಬಹುದು. ಯೋಗಿಗೆ ನಿರ್ವಿಕಲ್ಪಸಮಾಧಿಯಲ್ಲಾಗುವ ಅನುಭವವು ಪ್ರಯತ್ನಸಾಧ್ಯವಾದ ಪ್ರಲಯವು. ಜೀವನದ ಕೊನೆಯಲ್ಲಿ ಪ್ರತಿಯೊಂದು ಜೀವಿಗೂ ತಪ್ಪದೇ ಬರುವ ಮರಣವು ಪರಾಂತಪ್ರಲಯವು-ಎನ್ನಬಹುದು. ಆದರೆ, ಕಲ್ಪಾಂತದಲ್ಲಾಗುವ ಪ್ರಳಯವು ಸಾರ್ವತ್ರಿಕವಾದುದು. ನಿದ್ರೆಯಿಂದಲೂ ಮದಮೂರ್ಛಾದಿಗಳಿಂದಲೂ ಜೀವನು ಪುನಃ ಎಚ್ಚರವಾಗುತ್ತಾನೆ. ಸಮಾಧಿ

ಯಿಂದಲೂ ಯೋಗಿಯು ಪುನಃ ವ್ಯುತ್ಥಾನಹೊಂದಿ ಬಾಹ್ಯಪ್ರಜ್ಞೆಯನ್ನು ಪಡೆಯುತ್ತಾನೆ. ಮರಣಾನಂತರವೂ ಜೀವನಿಗೆ ಪುನಃ ಜನ್ಮವಿದೆ. ಪ್ರಪಂಚವೆಲ್ಲಾ ಪ್ರಳಯವಾದಮೇಲೂ ಮುಂದಿನ ಕಲ್ಪದ ಆರಂಭದಲ್ಲಿ ಪ್ರಪಂಚವು ಪುನಃ ಸೃಷ್ಟಿಯಾಗುತ್ತದೆ. ಆದ್ದರಿಂದ, ಪ್ರಳಯದ ಈ ಎಲ್ಲಾ ಬಗೆಗಳೂ ತಾತ್ಕಾಲಿಕವಾಗಿವೆ.

**18.** ಹೀಗೆ, ತೋರುತ್ತಲೂ ಅಡಗುತ್ತಲೂ ಇರುವ ಈ ಮಾಯಾ ಪ್ರಪಂಚಕ್ಕೆ ವ್ಯಾಕೃತ (ವ್ಯಕ್ತ) ಮತ್ತು ಅವ್ಯಾಕೃತ (ಅವ್ಯಕ್ತ) ಎಂಬ ಎರಡು ರೂಪಗಳಿವೆ. ವ್ಯಾಕೃತಜಗತ್ತು ನಶ್ವರವಾದುದರಿಂದ ಕ್ಷರವೆನಿಸಿದೆ. ಇದರ ಬೀಜ ಶಕ್ತಿಯಾದ ಅವ್ಯಾಕೃತಮಾಯೆಯು-ಸಾಪೇಕ್ಷವಾಗಿ ಅವಿನಾಶಿಯಾದುದರಿಂದ ಅಕ್ಷರವೆನಿಸಿದೆ. ಮತ್ತು ಆತ್ಮಜ್ಞಾನದಿಂದ ಇದು ಬಾಧಿತವಾಗುವವರೆಗೂ ನಾಶವಾಗುವದಿಲ್ಲವಾದ್ದರಿಂದಲೂ ಇದು ಅಕ್ಷರವೆನಿಸಿದೆ. ಪ್ರಳಯದಲ್ಲಿ ಇರುವ ಗೂಢ ಶಕ್ತಿಯ ರೂಪವೇ ಅವ್ಯಾಕೃತ. ಅವ್ಯಾಕೃತವು ಬ್ರಹ್ಮಕ್ಕಿಂತ ಬೇರೆಯೆಂದಾಗಲೀ ಬೇರೆಯಲ್ಲವೆಂದಾಗಲೀ ಹೇಳುವದಕ್ಕೆ ಬಾರದ ಅನಿರ್ವಚನೀಯವಾದ್ದರಿಂದ ಅವ್ಯಕ್ತವೆನಿಸಿದೆ. (ಗೀ. ೮-೨೧) ಅವ್ಯಾಕೃತವಾದ ಅವ್ಯಕ್ತವು ಅಥವಾ ಅಕ್ಷರವು ಕಾಲದಲ್ಲಿ ನಾಶವಾಗುವದಿಲ್ಲವಾದರೂ ಆತ್ಮಜ್ಞಾನದಿಂದ ಬಾಧಿತವಾಗುತ್ತದೆ ; ಏಕೆಂದರೆ, ಅವ್ಯಕ್ತವು ಅವಿದ್ಯಾಕಲ್ಪಿತವು.

ಭೂತಭೌತಿಕರೂಪದಿಂದ ಹೊರಗೆ ತೋರುತ್ತಿರುವ (ವ್ಯಕ್ತವಾದ) ಕಾರ್ಯ ಪ್ರಪಂಚವು ಕ್ಷರಪುರುಷನೆನಿಸುತ್ತದೆ. ಏಕೆಂದರೆ ಇದು ವಿಕಾರವಾಗುತ್ತಿದ್ದು, ಕೊನೆಗೆ ನಾಶವಾಗುತ್ತದೆ. ಈ ಕ್ಷರವು ಪ್ರಳಯದಲ್ಲಿ ಪಡೆಯುವ ಬೀಜರೂಪ ಅವ್ಯಕ್ತಶಕ್ತಿಯೇ ಅಕ್ಷರಪುರುಷ. ಏಕೆಂದರೆ, ಅದು ಅವಿದ್ಯಾತ್ಮಕಸಂಸಾರವು ಇರುವವರೆಗೂ ನಾಶವಾಗದೇ ಇರುತ್ತದೆ. ಈ ಕ್ಷರಾಕ್ಷರಗಳೆರಡಕ್ಕೂ ತಿರುಳಾಗಿ ಅವುಗಳನ್ನು ಸಾಕ್ಷಿಯಾಗಿ ಬೆಳಗುತ್ತಾ ನಿರ್ವಿಕಾರನಾಗಿರುವ ಪರಮಾತ್ಮನೇ ಅವೆರಡಕ್ಕಿಂತಲೂ ಅತ್ಯಂತವಿಲಕ್ಷಣಸ್ವಭಾವದ ನಿಜವಾದ ಪುರುಷನಾದುದರಿಂದ ಪುರುಷೋತ್ತಮನೆನಿಸುತ್ತಾನೆ. (ಗೀ. ೧೫-೧೬, ೧೭, ೧೮, ೧೯) ಪುರುಷೋತ್ತಮನಾದ ಪರಮಾತ್ಮನು ಮಾತಿಗೂ ಮನಸ್ಸಿಗೂ ನಿಲುಕದವನಾದುದರಿಂದ ಅವನನ್ನು ಸತ್ತೆಂದಾಗಲಿ, ಅಸತ್ತೆಂದಾಗಲಿ ಹೇಳುವದಕ್ಕೆ ಬಾರದು. (ಗೀ. ೧೩-೧೨) ಆದರೆ, ವ್ಯಾಕೃತವು ತೋರುವದಾದ್ದರಿಂದ ಅದನ್ನು ಸತ್ತೆನ್ನಬಹುದು. ಅವ್ಯಾಕೃತವು ಇಂದ್ರಿಯಗೋಚರವಲ್ಲವಾದ್ದರಿಂದ ಅದನ್ನು ಅಸತ್ತೆನ್ನಬಹುದು. ವ್ಯಾಕೃತವನ್ನು ತಿಳಿಯಬಹುದಾದ್ದರಿಂದ ಅದು ವಿದಿತವೆನಿಸುತ್ತದೆ. ಹೊರಗೆ ನಾಮರೂಪಕರ್ಮಗಳಾಗಿ ತೋರಿಕೊಳ್ಳುವ ಪ್ರಪಂಚವೆಲ್ಲವೂ ವ್ಯಾಕೃತ ಮತ್ತು ವಿದಿತ ; ವ್ಯಾಕೃತಕ್ಕೆ ಕಾರಣವಾಗಿ, ಸೃಷ್ಟಿಗೆ ಮೊದಲಿತ್ತೆಂದು ನಾವು (ತಪ್ಪುತಿಳಿವಳಿಕೆಯಿಂದ) ಕಲ್ಪಿಸುವ ಬೀಜಶಕ್ತಿಯು ಅವ್ಯಾಕೃತ ಮತ್ತು ಅವಿದಿತ. ಏಕೆಂದರೆ ಅದನ್ನು

ತಿಳಿಯಲಾಗುವದಿಲ್ಲ. ಬ್ರಹ್ಮವು ಇವೆರಡಕ್ಕಿಂತಲೂ ಬೇರೆಯಾಗಿದೆ. (ಕೇ. ಉ. ೧-೪) ಹೀಗೆ, ಈ ವ್ಯಕ್ತಾವ್ಯಕ್ತದ, ಅಥವಾ ವ್ಯಾಕೃತಾವ್ಯಾಕೃತದ ಕ್ಷರಾಕ್ಷರ ಭಾವಗಳ, ಸದಸತ್ತಿನ ವಿದಿತಾವಿದಿತಗಳ ಅನಾದ್ಯನಂತವಾದ ಭ್ರಮಾಚಕ್ರವೇ ಸೃಷ್ಟಿ-ಸ್ಥಿತಿ-ಪ್ರಳಯಗಳ ಕ್ಷಣಭಂಗುರವಾದ ಸಂಸಾರಚಕ್ರ. ಜೀವರು ಈ ಮಾಯಾಮೋಹದ ಸೆಳವಿನಲ್ಲಿಯೂ ಸುಳಿಯಲ್ಲಿಯೂ ಸಿಕ್ಕಿ ಪಾರುಗಾಣದಿರುತ್ತಾರೆ.

ಆತ್ಮವು ಎಷ್ಟು ಸತ್ಯವೋ ಆತ್ಮದಲ್ಲಿ ತೋರುವ ಅನಾತ್ಮದ ಅನೇಕತ್ವವೂ ಭೇದವೂ ಅಷ್ಟೇ ಸತ್ಯವೆಂದು ಮಹಾವಿದ್ವಾಂಸರಿಗೂ ತೋರುತ್ತದೆ. ಇಂಥವರ ಭೇದಾಭೇದವಾದಕ್ಕೆ ಅಜ್ಞಾನವೇ ಕಾರಣ.

> ನನು ಅನೇಕಾತ್ಮಕಂ ಬ್ರಹ್ಮ । ಯಥಾ ವೃಕ್ಷಃ ಅನೇಕಶಾಖಃ ಏವಮ್ ಅನೇಕಶಕ್ತಿಪ್ರವೃತ್ತಿಯುಕ್ತಂ ಬ್ರಹ್ಮ । ಅತಃ ಏಕತ್ವಂ ನಾನಾತ್ವಂ ಚ ಉಭಯಮಪಿ ಸತ್ಯಮೇವ । ....ನೈವಂ ಸ್ಯಾತ್ । ...."ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಮ್" (ಛಾಂ. ೬-೮-೭) ....ಸ್ವಯಂ ಪ್ರಸಿದ್ಧಂ ಹಿ ಏತತ್ ಶಾರೀರಸ್ಯ ಬ್ರಹ್ಮಾತ್ಮತ್ವಮ್ ಉಪದಿಶ್ಯತೇ, ನ ಯತ್ನಾನ್ತರಪ್ರಸಾಧ್ಯಮ್ । ....ದರ್ಶಯತಿ ಚ "ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್ (ಬೃ. ಭಾ. ೪-೫-೧೫) ಇತ್ಯಾದಿನಾ ಬ್ರಹ್ಮಾತ್ಮತ್ವದರ್ಶಿನಂ ಪ್ರತಿ ಸಮಸ್ತಸ್ಯ ಕ್ರಿಯಾಕಾರಕಫಲಲಕ್ಷಣಸ್ಯ ವ್ಯವಹಾರಸ್ಯ ಅಭಾವಮ್। ನ ಚ ಅಯಂ ವ್ಯವಹಾರಾಭಾವಃ ಅವಸ್ಥಾವಿಶೇಷನಿಬದ್ಧೋಽಭಿಧೀಯತೇ ಇತಿ ಯುಕ್ತಂ ವಕ್ತುಮ್ । "ತತ್ತ್ವಮಸಿ" ಇತಿ ಬ್ರಹ್ಮಾತ್ಮಭಾವಸ್ಯ ಅನವಸ್ಥಾವಿಶೇಷನಿಬನ್ಧನತ್ವಾತ್ ।....ಮಿಥ್ಯಾಜ್ಞಾನವಿಜೃಮ್ಭಿತಂ ಚ ನಾನಾತ್ವಮ್ । ...."ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ" (ಬೃ. ೪-೪-೧೯)
>
> (ಸೂ. ಭಾ. ೨-೧-೧೪)

(ಆಕ್ಷೇಪ) :-ಬ್ರಹ್ಮವು ಅನೇಕಾತ್ಮವಾಗಿದೆ. ಹೇಗೆ ಒಂದು ಮರವು ಅನೇಕ ಶಾಖೆಗಳುಳ್ಳದ್ದಾಗಿರುವದೋ ಹಾಗೆ ಬ್ರಹ್ಮವು ಅನೇಕಶಕ್ತಿಗಳೂ ಪ್ರವೃತ್ತಿಗಳೂ ಉಳ್ಳದ್ದಾಗಿರುತ್ತದೆ. ಆದ್ದರಿಂದ ಏಕತ್ವವೂ ನಾನಾತ್ವವೂ ಎರಡೂ ಸತ್ಯವೇ. ಹೇಗೆ ಒಂದೇ ವಸ್ತುವು ಮರವಾಗಿ ಒಂದಾಗಿರುವದೋ ಕೊಂಬೆಗಳಿಂದ ಅನೇಕವಾಗಿರುವದೋ, ಹೇಗೆ ನೀರು ಸಮುದ್ರವಾಗಿ ಒಂದಾಗಿರುವದೋ ತೆರೆ, ನೊರೆ ಮುಂತಾದವುಗಳಾಗಿ ಅನೇಕವಾಗಿರುವದೋ ಮತ್ತು ಹೇಗೆ ಪೃಥಿವಿಯು ಮಣ್ಣಾಗಿ ಒಂದಾಗಿರುವದೋ ಗಡಿಗೆ ಶ್ರಾವೆ ಮುಂತಾದುದಾಗಿ

ಅನೇಕವಾಗಿರುವದೋ ಹಾಗೆ ಒಂದೂ ಅನೇಕವೂ ಎರಡೂ ಸತ್ಯವಾಗಿರಬಹುದು. ಇವುಗಳಲ್ಲಿ ಒಂದೆಂಬ ಅಂಶದ ಜ್ಞಾನದಿಂದ ಮೋಕ್ಷವೆಂಬ ವ್ಯವಹಾರವೂ ಅನೇಕವೆಂಬ ಅಂಶದಿಂದ ಕರ್ಮಕಾಂಡವನ್ನು ಆಶ್ರಯಿಸಿರುವ ಲೌಕಿಕ-ವೈದಿಕ ವ್ಯವಹಾರವೂ ಸಿದ್ಧಿಸುವವು.

(ಪರಿಹಾರ) : ಹೀಗಾಗಲಾರದು. ಏಕೆಂದರೆ, "ಮಣ್ಣೆಂಬುದೇ ಸತ್ಯವು" (ಛಾಂ. ೬-೧-೧) ಎಂಬ ದೃಷ್ಟಾಂತದಲ್ಲಿ ಪ್ರಕೃತಿಯೊಂದನ್ನೇ ಸತ್ಯವೆಂದು ಒತ್ತಿ ಹೇಳಿರುತ್ತದೆ. 'ವಾಚಾರಂಭಣ'ವೆಂಬ ಶಬ್ದದಿಂದ ವಿಕಾರಸಮೂಹವೆಲ್ಲವೂ ಅನೃತವೆಂದೂ ಹೇಳಿದೆ. "ಇದೆಲ್ಲವೂ ಈ ಸತ್ತನ್ನು ಆತ್ಮನಾಗಿ ಉಳ್ಳದ್ದು, ಅದೇ ಸತ್ಯವು" (ಛಾಂ. ೬-೮-೭) ಎಂದು ಪರಮಕಾರಣವಾದ ಒಂದನ್ನೇ ಸತ್ಯವೆಂದೂ ಒತ್ತಿ ಹೇಳಿದೆ. 'ಅದೇ ಆತ್ಮನು, ಶ್ವೇತಕೇತುವೆ, ಅದೇ ನೀನಾಗಿರುವೆ.' (ಛಾಂ. ೬-೮-೭) ಎಂದು ಶಾರೀರನಿಗೆ (ಜೀವನಿಗೆ) ಬ್ರಹ್ಮಭಾವವನ್ನು ಉಪದೇಶಮಾಡಿರುತ್ತದೆ. ಶಾರೀರನಿಗೆ ತಾನೇ (ಸಹಜವಾಗಿ) ಸಿದ್ಧವಾಗಿರುವ ಈ ಬ್ರಹ್ಮಾತ್ಮತತ್ತ್ವವನ್ನು ಉಪದೇಶಮಾಡಿದೆಯೇ ಹೊರತು ಮತ್ತೊಂದು ಪ್ರಯತ್ನದಿಂದ ಸಾಧಿಸಿಕೊಳ್ಳಬೇಕಾದುದನ್ನು ಹೇಳಿಲ್ಲ. ಆದ್ದರಿಂದ ಈ ಶಾಸ್ತ್ರೀಯವಾದ ಬ್ರಹ್ಮಾತ್ಮತ್ವವನ್ನು ಅರಿತುಕೊಂಡರೆ ಇದು ಸ್ವಾಭಾವಿಕವಾಗಿರುವ ಶಾರೀರಾತ್ಮತ್ವಕ್ಕೆ ಹಗ್ಗದ ಬುದ್ಧಿಯೇ ಮುಂತಾದವುಗಳು ಹಾವಿನ ಬುದ್ಧಿಯೇ ಮುಂತಾದವುಗಳಿಗೆ ಬಾಧಕವಾಗುವಂತೆ ಬಾಧಕವಾಗುತ್ತವೆ.

ಒಂದು, ಎರಡು, ಮೂರು ಅಥವಾ ಬೇರೆಬೇರೆ ಎಂದು ಬಿಡಿಬಿಡಿಯಾಗಿ ಪದಾರ್ಥಗಳನ್ನು ಎಣಿಸಬೇಕಾದರೆ, ದೇಶಕಾಲಗಳು ಬೇಕು. ನಮ್ಮ ಎಚ್ಚರದಲ್ಲಿ ನಮಗೆ ಕಾಣುವ ದೇಶ-ಕಾಲ-ವಸ್ತುಗಳೇ ಬೇರೆ, ನಮ್ಮ ಕನಸಿನಲ್ಲಿ ನಮಗೆ ಕಾಣುವ ದೇಶ-ಕಾಲ- ವಸ್ತುಗಳೇ ಬೇರೆ. ಗಾಢನಿದ್ರೆಯಲ್ಲಿ ನಮಗೆ ದೇಶಕಾಲ ವಸ್ತುಗಳೇ ತೋರುವದಿಲ್ಲ. ಅವು ಸತ್ಯವಾಗಿ ಇದ್ದಿದ್ದರೆ, ನಮ್ಮ ಗಾಢನಿದ್ರೆಯಲ್ಲಿಯೂ ಅವು ನಮಗೆ ತೋರಬೇಕಾಗಿತ್ತು. ಒಂದುಸಲ ತೋರಿ, ಇನ್ನೊಂದು ಸಲ ಹಾರುವದನ್ನೇ ಮಿಥ್ಯಾ-ಅನೃತ ಎನ್ನುತ್ತೇವೆ.

**19.** "ಏಕರೂಪೇಣ ಹ್ಯವಸ್ಥಿತೋ ಯೋಽರ್ಥಃ ಸ ಪರಮಾರ್ಥಃ । ಲೋಕೇ ತದ್ವಿಷಯಂ ಜ್ಞಾನಂ ಸಮ್ಯಗ್ಜ್ಞಾನಮ್ ಇತ್ಯುಚ್ಯತೇ । ಯಥಾ ಅಗ್ನಿರುಷ್ಣಃ ಇತಿ ॥ (ಸೂ. ಭಾ. ೨-೧-೧೧)

ಯಾವದು ಸ್ವರೂಪದಲ್ಲಿ ಹೆಚ್ಚುಕಡಿಮೆಯಾಗದೆ ಯಾವಾಗಲೂ ಒಂದೇ ರೂಪದಲ್ಲಿರಬಲ್ಲದೋ ಅದೇ ಪರಮಾರ್ಥವು ಅಥವಾ ಸತ್ಯವು. ಅದರ ವಿಷಯದ ಜ್ಞಾನವೇ ಸಮ್ಯಗ್ದರ್ಶನವು. ಬೆಂಕಿಯು ಬಿಸಿಯಾಗಿದೆ-ಎಂಬಂತೆ ಇದು. ಒಂದು ದೇಶದಲ್ಲಿ ಒಂದು ಕಾಲದಲ್ಲಿ ಬೆಂಕಿಯು ತಣ್ಣಗಿದೆ ; ಇನ್ನೊಂದು ದೇಶ

ಕಾಲಗಳಲ್ಲಿ ಬೆಂಕಿಯು ಬಿಸಿಯಾಗಿದೆ-ಎಂಬುದಿಲ್ಲ. ದೇಶಕಾಲಗಳ ಸಂಬಂಧ ವಿಲ್ಲದೆ, ಬಿಸಿಯಾಗಿರುವದು ಬೆಂಕಿಯ ಸ್ವಭಾವ. ಯಾವ ಭಾವವು ಬದಲಾಯಿಸು ವದಿಲ್ಲವೋ ಅದೇ ಅದರ ಸ್ವಭಾವ ಎನಿಸುತ್ತದೆ. ಆದ್ದರಿಂದ ಬಿಸಿಯೇ ಬೆಂಕಿಯ ಪರಮಾರ್ಥ ; ಬಿಸಿಯೇ ಬೆಂಕಿಯ ಸತ್ಯ.

ದೇಶ-ಕಾಲ-ನಿಮಿತ್ತಗಳಿಗೆ ಕಟ್ಟು ಬೀಳದ, ಏಕರೂಪವಾದ ಅನುಭವವೇ ನಿಜವಾದ ಅನುಭವ ; ಇದೇ ಪೂರ್ಣಾನುಭವ ; ಇದು ಸರ್ವರಿಗೂ ಸಮ ನಾದುದರಿಂದ ಇದೇ ಸಾರ್ವತ್ರಿಕ ಅನುಭವ. ದೇಶಕಾಲಾದಿಗಳಿಗೆ ಒಳಪಟ್ಟ ಅನುಭವವು ಪಾಕ್ಷಿಕವೂ ಆಂಶಿಕವೂ ಆಗುತ್ತದೆ. ಬೆಂಕಿಯಲ್ಲಿರುವ ಬಿಸಿಯ ಮತ್ತು ಬೆಳಕಿನ ಜ್ಞಾನವು ವಸ್ತುತಂತ್ರವಾದ ಜ್ಞಾನ ; ಇದು ಎಲ್ಲರಿಗೂ ಸಮ ವಾದುದು ; ಸಾರ್ವತ್ರಿಕವಾದುದು. ಈ ಅನುಭವವು ಒಬ್ಬೊಬ್ಬರಿಗೆ ಒಂದೊಂದು ಬಗೆಯಾಗಿರುವದು ಸಾಧ್ಯವಿಲ್ಲ. ನಮ್ಮ ಎಚ್ಚರದ ಅನುಭವವನ್ನು ಮಾತ್ರ ಅಥವಾ ಎಚ್ಚರ-ಕನಸುಗಳ ಅನುಭವವನ್ನು ಮಾತ್ರ ತೆಗೆದುಕೊಂಡರೆ, ಪೂರ್ಣಾ ನುಭವವಾಗುವದಿಲ್ಲ. ಮತ್ತು ಎಚ್ಚರ-ಕನಸುಗಳಲ್ಲಿ ಲೌಕಿಕ ಅನುಭವವಾಗಲಿ ಯೌಗಿಕವಾದ ಅನುಭವವಾಗಲಿ, ಒಬ್ಬೊಬ್ಬರ ಅನುಭವ ಒಂದೊಂದು ಬಗೆ ಯಾಗಿರುತ್ತದೆ. ಆದರೆ, ಗಾಢನಿದ್ರೆಯ ಅನುಭವವು ಎಲ್ಲರಿಗೂ ಒಂದೇ ಬಗೆ ಯಾದುದು. ಗಾಢನಿದ್ರೆಯಲ್ಲಿ "ಏನೊಂದೂ ತೋರಲಿಲ್ಲ, ಆನಂದವಾಗಿತ್ತು" ಎನ್ನುವ ಅನುಭವವು ಎಲ್ಲರಿಗೂ ಸಮನಾದುದು. ಆಗ, ನಾನು-ಎಂಬಿದೂ ಇಲ್ಲ ; ಇನ್ನೊಂದು ಎಂಬಿದೂ ಇಲ್ಲ. ನಾನು ಮತ್ತು ನನ್ನ ಪ್ರಪಂಚ ತೋರುವದಕ್ಕೆ ಕಾರಣವಾದ ಮನಸ್ಸೇ ಅಲ್ಲಿ ಇಲ್ಲ : ಆದ್ದರಿಂದ ಮನೋವ್ಯಾಪಾರವೂ ಇಲ್ಲ. ಮನಸ್ಸಿನ ಅಲುಗಾಟದಿಂದಾಗುವ ಆಯಾಸವಿಲ್ಲ, ಆದ್ದರಿಂದ ಗಾಢನಿದ್ರೆಯಲ್ಲಿ ಆನಂದವಾಗಿತ್ತು ಎನ್ನುತ್ತೇವೆ. ಎಚ್ಚರಕನಸುಗಳಲ್ಲಿ ಅನುಭವಿಸುವ ಭೋಕ್ತೃ -ಭೋಗ್ಯ-ಭೋಗ ಎಂಬ ತ್ರಿಪುಟಿಯಿಲ್ಲದ, ಆನಂದ-ಆನಂದಿ ಎಂಬ ವಿಭಾಗ ವಿಲ್ಲದ ಆನಂದವೇ ಗಾಢನಿದ್ರೆಯ ಅನುಭವ. ಅದು ಆನಂದ ಎಂಬ ಶಬ್ದ-ಪ್ರತ್ಯಯಗಳಿಗೆ ವಿಷಯವಲ್ಲದ ಆನಂದ. ಆದ್ದರಿಂದ ಅದು ಆನಂದದ ಇರುವಿಕೆ ಮಾತ್ರ ; ಸನ್ಮಾತ್ರ. ಇದು ಎಲ್ಲರ ಅನುಭವ, ಸಾರ್ವತ್ರಿಕಾನುಭವ. ಈ ಅನು ಭವದಲ್ಲಿ ದೇಶಕಾಲಗಳಿಲ್ಲವಾದ್ದರಿಂದ ಬಿಡಿಬಿಡಿಯಾದ ಅನುಭವವಿಲ್ಲ ; ಇದು ಇಡಿಯಾದ ಅನುಭವ, ಪೂರ್ಣಾನುಭವ. ಗಾಢನಿದ್ರೆಯ ಸನ್ಮಾತ್ರ (ಇರುವಿಕೆ ಮಾತ್ರ) ಸ್ವರೂಪದ ಅನುಭವ (ಸುಷುಪ್ತಸ್ಯ ಅನುಭೂಯಮಾನತ್ವಾತ್) (ಮಾಂ. ಭಾ. ೭) ನಮ್ಮ ಅರಿವಿಗೆ ವಿಷಯವಾದ್ದರಿಂದ ಅದು ಅರಿವೇ ಆದ್ದರಿಂದ ಚಿನ್ಮಾತ್ರವೂ ಆಗಿದೆ. ಆತ್ಮನು ಅನುಭವಸ್ವರೂಪನೇ ಆಗಿದ್ದಾನೆ.

"....ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ" (ಬೃ. ಉ. ೨-೫-೧೯)

ದ್ರಷ್ಟೃವೂ ಶ್ರೋತೃವೂ ಮನ್ತೃವೂ ಬೋದ್ಧೃವೂ ವಿಜ್ಞಾತೃವೂ ಆಗಿರುವ ಪ್ರತ್ಯಗಾತ್ಮನೇ ಸರ್ವರ ಆತ್ಮನಾಗಿ ಸರ್ವವೂ ಆದ ಬ್ರಹ್ಮವಾಗಿ ಸರ್ವರ ಅನುಭವವೂ ಆಗಿದ್ದಾನೆ. ಇದೇ ಸರ್ವವೇದಾಂತಗಳ (ಉಪನಿಷತ್ತುಗಳ) ಉಪದೇಶವು.

ದೇಶ-ಕಾಲ ವಸ್ತು-ಕಾರ್ಯಕಾರಣಭಾವಗಳಿಂದ ಕೂಡಿದ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳೆಲ್ಲಾ ತೋರುವದು ನಮ್ಮ ಎಚ್ಚರದಲ್ಲಿ. ನೀರಿನಲ್ಲಿ ತೋರಿ ಅಡಗುವ ತೆರೆನೊರೆಗಳು ನೀರನ್ನು ಬಿಟ್ಟು ಬೇರೆ ಸ್ವತಂತ್ರವಾಗಿ ಹೇಗೆ ತೋರಲಾರವೋ ಹಾಗೆ, ನಮ್ಮ ಎಚ್ಚರದಲ್ಲಿ ತೋರಿ ಅಡಗುವ ಜಗತ್ತು ಎಚ್ಚರವನ್ನು ಬಿಟ್ಟು ಬೇರೆ ಸ್ವತಂತ್ರವಾಗಿ ಇರಲಾರದು. ಕನಸಿನ ಜಗತ್ತೂ ನಮ್ಮ ಕನಸನ್ನು ಬಿಟ್ಟು ಬೇರೆ ಸ್ವತಂತ್ರವಾಗಿಲ್ಲ-ಎಂಬಿದು ನಮ್ಮ ಅನುಭವದಲ್ಲಿಯೇ ಇದೆ. ನಮ್ಮ ಸ್ವರೂಪದಲ್ಲಿಯೇ ತೋರಿ ಅಡಗುತ್ತಿರುವ ಎಚ್ಚರ-ಕನಸು-ನಿದ್ರೆಗಳು ಅನುಭವರೂಪವಾದ ನಮ್ಮ ಸ್ವರೂಪವನ್ನು ಬಿಟ್ಟು ಬೇರೆಯಿಲ್ಲ. ಇಲ್ಲದ ಹಾವು, ನಿಜವಾಗಿರುವ ಹಗ್ಗದಲ್ಲಿ ತೋರುವದಕ್ಕೆ ಹೇಗೆ ನಸುಗತ್ತಲೆಯೇ ಕಾರಣವೋ ಹಾಗೆ, ಮಿಥ್ಯಾರೂಪ ಎಚ್ಚರ-ಕನಸು-ನಿದ್ರೆಗಳು ಸತ್ಯವಾದ ನಮ್ಮ ಸ್ವರೂಪದಲ್ಲಿ ತೋರುವದಕ್ಕೆ ಅಜ್ಞಾನವೇ (ತಪ್ಪುತಿಳಿವಳಿಕೆಯೇ) ಕಾರಣ. ನಸುಗತ್ತಲೆಯಲ್ಲಿ ಬಿದ್ದಿರುವ ಹಗ್ಗವನ್ನು ಒಮ್ಮೆ ಹಾವೆಂದೂ, ಇನ್ನೊಮ್ಮೆ ಹೂವಿನ ಹಾರವೆಂದೂ, ಮತ್ತೊಮ್ಮೆ ನೀರಿನ ಕೋಡಿಯೆಂದೂ ತಪ್ಪಾಗಿ ತಿಳಿಯುವಂತೆ, ನಮ್ಮ ಚೈತನ್ಯಸ್ವರೂಪವನ್ನೇ ಒಮ್ಮೆ ಎಚ್ಚರವಾಗಿಯೂ ಇನ್ನೊಮ್ಮೆ ಕನಸೆಂದೂ, ಮತ್ತೊಮ್ಮೆ ನಿದ್ರೆಯೆಂದೂ ಅಜ್ಞಾನದಿಂದ ತಪ್ಪಾಗಿ ತಿಳಿಯುತ್ತಿದ್ದೇವೆ. ಬೆಳಕನ್ನು ತಂದು ನೋಡಿದಾಗ ಹಗ್ಗವೊಂದೇ ನಿಜವಾಗಿರುವದು, ಎಂದು ಹೇಗೆ ನಿಶ್ಚಯವಾಗುವದೋ ಹಾಗೆ, ಶಾಸ್ತ್ರ ಮತ್ತು ಗುರುಗಳ ಉಪದೇಶಕ್ಕನುಗುಣವಾಗಿ ವಿಚಾರಮಾಡಿದಾಗ ಪ್ರಜ್ಞಾನಘನೈಕರಸವಾದ ಆತ್ಮ ಒಂದೇ ಪರಮಾರ್ಥಸತ್ಯ ಎಂಬ ನಿಶ್ಚಯವಾಗುತ್ತದೆ. ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕವಾದ ಎಲ್ಲಾ ಬಗೆಯ ಅನುಭವಗಳನ್ನೂ ಒಳಗೊಂಡಿರುವ ಎಚ್ಚರ, ಕನಸು ನಿದ್ರೆಗಳನ್ನು ಸಮಾನದೃಷ್ಟಿಯಿಂದ ಪೂರ್ಣವಾಗಿ ವಿಚಾರಮಾಡುವದೇ ಪೂರ್ಣಾನುಭವದ ವಿಚಾರವಾಗುತ್ತದೆ. ದೇಶ-ಕಾಲ-ನಿಮಿತ್ತಗಳ ಕಟ್ಟಿಗೆ ಒಳಪಡದಿರುವ ಮತ್ತು ಅಹಂಕಾರವೂ ಪ್ರಯತ್ನವೂ ಇಲ್ಲದೆ ಸಹಜವಾದ ಈ ಅನುಭವವೇ ಸರ್ವರಿಗೂ ಸಮ್ಮತವಾದ ಅನುಭವವಾಗಿದೆ. ವೇದಾಂತಶಾಸ್ತ್ರದ ಪೂರ್ಣವೂ ಸಾರ್ವತ್ರಿಕವೂ ಆದ ತಾತ್ತ್ವಿಕದೃಷ್ಟಿಯಿಂದ ವಿಚಾರಮಾಡಿದಾಗ ಅಜರವೂ ಅಮರವೂ ಅಮೃತವೂ ಅದ್ವಿತೀಯವೂ ಆದ ಚಿನ್ಮಾತ್ರಸ್ವರೂಪ (ನಮ್ಮೆಲ್ಲರ ಆತ್ಮನಾದ) ಪರಮಾತ್ಮ ಒಬ್ಬನೇ ಸತ್ಯ ಎಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ. ಸಮ್ಯಗ್ದರ್ಶನರೂಪವಾದ ಈ ಜ್ಞಾನನಿಷ್ಠೆಯಿಂದ ಅವಿದ್ಯಾ

ಕಲ್ಪಿತವಾದ ಮಾಯಾಜಗತ್ತು ಪೂರಾ ಬಾಧಿತವಾಗಿ ಬ್ರಹ್ಮಾತ್ಮಾನುಭವವು ಮಾತ್ರ ಉಳಿಯುವದೇ ಜ್ಞಾನಪೂರ್ವಕವಾಗಿ ಆಗುವ ಆತ್ಯಂತಿಕಪ್ರಳಯವೆನಿಸು ತ್ತದೆ. ಜಗತ್ತು ಸತ್ಯವೆಂಬ ಭ್ರಮೆಯು ಜ್ಞಾನಿಯಲ್ಲಿ ನಾಶವಾಗಿರುವದರಿಂದ, ಜ್ಞಾನಪೂರ್ವಕವಾದ ಆತ್ಯಂತಿಕಪ್ರಳಯವಾದಮೇಲೆ, ಪುನಃ ಸೃಷ್ಟಿಯಾಗಲಿ ಜನ್ಮವಾಗಲಿ ಇಲ್ಲ.

20. ಪ್ರಿಯೆ ಮೈತ್ರೇಯಿ ! ಸಮುದ್ರದ ನೀರಿನಿಂದ ಹುಟ್ಟಿದ ಉಪ್ಪಿನ ಹರಳು ಪುನಃ ಸಮುದ್ರದ ನೀರಿನಲ್ಲಿ ಸೇರಿ ಕರಗಿಹೋದರೆ, ಸಮುದ್ರದಂತೆ ಅದೂ ಅನಂತವೂ ಅಪಾರವೂ ಆಗುತ್ತದೆ. ಆಗ ಆ ಹರಳನ್ನೇ ನೀರಿನಿಂದ ಎಂಥಾ ನಿಪುಣನೂ ಬೇರ್ಪಡಿಸಿ ತೆಗೆಯಲಾಗುವದಿಲ್ಲವಾದರೂ ಅದು ಸಮುದ್ರದಲ್ಲಿ ಸೇರಿ ಕರಗಿ ಒಂದಾಗಿರುವದನ್ನು ರಸನೇಂದ್ರಿಯದಿಂದ ಸವಿದು ತಿಳಿಯಬಹುದು. ಇದರಂತೆ, ಬಿಡಿಬಿಡಿ ಅರಿವಿನಿಂದ ವಿಶೇಷವಿಜ್ಞಾನಮಯನಾಗಿರುವ ಆತ್ಮನು ಅವಿದ್ಯಾಕಲ್ಪಿತವಾದ ಪಂಚಭೂತಗಳಾದ ದೇಹೇಂದ್ರಿಯಗಳಿಂದ ತಾನೇ ಬೇರೆ ಯಾಗಿ ಪರಿಚ್ಛಿನ್ನನಾಗಿರುವಂತೆ ಕಾಣುತ್ತಿರುತ್ತಾನೆ. ಆದರೆ ಬ್ರಹ್ಮಾತ್ಮವಿದ್ಯೆ ಯಿಂದ ಅವಿದ್ಯೆಯು ನಾಶವಾಗಲಾಗಿ, ಹುಸಿತೋರಿಕೆಯಾದ ದೇಹೇಂದ್ರಿಯಾದಿ ಉಪಾಧಿಗಳು ಬಾಧಿತವಾಗಿ ಲಯವಾಗುತ್ತವೆ. ಆತ್ಮ ಒಂದೇ ಸತ್ಯವೆಂಬ ಅವನ ನಿಶ್ಚಯಜ್ಞಾನದಲ್ಲಿ ಯಾವ ವಿಶೇಷವಿಜ್ಞಾನವೂ ಇರುವದಿಲ್ಲ.

> ... ಸ್ವಯೋನೌ ಮಹಾಸಮುದ್ರಸ್ಥಾನೀಯೇ ಪರಮಾತ್ಮನಿ ಅಜರೇ, ಅಮರೇ, ಅಭಯೇ, ಶುದ್ಧೇ, ಸೈನ್ಧವಘನವತ್ ಏಕ-ರಸೇ, ಪ್ರಜ್ಞಾನಘನೇ, ಅನನ್ತೇ, ಅಪಾರೇ, ನಿರನ್ತರೇ, ಅವಿದ್ಯಾ-ಜನಿತಭ್ರಾನ್ತಿಭೇದವರ್ಜಿತೇ ಪ್ರವೇಶಿತಃ । (ಬೃ. ೨-೪-೧೨)

ಮುಪ್ಪಿಲ್ಲದ, ಸಾವಿಲ್ಲದ, ಭಯವಿಲ್ಲದ, ಶುದ್ಧನಾದ, ಉಪ್ಪಿನ ಹರಳಿನಂತೆ ಏಕರಸನಾದ, ಪ್ರಜ್ಞಾನಘನನಾದ, ಅನಂತನಾದ, ಅಪಾರನಾದ, ನಿರಂತರನಾದ, ಅವಿದ್ಯೆಯಿಂದುಂಟಾಗಿರುವ ಭ್ರಾಂತಿಯ ಭೇದವಿಲ್ಲದ, ತನಗೆ ಕಾರಣವಾದ ಮಹಾಸಮುದ್ರದಂತಿರುವ ಪರಮಾತ್ಮನಲ್ಲಿ ಉಪ್ಪಿನ ಹರಳಿನಂತೆ ಪರಿಚ್ಛಿನ್ನನಾದ ವಿಜ್ಞಾನಾತ್ಮನು ಪ್ರವೇಶಿಸಿ, ಬೆರೆತು ಒಂದಾಗುತ್ತಾನೆ.

> ....ಪ್ರಜ್ಞಾನಘನೇ ಬ್ರಹ್ಮಣಿ ಪರಮಾರ್ಥವಿವೇಕಜ್ಞಾನೇನ ಪ್ರವಿಲಾಪನಮುಕ್ತಂ ನದೀಸಮುದ್ರವತ್ । ....ಕಾರ್ಯಕರಣ ವಿಷಯಾಕಾರಪರಿಣತಾನಿ ಭೂತಾನಿ ಆತ್ಮನೋ ವಿಶೇಷಾತ್ಮಖಿಲ್ಯ ಹೇತುಭೂತಾನಿ ಶಾಸ್ತ್ರಾಚಾರ್ಯೋಪದೇಶೇನ ಬ್ರಹ್ಮವಿದ್ಯಯಾ ನದೀಸಮುದ್ರವತ್ ಪ್ರವಿಲಾಪಿತಾನಿ ವಿನಶ್ಯನ್ತಿ ಸಲಿಲಫೇನ ಬುದ್ಬುದಾದಿವತ್ । (ಬೃ. ೨-೪-೧೨)

ವಿಷಯ ಪರ್ಯಂತವಾಗಿರುವ ಎಲ್ಲವನ್ನೂ ಪರಮಾರ್ಥವಿವೇಕಜ್ಞಾನದ ಮೂಲಕ ನದೀ-ಸಮುದ್ರ ನ್ಯಾಯದಿಂದ ಪ್ರಜ್ಞಾನಘನವಾದ ಬ್ರಹ್ಮದಲ್ಲಿ ಪ್ರವಿಲಯವನ್ನು ಮಾಡಿಕೊಳ್ಳಬೇಕು.

ಕಾರ್ಯಕರಣ ವಿಷಯಾಕಾರವಾಗಿ ಪರಿಣಾಮವಾಗಿದ್ದು ಆತ್ಮನಿಗೆ ವಿಶೇಷಾತ್ಮನೆಂಬ ಹರಳಿನ ರೂಪವನ್ನು ಪಡೆಯುವದಕ್ಕೆ ಕಾರಣವಾಗಿದ್ದ ಆ ಭೂತಗಳು, ಶಾಸ್ತ್ರಾಚಾರ್ಯರ ಉಪದೇಶದಿಂದ ಲಭಿಸಿದ ಬ್ರಹ್ಮವಿದ್ಯೆಯಿಂದ (ನದಿಯು ಸಮುದ್ರದಲ್ಲಿ ವಿಲೀನವಾಗುವಂತೆ) ಪ್ರವಿಲಾಪಿತವಾದರೆ, ನೀರಿನ ನೊರೆ ಗುಳ್ಳೆಗಳು ನೀರಿನಲ್ಲಿ ಅಡಗುವಂತೆ ಲಯವಾಗುತ್ತವೆ.

ಗಂಗಾನದಿಯು ಸಮುದ್ರವನ್ನು ಸೇರಿ, ಗಂಗೆಯು ಅಪಾರವಾದ ಸಮುದ್ರವೇ ಆದಮೇಲೆ, ಗಂಗೆಯನ್ನು ಸಮುದ್ರದಿಂದ ಬೇರ್ಪಡಿಸಲಾಗುವದಿಲ್ಲ. ಇದರಂತೆ ವಿಜ್ಞಾನಾತ್ಮನಾದ ಜೀವನು ಅನಂತನಾದ ಪ್ರಜ್ಞಾನಘನಾತ್ಮನಲ್ಲಿ ಸೇರಿ ತಾನೇ ಪ್ರಜ್ಞಾನಘನನಾದಮೇಲೆ, ತಾನು ಜೀವನೆಂದು ಎಂದೂ ಭ್ರಮಿಸುವದಿಲ್ಲ. ಆದರೆ, ಸಮುದ್ರವನ್ನು ಸೇರುವದಕ್ಕೆ ಮೊದಲು ಗಂಗಾನದಿಯು ಬೇರೆಯೇ ಇದ್ದಂತೆ, ಆತ್ಮನನ್ನು ತಿಳಿದು ಆತ್ಮನೇ ಆಗುವದಕ್ಕೆ ಮೊದಲು ಜೀವನು ಆತ್ಮನಿಂದ ಎಂದೂ ಬೇರೆಯಾಗಿರಲಿಲ್ಲ. ಆತ್ಮನನ್ನು ಅರಿಯುವದಕ್ಕೆ (ತನ್ನನ್ನು ತಾನು ತಿಳಿಯುವದಕ್ಕೆ) ಮೊದಲೂ ಜೀವನು ಆತ್ಮನೇ ಆಗಿರುತ್ತಾನೆ. ಆದರೆ, ಆತ್ಮನನ್ನು ಅರಿಯದಿದ್ದಾಗ ತೋರಿಕೊಳ್ಳುವ ಹುಸಿಯಾದ ದೇಹೇಂದ್ರಿಯಾದಿಗಳನ್ನೇ ತಾನೆಂದೂ ತನ್ನವೆಂದೂ ತಪ್ಪಾಗಿ ತಿಳಿದು, ಅಭಿಮಾನಿಸಿ, ಕರ್ತೃವೂ ಭೋಕ್ತೃವೂ ಪ್ರಮಾತೃವೂ (ಜ್ಞಾತೃವೂ) ಆದ ಜೀವನು ತಾನೆಂದು ಭಾವಿಸುತ್ತಾನೆ. ಶಾಸ್ತ್ರಾಚಾರ್ಯರ ಉಪದೇಶವನ್ನು ಕೇಳಿ ಮನನ-ನಿದಿಧ್ಯಾಸನ ಮಾಡಿದ ಮೇಲೆ ಉಂಟಾದ ಆತ್ಮಜ್ಞಾನದಿಂದ ಅಜ್ಞಾನವು ನಾಶವಾದರೆ ತಾನೆಂದೂ ಜೀವನಾಗಿಯೇ ಇರಲಿಲ್ಲ, ಈಗ ಹೊಸದಾಗಿ ಆತ್ಮನಾಗಲಿಲ್ಲ, ತಾನು ಎಂದೆಂದೂ ನಿಜವಾಗಿ ಆತ್ಮನೇ ಆಗಿರುತ್ತೇನೆ; ತನ್ನ ಸ್ವರೂಪವಾದ ಆತ್ಮ ಒಂದೇ ಸತ್ಯವಾದುದರಿಂದ ಮರೀಚಿಕೆಯಂತೆ ತೋರತಕ್ಕಂಥ ಅನಾತ್ಮವಾದ ದೇಹೇಂದ್ರಿಯಾದಿಕ ಜಗತ್ತು ಇಲ್ಲವೇ ಇಲ್ಲ ಎಂದು ನಿಶ್ಚಯವಾಗುತ್ತದೆ. ಜೀವಭಾವಕ್ಕೆ ಅಜ್ಞಾನವೇ ಕಾರಣವಾದುದರಿಂದ ಸಮ್ಯಕ್‌ಜ್ಞಾನದಿಂದ ಪರಮಾತ್ಮಭಾವವು ಅನುಭವಕ್ಕೆ ಬರುತ್ತದೆ. ಬ್ರಹ್ಮವಿದ್ಯೆಯಿಂದ ವಿಶೇಷಜ್ಞಾನವು ಹೋದ ಮಾತ್ರದಿಂದ ಆತ್ಮನೇ ನಾಶವಾಗುವನೆಂದು ತಿಳಿಯಬಾರದು.

**21.** ನ ತತ್ರ ಪ್ರೇತ್ಯ ವಿಶೇಷಸಂಜ್ಞಾ ಅಸ್ತಿ ಕಾರ್ಯಕರಣಸಂಘಾತೇಭ್ಯೋ ವಿಮುಕ್ತಸ್ಯ । ಅವಿದ್ಯಾಯಾಶ್ಚ ಬ್ರಹ್ಮವಿದ್ಯಯಾ ನಿರನ್ವಯತೋ ನಾಶಿತತ್ವಾತ್ ಕುತೋ ವಿಶೇಷ

ಸಂಜ್ಞಾಸಂಭವೋ ಬ್ರಹ್ಮವಿದಶ್ಚೈತನ್ಯಸ್ವಭಾವಾವಸ್ಥಿತಸ್ಯ । ಶರೀರಾವಸ್ಥಿತಸ್ಯಾಪಿ ವಿಶೇಷಸಂಜ್ಞಾ ನೋಪಪದ್ಯತೇ । ಕಿಮುತ ಕಾರ್ಯಕರಣವಿಮುಕ್ತಸ್ಯ ಸರ್ವತಃ ಇತಿ ॥ (ಬೃ. ೨-೪-೧೨)

ಅಲ್ಲಿಗೆ ಇಲ್ಲಿಂದ ಹೊರಟುಹೋದ ಬಳಿಕ ಕಾರ್ಯಕರಣಸಂಘಾತಗಳಿಂದ ವಿಮುಕ್ತನಾದವನಿಗೆ ವಿಶೇಷಸಂಜ್ಞೆಯು (ನಾನು ಇಂಥವನು, ಇಂಥವನ ಮಗನು, ಈ ಹೊಲವೂ ಹಣವೂ ಮನೆಯೂ ನನ್ನದು, ನಾನು ಸುಖಿ, ನಾನು ದುಃಖಿ ಎಂಬ ವಿಶೇಷವಿಜ್ಞಾನವು ಅಥವಾ ವಿಶೇಷ ಅಭಿಮಾನವು) ಇರುವದಿಲ್ಲ-ಎಂದು ಎಲೌ ಮೈತ್ರೇಯಿ, ಹೇಳುತ್ತೇನೆ. ಏಕೆಂದರೆ ಅದು ಅವಿದ್ಯೆಯಿಂದಾಗಿರುತ್ತದೆ. ಆ ಅವಿದ್ಯೆಯು ಬ್ರಹ್ಮವಿದ್ಯೆಯಿಂದ ಸಮೂಲವಾಗಿ ನಾಶವಾಗಿಬಿಟ್ಟಿರುತ್ತದೆಯಾದ್ದರಿಂದ ಚೈತನ್ಯಸ್ವಭಾವದಿಂದ ಇದ್ದುಕೊಂಡಿರುವ ಬ್ರಹ್ಮಜ್ಞಾನಿಗೆ ವಿಶೇಷಸಂಜ್ಞೆಯು (ಜ್ಞಾನವು) ಹೇಗೆ ಇರುವದಕ್ಕಾದೀತು ? ಶರೀರದಲ್ಲಿದ್ದುಕೊಂಡಿರುವ ಜ್ಞಾನಿಗೂ ವಿಶೇಷಸಂಜ್ಞೆಯಿರುವದೆಂಬುದು ಹೊಂದುವದಿಲ್ಲ. ಹೀಗಿರುವಲ್ಲಿ ಕಾರ್ಯಕರಣಗಳನ್ನು (ದೇಹೇಂದ್ರಿಯಗಳನ್ನು) ಎಲ್ಲಾ ಬಗೆಯಿಂದಲೂ ಬಿಟ್ಟಗಲಿರುವವನಿಗೆ (ಶರೀರಪಾತವಾದ ಬಳಿಕ ಬ್ರಹ್ಮದಲ್ಲಿಯೇ ಸೇರಿರುವವನಿಗೆ) ಹೊಂದುವದಿಲ್ಲವೆಂದು ಹೇಳುವದೇನಿದೆ ?

22. ಆತ್ಮಾ ಹ್ಯಾಕಾಶವಜ್ಜೀವೈರ್ಘಟಾಕಾಶೈರಿವೋದಿತಃ ।
ಘಟಾದಿವಚ್ಚ ಸಙ್ಘಾತೈರ್ಜಾತಾವೇತನ್ನಿದರ್ಶನಮ್ ॥
(ಮಾಂ. ಕಾ. ೩-೩)

"ಆಕಾಶವು ಘಟಾಕಾಶಗಳ ರೂಪದಿಂದ ಹೇಗೋ ಹಾಗೆ, ಆತ್ಮನು ಜೀವರ ರೂಪದಿಂದಲೂ ಘಟಾದಿಗಳಂತೆ ಸಂಘಾತಗಳ ರೂಪದಿಂದಲೂ ಹುಟ್ಟುವನು. ಹುಟ್ಟಿಗೆ ಇದು ನಿದರ್ಶನವು" ಆತ್ಮನೆಂದರೆ ಪರಮಾತ್ಮನು ಆಕಾಶದಂತೆ ಸೂಕ್ಷ್ಮವಾಗಿಯೂ ಅವಯವಗಳಿಲ್ಲದೆಯೂ ಅಖಂಡನಾಗಿಯೂ ಎಲ್ಲೆಲ್ಲಿಯೂ ವ್ಯಾಪಕನಾಗಿಯೂ ಇರುವದರಿಂದ ಆಕಾಶದಂತೆ ಎಂದು ಹೇಳಿದೆ.

ಆಕಾಶಸ್ಥಾನೀಯಾತ್ ಪರಮಾತ್ಮನಃ ಪೃಥಿವ್ಯಾದಿಭೂತಸಙ್ಘಾತಾ ಆಧ್ಯಾತ್ಮಿಕಾಶ್ಚ ಕಾರ್ಯಕರಣಲಕ್ಷಣಾಃ ರಜ್ಜುಸರ್ಪವತ್ ವಿಕಲ್ಪಿತಾಃ ಜಾಯನ್ತೇ । ಯದಾ ಮನ್ದಬುದ್ಧಿಪ್ರತಿಪಿಪಾದಯಿಷಯಾ ಶ್ರುತ್ಯಾ ಆತ್ಮನಃ ಜಾತಿಃ ಉಚ್ಯತೇ ಜೀವಾದೀನಾಂ ತದಾ ॥ (ಮಾ. ಕಾ. ೩-೩)

"ಅದೇ ಆಕಾಶದಿಂದ ಗಡಿಗೆಯೇ ಮುಂತಾದ ಗುಂಪುಗಳು ಹೇಗೆ ಹುಟ್ಟುವವೋ ಹಾಗೆ ಆಕಾಶದಂತಿರುವ ಪರಮಾತ್ಮನಿಂದ ಪೃಥಿವಿಯೇ ಮುಂತಾದ

ಭೂತಗಳ ಗುಂಪುಗಳೂ ನಮ್ಮ ಒಳಗಿನ ಕಾರ್ಯಕರಣ(ದೇಹೇಂದ್ರಿಯ)ರೂಪ ವಾದ ಗುಂಪುಗಳೂ ಹಗ್ಗದ ಹಾವಿನಂತೆ ವಿಕಲ್ಪಿತವಾಗಿ ಹುಟ್ಟುವವು. ಮಂದಬುದ್ಧಿಯುಳ್ಳವರಿಗೆ ತತ್ತ್ವವನ್ನು ತಿಳಿಸುವದಕ್ಕಾಗಿ ಪರಮಾತ್ಮ ನಿಂದ ಜೀವಾದಿಗಳಿಗೆ ಉತ್ಪತ್ತಿಯನ್ನು ಶ್ರುತಿಯಲ್ಲಿ ಹೇಳಲಾಗುತ್ತಿದೆ. ಆಕಾಶವೇ ಗಡಿಗೆ ಮುಂತಾದವುಗಳಾಗಿಯೂ ಅವುಗಳ ಉಪಾಧಿಯಿಂದ ಘಟಾ-ಕಾಶಾದಿಗಳಾಗಿಯೂ ಹುಟ್ಟಿದಂತೆ ಕಾಣುವ ಹಾಗೆ ಆತ್ಮನೂ ಕಾಣುತ್ತಾನೆ. ಆತ್ಮನು ಆಕಾಶದಂತೆ ಸೂಕ್ಷ್ಮನೂ, ನಿರವಯವನೂ, ಅಖಂಡನೂ ಸರ್ವಗತನೂ ಆಗಿರುವದರಿಂದ ಅವನು ನಿಜವಾಗಿ ಹುಟ್ಟುವದಿಲ್ಲ. ಜೀವರಾಗಲಿ, ಶರೀರಾದಿ ಗಳಾಗಲಿ, ನಿಜವಾಗಿ ಹುಟ್ಟುವದಿಲ್ಲ.

"ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ ಬ್ರಹ್ಮ" (ಬೃ. ೪-೪-೨೨) "ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್" (ಕ. ೧-೨-೧೮) "ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ" (ಕ. ೧-೪-೧೮) 'ತತ್ತ್ವಮಸಿ' (ಛಾಂ. ೬-೮-೭) "ಅಹಂ ಬ್ರಹ್ಮಾಸ್ಮಿ" (ಬೃ. ೧-೪-೧೦) "ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ" (ಬೃ. ೨-೫-೧೯) (ಸೂ. ಭಾ. ೨-೩-೧೭)

"ಆ ಈ ಮಹಾನ್ ಅಜನಾದ ಆತ್ಮನೇ, ಅಜರನು, ಅಮರನು, ಅಮೃತನು, ಅಭಯನು, ಬ್ರಹ್ಮವು" "ವಿವೇಕಿಯಾದ ಈ ಆತ್ಮನು ಹುಟ್ಟುವದಿಲ್ಲ, ಸಾಯು ವದಿಲ್ಲ." "ಇವನು ಅಜನು (ಹುಟ್ಟಿಲ್ಲದವನು) ನಿತ್ಯನು, ಶಾಶ್ವತನು, ಪುರಾ ಣನು." "ಅದೇ ನೀನಾಗಿರುವೆ." "ನಾನು ಬ್ರಹ್ಮವಾಗಿರುವೆನು." "ಈ ಆತ್ಮನು ಬ್ರಹ್ಮವು, ಸರ್ವಾತ್ಮನಾಗಿ ಸರ್ವವನ್ನೂ ಅನುಭವಿಸುವವನು" (ಸೂ. ಭಾ. ೨-೩-೧೭) ದೇಹವು ಹುಟ್ಟಿದರೆ ಜೀವನೂ ಹುಟ್ಟುತ್ತಾನೆ- ಎಂಬಿದು ಸ್ಥೂಲವಾದ ಉತ್ಪತ್ತಿ ; ಜೀವನೇ ಬ್ರಹ್ಮದಿಂದ ಹುಟ್ಟುತ್ತಾನೆ- ಎಂಬಿದು ಸೂಕ್ಷ್ಮವಾದ ಉತ್ಪತ್ತಿ. ಪರಮಾತ್ಮಸ್ವರೂಪನೇ ಆದ ಜೀವಾತ್ಮನಿಗೆ ಈ ಎರಡು ಬಗೆಯ ಹುಸಿತೋರಿಕೆಯ ಹುಟ್ಟುಗಳೂ ಇಲ್ಲವೆಂದೇ ಸಿದ್ಧಾಂತ.

23. ತಸ್ಮಾತ್ ಏಕತ್ವಪ್ರತ್ಯಯದಾರ್ಢ್ಯಾಯ ಸುವರ್ಣ-ಮಣಿಲೋಹಾಗ್ನಿವಿಸ್ಫುಲಿಙ್ಗದೃಷ್ಟಾನ್ತಾಃ ನೋತ್ಪತ್ತ್ಯಾದಿಭೇದ ಪ್ರತಿಪಾದನಪರಾಃ । ಸೈನ್ಧವಘನವತ್ ಪ್ರಜ್ಞಪ್ತ್ಯೇಕರಸನೈರನ್ತ-ರ್ಯಾವಧಾರಣಾತ್ 'ಏಕಧೈವಾನುದ್ರಷ್ಟವ್ಯಮ್' (ಬೃ. ೪-೪-೨೦) ಇತಿ ಚ । ತಸ್ಮಾತ್ ಏಕರೂಪೈಕತ್ವಪ್ರತ್ಯಯದಾರ್ಢ್ಯಾ-ರ್ಯೈವ ಸರ್ವವೇದಾನ್ತೇಷು ಉತ್ಪತ್ತಿಸ್ಥಿತಿಲಯಾದಿಕಲ್ಪನಾ ನ ತತ್ಪ್ರತ್ಯಯಕರಣಾಯ ॥ (ಬೃ. ೨-೧-೨೦)

ಆದ್ದರಿಂದ ಏಕತ್ವಜ್ಞಾನವು ಗಟ್ಟಿಯಾಗುವದಕ್ಕಾಗಿಯೇ ಸುವರ್ಣಮಣಿ, ಲೋಹ, ಅಗ್ನಿವಿಸ್ಫುಲಿಂಗ- ಈ ದೃಷ್ಟಾಂತಗಳಿವೆ. ಉತ್ಪತ್ತಿಯೇ ಮುಂತಾದ ಭೇದಗಳನ್ನು ಹೇಳುವದರಲ್ಲಿ ಇವುಗಳಿಗೆ ತಾತ್ಪರ್ಯವಿಲ್ಲ. ಏಕೆಂದರೆ, ಉಪ್ಪಿನ ಹರಳಿನಂತೆ ಚೈತನ್ಯೈಕರಸವೇ ಆಗಿ ನಿರಂತರವಾಗಿರುವದೆಂದೂ ಒಂದೇ ಪ್ರಕಾರವಾಗಿ ಕಂಡುಕೊಳ್ಳತಕ್ಕದ್ದು- ಎಂದೂ ಶ್ರುತಿಯಲ್ಲಿ ಅವಧಾರಣೆಮಾಡಿರುತ್ತದೆ. ಆದ್ದರಿಂದ ಒಂದೇ ರೂಪವಾಗಿರುವ ಏಕತ್ವಜ್ಞಾನವು ಗಟ್ಟಿಯಾಗಲೆಂದೇ ಎಲ್ಲಾ ವೇದಾಂತಗಳಲ್ಲಿಯೂ ಉತ್ಪತ್ತಿ-ಸ್ಥಿತಿ-ಲಯಾದಿಗಳನ್ನು ಕಲ್ಪಿಸಿದೆಯೇ ಹೊರತು ಅವುಗಳ ಜ್ಞಾನವನ್ನೇ ಉಂಟುಮಾಡಬೇಕೆಂದಲ್ಲ ; ಅವು ಸತ್ಯವೆಂದೂ ಅಲ್ಲ.

**24.** ಮೈತ್ರೇಯಿ : ಅತ್ರೈವ ಮಾ ಭಗವಾನ್ ಮೋಹಂ ಕೃತವಾನ್ । ಕಥಂ ತೇನ ವಿರುದ್ಧಧರ್ಮವತ್ತ್ವಮ್ ಉಕ್ತಮಿತಿ? ಪೂರ್ವಂ ವಿಜ್ಞಾನಘನ ಏವೇತಿ ಪ್ರತಿಜ್ಞಾಯ ಪುನರ್ನ ಪ್ರೇತ್ಯ ಸಂಜ್ಞಾಸ್ತೀತಿ । ಕಥಂ ವಿಜ್ಞಾನಘನ ಏವ, ಕಥಂ ವಾ ನ ಪ್ರೇತ್ಯ ಸಂಜ್ಞಾಸ್ತೀತಿ ? ನ ಹಿ ಉಷ್ಣಃ ಶೀತಶ್ಚಾಗ್ನಿರೇವೈಕೋ ಭವತಿ । ಅತೋ ಮೂಢಾಸ್ಮ್ಯತ್ರ ॥

ಮೈತ್ರೇಯಿ : ಈ ಒಂದು ವಸ್ತುವಾದ ಬ್ರಹ್ಮದಲ್ಲಿಯೇ ವಿರುದ್ಧಧರ್ಮಗಳಿವೆ ಎಂದು ಹೇಳುತ್ತಿರುವ ಭಗವಂತನಾದ ನೀನು ನನಗೆ ಮೋಹವನ್ನುಂಟುಮಾಡಿರುತ್ತೀಯೆ. ಅವನು ಬ್ರಹ್ಮದಲ್ಲಿ ವಿರುದ್ಧಧರ್ಮಗಳಿವೆ ಎಂದು ಹೇಳಿದ್ದು ಹೇಗೆ ?- ಎಂದರೆ ಹೇಳುತ್ತೇನೆ. ಹಿಂದೆ 'ವಿಜ್ಞಾನಘನನೇ' ಎಂದು ಪ್ರತಿಜ್ಞೆಮಾಡಿ ಮತ್ತೆ ಈಗ 'ಇಲ್ಲಿಂದ ಹೊರಟುಹೋದ ಬಳಿಕ ಸಂಜ್ಞೆಯಿರುವದಿಲ್ಲ' ಎಂದು ಹೇಳಿದ್ದು ವಿರುದ್ಧವು. ವಿಜ್ಞಾನಘನನೇ ಎಂಬುದು ಹೇಗೆ ? ಹೊರಟುಹೋದಮೇಲೆ ಸಂಜ್ಞೆಯಿಲ್ಲವೆಂಬುದಾದರೂ ಹೇಗೆ ? ಬೆಂಕಿಯೊಂದೇ ಬಿಸಿಯಾಗಿಯೂ ತಣ್ಣಗೂ ಇರಲಾರದಷ್ಟೆ ? ಆದ್ದರಿಂದ ಈ ವಿಷಯದಲ್ಲಿ ನಾನು ಏನೂ ತೋಚದವಳಾಗಿರುತ್ತೇನೆ.

ಯಾಜ್ಞವಲ್ಕ್ಯ: ನ ವಾ ಅರೇ ಮೈತ್ರೇಯಿ ! ಮೋಹನಂ ವಾಕ್ಯಂ ನ ಬ್ರವೀಮಿ ಅವಿದ್ಯಾಪ್ರತ್ಯುಪಸ್ಥಾಪಿತಃ ಕಾರ್ಯಕರಣಸಂಬನ್ಧ್ಯಾತ್ಮನಃ ಖಿಲ್ಯಭಾವಃ, ತಸ್ಮಿನ್ ವಿದ್ಯಯಾ ನಾಶಿತೇ ತನ್ನಿಮಿತ್ತಾ ಯಾ ವಿಶೇಷಸಂಜ್ಞಾ ಶರೀರಾದಿಸಂಬನ್ಧಿನೀ ಅನ್ಯತ್ವದರ್ಶನಲಕ್ಷಣಾ, ಸಾ ಕಾರ್ಯಕರಣಸಂಘಾತೋಪಾಧೌ ಪ್ರವಿಲಾಪಿತೇ ನಶ್ಯತಿ ಹೇತ್ವಭಾವಾತ್ ನ ಪುನಃ ಅಸಂಸಾರಿಬ್ರಹ್ಮಸ್ವರೂಪಸ್ಯ ವಿಜ್ಞಾನಘನಸ್ಯ ನಾಶಃ । ತದ್ವಿಜ್ಞಾನಘನ ಇತ್ಯು-

ಕ್ತ್ವಮ್ ಸ ಆತ್ಮಾ ಸರ್ವಸ್ಯ ಜಗತಃ ಪರಮಾರ್ಥತಃ ಭೂತ ನಾಶಾತ್ ನ ವಿನಾಶೀ । ವಿನಾಶೀ ತು ಅವಿದ್ಯಾಕೃತಖಿಲ್ಯಭಾವಃ । ಅಯಂ ತು ಪಾರಮಾರ್ಥಿಕಃ ಅವಿನಾಶೀ ವಾ ಅರೇ ಅಯ ಮಾತ್ಮಾ । 'ನ ಹಿ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇಽವಿನಾಶಿತ್ವಾತ್' ॥ (ಬೃ. ೪-೬-೩೦ ; ೨-೪-೧೩)

ಯಾಜ್ಞವಲ್ಕ್ಯ : ಎಲೆ ಮೈತ್ರೇಯಿ ! ನಾನು ಮೋಹಗೊಳಿಸುವ ವಾಕ್ಯವನ್ನು ಹೇಳುತ್ತಿಲ್ಲ. ಅವಿದ್ಯೆಯು ತಂದೊಡ್ಡಿರುವ ಕಾರ್ಯಕರಣಸಂಬಂಧಿ ಯಾದ ಆತ್ಮನ ಹರಳಿನ ರೂಪವಿದೆಯಲ್ಲ, ಅದು ಅವಿದ್ಯೆಯಿಂದ ನಾಶವಾಗ ಲಾಗಿ ಅದರ ನಿಮಿತ್ತದಿಂದ ಶರೀರವೇ ಮುಂತಾದ ಸಂಬಂಧವುಳ್ಳ ಆತ್ಮನಲ್ಲಿ ಉಂಟಾಗಿದ್ದ ಅನ್ಯತ್ವದರ್ಶನರೂಪವಾದ ವಿಶೇಷಸಂಜ್ಞೆಯಿತ್ತಲ್ಲ, ಅದು ಕಾರ್ಯ ಕರಣಸಂಘಾತವೆಂಬ ಉಪಾಧಿಯನ್ನು ಪ್ರವಿಲಾಪನಮಾಡಿಕೊಂಡ ಬಳಿಕ ತನಗೆ ಹೇತುವಾದ ಉಪಾಧಿಯು ಇಲ್ಲವಾದ್ದರಿಂದ ತಾನೂ ನಾಶವಾಗುತ್ತದೆ. ಅಸಂಸಾರಿಯಾದ ವಿಜ್ಞಾನಘನವಾದ ಬ್ರಹ್ಮಸ್ವರೂಪಕ್ಕೆ ನಾಶವಿಲ್ಲ. ಸರ್ವ ಜಗತ್ತಿಗೂ ನಿಜವಾಗಿ ಆತ್ಮನಾಗಿರುವ ಅದು ಭೂತಗಳು ನಾಶವಾದರೂ ನಾಶ ವಾಗುವದಿಲ್ಲ ಆದರೆ, ವಿನಾಶವಾಗುವದು ಯಾವದೆಂದರೆ ಅವಿದ್ಯೆಯಿಂದಾ ಗಿರುವ ಹರಳಿನ ರೂಪವು. ಆದರೆ, ಈ ಪಾರಮಾರ್ಥಿಕನಾದ ಆತ್ಮನಿರುವನಲ್ಲ, ಎಲೆ ಮೈತ್ರೇಯಿ, ಇವನು ಅವಿನಾಶಿಯೇ. 'ವಿಜ್ಞಾತೃವಿನ ವಿಜ್ಞಾನಕ್ಕೆ ಲೋಪವಿಲ್ಲ ; ಏಕೆಂದರೆ ಅದು ಅವಿನಾಶಿಯಾಗಿರುತ್ತದೆ'.

ಪ್ರಿಯೆ ಮೈತ್ರೇಯಿ ! ಪ್ರಜ್ಞಾನಘನವೇ ಎಂದರೆ ಇಡಿಯಾದ ಅರಿವಿನ ಗಟ್ಟಿಯೇ ಆತ್ಮನ ಸ್ವಭಾವ. ದೇಹೇಂದ್ರಿಯಾದಿಗಳ ಅಭಿಮಾನದ ದೆಸೆಯಿಂದ ಆತ್ಮನೇ ಜೀವಾತ್ಮನೆನಿಸುತ್ತಾನೆ. ಆತ್ಮನ ಇಡಿಯಾದ ಅರಿವೇ ಅಂತಃಕರಣದ ಉಪಾಧಿಯಿಂದ ಜೀವಾತ್ಮನಲ್ಲಿ ಜ್ಞಾತೃ-ಜ್ಞಾನ-ಜ್ಞೇಯರೂಪದಿಂದ ಒಡೆದು, ಬಿಡಿಬಿಡಿಯಾಗಿ ತೋರಿಕೊಳ್ಳುತ್ತದೆ. ಈ ಬಿಡಿಬಿಡಿಯಾದ ಅರಿವೇ ವಿಜ್ಞಾನ ಅಥವಾ ವಿಶೇಷಜ್ಞಾನ ಎನಿಸುತ್ತದೆ. ಆದರೆ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ-ಎಂಬೀ ನಾಮರೂಪಗಳ ತೋರಿಕೆಗೆ ಅಜ್ಞಾನವೇ ಕಾರಣ. ಆತ್ಮಜ್ಞಾನದಿಂದ ಅಜ್ಞಾನವು ನಾಶವಾದರೆ, ಅಜ್ಞಾನಕಲ್ಪಿತವಾಗಿದ್ದ ದೇಹೇಂ-ದ್ರಿಯಾದಿಗಳೂ ಬಾಧಿತವಾಗಿ, ನಿಜವಲ್ಲ, ಹುಸಿತೋರಿಕೆ ಮಾತ್ರ ಎನಿಸುತ್ತವೆ. ಆದ್ದರಿಂದ ಅಂತಃಕರಣದ ಮೂಲಕ ತೋರಿಕೊಳ್ಳುತ್ತಿದ್ದ ವಿಜ್ಞಾನವೂ ಬಾಧಿತ ವಾಗಿ, ಹುಸಿಯೆನಿಸಿ, ಅಡಗಿಹೋಗುತ್ತದೆ. ಆದರೆ, ಸರೋವರದ ನೀರು ಬತ್ತಿ ಹೋಗುವದರಿಂದ ಅದರಲ್ಲಿ ತೋರುತ್ತಿದ್ದ ಚಂದ್ರನ ಪ್ರತಿಬಿಂಬವೂ ಪ್ರಕಾಶವೂ ಅಡಗಿಹೋದರೂ ಮೂಲ ಚಂದ್ರನ ಬಿಂಬಕ್ಕೂ ಅದರ ಪ್ರಕಾಶಕ್ಕೂ ಯಾವ ಹಾನಿಯೂ ಇಲ್ಲದಿರುವಂತೆ, ಜ್ಞಾನದಿಂದ ಅಂತಃಕರಣವು ಬಾಧಿತವಾಗಿ ಅದರಲ್ಲಿ

ಹೊಳೆಯುತ್ತಿದ್ದ ಬಿಡಿ ಅರಿವು (ವಿಜ್ಞಾನವು) ಅಡಗಿಹೋದರೂ ಆತ್ಮನ ಮೂಲ ಸ್ವಭಾವದ ಇಡಿ ಅರಿವಿಗೆ (ಪ್ರಜ್ಞಾನಕ್ಕೆ) ಯಾವ ಹಾನಿಯೂ ಒದಗುವದಿಲ್ಲ.

ನಿತ್ಯವೂ ಸತ್ಯವೂ ಆದ ಪ್ರಜ್ಞಾನಘನವೇ ನನ್ನ ಸ್ವರೂಪ ಎಂಬ ನಿಶ್ಚಯ ಜ್ಞಾನವಿಲ್ಲದಿರುವಾಗ, ನಮ್ಮ ಸ್ವರೂಪದಲ್ಲಿ ಜ್ಞಾತೃ-ಜ್ಞಾನ-ಜ್ಞೇಯವೆಂಬ ವಿಜ್ಞಾನವು ತೋರಿಕೊಳ್ಳುತ್ತದೆ. ನಾನು ಜ್ಞಾತೃ (ಪ್ರಮಾತೃ), ನಾನು ಕರ್ತೃ ನಾನು ಭೋಕ್ತೃ, ನನಗೆ ಕ್ರಿಯಾಕಾರಕಫಲಗಳು ಸತ್ಯವಾಗಿವೆ- ಎಂಬ ವಿಜ್ಞಾನವೇ ಸಂಸಾರ. ಆದರೆ, ಶಾಸ್ತ್ರಾಚಾರ್ಯರ ಉಪದೇಶಾನುಗ್ರಹಗಳಿಂದ ಆತ್ಮಜ್ಞಾನ ಉದಿಸಿದೊಡನೆ, ಪ್ರಜ್ಞಾನಘನಸ್ವರೂಪದ ಅನುಭವದಲ್ಲಿ ಬದು ಕಿರುವಾಗಲೇ ಮಿಕ್ಕ ಅನಾತ್ಮವಿಜ್ಞಾನಗಳೆಲ್ಲಾ ಅಡಗಿಹೋಗುವದರಿಂದ, ಜೀವನ್ಮುಕ್ತನಿಗೆ ದೇಹಪಾತಾನಂತರ ಯಾವ ಸಂಜ್ಞೆಯೂ ಇರುವದಿಲ್ಲ- ಎನ್ನುವದರಲ್ಲಿ ಆಶ್ಚರ್ಯವೇನಿದೆ ?

ಪ್ರಿಯೆ ಮೈತ್ರೇಯಿ ! ಪ್ರಜ್ಞಾನ ಮತ್ತು ವಿಜ್ಞಾನ ಅಥವಾ ವಿಜ್ಞಾನಘನ ಮತ್ತು ವಿಜ್ಞಾನ (ಇಡಿ ಅರಿವು, ಬಿಡಿ ಅರಿವು) ಇವುಗಳ ಸರಿಯಾದ ಅರ್ಥವನ್ನೂ ಸೂಕ್ಷ್ಮ ವ್ಯತ್ಯಾಸವನ್ನೂ ನೀನು ತಿಳಿದುಕೊಳ್ಳದೆ ಮನಸ್ಸಿನ ಗೊಂದಲದಿಂದ ಪ್ರಶ್ನೆಮಾಡಿದ್ದೀಯೆ. ಪ್ರಜ್ಞಾನವನ್ನು ಸರೋವರದಲ್ಲಿರುವ ನೀರಿಗೆ ಹೋಲಿಸ ಬಹುದು. ನೀರಿನ ಅಲ್ಲಾಟದಿಂದ ತೋರುವ ತೆರೆನೊರೆಗಳಿಗೆ ವಿಜ್ಞಾನವನ್ನು (ಸಂಜ್ಞೆಯನ್ನು) ಹೋಲಿಸಬಹುದು. ನೀರಿನ ಅಲ್ಲಾಟವು ನಿಂತು ತೆರೆನೊರೆ ಗಳು ಅಡಗಿದರೆ, ನೀರಿಗೆ ಯಾವ ಲೋಪವೂ ಇಲ್ಲ, ಅಲ್ಲವೆ ? ಇದರಂತೆ ಬ್ರಹ್ಮ ವಿದ್ಯೆಯಿಂದ ಮನಸ್ಸಿನ ಅಲ್ಲಾಟವು ನಿಂತು, ವಿಜ್ಞಾನವು (ಸಂಜ್ಞೆಗಳು—ಬಿಡಿ ಅರಿವುಗಳು) ಅಡಗಿದರೆ, ಆಧಾರವಾದ ಪ್ರಜ್ಞಾನಘನಸ್ವರೂಪಕ್ಕೆ (ಆತ್ಮಕ್ಕೆ) ಯಾವ ಹಾನಿಯೂ ಉಂಟಾಗುವದಿಲ್ಲ.

25. ಆತ್ಮಸತ್ಯಾನುಬೋಧೇನ ನ ಸಙ್ಕಲ್ಪಯತೇ ಯದಾ ।
ಅಮನಸ್ತಾಂ ತದಾ ಯಾತಿ ಗ್ರಾಹ್ಯಾಭಾವೇ ತದಗ್ರಹಮ್ ॥
ಮಾಂ. ಕಾ. ೩-೩೨)

ಮಣ್ಣೇ ಮಡಕೆಯಾಗಿರುವದರಿಂದ ಮಣ್ಣನ್ನು ಬಿಟ್ಟು ಮಡಕೆಕುಡಿಕೆ ಮೊದಲಾದ ವಸ್ತುಗಳು ಬೇರೆ ಸ್ವತಂತ್ರವಾಗಿ ಇರುವದಿಲ್ಲ. ಇದರಲ್ಲಿ ಮಡಕೆಗೆ ಉಪಾದಾನಕಾರಣವಾದ ಮಣ್ಣು ಒಂದೇ ಸತ್ಯ. ಮಡಕೆಕುಡಕೆ ಮೊದಲಾದವು ಗಳೆಲ್ಲಾ ಆಧಾರವಾದ ಮಣ್ಣಿನಲ್ಲಿ ತೋರುವ ಹುಸಿಯಾದ ನಾಮರೂಪಗಳು ಮಾತ್ರ. ಮಡಕೆಯನ್ನು ಬಿಟ್ಟು ಮಣ್ಣು ಇರಬಲ್ಲದು ; ಆದರೆ ಮಣ್ಣನ್ನು ಬಿಟ್ಟು ಮಡಕೆ ಇರಲಾರದು. ಅದ್ದರಿಂದ ಮಣ್ಣು ಒಂದೇ ಸತ್ಯ. ಇದರಂತೆ ಪ್ರಜ್ಞಾನಘನನಾದ ಪರಮಾತ್ಮನೇ ಪ್ರಪಂಚವಾಗಿ ತೋರುತ್ತಿರುವದರಿಂದ

ಪ್ರಜ್ಞಾನವನ್ನು ಬಿಟ್ಟು ಪ್ರಪಂಚವು ಬೇರೆ ಸ್ವತಂತ್ರವಾಗಿರುವದಿಲ್ಲ. ಪ್ರಪಂಚ ಸೃಷ್ಟಿ ಇಲ್ಲವಾದರೂ ಪ್ರಜ್ಞಾನವು ಇರಬಲ್ಲದು. ಆದ್ದರಿಂದ ಪ್ರಪಂಚಕ್ಕೆ ಉಪಾದಾನಕಾರಣವಾದ ಪ್ರಜ್ಞಾನ ಒಂದೇ ಸತ್ಯ. ಪ್ರಪಂಚವು ತನಗೆ ಆಸ್ಪದ ವಾದ ಪ್ರಜ್ಞಾನದಲ್ಲಿ ತೋರುವ ಹುಸಿಯಾದ ನಾಮರೂಪ (ಮಾಯೆ) ಮಾತ್ರ. ಶಾಸ್ತ್ರಾಚಾರ್ಯರ ಉಪದೇಶಕ್ಕೆ ಅನುಗುಣವಾಗಿ ವಿಚಾರಮಾಡಿ ಹೀಗೆ ಆತ್ಮ (ಪ್ರಜ್ಞಾನ) ಒಂದೇ ಸತ್ಯ ಎಂಬ ನಿಶ್ಚಯ ಉಂಟಾದಾಗ, ಸಂಕಲ್ಪಿಸುವದಕ್ಕೆ ತನ್ನಿಂದ ಬೇರೆಯಾದ ವಿಷಯವೇ ಇಲ್ಲವಾದುದರಿಂದ-ಕಟ್ಟಿಗೆಯು ತೀರಿದಾಗ ಬೆಂಕಿಯು ಆರಿಹೋಗುವಂತೆ-ಗ್ರಾಹ್ಯವಿಷಯವಿಲ್ಲದೆ, ಮನಸ್ಸಿನ ಗ್ರಾಹಕತ್ವವೂ ನಾಶವಾಗಿ, ಮನಸ್ಸು ಅಮನಸ್ಸಾಗುತ್ತದೆ. ಜ್ಞಾನಿಯಲ್ಲಿ ಮನಸ್ಸೇ ಇಲ್ಲವಾ ದುದರಿಂದ ಸಂಜ್ಞೆಯೂ (ಬಿಡಿ ಅರಿವೂ) ಇರುವದಿಲ್ಲ. ಜ್ಞಾನಿಗೆ ಅವನ (ಪರ ಮಾರ್ಥ)ದೃಷ್ಟಿಯಿಂದ ಶರೀರವೇ ಇಲ್ಲವಾದುದರಿಂದ, ಅವನು ಸತ್ತಮೇಲೆ ಹೇಗಿರುತ್ತಾನೆ ?-ಎಂಬ ಪ್ರಶ್ನೆಯೇ ಹುಟ್ಟುವದಿಲ್ಲ.

ಆದರೆ, ವ್ಯವಹಾರದೃಷ್ಟಿಯಿಂದ ನೋಡತಕ್ಕವರಿಗೆ ಜ್ಞಾನಿಗೂ ಶರೀರವಿದೆ. ಅವನ ಪ್ರಾರಬ್ಧಕರ್ಮದ ಪ್ರಭಾವದಿಂದ ಅವನು ಬದುಕಿರುವವರೆಗೂ ಮಿಕ್ಕ ಸಾಮಾನ್ಯರಂತೆ, ದೇಹೇಂದ್ರಿಯಗಳಿಂದ ಪ್ರಾಣಧಾರಣಾದಿಗಳಿಗೆ ಅಗತ್ಯವಾದ ವ್ಯವಹಾರವೂ ಜ್ಞಾನಪ್ರಸಾರಕ್ಕಾಗಿ ಬೇಕಾದ ಮನೋವಾಗಿಂದ್ರಿಯಾದಿಗಳ ವ್ಯಾಪಾರವೂ ನಡೆದೇ ಇರುತ್ತದೆ. ಆದರೆ, ಅವನು ಅವುಗಳನ್ನು ಸತ್ಯವೆಂದೇನೂ ತಿಳಿಯುವದಿಲ್ಲ ; ಅವುಗಳಲ್ಲಿ ತಾನೆಂದೂ ತನ್ನದೆಂದೂ (ತಾದಾತ್ಮ್ಯವನ್ನೂ) ಅಭಿಮಾನವನ್ನೂ ಪಡೆಯುವದಿಲ್ಲ. ಮಧ್ಯಾಹ್ನದ ಬಿಸಿಲಲ್ಲಿ ದೂರದ ಮರಳಿನ ಬಯಲಲ್ಲಿ ತೋರುತ್ತಿರುವ ವಿಶಾಲಸರೋವರದ ನೀರು-ತೆರೆಗಳು ನಿಜವಾದ ನೀರಲ್ಲ, ಅದು ಮರುಮರೀಚಿಕೆ, ಬಿಸಿಲ್ಕುದುರೆ ಮಾತ್ರ ಎಂಬ ನಿಶ್ಚಯಜ್ಞಾನ ವುಳ್ಳವನಿಗೆ ಆ ಹುಸಿತೋರಿಕೆಯಿಂದ ಯಾವ ಬಾಧೆಯೂ ಇಲ್ಲ. ಇದರಂತೆ, ಪರಮಾರ್ಥದೃಷ್ಟಿಯಿಂದ ನಿಜವಾಗಿಲ್ಲವಾದರೂ ವ್ಯವಹಾರದೃಷ್ಟಿಯಿಂದ ಇರು ವಂತೆ ತೋರುವ ದೇಹೇಂದ್ರಿಯಾದಿಗಳ ವ್ಯವಹಾರದಿಂದ ಜೀವನ್ಮುಕ್ತನಿಗೆ ಯಾವ ಹಾನಿಯೂ ಇಲ್ಲ. ಅವನ ಅಂತರಾಳದ ಅನುಭವದಲ್ಲಿ ಸರ್ವವ್ಯವಹಾರಾ ತೀತವಾದ ಬ್ರಹ್ಮಾತ್ಮ ಒಂದೇ ಇರುವದು.

**26.** ಮೈತ್ರೇಯಿ ! ನಾನು-ಇದು (ಇನ್ನೊಂದು) ಎಂಬ ದ್ವೈತವು ತೋರುವದಕ್ಕೆ ಅವಿದ್ಯೆಯೇ ಕಾರಣ.

> ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಜಿಘ್ರತಿ ತದಿತರ ಇತರಂ ಪಶ್ಯತಿ....ತದಿತರ ಇತರಂ ವಿಜಾನಾತಿ ಯತ್ರ ವಾ ಅಸ್ಯ ಸರ್ವಮಾತ್ಮೈವಾಭೂತ್ತತ್ಕೇನ ಕಂ ಜಿಘ್ರೇತ್ ತತ್ಕೇನ ಕಂ

ಪಶ್ಯೇತ್ ತತ್ಕೇನ ಕಂ ವಿಜಾನೀಯಾತ್ । ಯೇನೇದಗ್ಂ ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾದ್ವಿಜ್ಞಾತಾರಮರೇ ಕೇನ ವಿಜಾನೀಯಾದಿತಿ ॥ (ಬೃ. ೨-೪-೧೪)

ಎಲ್ಲಿ ದ್ವೈತವಿದ್ದಂತೆ ಇರುವದೋ ಅಲ್ಲಿ ಒಬ್ಬನು ಇನ್ನೊಂದನ್ನು ಮೂಸುತ್ತಾನೆ, ಅಲ್ಲಿ ಒಬ್ಬನು ಇನ್ನೊಂದನ್ನು ಕಾಣುತ್ತಾನೆ ; ಅಲ್ಲಿ ಒಬ್ಬನು ಇನ್ನೊಂದನ್ನು ಆಲೋಚಿಸುತ್ತಾನೆ, ಅಲ್ಲಿ ಒಬ್ಬನು ಇನ್ನೊಂದನ್ನು ಅರಿತುಕೊಳ್ಳುತ್ತಾನೆ.

ತಾನು, ಮತ್ತು ಇದು ಅಥವಾ ಇನ್ನೊಂದು-ಎಂಬ ದ್ವೈತವು ತೋರುವದಕ್ಕೆ ಅವಿದ್ಯೆಯೇ ಕಾರಣ. ಅವಿದ್ಯೆಯಿಂದ ಎಲ್ಲಿ ದ್ವೈತವಿರುವಂತೆ ತೋರುತ್ತಿರುವದೋ ಅಲ್ಲಿ ತಾನು, ತನಗಿಂತ ಬೇರೆಯಾದ ಕಣ್ಣು ಮೊದಲಾದ ಕರಣಗಳಿಂದ, ತನಗಿಂತ ಬೇರೆಯಾದ ರೂಪ ಮೊದಲಾದ ವಿಷಯಗಳನ್ನು ನೋಡುವದು, ಕೇಳುವದು, ಮಾತಾಡುವದು, ಮೂಸುವದು, ಮುಟ್ಟುವದು, ಆಲೋಚಿಸುವದು, ಅರಿಯುವದು-ಇತ್ಯಾದಿ ವ್ಯವಹಾರಗಳನ್ನು ಮಾಡುತ್ತಿರುವನು.

ಇವೆಲ್ಲಾ ನಡೆಯುವದು ಅವಿದ್ಯಾವಸ್ಥೆಯಲ್ಲಿ. ಆದರೆ, ವಿದ್ಯೆಯಿಂದ ಅವಿದ್ಯೆಯು ನಾಶವಾಗಿ, ಎಲ್ಲವೂ ಆತ್ಮನೇ ಎಂಬ ಅನುಭವವಿರುವಾಗ ತಾನು ತನ್ನ ಇಂಥಾ ಕರಣದಿಂದ ಇಂಥಾ ವಿಷಯವನ್ನು ಅರಿಯುವೆನು-ಎಂಬ ಭೇದ ವ್ಯವಹಾರವಿರುವದಿಲ್ಲ.

ತಸ್ಮಾತ್ ಅವಿದ್ಯಾಯಾಮೇವ ಸತ್ಯಾಂ ಕ್ರಿಯಾಕಾರಕಫಲವ್ಯವಹಾರೋ ನ ಬ್ರಹ್ಮವಿದಃ । ಆತ್ಮತ್ವಾದೇವ ಸರ್ವಸ್ಯ ನಾತ್ಮವ್ಯತಿರೇಕೇಣ ಕಾರಕಂ ಕ್ರಿಯಾಫಲಂ ವಾ ಅಸ್ತಿ । ನ ಚ ಅನಾತ್ಮಾ ಸನ್ ಸರ್ವಮ್ ಆತ್ಮೈವ ಭವತಿ ಕಸ್ಯಚಿತ್ । ತಸ್ಮಾತ್ ಅವಿದ್ಯಯೈವ ಅನಾತ್ಮತ್ವಂ ಪರಿಕಲ್ಪಿತಮ್, ನ ತು ಪರಮಾರ್ಥತಃ ಆತ್ಮವ್ಯತಿರೇಕೇಣ ಅಸ್ತಿ ಕಿಂಚಿತ್ ॥

(ಬೃ. ಭಾ. ೨-೪-೧೪)

ಆದ್ದರಿಂದ ಅವಿದ್ಯೆಯಿದ್ದರೆ ಕ್ರಿಯಾಕಾರಕಫಲವ್ಯವಹಾರವಿದ್ದೀತೇ ಹೊರತು ಬ್ರಹ್ಮಜ್ಞಾನಿಗೆ ಇರುವದಿಲ್ಲ. ಎಲ್ಲವೂ ಅವನಿಗೆ ಆತ್ಮನಾಗಿಬಿಟ್ಟಿರುವದರಿಂದಲೇ ಆತ್ಮನನ್ನು ಬಿಟ್ಟು ಬೇರೆ ಕಾರಕವಾಗಲಿ ಕ್ರಿಯೆಯಾಗಲಿ ಫಲವಾಗಲಿ ಇರುವದಿಲ್ಲ. ಆದರೆ, ಯಾರಿಗೇ ಆಗಲಿ, ಎಲ್ಲವೂ ಮೊದಲು ಅನಾತ್ಮವಾಗಿದ್ದು ಆ ಬಳಿಕ ಆತ್ಮನೇ ಆಗಲಾರದು ; ಆದ್ದರಿಂದ ಅವಿದ್ಯೆಯಿಂದಲೇ ಅನಾತ್ಮವೆಂದು ಕಲ್ಪಿತವಾಗಿದೆಯೇ ಹೊರತು, ಆತ್ಮನನ್ನು ಬಿಟ್ಟು ನಿಜವಾಗಿ ಯಾವದೊಂದೂ ಇರುವದೇ ಇಲ್ಲ. ಆದ್ದರಿಂದ ಪರಮಾರ್ಥವಾಗಿರುವ ಆತ್ಮನು ಒಬ್ಬನೇ ಎಂಬ ಪ್ರತ್ಯಯವುಂಟಾದರೆ ಕ್ರಿಯೆ, ಕಾರಕ, ಫಲ-ಎಂಬ

ಪ್ರತ್ಯಯವು ಇರುವ ಹಾಗಿಲ್ಲ. ಆದ್ದರಿಂದ ಹೀಗೆ ವಿರುದ್ಧವಾಗಿರುವದರಿಂದಲೇ ಬ್ರಹ್ಮಜ್ಞಾನಿಗೆ ಕ್ರಿಯೆಗಳೂ ಅವುಗಳ ಸಾಧನಗಳೂ ಅತ್ಯಂತವಾಗಿ ಇಲ್ಲ ವಾಗುವವು.

ಪ್ರಜ್ಞಾನಘನಸ್ವರೂಪನಾದ ಆತ್ಮನೇ ಎಲ್ಲವನ್ನೂ ಅರಿಯುವ ಪ್ರಮಾತೃ ವಾಗಿರುತ್ತಾನೆ. ಆದ್ದರಿಂದ ಅವನನ್ನು ಅರಿಯುವ ಪ್ರಮಾತೃವು ಮತ್ತೊಬ್ಬನಿಲ್ಲ. ಆತ್ಮನು ಯಾವ ಕರಣಕ್ಕೂ ವಿಷಯನೂ ಅಲ್ಲ. ಪ್ರಮಾತೃವಿನ ತಿರುಳಾದ ಆತ್ಮನನ್ನು ವಿಷಯೀಕರಿಸಿಕೊಂಡು ಅರಿಯುವದು ಸಾಧ್ಯವೇ ಇಲ್ಲ.

ಅವಿದ್ಯಾಕಲ್ಪಿತವಾದ ದ್ವೈತದಲ್ಲಿ ಮಾತ್ರವೇ ವಿಶೇಷಜ್ಞಾನ (ಸಂಜ್ಞೆ) ಯಿರುತ್ತದೆಯೇ ಹೊರತು, ಎಲ್ಲವೂ ತಾನೇ ಆಗಿರುವ (ವಿದ್ಯಾಫಲವಾದ) ಅದ್ವೈತದಲ್ಲಿ ವಿಶೇಷಜ್ಞಾನವು ಹೇಗೆ ತಾನೇ ಇದ್ದೀತು ?

ಇನ್ನೊಂದು ರೂಪವನ್ನು ನೋಡುವ, ಇನ್ನೊಂದು ಶಬ್ದವನ್ನು ಕೇಳುವ, ಇನ್ನೊಂದು ವಿಷಯವನ್ನು ಅರಿಯುವ, ತಾನು ಮತ್ತು ಇನ್ನೊಂದು ಎಂಬ ಅವಿದ್ಯಾವಸ್ಥೆಯಲ್ಲಿ ಆತ್ಮನಾದ ತಾನೇ ದ್ರಷ್ಟೃವೂ ಶ್ರೋತೃವೂ ಜ್ಞಾತೃವೂ ಆಗಿರುವದರಿಂದ (ಅದ್ವಿತೀಯ) ಆತ್ಮನಾದ ತನ್ನನ್ನು ಅರಿಯುವದಕ್ಕೆ ಮತ್ತೊಬ್ಬ ಜ್ಞಾತೃವಾಗಲೀ ಮತ್ತೊಂದು ಕರಣವಾಗಲಿ ಇಲ್ಲ. ಆತ್ಮನು ಏತಕ್ಕೂ ವಿಷಯನಲ್ಲ.

ಇನ್ನು ಬ್ರಹ್ಮವಿದ್ಯೆಯಿಂದ ಅವಿದ್ಯಾನಾಶವಾಗಿರುವ ಜ್ಞಾನಿಗೆ ಅವಿದ್ಯಾ ಕಲ್ಪಿತವಾದ ಕರ್ತೃ, ಕ್ರಿಯೆ, ಕಾರಕ, ಫಲಗಳು ಕೇವಲ ಹುಸಿತೋರಿಕೆಗಳೆಂದು ಬಾಧಿತವಾಗಿರುವದರಿಂದ, ಅದ್ವಿತೀಯವಿಜ್ಞಾನಘನನಾದ ಅವನ ಆತ್ಮನನ್ನು ಅರಿಯುವದಕ್ಕೆ ಮತ್ತೊಬ್ಬ ವಿಜ್ಞಾತೃವಿಲ್ಲ ; ಅವನು ಬೇಕೂ ಇಲ್ಲ. ಆತ್ಮನನ್ನು ಅರಿಯುವದೆಂದರೆ ತಾನು ಆತ್ಮನೇ ಆಗಿರುವದು.

ಹೀಗೆ ಅವಿದ್ಯಾವಸ್ಥೆಯಲ್ಲಿ ಆಗಲಿ ವಿದ್ಯಾವಸ್ಥೆಯಲ್ಲಿ ಆಗಲಿ, ವಿಜ್ಞಾನ ಘನನಾದ ಆತ್ಮನನ್ನು ಯಾವರೀತಿಯಿಂದಲೂ ಅರಿಯಲಾಗುವದಿಲ್ಲ.

27. ಪ್ರಿಯೆ ಮೈತ್ರೇಯಿ ! ಸರ್ವಾತ್ಮನಾದ ಪರಮಾತ್ಮನು ನಮ್ಮ ಪ್ರತಿಯೊಬ್ಬರಲ್ಲಿಯೂ ಇರುವ ಪ್ರಮಾತೃವಿಗೂ ಸಾಕ್ಷಿಯಾದ ಚೈತನ್ಯವಾಗಿ ಬೆಳಗುತ್ತಾ ಯಾವ ಪ್ರಮಾಣಕ್ಕೂ ಗೋಚರನಾಗದೆ ಇರುತ್ತಾನೆ. ಆದ್ದರಿಂದ ಅಪ್ರಮೇಯನಾಗಿಯೂ ಅದ್ವಿತೀಯನಾಗಿಯೂ ಅಚಿಂತ್ಯನಾಗಿಯೂ ಅನಿರ್ವಚ ನೀಯನಾಗಿಯೂ ನಿರ್ವಿಶೇಷನಾಗಿಯೂ ನಿಷ್ಪ್ರಪಂಚನಾಗಿಯೂ ಇರುವ ಆತ್ಮ ನನ್ನು ಯಾವ ಉಪಾಯದಿಂದಲೂ ತಿಳಿಸಲು ಸಾಧ್ಯವಿಲ್ಲ. ಆದ್ದರಿಂದ, ಆತ್ಮನಲ್ಲಿ ಅವಿದ್ಯೆಯಿಂದ ಕಲ್ಪಿತವಾಗಿ ತೋರುವ ಮಿಕ್ಕ ಎಲ್ಲಾ ಅನಾತ್ಮಗಳ ಮತ್ತು ಅವುಗಳ ಧರ್ಮಗಳ ಹುಸಿತೋರಿಕೆಯನ್ನು ಅನುವಾದಮಾಡಿಕೊಂಡು

ಅದನ್ನು ವಿಮರ್ಶಿಸುತ್ತಾ ಅಲ್ಲಗಳೆಯುವದರಿಂದ, ಮಾತ್ರವೇ ಸ್ವತಃಸಿದ್ಧನಾದ ಆತ್ಮನನ್ನು ಉಳಿಸಿ ತೋರಿಸುವ ಬೋಧಪದ್ಧತಿಯನ್ನು ಬಿಟ್ಟು ಬೇರೆ ಗತಿಯಿಲ್ಲ. ಇದಕ್ಕೇ ಅಧ್ಯಾರೋಪ ಮತ್ತು ಅಪವಾದಪದ್ಧತಿ ಎಂದು ಹೆಸರು.

> ದರ್ಶಯತಿ ಚ ಶ್ರುತಿಃ ಪರರೂಪಪ್ರತಿಷೇಧೇನೈವ ಬ್ರಹ್ಮ ನಿರ್ವಿಶೇಷತ್ವಾತ್। 'ನೇತಿ ನೇತಿ ಇತ್ಯೇವಂ ನಿರ್ದೇಶಃ' (ಬೃ. ೨-೩-೬) 'ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ' (ಕೇ. ೧-೩) ಇತಿ, 'ಯತೋ ವಾಚೋ ನಿವರ್ತನ್ತೇ। ಅಪ್ರಾಪ್ಯ ಮನಸಾ ಸಹ (ತೈ. ೨-೪) ಇತ್ಯೇವಮಾದ್ಯಾ। ತಥಾ ಸ್ಮೃತಿಷ್ವಪಿ ಪರಪ್ರತಿಷೇಧೇನೈವ ಉಪದಿಶ್ಯತೇ 'ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ। ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ' (ಗೀ. ೧೩-೧೨) ಇತ್ಯೇವಮಾದ್ಯಾಸು। ತಥಾ ವಿಶ್ವರೂಪಧರೋ ನಾರಾಯಣೋ ನಾರದಮುವಾಚ ಇತಿ ಸ್ಮರ್ಯತೇ ॥ (ಸೂ. ಭಾ. ೩-೨-೧೭)

> ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ।
> ಸರ್ವಭೂತಗುಣೈರ್ಯುಕ್ತಂ ನೈವಂ ಮಾಂ ಜ್ಞಾತುಮರ್ಹಸಿ ॥
> (ಮೋ. ಧ. ೩೩೯-೪೫)

ಮತ್ತು ಬ್ರಹ್ಮವು ನಿರ್ವಿಶೇಷವಾಗಿರುವದರಿಂದಲೇ ಶ್ರುತಿಯು 'ಹೀಗಲ್ಲ, ಹೀಗಲ್ಲ; (ಇದಲ್ಲ, ಇದಲ್ಲ)' ಎಂಬಿದೇ ನಿರ್ದೇಶವು; (ಬೃ. ೨-೩-೬) ಎಂದು, 'ತಿಳಿದುದಕ್ಕಿಂತಲೂ ತಿಳಿಯದೆ ಇರುವದಕ್ಕಿಂತಲೂ ಅದು ಬೇರೆಯೇ' (ಕೇ.೧-೩) ಎಂದು, 'ವಾಕ್ಕುಗಳು ಮನಸ್ಸಿನೊಡನೆ ಅದನ್ನು ಪಡೆಯದೆ, ಯಾವದರಿಂದ ಹಿಂತಿರುಗುವವೋ' (ತೈ.೨-೪) ಎಂದು ಮುಂತಾಗಿರುವ ಶ್ರುತಿಯು ಮತ್ತೊಂದು ರೂಪವನ್ನು ಅಲ್ಲಗಳೆಯುವದರಿಂದ ಬ್ರಹ್ಮವನ್ನು ತಿಳಿಸುತ್ತದೆ. (ಬ್ರಹ್ಮದಲ್ಲಿ ನಿಜವಾಗಿಲ್ಲದಿದ್ದರೂ ಆರೋಪಿತವಾಗಿದ್ದ ಧರ್ಮವನ್ನು ಅಲ್ಲಗಳೆದು ತಿಳಿಸುವದರಿಂದಲೇ ಅದು ನಿರ್ವಿಶೇಷವೆಂದು ಗೊತ್ತಾಗುತ್ತದೆ.) ಬಾಷ್ಕಲಿಯನ್ನು ಬಾಧ್ವನು ಕೇಳಿದ್ದಕ್ಕೆ ಯಾವ ಮಾತೂ ಇಲ್ಲದೆಯೇ ಬ್ರಹ್ಮವನ್ನು ತಿಳಿಸಿಕೊಟ್ಟನೆಂದು, 'ಅವನು ಹೇಳಿದನೇನೆಂದರೆ: ಭಗವಂತನೆ, ಬ್ರಹ್ಮವನ್ನು ತಿಳಿಸಿಕೊಡು-ಎಂದನು. ಅವನು ಸುಮ್ಮನೆ ಇದ್ದನು; ಅವನನ್ನು ಎರಡನೆಯ ಸಲ, ಮತ್ತು ಮೂರನೆಯ ಸಲ ಪುನಃ ಕೇಳಲು, ಅವನಿಂತೆಂದನು : 'ಹೇಳುತ್ತಿರುವೆನಲ್ಲ ! ಆದರೆ, ನೀನು ಅರಿತುಕೊಳ್ಳದೆ ಇರುವೆ. 'ಉಪಶಾನ್ತೋಽಯಮಾತ್ಮಾ' ಈ ಆತ್ಮನು ಉಪಶಾಂತನಾಗಿರುತ್ತಾನೆ.' ಎಂದು ಶ್ರುತಿಯು ಹೇಳುತ್ತಿದೆ.

ಹೀಗೆಯೇ 'ಯಾವದು ಜ್ಞೇಯವೋ ಅದನ್ನು ತಿಳಿಸಿಕೊಡುವೆನು, ಅದನ್ನರಿತುಕೊಂಡವನು ಅಮೃತವನ್ನು ಪಡೆದುಕೊಳ್ಳುವನು. ಪರಬ್ರಹ್ಮವು ಆದಿ

ಯಿಲ್ಲದ್ದು ; ಅದು ಸತ್ತೆನಿಸುವದಿಲ್ಲ, ಅಸತ್ತೂ ಎನಿಸುವದಿಲ್ಲ.' (ಗೀ. ೧೩-೧೨) ಮುಂತಾದ ಸ್ಮೃತಿಗಳಲ್ಲಿಯೂ ಮತ್ತೊಂದು ರೂಪವನ್ನು ಪ್ರತಿಷೇಧಮಾಡುವದರಿಂದಲೇ ಬ್ರಹ್ಮವನ್ನು ಉಪದೇಶಮಾಡಿರುತ್ತದೆ. ವಿಶ್ವರೂಪಧರನಾದ ನಾರಾಯಣನು ನಾರದನನ್ನು ಕುರಿತು 'ಎಲೈ ನಾರದನೆ, ನನ್ನನ್ನು ನೋಡುತ್ತಿರುವೆಯಷ್ಟೆ, ನಾನು ಸೃಜಿಸಿರುವ ಮಾಯೆ ಇದು. ನಾನು ಹೀಗೆ ಸರ್ವಭೂತಗುಣಗಳಿಂದಲೂ ಕೂಡಿರುವೆನೆಂದು ತಿಳಿದುಕೊಳ್ಳಬೇಡ.' (ಮೋ. ಧ. ೩೩೯-೪೫) ಎಂದು ಹೇಳಿದನೆಂದು ಸ್ಮೃತಿಯಲ್ಲಿದೆ. (ಸೂ. ಭಾ. ೩-೨-೧೭)

28. ಪ್ರಿಯೆ ಮೈತ್ರೇಯಿ ! ಬ್ರಹ್ಮವು ನಿರ್ವಿಶೇಷರೂಪವೆಂಬುದನ್ನು ಹಿಂದೊಮ್ಮೆ ನಾನೇ ಬ್ರಹ್ಮವಾದಿನಿಯಾದ ಗಾರ್ಗಿಯ ಪ್ರಶ್ನೆಗೆ ಉತ್ತರವಾಗಿ ಹೀಗೆ ಹೇಳಿದ್ದೆ :

> ಸ ಹೋವಾಚೈತದ್ ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ
> ಅಭಿವದನ್ತ್ಯಸ್ಥೂಲಮನಣ್ವಹ್ರಸ್ವಮದೀರ್ಘಮಲೋಹಿತಮಸ್ನೇಹ
> ಮಚ್ಛಾಯಮತಮೋಽವಾಯ್ವನಾಕಾಶಮಸಙ್ಗಮರಸಮಗನ್ಧ
> ಮಚಕ್ಷುಷ್ಕಮಶ್ರೋತ್ರಮವಾಗಮನೋಽತೇಜಸ್ಕಮಪ್ರಾಣ
> ಮಮುಖಮಮಾತ್ರಮನನ್ತರಮಬಾಹ್ಯಂ ನ ತದಶ್ನಾತಿ ಕಿಂಚನ
> ನ ತದಶ್ನಾತಿ ಕಶ್ಚನ ॥ (ಬೃ. ಉ. ೩-೮-೮)

ಆಕಾಶವು ಏತರಿಂದ ಓತವೂ ಪ್ರೋತವೂ (ಹಾಸು ಹೊಕ್ಕಾಗಿ ವ್ಯಾಪ್ತವು) ಆಗಿದೆ ಎಂದು ಕೇಳಿದೆಯಲ್ಲ ಗಾರ್ಗಿ, ಇದೇ ಆ ಅಕ್ಷರವು. ಯಾವದು ಕ್ಷಯವಾಗುವದಿಲ್ಲವೋ ಮತ್ತು ಮಾರ್ಪಡುವದಿಲ್ಲವೋ ಅದು ಅಕ್ಷರವೆನಿಸುತ್ತದೆ. ಕಾರ್ಯಕಾರಣರೂಪವಾಗಿರುವ ವಸ್ತು ಕ್ಷರವಾಗಿರುವದರಿಂದ, ಅದಕ್ಕೆ ವಿರುದ್ಧ ಸ್ವಭಾವದ ಈ ಅಕ್ಷರವು ಪರಮಾತ್ಮನೇ ಎಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ. ಆ ಅಕ್ಷರಬ್ರಹ್ಮವು ಸ್ಥೂಲವಲ್ಲ, ಸೂಕ್ಷ್ಮವೂ ಅಲ್ಲ ; ಗಿಡ್ಡವಲ್ಲ, ಉದ್ದವೂ ಅಲ್ಲ ; ದ್ರವ್ಯಧರ್ಮಗಳಾದ ಈ ನಾಲ್ಕು ಬಗೆಯ ಪರಿಮಾಣಗಳನ್ನು ಅಲ್ಲಗಳೆದಿರುವದರಿಂದ ಆ ಅಕ್ಷರವು ದ್ರವ್ಯವಲ್ಲ ಎಂದಂತೆ ಆಯಿತು. ಅಗ್ನಿಯ ಗುಣವೆಂಬ ಕೆಂಪಲ್ಲ ಅದು, ಜಲದ ಗುಣವೆಂಬ ಅಂಟೂ ಅಲ್ಲ ; ಅದು ನೆರಳಲ್ಲ, ತಮಸ್ಸಲ್ಲ, ವಾಯುವಲ್ಲ, ಆಕಾಶವಲ್ಲ, ಅರಗಿನಂತೆ ಅಂಟಿಕೊಳ್ಳುವದಲ್ಲ, ರಸವಲ್ಲ, ಗಂಧವಲ್ಲ, ಅದಕ್ಕೆ ಕಣ್ಣಿಲ್ಲ, ಕಿವಿಯಿಲ್ಲ, ('ಪಶ್ಯತ್ಯಚಕ್ಷುಃ, ಸ ಶೃಣೋತ್ಯಕರ್ಣಃ' ಶ್ವೇ. ೩-೧೯) ಅದಕ್ಕೆ ಮಾತಿಲ್ಲ, ಮನಸ್ಸೂ ಇಲ್ಲ, ಅದಕ್ಕೆ ತೇಜಸ್ಸಿಲ್ಲ, ಪ್ರಾಣವಿಲ್ಲ, ಮುಖವಿಲ್ಲ (ದ್ವಾರವಿಲ್ಲ), ಅಳತೆಯಿಲ್ಲ, ಒಳಗಿಲ್ಲ, ಹೊರಗಿಲ್ಲ ; ಅದು ಏನನ್ನೂ ತಿನ್ನುವದಿಲ್ಲ, ಅದು ಯಾವದಕ್ಕೂ ಆಹಾರವಲ್ಲ. ಹೀಗೆ ಆ ಅಕ್ಷರ ಬ್ರಹ್ಮವು ಯಾವ ವಿಶೇಷಣವೂ ಇಲ್ಲದ್ದು. ಅದು ತನಗೆರಡನೆಯದಿಲ್ಲದ ಒಂದೇ ಆಗಿರುವದರಿಂದ ವಿಶೇಷ್ಯವಿಶೇಷಣಗಳಿಲ್ಲದ್ದು.

**29.** ದ್ರವ್ಯಗುಣಕರ್ಮಗಳೆಂಬ ವಿಕಲ್ಪಗಳೆಲ್ಲಾ ಅನಾತ್ಮಕ್ಕೆ ಸೇರಿದವುಗಳಾದ್ದರಿಂದ, ನಿರ್ವಿಷಯವೂ ನಿರ್ವಿಶೇಷವೂ ಆದ ಆತ್ಮನನ್ನು ಶಾಸ್ತ್ರಾಚಾರ್ಯರ ಉಪದೇಶವಾದ ಅಧ್ಯಾರೋಪ-ಅಪವಾದ ಪದ್ಧತಿಯ ಕೌಶಲದಿಂದಲೇ ತಿಳಿಯಬೇಕು.

**ಉಪಾಧಿಕೃತಂ ಮಿಥ್ಯಾರೂಪಮಪಿ ಅಸ್ತಿತ್ವಾಧಿಗಮಾಯ ಜ್ಞೇಯಧರ್ಮವತ್ ಪರಿಕಲ್ಪ್ಯ ಉಚ್ಯತೇ ಸರ್ವತಃ ಪಾಣಿ ಪಾದಮ್ ಇತ್ಯಾದಿ। ತಥಾ ಹಿ ಸಮ್ಪ್ರದಾಯವಿದಾಂ ವಚನಮ್ 'ಅಧ್ಯಾರೋಪ-ಅಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ' ಇತಿ ॥** (ಗೀ. ಭಾ. ೧೩-೧೩)

ಉಪಾಧಿಯಿಂದಾಗಿರುವ ಮಿಥ್ಯಾರೂಪವನ್ನು ಕೂಡ ಜ್ಞೇಯವು ಇದೆ ಎಂಬುದನ್ನು ನಿಶ್ಚಯಿಸುವದಕ್ಕಾಗಿ ಅದು ಜ್ಞೇಯದ ಧರ್ಮವಾಗಿರುವಂತೆ ಕಲ್ಪಿಸಿಕೊಂಡು ಸರ್ವತಃ ಪಾಣಿಪಾದವು ಎಂದು ಮುಂತಾಗಿ ಇಲ್ಲಿ ಹೇಳಿದೆ. "ಯಾವ ಪ್ರಪಂಚವೂ ಇಲ್ಲದ ಆತ್ಮತತ್ತ್ವವನ್ನು ಅಧ್ಯಾರೋಪ, ಅಪವಾದ- ಇವುಗಳ ಮೂಲಕವಾಗಿ ವಿಸ್ತರಿಸಲಾಗುತ್ತದೆ- ಎಂದು ಸಂಪ್ರದಾಯವನ್ನು ಬಲ್ಲವರ ವಚನವು ಹೀಗೆಂದೇ ತಿಳಿಸುತ್ತದೆ.

ಅಜ್ಞಜನರು ತಮ್ಮ ಆತ್ಮನಲ್ಲಿ ಅಧ್ಯಾಸಮಾಡಿಕೊಂಡಿರುವ ವಿಕಲ್ಪಗಳಲ್ಲಿ ಯಾವದಾದರೊಂದನ್ನು ಅನುವಾದಮಾಡಿಕೊಂಡು, ಅದಕ್ಕಿಂತ ಹೊರಗಿನ ಅಥವಾ ಹೆಚ್ಚು ಸ್ಥೂಲವಾದ ಮತ್ತೊಂದು ವಿಕಲ್ಪವನ್ನು ಇಲ್ಲವೆಂದು ತೋರಿಸಿಕೊಟ್ಟು ಕೊನೆಗೆ, ಮೊದಲು ಒಪ್ಪಿದ್ದ ವಿಕಲ್ಪವನ್ನು ಮತ್ತೊಂದು ವಿಕಲ್ಪದ ಆಶ್ರಯದ ಮೂಲಕ ಅಲ್ಲಗಳೆಯುವದು ಈ ಉಪದೇಶದ ಕ್ರಮವು.

ಈ ಕ್ರಮದಲ್ಲಿ ಉಪದೇಶಕ್ಕಾಗಿ ಬ್ರಹ್ಮದಲ್ಲಿರುವದೆಂದು ಅಂಗೀಕರಿಸಿದ ವಿಕಲ್ಪವು ಅಧ್ಯಾರೋಪವು; ಅಲ್ಲಗಳೆದದ್ದು ಅಪವಾದವು. ಮೈತ್ರೇಯಿ! ಗಂಡ, ಹೆಂಡತಿ, ಮಕ್ಕಳು, ಹಣ, ಹೊಲ, ಮನೆ, ಲೋಕಗಳು, ದೇವತೆಗಳು ಮೊದಲಾದವುಗಳೆಲ್ಲಾ ಪ್ರಿಯವಾಗಿ ತೋರುವದು ತನಗಾಗಿಯೇ ಹೊರತು, ಅವುಗಳಿಗಾಗಿ ಅಲ್ಲ. ಆದ್ದರಿಂದ ತನಗೆ ತಾನೇ ಅತ್ಯಂತ ಪ್ರಿಯನು; ಹೀಗೆಂದು ಪ್ರಾರಂಭದಲ್ಲಿ, ಆತ್ಮನೇ ಪ್ರಿಯತಮನೆಂದು ನಿನಗೆ ಹೇಳಿದ್ದರಿಂದ, ಆತ್ಮನಲ್ಲಿ ಪ್ರಿಯತಮತ್ವವನ್ನು ಅಧ್ಯಾರೋಪಮಾಡಿ, ಮಿಕ್ಕ ಅನಾತ್ಮಗಳಲ್ಲಿ ಹಿಂದಿದ್ದ ಪ್ರಿಯತ್ವವೆಂಬ ಭ್ರಮೆಯನ್ನು ಅಲ್ಲಗಳೆದಂತೆ (ಅಪವಾದಮಾಡಿದಂತೆ) ಆಗಿದೆ. ಆತ್ಮನು ಅತ್ಯಂತ ಪ್ರಿಯನಾದ್ದರಿಂದ ಅವನನ್ನೇ ಶ್ರವಣಾದಿಗಳಿಂದ ಕಂಡುಕೊಳ್ಳಬೇಕು-ಎಂದು ಹೇಳಿದ್ದರಿಂದ ಆತ್ಮನಲ್ಲಿ ಜ್ಞೇಯತ್ವವನ್ನು ಅಧ್ಯಾರೋಪಮಾಡಿ ಲೋಕದಲ್ಲಿ ಮಿಕ್ಕ ಯಾವದೂ ಜ್ಞೇಯವಾಗಲು ಸರ್ವಥಾ ಯೋಗ್ಯವಲ್ಲ-ಎಂದು

ಅಲ್ಲಗಳೆದಿದೆ. ಹಾಗೆಯೇ ವಿಚಾರವನ್ನು ಮುಂದುವರಿಸಿ, ತಾನು ನಿತ್ಯಜ್ಞಾತೃವೆಂಬುದನ್ನು ತೋರಿಸಿ, ಆತ್ಮನಲ್ಲಿ ಜ್ಞಾತೃತ್ವವನ್ನು ಅಧ್ಯಾರೋಪಮಾಡಿ, ಜ್ಞೇಯತ್ವವನ್ನು ಅಪವಾದಮಾಡಿದೆ. ಕೊನೆಗೆ ಆತ್ಮನಲ್ಲಿ ಚಿನ್ಮಾತ್ರತ್ವವನ್ನು ಅಧ್ಯಾರೋಪಮಾಡಿ, ಜ್ಞಾತೃತ್ವವು ಅವಿದ್ಯಾಕಲ್ಪಿತವೆಂದು ತೋರಿಸಿ, ಜ್ಞಾತೃ-ಜ್ಞಾನ-ಜ್ಞೇಯಗಳೆಂಬ ವಿಭಾಗವು ಬರೀ ಹುಸಿತೋರಿಕೆಯೆಂದು ಅಲ್ಲಗಳೆದಿದೆ.

30. ಕಾರ್ಯರೂಪವಾದ ಮಡಕೆಗೆ ಮಣ್ಣೇ ಕಾರಣವೆಂಬಂತೆ ಕಾರ್ಯರೂಪ ಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಪರಮಾತ್ಮನೇ ಕಾರಣವೆಂದು ನಿನಗೆ ಹೇಳಿದ್ದರಿಂದ ಮೈತ್ರೇಯಿ! ಪರಮಾತ್ಮನಲ್ಲಿ ಕಾರಣತ್ವವನ್ನು ಅಧ್ಯಾರೋಪಮಾಡಿ, ಕಾರ್ಯರೂಪವಾದ ಪ್ರಪಂಚವು ಬರೀ ಹುಸಿತೋರಿಕೆಯೆಂದು ಅಲ್ಲಗಳೆದಂತಾಗಿದೆ. ಮುಂದೆ, ನಿರ್ವಿಶೇಷವಾದ ಬ್ರಹ್ಮದಲ್ಲಿ ಕಾರಣ-ಕಾರ್ಯಭಾವವೂ ಕೇವಲ ಅವಿದ್ಯಾಕಲ್ಪಿತವೆಂದು ತಿಳಿಸಿ, ಬ್ರಹ್ಮದ ಜಗತ್ಕಾರಣತ್ವವನ್ನೂ ಅಪವಾದಮಾಡಿದೆ.

ಸಾಮಾನ್ಯ-ವಿಶೇಷಪ್ರಕ್ರಿಯೆ, ಸ್ಥೂಲ-ಸೂಕ್ಷ್ಮಪ್ರಕ್ರಿಯೆ, ಅವಿದ್ಯಾ-ಮಾಯಾಪ್ರಕ್ರಿಯೆ, ವಿದ್ಯಾವಿದ್ಯೆಗಳ ಪ್ರಕ್ರಿಯೆ, ಬಂಧಮೋಕ್ಷಪ್ರಕ್ರಿಯೆ, ಅವಸ್ಥಾತ್ರಯಪ್ರಕ್ರಿಯೆ, ಪಂಚಕೋಶಪ್ರಕ್ರಿಯೆ, ಪ್ರಕೃತಿ-ಪುರುಷವಿವೇಕಪ್ರಕ್ರಿಯೆ, ದೃಕ್‌ದೃಶ್ಯವಿವೇಕಪ್ರಕ್ರಿಯೆ, ಜೀವೇಶ್ವರಪ್ರಕ್ರಿಯೆ, ವ್ಯಷ್ಟಿ-ಸಮಷ್ಟಿಪ್ರಕ್ರಿಯೆ ಇತ್ಯಾದಿ ಪ್ರಕ್ರಿಯೆಗಳನ್ನೆಲ್ಲಾ ಶ್ರುತಿಯು ಕಾರ್ಯ-ಕಾರಣಪ್ರಕ್ರಿಯೆಯಂತೆಯೇ ಅಪ್ರಮೇಯವೂ ನಿರ್ವಿಶೇಷವೂ ನಿಷ್ಪ್ರಪಂಚವೂ ಅದ್ವಿತೀಯವೂ ಆದ ಪರಮಾರ್ಥಸತ್ಯವನ್ನು ತಿಳಿಸುವದಕ್ಕಾಗಿಯೇ ಉಪಾಯವಾಗಿ ಉಪಯೋಗಿಸಿದೆ.

ಈ ಎಲ್ಲಾ ಪ್ರಕ್ರಿಯೆಗಳಲ್ಲಿಯೂ ಮುಖ್ಯವಾಗಿ ಅಧ್ಯಾರೋಪ-ಅಪವಾದಪ್ರಕ್ರಿಯೆಯೇ (The Method of Superimposition and Rescission or negation) ಮೂಲಭೂತವಾಗಿಯೂ ಹಾಸುಹೊಕ್ಕಾಗಿಯೂ ಅಂತರ್ಯಾಮಿಯಾಗಿಯೂ ಅಂತಸ್ಸತ್ತ್ವವಾಗಿಯೂ ಇರುವದನ್ನು ಕಾಣಬಹುದು. ಅಧ್ಯಾರೋಪ-ಅಪವಾದನ್ಯಾಯವನ್ನು ವಿಶದಗೊಳಿಸುವದಕ್ಕಾಗಿಯೇ ಮಿಕ್ಕೆಲ್ಲ ನ್ಯಾಯಗಳೂ ಪ್ರಕ್ರಿಯೆಗಳೂ ಉಪಕಾರಕವಾಗಿ ಬಂದಿವೆ-ಎಂಬಿದೇ ಗೂಢವೂ ಗಾಢವೂ ಆದ ಸತ್ಯ.

ತಸ್ಮಾತ್ "ಸತ್ಯಂ ಜ್ಞಾನಮನನ್ತಂ ಬ್ರಹ್ಮ" ಇತಿ ಯಥೋಕ್ತಲಕ್ಷಣಾತ್ಮಪ್ರತಿಪತ್ತ್ಯರ್ಥಮೇವ ಬಹುಭವನಸರ್ಗಪ್ರವೇಶರಸಲಾಭಭಯಸಂಕ್ರಮಣಾದಿ ಪರಿಕಲ್ಪ್ಯತೇ ಬ್ರಹ್ಮಣಿ ಸರ್ವಂ ವ್ಯವಹಾರವಿಷಯೇ । ನ ತು ಪರಮಾರ್ಥತೋ....॥(ತೈ. ಭಾ. ೨-೯)

ಆದ್ದರಿಂದ, 'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' (೨-೧) ಎಂದು ಹಿಂದೆ ಹೇಳಿದ ಲಕ್ಷಣವುಳ್ಳ ಆತ್ಮನನ್ನು ತಿಳಿಯುವದಕ್ಕೋಸ್ಕರವೇ ಬಹುವಾಗುವಿಕೆ, ಸೃಷ್ಟಿಪ್ರವೇಶ, ರಸವನ್ನು ಹೊಂದುವಿಕೆ, ಅಭಯ, ಸಂಕ್ರಮಣ-ಮುಂತಾದದ್ದೆಲ್ಲವನ್ನೂ ವ್ಯವಹಾರದೃಷ್ಟಿಯಿಂದ ಬ್ರಹ್ಮದಲ್ಲಿ ಇರುವಂತೆ ಅಧ್ಯಾರೋಪಮಾಡಿಕೊಂಡು ತಿಳಿಸಿದೆ. ಆದರೆ ನಿರ್ವಿಕಲ್ಪವಾದ ಬ್ರಹ್ಮದಲ್ಲಿ ಯಾವದೊಂದು ವಿಕಲ್ಪವೂ ಇರುವದಿಲ್ಲ.

**31.** ಮೈತ್ರೇಯಿ! ಸರ್ವೋಪನಿಷತ್ತುಗಳ ಸಾರವನ್ನು ಪುನಃ ನಿನಗೆ ಹೇಳುತ್ತೇನೆ:

> **ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ ಬ್ರಹ್ಮಾಭಯಂ ವೈ ಬ್ರಹ್ಮಾಭಯಗ್ಂ ಹಿ ವೈ ಬ್ರಹ್ಮ ಭವತಿ ಯ ಏವಂ ವೇದ ॥** (ಬೃ. ಉ. ೪-೪-೨೫)

ಆ ಈತನೇ ಮಹಾನ್ ಅಜ ಆತ್ಮನು (ಮಹಾಂತನೂ ಅಜನೂ) ಇವನು ಜೀರ್ಣವಾಗುವದಿಲ್ಲ; ಆದ್ದರಿಂದ ಅಜರನು; ಆತ್ಮನು ಪರಿಣಾಮವನ್ನು ಹೊಂದುವದಿಲ್ಲ ; ಆದ್ದರಿಂದ ನಿರ್ವಿಕಾರನು, ಅಮರನು, (ಹುಟ್ಟಿದರೆ ಮುಪ್ಪೂ ಸಾವೂ ಇರುತ್ತದೆ. ಆತ್ಮನಿಗೆ ಹುಟ್ಟೇ ಇಲ್ಲವಾದ್ದರಿಂದ ಮುಪ್ಪೂ ಸಾವೂ ಇಲ್ಲ, ಇವನು ಯಾವ ಭಾವವಿಕಾರವೂ ಇಲ್ಲದವನು) ಇದರಿಂದಲೇ ಇವನು ಮೃತ್ಯುರೂಪವಾದ ಕಾಮ, ಕರ್ಮ, ಮೋಹ- ಮುಂತಾದವುಗಳೂ ಇಲ್ಲದವನು. ಇದಕ್ಕಿಂತಲೂ ಹೆಚ್ಚಿನದು) ಇನ್ನೊಂದು ತತ್ತ್ವವಿಲ್ಲವಾದ್ದರಿಂದ ಬ್ರಹ್ಮವು ಅಭಯವೂ ಆಗಿದೆ. ಈ ಆತ್ಮನು ಅಭಯವಾದ ಬ್ರಹ್ಮವೆಂದು ಅರಿತುಕೊಂಡವನು ಅಭಯವಾದ ಬ್ರಹ್ಮವೇ ಆಗುತ್ತಾನೆ.

> **ಏಷ ಸರ್ವಸ್ಯಾ ಉಪನಿಷದಃ ಸಂಕ್ಷಿಪ್ತೋಽರ್ಥಃ ಉಕ್ತಃ । ಏತಸ್ಯೈವಾರ್ಥಸ್ಯ ಸಮ್ಯಕ್ ಪ್ರಬೋಧಾಯ ಉತ್ಪತ್ತಿಸ್ಥಿತಿಪ್ರಲಯಾದಿಕಲ್ಪನಾಃ ಕ್ರಿಯಾಕಾರಕಫಲಾಧ್ಯಾರೋಪಣಾ ಚ ಆತ್ಮನಿ ಕೃತಾ । ತದಪೋಹೇನ ಚ ನೇತಿನೇತೀತಿ ಅಧ್ಯಾರೋಪಿತವಿಶೇಷಾಪನಯದ್ವಾರೇಣ ಪುನಸ್ತತ್ತ್ವಮ್ ಆವೇದಿತಮ್ । ತಥಾ ಚ ಇಹ ಉತ್ಪತ್ತ್ಯಾದ್ಯನೇಕೋಪಾಯಮ್ ಆಸ್ಥಾಯ ಏಕಂ ಬ್ರಹ್ಮತತ್ತ್ವಮ್ ಆವೇದಿತಮ್ ಪುನಸ್ತತ್ಕಲ್ಪಿತೋಪಾಯಜನಿತವಿಶೇಷಪರಿಶೋಧನಾರ್ಥಂ ನೇತಿ ನೇತಿ ಇತಿ ತತ್ತ್ವೋಪಸಂಹಾರಃ ಕೃತಃ ॥** (ಬೃ. ಭಾ. ೪-೪-೨೫)

ಇಡಿಯ ಉಪನಿಷತ್ತಿನ (ಅದ್ವಿತೀಯ ಬ್ರಹ್ಮತತ್ತ್ವವೆಂಬ) ಈ ಅರ್ಥವನ್ನು ಸಂಕ್ಷೇಪದಿಂದ ಹೇಳಿದ್ದಾಗಿದೆ. ಇದೇ ಅರ್ಥವನ್ನು ಚೆನ್ನಾಗಿ ತಿಳಿಸಿ

ಕೊಡುವದಕ್ಕಾಗಿ ಉತ್ಪತ್ತಿ, ಸ್ಥಿತಿ, ಪ್ರಲಯ–ಮುಂತಾದ ಕಲ್ಪನೆಗಳನ್ನೂ ಕ್ರಿಯಾಕಾರಕಫಲಗಳ ಅಧ್ಯಾರೋಪಣೆಯನ್ನೂ ಆತ್ಮನಲ್ಲಿ ಮಾಡಲಾಯಿತು, ಮತ್ತು ಅದನ್ನು ಅಲ್ಲಗಳೆದು, ನೇತಿ ನೇತಿ (ಹೀಗಲ್ಲ, ಹೀಗಲ್ಲ ; ಇದಲ್ಲ, ಇದಲ್ಲ) ಎಂದು ಅಧ್ಯಾರೋಪಿತವಾದ ವಿಶೇಷವನ್ನು ತೆಗೆದುಹಾಕುವ ಮೂಲಕ ಪುನಃ ತತ್ತ್ವವನ್ನು ತಿಳಿಸಿದ್ದಾಯಿತು. (ಈ ಕ್ರಮಕ್ಕೇ 'ಅಧ್ಯಾರೋಪ-ಅಪವಾದನ್ಯಾಯ' ಎಂದು ಹೆಸರು.) ಹೇಗೆ ಒಂದು ಮುಂತಾಗಿ ನೂರು, ಸಾವಿರ, ಲಕ್ಷ, ಕೋಟಿಗಳವರೆಗಿನ ಸಂಖ್ಯೆಗಳ ಸ್ವರೂಪವನ್ನು ತಿಳಿಸಿಕೊಡುವದಕ್ಕಾಗಿ ಗೆರೆಯ ಅಧ್ಯಾರೋಪವನ್ನು ಮಾಡಿ (ಏಕ, ದಶಕ, ಶತಕ– ಮುಂತಾದ ಸ್ಥಾನಗಳಲ್ಲಿ ಬರೆದಿರುವ ಅಂಕೆಯನ್ನೇ ಒಂದು, ಹತ್ತು, ನೂರು– ಎಂದು ಕಲ್ಪಿಸಿ ಎಂದರ್ಥ ; ಗೆರೆಯೇನೂ ನಿಜವಾದ ಸಂಖ್ಯೆಯಲ್ಲ ; ಸಂಖ್ಯೆಯೆಂಬುದು ವಸ್ತುಗಳ ಎಣಿಕೆ,) ಈ ರೇಖೆಯು ಒಂದು, ಇದು ಹತ್ತು, ಇದು ನೂರು, ಇದು ಸಾವಿರ– ಎಂದು ತಿಳಿಸಿಕೊಡುತ್ತಾನೋ ಅದರಿಂದ ಬರಿಯ ಸಂಖ್ಯಾಸ್ವರೂಪವನ್ನೇ ತಿಳಿಸುತ್ತಾನೆಯೇ ಹೊರತು ಸಂಖ್ಯೆಯು ರೇಖಾರೂಪವೆಂದೇನೂ ಹೇಳಿಕೊಡುವದಿಲ್ಲವೋ ಹಾಗೆಯೇ ಇಲ್ಲಿಯೂ ಉತ್ಪತ್ತಿಯೇ ಮುಂತಾದ ಅನೇಕ ಉಪಾಯಗಳನ್ನು ಇಟ್ಟುಕೊಂಡು ಒಂದೇ ಬ್ರಹ್ಮತತ್ತ್ವವನ್ನು ತಿಳಿಸಿಕೊಟ್ಟಿದ್ದಾಗಿದೆ ; ಮತ್ತೆ ಅದರಲ್ಲಿ ಕಲ್ಪಿತವಾದ ಉಪಾಯದಿಂದಾದ ವಿಶೇಷವನ್ನು ಬಿಡಿಸುವದಕ್ಕಾಗಿ ನೇತಿ ನೇತಿ ಎಂದು ತತ್ತ್ವವನ್ನೇ ಉಪಸಂಹಾರಮಾಡಿದೆ. ಆದ್ದರಿಂದ ಆ ಪರಿಶುದ್ಧವೂ ಕೇವಲವೂ (ಉತ್ಪತ್ತ್ಯಾದಿಗಳ ಮತ್ತು ಕ್ರಿಯಾದಿಗಳ ಸಂಬಂಧವಿಲ್ಲದ) ಆದ ಜ್ಞಾನವನ್ನೇ ಫಲಸಹಿತವಾಗಿ (ಬ್ರಹ್ಮ ಭವತಿ ಯ ಏವಂ ವೇದ ॥ (ಬೃ. ೪–೪–೨೫) ಎಂದು ಕೊನೆಯಲ್ಲಿ ಉಪಸಂಹಾರಮಾಡಲಾಗಿದೆ. (ಬೃ. ೪–೪–೨೫).

ಗೆರೆಯು ಸಂಖ್ಯೆಯಲ್ಲ, ಪತ್ರ, ಮಷಿ, ರೇಖೆ ಮುಂತಾದವು ವರ್ಣಗಳಲ್ಲ; ಆದರೂ ಜ್ಞಾನಕ್ಕೆ ಉಪಾಯವಾಗಿ ಕಲ್ಪಿಸಿಕೊಂಡ ಅವುಗಳನ್ನು ಬಿಡಿಸಿ ನಿಜವಾದ ಸಂಖ್ಯೆಗಳನ್ನೂ ನಿಜವಾದ ವರ್ಣಗಳನ್ನೂ ತಿಳಿಸಿಕೊಡುವಂತೆ, ಉಪಾಯವಾಗಿ ಕಲ್ಪಿಸಿಕೊಂಡ ಉತ್ಪತ್ತ್ಯಾದಿಗಳನ್ನೂ ಕ್ರಿಯಾಕಾರಕಫಲಾದಿಗಳನ್ನೂ ಬಿಡಿಸಿ ಬರಿಯ ನಿರ್ವಿಶೇಷವಾದ ಬ್ರಹ್ಮಾತ್ಮತತ್ತ್ವವನ್ನೇ ನೇತಿ ನೇತಿ ಎಂದು ತಿಳಿಸಿ, ಅದೊಂದನ್ನೇ ಇಲ್ಲಿ "ಮಹಾನಜ ಆತ್ಮಾ ಅಭಯೋ ಬ್ರಹ್ಮ" ಎಂದು ನಿರೂಪಿಸಿ ಉಪಸಂಹಾರಮಾಡಿದೆ.

**32.** ಉಪಾಯವನ್ನು ಸತ್ಯವೆಂದು ತಿಳಿಯಬಾರದು ; ಆದ್ದರಿಂದ ಒಂದೊಂದು ಉಪಾಯವನ್ನು ಹೇಳಿದ ಬಳಿಕವೂ ನೇತಿ ನೇತಿ 'ಇದಲ್ಲ, ಇದಲ್ಲ' ಎಂದು ಆ ಉಪಾಯವನ್ನು ಅಲ್ಲಗಳೆದಿರುತ್ತದೆ. ಉಪಾಯಗಳು ಬೇರೆಬೇರೆಯಾದ ಮಾತ್ರದಿಂದ ಅವು ತಿಳಿಸುವ ಆತ್ಮನು ಬೇರೆಯಲ್ಲ. ಉಪಾಯಗಳಿಗಿಂತಲೂ ಉಪೇಯವಾದ ಆತ್ಮನೇ ಮುಖ್ಯವೆಂಬುದನ್ನು ಮರೆಯಬಾರದು.

“ಸ ಏಷ ನೇತಿ ನೇತಿ” ಆ ಈತನು ಇದಲ್ಲ, ಇದಲ್ಲ” ಎಂದು ಸರ್ವ ವಿಶೇಷಗಳನ್ನೂ (ಮೂರ್ತಾಮೂರ್ತಗಳನ್ನೂ ಅದರ ವಾಸನೆಗಳನ್ನೂ) ಶ್ರುತಿಯು ಅಲ್ಲಗಳೆಯುತ್ತದೆ. ನೇತಿ ನೇತಿ ಶ್ರುತಿಯು ಉಪಾಯವನ್ನು ಅಲ್ಲಗಳೆಯುವದರಲ್ಲಿಯೇ ಮುಗಿಯುತ್ತದೆ, ಅದು ಆತ್ಮನನ್ನು ವಿಷಯೀಕರಿಸಿ ತಿಳಿಸುವದಿಲ್ಲ. ಆತ್ಮನು ಸ್ವಯಂಪ್ರಕಾಶನೇ ಇರುವದರಿಂದ ತಾನಾಗಿಯೇ ಸಹಜವಾಗಿ ತಿಳಿದುಬರುತ್ತಾನೆ.

ಸರ್ವೋಪಾಧಿವಿಶೇಷಾಪೋಹೇನ ಯಸ್ಮಿನ್ ನ ಕಶ್ಚಿತ್ ವಿಶೇಷೋಽಸ್ತಿ ನಾಮ ವಾ ರೂಪಂ ವಾ ಕರ್ಮ ವಾ ಭೇದೋ ವಾ ಜಾತಿರ್ವಾ ಗುಣೋ ವಾ । ತದ್ದ್ವಾರೇಣ ಹಿ ಶಬ್ದಪ್ರವೃತ್ತಿರ್ಭವತಿ । ನ ಚೈಷಾಂ ಕಶ್ಚಿತ್ ವಿಶೇಷೋ ಬ್ರಹ್ಮಣಿ ಅಸ್ತಿ । ಅತೋ ನ ನಿರ್ದೇಷ್ಟುಂ ಶಕ್ಯತೇ ಇದಂ ತತ್ ಇತಿ । ....ಅಧ್ಯಾರೋಪಿತನಾಮರೂಪಕರ್ಮದ್ವಾರೇಣ ಬ್ರಹ್ಮ ನಿರ್ದಿಶ್ಯತೇ “ವಿಜ್ಞಾನಮಾನನ್ದಂ ಬ್ರಹ್ಮ (ಬೃ. ೩-೯-೨೮), “ವಿಜ್ಞಾನಘನ ಏವ” (ಬೃ. ೨-೪-೧೨), ‘ಬ್ರಹ್ಮ’, ‘ಆತ್ಮಾ’- ಇತ್ಯೇವಮಾದಿ ಶಬ್ದೈಃ । ಯದಾ ಪುನಃ ಸ್ವರೂಪಮೇವ ನಿರ್ದಿದಿಕ್ಷಿತಂ ಭವತಿ ನಿರಸ್ತಸರ್ವೋಪಾಧಿವಿಶೇಷಮ್, ತದಾ ನ ಶಕ್ಯತೇ ಕೇನಚಿದಪಿ ಪ್ರಕಾರೇಣ ನಿರ್ದೇಷ್ಟುಮ್। ತದಾ ಅಯಮೇವ ಅಭ್ಯುಪಾಯೋ ಯದುತ ಪ್ರಾಪ್ತ ನಿರ್ದೇಶಪ್ರತಿಷೇಧದ್ವಾರೇಣ ‘ನೇತಿ ನೇತಿ’ ಇತಿ ನಿರ್ದೇಶಃ ॥ (ಬೃ. ಭಾ. ೨-೩-೬)

ಎಲ್ಲಾ ಉಪಾಧಿವಿಶೇಷಗಳನ್ನೂ ಅಲ್ಲಗಳೆಯುವದರಿಂದ ತಿಳಿಸಬೇಕೆಂದು ಶ್ರುತಿಯು ಹೊರಟಿದೆ. ಯಾವದರಲ್ಲಿ ನಾಮವಾಗಲಿ, ರೂಪವಾಗಲಿ, ಕರ್ಮವಾಗಲಿ, ಭೇದವಾಗಲಿ, ಜಾತಿಯಾಗಲಿ, ಗುಣವಾಗಲಿ, ಯಾವದೊಂದು ವಿಶೇಷವೂ ಇಲ್ಲವೋ ಅದನ್ನು ಹೀಗೆಯೇ ತಿಳಿಸಬೇಕು. ಇವುಗಳ ಮೂಲಕವಾಗಿಯೇ ಅಲ್ಲವೆ, ಶಬ್ದಗಳ ಪ್ರವೃತ್ತಿಯಾಗುವದು ? ಇವುಗಳೊಳಗೆ ಯಾವದೊಂದು ವಿಶೇಷವೂ ಬ್ರಹ್ಮದಲ್ಲಿರುವದಿಲ್ಲ. ಆದ್ದರಿಂದ ‘ಇದು ಎತ್ತು, ಓಡಾಡುತ್ತದೆ, ಬೆಳ್ಳನೆಯದು, ಕೋಡುಗಳುಳ್ಳದ್ದು’ ಎಂದು ಹೇಗೆ ಲೋಕದಲ್ಲಿ ತಿಳಿಸುವರೋ ಹಾಗೆ ‘ಇದು ಇಂಥದ್ದು’ ಎಂದು ತಿಳಿಸುವದಕ್ಕೆ ಆಗುವದಿಲ್ಲ. ಅಧ್ಯಾರೋಪಿತವಾಗಿರುವ ನಾಮರೂಪಕರ್ಮಗಳ ಮೂಲಕವೇ “ವಿಜ್ಞಾನವೂ ಆನಂದವೂ ಆದದ್ದು ಬ್ರಹ್ಮವು” (ಬೃ. ೩-೯-೨೮) “ವಿಜ್ಞಾನಘನನೇ” (ಬೃ. ೨-೪-೧೨) ‘ಬ್ರಹ್ಮ’, ‘ಆತ್ಮಾ’- ಎಂಬಿವೇ ಮುಂತಾದ ಶಬ್ದಗಳಿಂದ ಬ್ರಹ್ಮವನ್ನು ತಿಳಿಸುತ್ತಾರೆ. (ಜ್ಞಾನ, ಆನಂದ, ಆತ್ಮ, ಬ್ರಹ್ಮ-ಎಂಬೀ ಶಬ್ದಗಳೂ ನಾಮರೂಪಗಳಿಂದೊಡಗೂಡಿದ ಪರಮಾರ್ಥತತ್ತ್ವಕ್ಕೇ ವಾಚಕಗಳು, ಕೇವಲ ಸ್ವರೂಪಕ್ಕಲ್ಲ.)

ಆದರೆ, ಯಾವಾಗ ಯಾವ ಉಪಾಧಿಯ ವಿಶೇಷವೂ ಇಲ್ಲದ ಸ್ವರೂಪವನ್ನೇ ತಿಳಿಸಬೇಕೆಂಬ ಇಚ್ಛೆಯಾಗುವದೋ ಆಗ ಯಾವ ಪ್ರಕಾರದಿಂದಲೂ ಅದನ್ನು ತಿಳಿಸುವದಾಗುವದಿಲ್ಲ. ಆಗ ಪ್ರಾಪ್ತವಾಗಿರುವ ನಿರ್ದೇಶಗಳನ್ನು ಅಲ್ಲಗಳೆಯುವ ಮೂಲಕ "ಹೀಗಲ್ಲ, ಹೀಗಲ್ಲ ; ಇದಲ್ಲ, ಇದಲ್ಲ" ಎಂದು ತಿಳಿಸುವ ಇದೊಂದೇ ಉಪಾಯವು.

> 33. ಯದಾ ತು ಸರ್ವದಿಕ್ಕಾಲಾದಿವಿವಿದಿಷಾ ನಿವರ್ತಿತಾ ಸ್ಯಾತ್ ಸರ್ವೋಪಾಧಿನಿರಾಕರಣದ್ವಾರೇಣ ತದಾ ಸೈನ್ಧವಘನವದೇಕರಸಂ ಪ್ರಜ್ಞಾನಘನಮ್ ಅನನ್ತರಮಬಾಹ್ಯಂ ಸತ್ಯಸ್ಯ ಸತ್ಯಮ್ ಅಹಂ ಬ್ರಹ್ಮಾಸ್ಮೀತಿ ಸರ್ವತೋ ನಿವರ್ತತೇ ವಿವಿದಿಷಾ ಆತ್ಮನ್ಯೇವ ಅವಸ್ಥಿತಾ ಪ್ರಜ್ಞಾ ಭವತಿ । ತಸ್ಮಾತ್ ವೀಪ್ಸಾರ್ಥಂ ನೇತಿ ನೇತೀತಿ ನಕಾರದ್ವಯಮ್ ॥ (ಬೃ.ಭಾ. ೨-೩-೬)

ಆದರೆ ಯಾವಾಗ (ಯಾವ ಪಕ್ಷದಲ್ಲಿ) ಎಲ್ಲಾ ಉಪಾಧಿಗಳನ್ನೂ ತಳ್ಳಿಹಾಕುವ ಮೂಲಕ ದಿಕ್ಕು, ಕಾಲ-ಮುಂತಾದ ಎಲ್ಲಾ ವಿಷಯದ ಜಿಜ್ಞಾಸೆಯನ್ನೂ ತೊಲಗಿಸಿದಂತಾಗುವದೋ ಆಗ "ಉಪ್ಪಿನ ಹರಳಿನಂತೆ ಏಕರಸವಾದ ಪ್ರಜ್ಞಾನಘನವೂ ಅನಂತರವೂ ಅಬಾಹ್ಯವೂ (ಒಳಗಿಲ್ಲದ, ಹೊರಗಿಲ್ಲದ) ಸತ್ಯದ ಸತ್ಯವೂ ಆಗಿರುವ ಬ್ರಹ್ಮವೇ ನಾನಾಗಿರುವೆನು" ಎಂದು ಎಲ್ಲಾ ವಿಷಯದ ಜಿಜ್ಞಾಸೆಯೂ ತೊಲಗುತ್ತದೆ; ಪ್ರಜ್ಞೆಯು ಆತ್ಮನಲ್ಲಿಯೇ ನೆಲೆನಿಲ್ಲುತ್ತದೆ. ಆದ್ದರಿಂದ ನೇತಿ ನೇತಿ ಎಂಬ ನಕಾರದ್ವಯವನ್ನು ವೀಪ್ಸಾರ್ಥವಾಗಿಯೇ (ಸರ್ವವಿಷಯಗಳನ್ನೂ ವ್ಯಾಪಿಸುವದಕ್ಕಾಗಿಯೇ: ವೀಪ್ಸಾಯಾಂ ದ್ವಿರುಕ್ತಿಃ) ಪ್ರಯೋಗಿಸಿದೆ ಎಂದು ನಿಶ್ಚಯವಾಯಿತು.

> ವೀಪ್ಸಾಯಾಂ ತು ಸತ್ಯಾಂ ಸಮಸ್ತಸ್ಯ ವಿಷಯಜಾತಸ್ಯ ಪ್ರತಿಷೇಧನಾತ್ ಅವಿಷಯಃ ಪ್ರತ್ಯಗಾತ್ಮಾ ಬ್ರಹ್ಮ ಇತಿ ಜಿಜ್ಞಾಸಾ ನಿವರ್ತತೇ । ತಸ್ಮಾತ್ ಪ್ರಪಞ್ಚಮೇವ ಬ್ರಹ್ಮಣಿ ಕಲ್ಪಿತಂ ಪ್ರತಿಷೇಧತಿ ಪರಿಶಿನಷ್ಟಿ ಬ್ರಹ್ಮ ಇತಿ ನಿರ್ಣಯಃ ॥ (ಸೂ. ಭಾ. ೩-೨-೨೨)

ವೀಪ್ಸೆಯಾದರೋ ಎಂದರೆ, ವಿಷಯಜಾತವೆಲ್ಲವನ್ನೂ ಅಲ್ಲಗಳೆದದ್ದರಿಂದ ವಿಷಯವಲ್ಲದ ಪ್ರತ್ಯಗಾತ್ಮನು ಬ್ರಹ್ಮವೆಂದಾಗಿ ಜಿಜ್ಞಾಸೆಯು ಇಲ್ಲವಾಗುವದು. ಆದ್ದರಿಂದ ಬ್ರಹ್ಮದಲ್ಲಿ ಕಲ್ಪಿತವಾಗಿರುವ ಪ್ರಪಂಚವನ್ನೇ ಅಲ್ಲಗಳೆದಿದೆ ; ಬ್ರಹ್ಮವನ್ನು ಉಳಿಸಿಕೊಂಡಿದೆ- ಎಂಬಿದೇ ನಿರ್ಣಯವು.

ಇತಿ ನ, ಇತಿ ನ-ಎಂದು ಬ್ರಹ್ಮದಲ್ಲಿ ಕಲ್ಪಿತವಾಗಿರುವ ವಿಶೇಷಗಳನ್ನು ನಿಷೇಧಮಾಡುವದಕ್ಕಿಂತ ಬೇರೆಯಾಗಿ ಬ್ರಹ್ಮಸ್ವರೂಪವನ್ನು ತಿಳಿಸುವದಕ್ಕೆ

ಉಪಾಯವಿಲ್ಲ ; ಏಕೆಂದರೆ, ಬ್ರಹ್ಮವು ಇಂಥಾ ಸ್ವರೂಪದ್ದೆಂದು ತಿಳಿಸುವದಕ್ಕೆ ಅದರಲ್ಲಿ ಯಾವ ವಿಶೇಷವೂ ಇರುವದೇ ಇಲ್ಲ ; ಆದ್ದರಿಂದ, ಇದೇ ಬ್ರಹ್ಮದ ನಿರ್ದೇಶಪ್ರಕಾರವು.

ಒಂದೊಂದು ಅಧ್ಯಾರೋಪದ ಮೂಲಕ ಒಂದೊಂದು ವಿಕಲ್ಪವನ್ನು ನಿಷೇಧ ಮಾಡಬಹುದಾದರೂ ಪ್ರತಿಯೊಂದು ಅಧ್ಯಾರೋಪವನ್ನೂ ಮಿಕ್ಕ ಎಲ್ಲಾ ವಿಕಲ್ಪಗಳ ನಿರಾಸಕ್ಕೂ ಉಪಯೋಗಿಸಬಹುದು. ಇದರಿಂದ, ಯಾವದೊಂದು ಅಧ್ಯಾರೋಪ-ಅಪವಾದ ಪ್ರಕ್ರಿಯೆಯನ್ನು ಉಪಯೋಗಿಸಿದರೂ ಅದರ ಫಲವಾಗಿ ಮನಸ್ಸು ಸರ್ವವಿಕಲ್ಪರಹಿತವಾದ ನಿರ್ವಿಶೇಷ ಆತ್ಮನಲ್ಲಿಯೇ ನೆಲೆನಿಲ್ಲುತ್ತದೆ. ಆಗ ಬೇರೆ ಉಪಾಯಗಳನ್ನು ಉಪಯೋಗಿಸುವ ಆವಶ್ಯಕತೆಯೇ ಉಳಿಯುವದಿಲ್ಲ.

34. ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥
(ಗೌಡಪಾದಕಾರಿಕಾ ; ೨-೩೨)

ಪ್ರಲಯವು ಇಲ್ಲ ; ಸೃಷ್ಟಿಯೂ ಇಲ್ಲ ; ಸಂಸಾರಿಯಾದ ಜೀವನಿಲ್ಲ ; ಮೋಕ್ಷಸಾಧಕನಿಲ್ಲ ; ಮೋಕ್ಷಾಪೇಕ್ಷಿಯೂ ಇಲ್ಲ ; ಮುಕ್ತನೂ ಇಲ್ಲ ; ಉತ್ಪತ್ತಿ-ಪ್ರಲಯಗಳಿಲ್ಲವಾದ್ದರಿಂದ ಬದ್ಧಾದಿಗಳೂ ಇಲ್ಲ-ಎಂಬಿದೇ ಪರಮಾರ್ಥಸತ್ಯವು.

ದ್ವೈತಪ್ರಪಂಚವು ಹಗ್ಗದ ಹಾವಿನಂತೆ ಆತ್ಮನಲ್ಲಿ ಕಲ್ಪಿತವಾಗಿರುತ್ತದೆ. ಹಗ್ಗದಲ್ಲಿ ತೋರುವ ಹಾವು, ಹೂವಿನ ಹಾರ ಮೊದಲಾದವು ಮನಸ್ಸಿನ ವಿಕಲ್ಪವು ಮಾತ್ರವಾಗಿವೆ. ಅವು ಹಗ್ಗದಲ್ಲಿ ಹುಟ್ಟುವದೂ ಇಲ್ಲ, ಅಡಗುವದೂ ಇಲ್ಲ. ಮನಸ್ಸನ್ನು ನಿರೋಧಮಾಡಿದಾಗಲಾಗಲಿ, ತನಿನಿದ್ರೆಯಲ್ಲಾಗಲಿ ದ್ವೈತವು ಕಾಣಬರುವದೇ ಇಲ್ಲ. ಆದ್ದರಿಂದ ದ್ವೈತವು ಮನಸ್ಸಿನ ವಿಕಲ್ಪನೆಯೇ ಎಂಬಿದು ಸಿದ್ಧವಾಗುತ್ತದೆ. ಹೀಗೆ ದ್ವೈತವು ಮೊಲದ ಕೊಂಬಿನಂತೆ ಅಸತ್ತಾಗಿರುವದರಿಂದ ಸೃಷ್ಟಿಪ್ರಲಯಾದಿಗಳು ಎಷ್ಟು ಮಾತ್ರಕ್ಕೂ ಇಲ್ಲವೆಂಬಿದು ಪರಮಾರ್ಥವು.

35. ಪ್ರಪಞ್ಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ ।
ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ॥
(ಗೌ. ಕಾ. ೧-೧೭)

ಪ್ರಪಂಚವು ಇರುವದಾದರೆ ಹೋದೀತು, ಸಂಶಯವಿಲ್ಲ ; ಈ ಪ್ರಪಂಚವೆಂಬ ದ್ವೈತವು ಮಾಯಾಮಾತ್ರವು ; ಅದ್ವೈತವೇ ಪರಮಾರ್ಥವು. ಹಗ್ಗದಲ್ಲಿ ಭ್ರಾಂತಿಯಿಂದ ಕಲ್ಪಿತವಾಗಿರುವ ಹಾವಿನಂತೆ, ಆತ್ಮನಲ್ಲಿ ಭ್ರಮೆಯಿಂದ ಕಲ್ಪಿತವಾದ ದ್ವೈತಪ್ರಪಂಚವು ಇರುವದೇ ಇಲ್ಲ. ಆದ್ದರಿಂದ ವಿವೇಕದಿಂದ ಆ ಇಲ್ಲದ ಭ್ರಮೆಯನ್ನು ಕಳೆಯಬೇಕಾದ್ದೂ ಇಲ್ಲ.

**ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ ।**
**ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ ॥**
(ಗೌ. ಕಾ. ೧–೧೮)

ಯಾರಾದರೂ ಕಲ್ಪಿಸಿದ್ದಾದರೆ, ವಿಕಲ್ಪವು ಹೋದೀತು. (ಯಾರಿಂದಲಾದರೂ ವಿಕಲ್ಪವು ಕಲ್ಪಿತವಾಗಿದ್ದಿದ್ದರೆ ಅದು ಹೋಗಬಹುದಾಗಿತ್ತು.) ಈ ಪ್ರಪಂಚವು ಹೇಗೆ ಮಾಯೆಯಂತೆಯೂ ಹಗ್ಗದ ಹಾವಿನಂತೆಯೂ ಭ್ರಾಂತಿಯಾಗಿರುವದೋ ಹಾಗೆಯೇ ಶಿಷ್ಯ, ಗುರು, ಶಾಸ್ತ್ರ–ಎಂಬ ಭೇದವೂ ಭ್ರಾಂತಿಯಾದರೂ ಉಪದೇಶಕ್ಕಾಗಿ ಅಗತ್ಯವಾಗಿದೆ. ಉಪದೇಶದ ಫಲವಾದ ಜ್ಞಾನವುಂಟಾದರೆ, ಆತ್ಮಾನುಭವದಲ್ಲಿ ದ್ವೈತವು ಉಳಿಯುವದಿಲ್ಲ.

**36. ನ ಹಿ ಆತ್ಮಾ ನಾಮ ಕಸ್ಯಚಿತ್ ಅಪ್ರಸಿದ್ಧೋ ಭವತಿ । ಶಾಸ್ತ್ರಂ ತು ಅನ್ತ್ಯಂ ಪ್ರಮಾಣಮ್ ಅತದ್ಧರ್ಮಾಧ್ಯಾರೋಪಣಮಾತ್ರನಿವರ್ತಕತ್ವೇನ ಪ್ರಾಮಾಣ್ಯಮ್ ಆತ್ಮನಃ ಪ್ರತಿಪದ್ಯತೇ, ನ ತು ಅಜ್ಞಾತಾರ್ಥಜ್ಞಾಪಕತ್ವೇನ । ತಥಾ ಚ ಶ್ರುತಿಃ– "ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ" (ಬೃ. ೩–೪–೧) ಇತಿ ॥** (ಗೀ. ಭಾ. ೨–೧೮)

ಆತ್ಮನೆಂಬುದು ಯಾರಿಗೂ ಅಪ್ರಸಿದ್ಧವಾಗಿರುವದಿಲ್ಲ. ಶಾಸ್ತ್ರವಾದರೋ ಅಂತ್ಯಪ್ರಮಾಣವು. (ಆತ್ಮನಲ್ಲಿ ಅವಿದ್ಯೆಯಿಂದ ಆರೋಪಿತವಾಗಿರುವ ಪ್ರಮಾತೃತ್ವವನ್ನು ಅಲ್ಲಗಳೆಯುವದರಿಂದಲೇ ಶಾಸ್ತ್ರವು ಪ್ರಮಾಣವೆನಿಸಿದೆ. ಅದರ ಪ್ರವೃತ್ತಿಯಾದ ಮೇಲೆ ಮತ್ತೆ ಪ್ರಮಾಣವ್ಯವಹಾರವಿರುವದಿಲ್ಲವಾದ್ದರಿಂದ ಅದು ಅಂತ್ಯಪ್ರಮಾಣವು. ಪ್ರಮಾತೃ, ಪ್ರಮಾಣ, ಪ್ರಮೇಯ ಎಂಬ ವಿಭಾಗವನ್ನು ಕಳೆಯುವ-ಬಾಧಿಸುವ–ಆತ್ಮೈಕತ್ವವನ್ನು ತಿಳಿಸುವದರಿಂದ "ತತ್ತ್ವಮಸಿ" ಮುಂತಾದ ವಾಕ್ಯಜನ್ಯಜ್ಞಾನವೇ ಕೊನೆಯ ಜ್ಞಾನವು. ಆದ್ದರಿಂದ ಈ ಶಾಸ್ತ್ರವಾಕ್ಯವು ಅಂತ್ಯಪ್ರಮಾಣವು.) ಅದು ಆತ್ಮನದಲ್ಲದ ಧರ್ಮಗಳ ಆರೋಪಣೆಯನ್ನು ತೆಗೆದುಹಾಕುವದರಿಂದ ಮಾತ್ರ ಆತ್ಮನ ವಿಷಯದಲ್ಲಿ ಪ್ರಮಾಣತ್ವವನ್ನು ಪಡೆಯುವದೇ ಹೊರತು ತಿಳಿಯದ ವಿಷಯವನ್ನು ತಿಳಿಸಿಕೊಡುವದರಿಂದ ಪ್ರಮಾಣವೆನಿಸುವದಿಲ್ಲ. ಆದ್ದರಿಂದಲೇ ಶ್ರುತಿಯು "ಯಾವದು ನೇರಾಗಿಯೂ ಅಪರೋಕ್ಷವಾದ ಬ್ರಹ್ಮವಾಗಿರುವದೋ ಯಾವದು ಎಲ್ಲಕ್ಕೂ ಒಳಗಿರುವ ಆತ್ಮನಾಗಿರುವದೋ ಅದನ್ನು ಹೇಳು" ಎಂದು ಹೇಳುತ್ತದೆ.

**37. ಅವಿಷಯತ್ವೇ ಬ್ರಹ್ಮಣಃ ಶಾಸ್ತ್ರಯೋನಿತ್ವಾನುಪಪತ್ತಿಃ ಇತಿ ಚೇತ್ । ನ । ಅವಿದ್ಯಾಕಲ್ಪಿತಭೇದನಿವೃತ್ತಿಪರತ್ವಾತ್**

ಶಾಸ್ತ್ರಸ್ಯ । ನ ಹಿ ಶಾಸ್ತ್ರಮ್ ಇದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ । ಕಿಂ ತರ್ಹಿ ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿಭೇದಮ್ ಅಪನಯತಿ । ತಥಾ ಚ ಶಾಸ್ತ್ರಮ್ "ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ । ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ (ಕೇ. ೨-೩) "ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ.... ನ ವಿಜ್ಞಾತೇರ್ವಿಜ್ಞಾತಾರಂ ವಿಜಾನೀಯಾಃ" (ಬೃ. ೩-೪-೨) ಇತಿ । ಅತಃ ಅವಿದ್ಯಾಕಲ್ಪಿತ ಸಂಸಾರಿತ್ವನಿವರ್ತನೇನ ನಿತ್ಯಮುಕ್ತಾತ್ಮಸ್ವರೂಪಸಮರ್ಪಣಾತ್ ನ ಮೋಕ್ಷಸ್ಯ ಅನಿತ್ಯತ್ವದೋಷಃ ॥ (ಸೂ. ಭಾ. ೧-೧-೪)

(ಆಕ್ಷೇಪ) : ಬ್ರಹ್ಮವು ಏತಕ್ಕೂ ವಿಷಯವಲ್ಲದಿದ್ದರೆ ಅದಕ್ಕೆ ಶಾಸ್ತ್ರವು ಪ್ರಮಾಣವೆಂದು ಸೂತ್ರದಲ್ಲಿ ಹೇಳಿರುವದು ಹೊಂದುವದಿಲ್ಲವಲ್ಲ !

(ಪರಿಹಾರ) : ಹಾಗಲ್ಲ. ಏಕೆಂದರೆ, ಅವಿದ್ಯೆಯಿಂದ ಕಲ್ಪಿತವಾಗಿರುವ ಭೇದವನ್ನು ಕಳೆಯುವದರಲ್ಲಿ ಶಾಸ್ತ್ರಕ್ಕೆ ತಾತ್ಪರ್ಯವಿರುತ್ತದೆ. ಬ್ರಹ್ಮವು ವಿಷಯವಾಗಿರುವದೆಂದು ಅದನ್ನು ಇದು ಎಂದು ತಿಳಿಸುವದಕ್ಕೆ ಶಾಸ್ತ್ರವು ಹೊರಟಿಲ್ಲ. ಮತ್ತೇನೆಂದರೆ, ಅದು ನಮ್ಮೊಳಗಿನ ಆತ್ಮನೇ ಆಗಿರುವದರಿಂದ ವಿಷಯವಲ್ಲವೆಂದು ತಿಳಿಸಿ ಅವಿದ್ಯಾಕಲ್ಪಿತವಾದ ವೇದ್ಯ (ಅರಿಯಲ್ಪಡತಕ್ಕದ್ದು), ವೇದಿತೃ (ಅರಿಯುವವನು) ವೇದನ (ಅರಿವು)-ಮುಂತಾದ ಭೇದವನ್ನು ಕಳೆಯುತ್ತದೆ, (ಬಾಧಿಸುತ್ತದೆ.) ಆದ್ದರಿಂದಲೇ "ಯಾವನಿಗೆ ಅದು ತಿಳಿಯದಿರುವದೋ ಅವನಿಗೆ ತಿಳಿದಿರುವದು. ಯಾವನಿಗೆ ತಿಳಿದಿರುವದೋ ಅವನು ಅರಿಯನು. ಅರಿತವರಿಗೆ ತಿಳಿದಿಲ್ಲ; ಅರಿಯದವರಿಗೆ ತಿಳಿದಿರುತ್ತದೆ." (ಕೇ. ೨-೩) "ನೋಟವನ್ನು ನೋಡುವಾತನನ್ನು ನೀನು ನೋಡಲಾರೆ. ಅರಿವನ್ನು ಅರಿಯುವಾತನನ್ನು ನೀನು ಅರಿತುಕೊಳ್ಳಲಾರೆ" (ಬೃ. ೩-೪-೨) ಎಂದು ಮುಂತಾಗಿ ಶಾಸ್ತ್ರವು ಹೇಳುತ್ತದೆ. ಆದ್ದರಿಂದ ಅವಿದ್ಯೆಯಿಂದ ಕಲ್ಪಿತವಾದ ಸಂಸಾರಿತ್ವವನ್ನು ಶಾಸ್ತ್ರವು ತೆಗೆದುಹಾಕಿ ಯಾವಾಗಲೂ ಮುಕ್ತನಾಗಿಯೇ ಇರುವ ಆತ್ಮನ ಸ್ವರೂಪವನ್ನು ತಿಳಿಸಿಕೊಡುವದರಿಂದ ಮೋಕ್ಷವು ಅನಿತ್ಯವೆಂಬ ದೋಷವು ಬರುವದಿಲ್ಲ. ಮೋಕ್ಷವೆಂದರೆ, ನಿತ್ಯಪ್ರಾಪ್ತವಾಗಿರುವ ಆತ್ಮಸ್ವರೂಪವೇ ಆಗಿರುತ್ತದೆ.

38. "ಸ ಏಷ ನೇತಿ ನೇತ್ಯಾತ್ಮಾ" (ಬೃ. ೩-೯-೨೬) ಇತಿ ಆತ್ಮಶಬ್ದಾತ್ । ಆತ್ಮನಶ್ಚ ಪ್ರತ್ಯಾಖ್ಯಾತುಮ್ ಅಶಕ್ಯತ್ವಾತ್ । ಯ ಏವ ನಿರಾಕರ್ತಾ ತಸ್ಯೈವ ಆತ್ಮತ್ವಾತ್ । ನ ಹಿ ಅಹಂಪ್ರತ್ಯಯವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ, ಸಮಃ,

ಏಕಃ, ಕೂಟಸ್ಥ ನಿತ್ಯಃ ಪುರುಷಃ ವಿಧಿಕಾಣ್ಡೇ ತರ್ಕಸಮಯೇ
ವಾ ಕೇನಚಿತ್ ಅಧಿಗತಃ ಸರ್ವಸ್ಯ ಆತ್ಮಾ । ತಂ ತ್ವೌಪನಿಷದಂ
ಪುರುಷಂ ಪೃಚ್ಛಾಮಿ" (ಬೃ. ೩-೯-೨೬) (ಸೂ. ಭಾ. ೧-೧-೪)

ಏಕೆಂದರೆ 'ಆ ಇವನು ಇದಲ್ಲ. ಇದಲ್ಲ-ಎಂದ ಆತ್ಮನು' ಎಂದು ಶ್ರುತಿಯಲ್ಲಿ ಈ ಪುರುಷನನ್ನು ತಿಳಿಸುವ ಆತ್ಮಶಬ್ದವಿರುತ್ತದೆ. ಆತ್ಮನನ್ನು ಇಲ್ಲವೆನ್ನುವದಕ್ಕೂ ಸಾಧ್ಯವೇ ಇಲ್ಲ; ಏಕೆಂದರೆ, ಯಾವನು ಇಲ್ಲವೆನ್ನುವನೋ ಅವನೇ ಆತ್ಮನಾಗುತ್ತಾನೆ. ಅಹಂಪ್ರತ್ಯಯಕ್ಕೆ ವಿಷಯನಾಗಿರುವ ಕರ್ತೃವಿಗಿಂತ ಬೇರೆಯಾಗಿರುವವನಾಗಿಯೂ ಆ ಕರ್ತೃವಿಗೂ ಸಾಕ್ಷಿಯಾಗಿಯೂ ಸರ್ವಭೂತಗಳಲ್ಲಿಯೂ ಇರುವವನಾಗಿಯೂ ಸಮನಾಗಿಯೂ ಒಬ್ಬನೇ ಆಗಿಯೂ ಕೂಟಸ್ಥ ನಿತ್ಯನಾಗಿಯೂ ಇರುವ ಪುರುಷನೇ ಎಲ್ಲರ ಆತ್ಮನೆಂದು ವಿಧಿಕಾಂಡದಲ್ಲಿಯೇ ಆಗಲಿ ತರ್ಕಶಾಸ್ತ್ರದಲ್ಲಿಯೇ ಆಗಲಿ ಯಾರಿಗೂ ತಿಳಿಯಬಂದಿರುವದಿಲ್ಲ. "ಆ ಔಪನಿಷದಪುರುಷನನ್ನೇ ಕುರಿತು, ನಿನ್ನನ್ನು ಕೇಳುತ್ತೇನೆ."

39. ಯಸ್ಮಾತ್ ಪ್ರಕಾರಶತೇನಾಽಪಿ ನಿರೂಪ್ಯಮಾಣೇ ತತ್ತ್ವೇ ನೇತಿ ನೇತ್ಯಾತ್ಮೈವ ನಿಷ್ಠಾ ನಾನ್ಯಾ ಉಪಲಭ್ಯತೇ ತರ್ಕೇಣ ವಾ ಆಗಮೇನ ವಾ । ತಸ್ಮಾತ್ ಏತದೇವ ಅಮೃತತ್ವಸಾಧನಂ ಯದೇತತ್ ನೇತಿ ನೇತ್ಯಾತ್ಮಪರಿಜ್ಞಾನಮ್, ಸರ್ವಸಂನ್ಯಾಸಶ್ಚ ಇತ್ಯೇತಮರ್ಥಮ್ ಉಪಸಂಜಿಹೀರ್ಷನ್ ಆಹ । ಏತಾವತ್ ಏತಾವನ್ಮಾತ್ರಂ ಯದೇತತ್ ನೇತಿನೇತ್ಯದ್ವೈತಾತ್ಮದರ್ಶನಮ್ । ಇದಂ ಚ ಅನ್ಯಸಹಕಾರಿಕಾರಣನಿರಪೇಕ್ಷಮೇವ ಅರೇ ಮೈತ್ರೇಯಿ, ಅಮೃತತ್ವಸಾಧನಮ್ । ಯತ್ ಪೃಷ್ಟವತೀ ಅಸಿ "ಯದೇವ ಭಗವಾನ್ ವೇದ ತದೇವ ಮೇ ಬ್ರೂಹಿ" (೪-೫-೪) ಅಮೃತತ್ವ ಸಾಧನಮ್ ಇತಿ, ತತ್ ಏತಾವದೇವ ಇತಿ ವಿಜ್ಞೇಯಂ ತ್ವಯಾ ಇತಿ....ಯತ್ ಪೂರ್ವಂ ಪ್ರತಿಜ್ಞಾತಂ 'ಪ್ರವ್ರಜಿಷ್ಯನ್ ಅಸ್ಮಿ' (೪-೫-೨) ಇತಿ ತತ್ ಚಕಾರ, ವಿಜಹಾರ । ಪ್ರವ್ರಜಿತವಾನ್ ಇತ್ಯರ್ಥಃ ॥ (ಬೃ. ಭಾ. ೪-೫-೧೫)

ಆತ್ಮತತ್ತ್ವವನ್ನು ನೂರುಬಗೆಯಿಂದ ವಿಚಾರಮಾಡಿನೋಡಿದರೂ (ಮೂರ್ತಾಮೂರ್ತರೂಪವಾದ ಸಕಲ ಅನಾತ್ಮಗಳನ್ನೂ ಶೂನ್ಯವನ್ನೂ ಅಲ್ಲಗಳೆದು, ಉಳಿಯುವ) ನೇತಿ ನೇತಿ ಎಂಬ ಆತ್ಮನೇ ಕೊನೆಯೇ ಹೊರತು, ತರ್ಕದಿಂದಾಗಲೀ ಆಗಮದಿಂದಾಗಲೀ ನೋಡಿದಾಗ ಮತ್ತೆ ಯಾವ ಕೊನೆಯೂ ಕಂಡುಬರುವದಿಲ್ಲ; ಆದ್ದರಿಂದ ಈ ನೇತಿ ನೇತಿ ಎಂಬ ಆತ್ಮನನ್ನು ಅರಿತುಕೊಳ್ಳುವದು ಮತ್ತು ಸರ್ವಕರ್ಮಸಂನ್ಯಾಸವು

(ಏಷಣಾತ್ರಯದ ತ್ಯಾಗವು)- ಎಂಬಿವೇ ಅಮೃತತ್ವಕ್ಕೆ ಸಾಧನವು- ಎಂಬೀ ಅರ್ಥವನ್ನು ಉಪಸಂಹಾರಮಾಡುವದಕ್ಕಾಗಿ ಹೀಗೆಂದು ಹೇಳುತ್ತಿದ್ದಾನೆ :

ಇಷ್ಟೇ, ನೇತಿ ನೇತಿ ಎಂಬ ಆತ್ಮನನ್ನು ಕಂಡುಕೊಳ್ಳುವದಿದೆಯಲ್ಲ, ಇಷ್ಟುಮಾತ್ರವೇ ಅಮೃತತ್ವಕ್ಕೆ ಸಾಧನವು, ಎಲೆ ಮೈತ್ರೇಯಿ, ಇದು ಮತ್ತೊಂದು ಸಹಕಾರಿಕಾರಣವನ್ನು ಬಯಸುವದಲ್ಲ. 'ಭಗವಂತನಾದ ನೀನು ಯಾವ ಅಮೃತತ್ವಸಾಧನವನ್ನು ಅರಿತಿರುವೆಯೋ ಅದನ್ನೇ ನನಗೆ ಹೇಳು' (೪-೫-೪) ಎಂದು ಕೇಳಿದೆಯಲ್ಲ, ಅದು ಇಷ್ಟೇ ಎಂದು ನೀನು ತಿಳಿಯಬೇಕು, ಎಂದು ಪ್ರಿಯಳಾದ ಹೆಂಡತಿಗೆ ಅಮೃತತ್ವಸಾಧನವನ್ನು ಹೇಳಿ ಯಾಜ್ಞವಲ್ಕ್ಯನು ಏನುಮಾಡಿದನು? 'ಪ್ರವ್ರಜನಮಾಡಲಿರುವೆನು' (೪-೫-೨) ಎಂದು ಮೊದಲು ಹೇಳಿದ್ದನಲ್ಲ, ಅದನ್ನು ಯಾಜ್ಞವಲ್ಕ್ಯನು ಮಾಡಿದನು ; ಹೊರಟುಹೋದನು- ಎಂದರೆ ಪ್ರವ್ರಜನವನ್ನು ಮಾಡಿದನು ಎಂದರ್ಥ.

**40.** ತಾತ್ಪರ್ಯದಿಂದ ಪರಮಪುರುಷಾರ್ಥವನ್ನೇ ಹೇಳುವದಕ್ಕೆ ಹೊರಟಿರುವ ಶ್ರುತಿಯಲ್ಲಿ, ಉಪದೇಶಪ್ರಧಾನವಾಗಿಯೂ ತರ್ಕಪ್ರಧಾನವಾಗಿಯೂ ಹೇಳಿರುವದು ನೇತಿನೇತ್ಯಾತ್ಮನನ್ನು ತಿಳಿಸುವದರಲ್ಲಿಯೇ ಕೊನೆಗೊಂಡಿರುವದರಿಂದ ಮತ್ತೊಂದು ಸಾಧನವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಮೃತತ್ವಕ್ಕೆ ಸಾಧನವಾದ ಆತ್ಮಜ್ಞಾನಕ್ಕೆ ಆತ್ಯಂತಿಕವಾದ ಏಷಣಾತ್ರಯತ್ಯಾಗವೇ ಫಲವಾದ್ದರಿಂದ, ಆ ಸಂನ್ಯಾಸದಿಂದ ಪಡೆದುಕೊಳ್ಳಬೇಕಾದುದು ಮತ್ತೇನೂ ಇರುವದಿಲ್ಲ. ಜ್ಞಾನಪರಿಪಾಕಕ್ಕೆ ಸಂನ್ಯಾಸವು ಸಹಾಯವೂ ಆಗುವದಾದ್ದರಿಂದ ಶ್ರುತಿಯಲ್ಲಿ ಸಂನ್ಯಾಸಸಹಿತವಾದ ಆತ್ಮಜ್ಞಾನವನ್ನೇ ಉಪದೇಶಿಸಿದೆ.

ಸಂನ್ಯಾಸ, ಸಮ್ಯಗ್ಜ್ಞಾನ ಮತ್ತು ಸಮ್ಯಗ್ದರ್ಶನ- ಈ ವಿಷಯಗಳ ವಿವರಣೆಯನ್ನು ಬೃಹದಾರಣ್ಯಕಭಾಷ್ಯವಾರ್ತಿಕದ ಎರಡನೆಯ ಅಧ್ಯಾಯದ ನಾಲ್ಕನೆಯ (ಮೈತ್ರೇಯೀ)ಬ್ರಾಹ್ಮಣದಲ್ಲಿ, ಮೈತ್ರೇಯೀ-ಯಾಜ್ಞವಲ್ಕ್ಯಸಂವಾದದಲ್ಲಿ ಶ್ರೀಶಂಕರರ ಸಾಕ್ಷಾತ್ ಶಿಷ್ಯರಾದ ಸುರೇಶ್ವರಾಚಾರ್ಯರು ಹೇಗೆ ಮಾಡಿದ್ದಾರೆಂಬುದನ್ನು ಸಂಕ್ಷೇಪವಾಗಿ ಈಗ ವಿಚಾರಮಾಡೋಣ.

**41.** ಬ್ರಹ್ಮಯಾಥಾತ್ಮ್ಯವಿಜ್ಞಾನಸಾಧನತ್ವಂ ವಿನಾಽಽಗಮಾತ್ ।
ಸಂನ್ಯಾಸಸ್ಯ ನ ವಿಜ್ಞಾತಂ ತಚ್ಚಾಪ್ಯತ್ರೇಣೇಹ ಬೋಧ್ಯತೇ ॥
(ಬೃ. ಭಾ. ವಾ. ೨-೪-೭)

ಬ್ರಹ್ಮವು ಹೇಗಿದೆಯೋ ಹಾಗೆ ಅದರ ಸ್ವರೂಪವನ್ನು ಅರಿಯಲು ಸಂನ್ಯಾಸವು ಸಾಧನವಾಗಿದೆ- ಎಂಬಿದು ಶಾಸ್ತ್ರದಿಂದಲೇ ತಿಳಿಯಬೇಕೇ ಹೊರತು

ಬೇರೆ ಬಗೆಯಿಂದ ತಿಳಿಯಲಾಗುವದಿಲ್ಲ. ಆದ್ದರಿಂದ ಇಲ್ಲಿ ಶಾಸ್ತ್ರವು ಸಂನ್ಯಾಸವನ್ನು ಉಪದೇಶಿಸುತ್ತದೆ.

42. ಪ್ರತ್ಯಗ್ಯಾಥಾತ್ಮ್ಯ ವಿಜ್ಞಾನಜನ್ಮನೇಽತಃ ಶ್ರುತಿಃ ಸ್ವಯಮ್ ।
ವಿಧಿತ್ಸನ್ತೀಹ ಸಂನ್ಯಾಸಂ ಮೈತ್ರೇಯೀತಿ ಪ್ರವರ್ತತೇ ॥
(ಬೃ. ಭಾ. ವಾ. ೨-೪-೩೮)

ಪ್ರತ್ಯಗಾತ್ಮನ ಯಥಾರ್ಥವಿಜ್ಞಾನವು ಹುಟ್ಟುವದಕ್ಕೆ ಸಂನ್ಯಾಸವೇ ಸಾಧನವಾದ್ದರಿಂದ, ಈ ಶ್ರುತಿಯು ತಾನೇ "ಮೈತ್ರೇಯೀತಿ ಹೋವಾಚ" ಎಂದು ಪ್ರಾರಂಭಿಸಿ, ಇಲ್ಲಿ ಸಂನ್ಯಾಸವನ್ನು ವಿಧಿಸುತ್ತದೆ.

43. ಭಾರ್ಯಾದ್ಯನುಜ್ಞಾಪೂರ್ವೋ ಹಿ ಸಂನ್ಯಾಸೋ ವಿಹಿತಃ ಶ್ರುತೌ ।
ಅತೋಽನುಜ್ಞಾರ್ಥಮೇವಾಽಽಹ ಮೈತ್ರೇಯೀಮೃಷಿರಾತ್ಮನಃ ॥
(ಬೃ. ಭಾ. ವಾ. ೨-೪ ೩೯)

ಪತ್ನಿ ಮುಂತಾದವರ ಅನುಮತಿಯನ್ನು ಪಡೆದೇ ಸಂನ್ಯಾಸವನ್ನು ಸ್ವೀಕರಿಸಬೇಕೆಂದು ಶ್ರುತಿಯಲ್ಲಿ ವಿಧಿಸಿರುತ್ತದೆ. ಆದ್ದರಿಂದ ಇಲ್ಲಿಯೂ ಯಾಜ್ಞವಲ್ಕ್ಯ ಮಹರ್ಷಿಗಳು ಅನುಮತಿಗಾಗಿ ತಮ್ಮ ಪ್ರಿಯಪತ್ನಿಯಾದ ಮೈತ್ರೇಯಿಯನ್ನು ಕೇಳಿರುತ್ತಾರೆ.

44. ಯದ್ವಿಜ್ಞಾನಾತ್ ಪರಿತ್ಯಜ್ಯ ನಿಃಶೇಷಂ ವಿತ್ತಸಾಧನಮ್ ।
ಸ್ವಾರಾಜ್ಯಮೀಪ್ಸತಿ ಭವಾಂಸ್ತದೇವ ವಸು ದೇಹಿ ಮೇ ॥೬೧॥

ಮೈತ್ರೇಯಿ : ಮಹಾಸ್ವಾಮಿ ! ಈ ಸಂಪತ್ತೆಂಬ ಸಾಧನವನ್ನೆಲ್ಲಾ ಸಂಪೂರ್ಣವಾಗಿ ತೊರೆದು, ತಾವು, ಯಾವದನ್ನು ತಿಳಿದುಕೊಳ್ಳುವದರಿಂದಲೇ ಸ್ವಾರಾಜ್ಯರೂಪವಾದ ನಿಜವಾದ ಸಂಪತ್ತನ್ನು ಪಡೆಯಬಯಸಿದ್ದೀರೋ ಅಂಥ ನಿಜವಾದ ಸಂಪತ್ತನ್ನೇ ದಯವಿಟ್ಟು ನನಗೂ ಅನುಗ್ರಹಮಾಡೋಣವಾಗಲಿ.

45. ನಾಽಽದಿರ್ನಾನ್ತೋ ನ ಮಧ್ಯಂ ವಾ ಯಸ್ಯ ವಿತ್ತಸ್ಯ ವಿದ್ಯತೇ ।
ಭೋಗೇ ನ ಚ ಕ್ಷಯಂ ಯಾತಿ ತದೇವ ವಸು ದೀಯತಾಮ್ ॥

ಸ್ವಾಮಿ ! ಯಾವ ಐಶ್ವರ್ಯಕ್ಕೆ ಆದಿಯಾಗಲಿ, ಮಧ್ಯವಾಗಲಿ, ಅಂತವಾಗಲಿ ಇಲ್ಲವೋ ಯಾವದನ್ನು ಎಷ್ಟು ಅನುಭವಿಸಿದರೂ ಕ್ಷಯವಾಗುವದೇ ಇಲ್ಲವೋ ಅಂಥ ಶಾಶ್ವತವಾದ ಸಂಪತ್ತನ್ನೇ ನನಗೆ ಕೃಪೆಮಾಡಿರಿ.

46. ಮೋಕ್ಷಂ ಯಾನ್ತಂ ನರಂ ಸರ್ವೇ ಮುಞ್ಚನ್ತಿ ಸಹಜಾ ಅಪಿ ।
ಅತಿಭಕ್ತಿತಯಾ ಮಾಂ ತ್ವಂ ಮೋಕ್ಷೇಽಪಿ ನ ಜಿಹಾಸಸಿ ॥೬೭॥

ಯಾಜ್ಞವಲ್ಕ್ಯ: ಮೋಕ್ಷಪ್ರಾಪ್ತಿಗಾಗಿ ಸಂನ್ಯಾಸಸ್ವೀಕಾರಮಾಡಿದವನನ್ನು ಅವನ ಒಡಹುಟ್ಟಿದವರುಕೂಡ ಬಿಟ್ಟುಬಿಡುತ್ತಾರೆ; ಆದರೆ, ನೀನು ಮಾತ್ರ ನನ್ನಲ್ಲಿಟ್ಟಿರುವ ಹೆಚ್ಚಿನ ಭಕ್ತಿಯಿಂದ, ಮೋಕ್ಷಮಾರ್ಗದಲ್ಲಿಯೂ (ಸಂನ್ಯಾಸದಲ್ಲಿಯೂ) ನನ್ನನ್ನು ಬಿಡಲಾರದವಳಾಗಿದ್ದೀಯೆ.

47. ಅತಿಸ್ನೇಹಾಽಪಕೃಷ್ಟೋಮಾ ದೇಹಾರ್ಧಂ ಶೂಲಿನಃ ಶ್ರಿತಾ ।
ತ್ವಂ ತು ಸರ್ವಾತ್ಮನಾಽಽತ್ಮಾನಂ ಕೃತ್ಸ್ನಂ ಮಾಮಾಪ್ತುಮಿಚ್ಛಸಿ॥

ಅತ್ಯಂತ ಸ್ನೇಹಪರವಶಳಾದ ಪಾರ್ವತಿಯು ಕೂಡ ಪರಮೇಶ್ವರನ ಅರ್ಧ ಶರೀರವನ್ನು ಹೊಂದಿದವಳಾಗಿದ್ದಾಳೆ; ಆದ್ದರಿಂದಲೇ ಪರಶಿವನಿಗೆ ಅರ್ಧ ನಾರೀಶ್ವರ-ಎಂಬ ಹೆಸರು ಬಂದಿದೆ. ನೀನಾದರೋ ಎಲೌ ಮೈತ್ರೇಯಿ! ಸರ್ವಸಮರ್ಪಣಬುದ್ಧಿಯಿಂದ, ಪರಿಪೂರ್ಣನಾದ ನನ್ನನ್ನು ಸಂಪೂರ್ಣವಾಗಿಯೇ ಪಡೆಯಲು ಇಚ್ಛಿಸುತ್ತಿದ್ದೀಯೆ. (೬೯)

48. ಯತ ಏವಮತಸ್ತುಭ್ಯಂ ವಕ್ಷ್ಯಾಮ್ಯಮೃತಸಾಧನಮ್ ।
ನಿದಿಧ್ಯಾಸಸ್ವ ಚೇತೋಽತೋ ವ್ಯಾಚಕ್ಷಾಣಸ್ಯ ತನ್ಮಮ ॥೭೦॥

ಹೀಗಿರುವದರಿಂದ ಅಮೃತತ್ವಕ್ಕೆ ಸಾಧನವಾದ ಆತ್ಮಜ್ಞಾನವನ್ನು ನಿನಗೆ ಈಗ ಉಪದೇಶಿಸುತ್ತೇನೆ. ನನ್ನೀ ಉಪದೇಶವನ್ನು ಏಕಾಗ್ರಚಿತ್ತಳಾಗಿ ಆಲಿಸಿ, ಶಾಸ್ತ್ರೀಯಯುಕ್ತಿಗಳಿಂದ ಮ ನ ನ ಮಾ ಡಿ , ವಿಚಾರದಿಂದ ತತ್ತ್ವವನ್ನು ನಿಶ್ಚಯಿಸಿಕೊ.

49. ನರಕಾದಿವ ನಿರ್ವಿಣ್ಣೋ ಯಾವನ್ನಾಽಽಬ್ರಹ್ಮಣೋ ನರಃ ।
ನ ತಾವದಧಿಕಾರೋಽಸ್ತಿ ಕೈವಲ್ಯಜ್ಞಾನವರ್ತ್ಮನಿ ॥ ೯೩ ॥

ನರಕಲೋಕದಿಂದ ವಿರಕ್ತನಾಗುವಂತೆಯೇ ಬ್ರಹ್ಮಲೋಕದ ವರೆಗಿನ ಎಲ್ಲ ಭೋಗಗಳಿಂದಲೂ ವಿರಕ್ತನಾಗದವನಿಗೆ ಕೈವಲ್ಯಜ್ಞಾನಮಾರ್ಗದಲ್ಲಿ (ಬ್ರಹ್ಮವಿದ್ಯೆಯಲ್ಲಿ) ಅಧಿಕಾರವಿಲ್ಲ.

50. ವಸ್ತುವೃತ್ತಾತ್ಮಸಂಬೋಧಧ್ವಸ್ತಸಂಸಾರಕಾರಣಃ।
ವ್ಯಾವಿದ್ಧಾಶೇಷಸಂಸಾರೋ ವಿಮುಕ್ತೋ ನಾ ವಿಮುಚ್ಯತೇ ॥೫॥

ವಸ್ತುತಂತ್ರವಾದ ಆತ್ಮವಿಜ್ಞಾನದಿಂದ ಬಾಧಿತವಾದ ಅಜ್ಞಾನವುಳ್ಳ ಮನುಷ್ಯನು ಜನನಮರಣರೂಪವಾದ ಸಂಸಾರವನ್ನು ಕಳೆದುಕೊಂಡು, ಸ್ವಭಾವದಿಂದಲೇ ವಿಮುಕ್ತನಾದವನು ಜೀವನ್ಮುಕ್ತನಾಗುತ್ತಾನೆ.

51. ಆತ್ಮೈವೇತ್ಯಾದಿವಾಕ್ಯೇನ ಪೂರ್ಣಬ್ರಹ್ಮಾವಬೋಧಿನಾ ।
ನಾವಿಧ್ವಸ್ತಂ ತಮೋಽತೋಽಸ್ತಿ ನ ಚ ಜ್ಞಾನಮನುತ್ಥಿತಮ್ ॥೧೦೧॥

ನಾನಿವೃತ್ತಸ್ತಥಾಽನರ್ಥೋ ನಾನವಾಪ್ತಂ ಸುಖಂ ತಥಾ ।
ಕಾರ್ಯಜ್ಞೇಯಸಮಾಪ್ತಿಃ ಸ್ಯಾತ್ ಪ್ರತ್ಯಗ್ಯಾಥಾತ್ಮ್ಯ ಬೋಧತಃ ॥

"ಆತ್ಮೈವ........" ಇತ್ಯಾದಿ ವಾಕ್ಯಗಳ ಅರ್ಥವನ್ನು ಸರಿಯಾಗಿ ತಿಳಿದು, ಪೂರ್ಣಬ್ರಹ್ಮವೇ ಎಲ್ಲವೂ ಆಗಿದೆಯೆಂದು ಪಡೆದ ಜ್ಞಾನದಿಂದ ನಾಶವಾಗದ ತಮಸ್ಸಿಲ್ಲ; ಹುಟ್ಟದಿರುವ ಜ್ಞಾನವಿಲ್ಲ; ನಾಶವಾಗದಿರುವ ಅನರ್ಥವಿಲ್ಲ; ಪಡೆಯುದಿರುವ ಸುಖವಿಲ್ಲ-ಎಂದು ಗೊತ್ತಾಗುತ್ತದೆ. ಪ್ರತ್ಯಗ್ಯಾಥಾತ್ಮ್ಯವಿಜ್ಞಾನದಿಂದ (ಪ್ರತ್ಯಗಾತ್ಮನ ನಿಜವಾದ ವಿಜ್ಞಾನದಿಂದ) ಮಾಡಬೇಕಾದ ಕಾರ್ಯವಾಗಲಿ, ತಿಳಿಯಬೇಕಾದ ಜ್ಞೇಯವಾಗಲಿ ಉಳಿಯುವದಿಲ್ಲ.

52. ನಿತ್ಯಮುಕ್ತತ್ವವಿಜ್ಞಾನಂ ವಾಕ್ಯಾದೇವಾಜ್ಞ್ಸಾ ಭವೇತ್ ।
ವಾಕ್ಯಾರ್ಥಸ್ಯ ಚ ವಿಜ್ಞಾನಂ ಪದಾರ್ಥಸ್ಮೃತಿಪೂರ್ವಕಮ್ ॥ ೧೧೧ ॥
ಅನ್ವಯವ್ಯತಿರೇಕಾಭ್ಯಾಂ ಪದಾರ್ಥಃ ಸ್ಮರ್ಯತೇ ಧ್ರುವಮ್ ।
ಏವಂ ನಿರ್ದುಃಖಮಾತ್ಮಾನಮಕ್ರಿಯಂ ಪ್ರತಿಪದ್ಯತೇ ॥ ೧೧೨ ॥

ಆತ್ಮನು ನಿತ್ಯಮುಕ್ತನೆಂಬ ವಿಜ್ಞಾನವು ವೇದಾಂತವಾಕ್ಯದಿಂದಲೇ ನಿಶ್ಚಿತವಾಗಿ ಕೂಡಲೇ ಉಂಟಾಗುತ್ತದೆ. ವಾಕ್ಯಾರ್ಥಜ್ಞಾನವಾದರೋ ಪದಗಳ ಅರ್ಥವನ್ನು ತಿಳಿದುಕೊಳ್ಳುವದರಿಂದ ಆಗುತ್ತದೆ.

ಅನ್ವಯವ್ಯತಿರೇಕನ್ಯಾಯದಿಂದ ಅವಶ್ಯವಾಗಿ ಪದಾರ್ಥಜ್ಞಾನವಾಗುತ್ತದೆ; ಹೀಗೆ ದುಃಖದ ಸಂಬಂಧವಿಲ್ಲದ ನಿಷ್ಕ್ರಿಯನಾದ ಆತ್ಮನನ್ನು ಪಡೆಯುತ್ತಾನೆ.

53. ಐಕಾತ್ಮ್ಯಸ್ಯ ಸ್ವತಃ ಸಿದ್ಧೇರ್ನ ಕ್ರಿಯಾಽಪೇಕ್ಷ್ಯತೇ ಯತಃ ।
ತತಶ್ಚ ಭಾವನಾಭಾವೋ ಭಾವನಾಯಾಃ ಕ್ರಿಯಾಶ್ರಯಾತ್ ॥ ೧೫೭ ॥

ಎರಡನೆಯದೇನೊಂದೂ ಇಲ್ಲದ ಅಖಂಡಚಿದೈಕರಸನಾದ ಆತ್ಮನು ಸ್ವತಃ ಸಿದ್ಧನಾಗಿರುವದರಿಂದ ಪ್ರಯತ್ನಪೂರ್ವಕವಾದ ಯಾವದೊಂದು ಕ್ರಿಯೆಯಿಂದ ಅವನನ್ನು ಹೊಸದಾಗಿ ಸಾಧಿಸಬೇಕಾಗಿಲ್ಲ. ಆದ್ದರಿಂದಲೇ ಭಾವನೆಯು-ಆವಶ್ಯಕತೆಯೂ ಇಲ್ಲ ; ಏಕೆಂದರೆ, ಕರ್ಮಗಳನ್ನು ಆಶ್ರಯಿಸಿಕೊಂಡೇ ಭಾವನೆಯು ಬದುಕಿರುವದು.

54. ಪ್ರಮೋಪಜಾಯತೇ ತಾವದಹಂ ಬ್ರಹ್ಮೇತ್ಯಲೌಕಿಕೀ ।
ತತ್ತ್ವಮಸ್ಯಾದಿವಾಕ್ಯೇಭ್ಯಃ ಶ್ರವಣಾತ್ ಸಮನನ್ತರಮ್ ॥ ೧೬೭ ॥

"ತತ್ತ್ವಮಸಿ" ಮುಂತಾದ ವಾಕ್ಯಗಳನ್ನು ಶ್ರವಣಮಾಡಿದ ಕೂಡಲೇ 'ನಾನು ಬ್ರಹ್ಮವಾಗಿದ್ದೇನೆ' ಎಂಬ ವಿಜ್ಞಾನವು (ಅಲೌಕಿಕಜ್ಞಾನವು) ಹುಟ್ಟುತ್ತದೆ.

55. ನ ಚಾವಿದ್ಯಾನಿರಾಸ್ಯತ್ರ ಪ್ರತ್ಯಗ್ಯಾಥಾತ್ಮ್ಯಬೋಧತಃ ।
ಸಾಧನಂ ಕಿಂಚಿದಾಪೇಕ್ಷ್ಯಂ ಸ್ವರ್ಗೇ ಯಾಗಾದಿವತ್ಕ್ವಚಿತ್ ॥ ೧೯೭ ॥

ಸ್ವರ್ಗಪ್ರಾಪ್ತಿಗೆ ಯಾಗಾದಿಗಳು ಸಾಧನವಾಗಿರುವಂತೆ ಇಲ್ಲಿ (ಸಂಸಾರದ ಅನರ್ಥಕ್ಕೆ ಕಾರಣವಾಗಿರುವ) ಅವಿದ್ಯೆಯನ್ನು ಕಳೆದುಕೊಳ್ಳುವದಕ್ಕೆ ಪ್ರತ್ಯಗಾತ್ಮನ ಯಥಾರ್ಥಜ್ಞಾನಕ್ಕಿಂತ ಬೇರೆ ಯಾವ ಸಾಧನವೂ ಬೇಕಿಲ್ಲ.

56. ನ ಚಾವಿದ್ಯಾಸಮುಚ್ಛಿತ್ತಿರ್ಜ್ಞಾನೋತ್ಪತ್ತ್ಯತಿರೇಕತಃ ।
ಸಂಸಾರನಾಶೋಽವಿದ್ಯಾಯಾ ನಾಶಾನ್ನ ವ್ಯತಿರಿಚ್ಯತೇ ॥ ೧೯೮ ॥

ಜ್ಞಾನೋತ್ಪತ್ತಿಗಿಂತ ಬೇರೆಯಾಗಿ ಅವಿದ್ಯಾನಾಶವೆಂಬುದು ಮತ್ತೊಂದಿಲ್ಲ; ಹೀಗೆಯೇ ಅವಿದ್ಯಾನಾಶಕ್ಕಿಂತ ಬೇರೆಯಾಗಿ ಮತ್ತೊಂದು ಸಂಸಾರನಾಶವೆಂಬುದಿಲ್ಲ.

57. ದ್ವೈವಿಧ್ಯಂ ಚಾಪ್ಯವಿದ್ಯಾಯಾ ನ ಚ ಯುಕ್ತ್ಯಾಽವಸೀಯತೇ ।
ಏಕಾತ್ಮ್ಯಮಾತ್ರವಸ್ತುತ್ವಾದವಿದ್ಯೈಕೈವ ಯುಜ್ಯತೇ ॥೧೯೯॥

ಯುಕ್ತಿಯಿಂದ ಸಹ ಅವಿದ್ಯೆಯಲ್ಲಿ ಎರಡು ಬಗೆಗಳನ್ನು ಕಲ್ಪಿಸುವದು ಕೂಡ ಸಾಧ್ಯವಿಲ್ಲ. ಆತ್ಮವು ಅಖಂಡವಾಗಿ ಒಂದೇ ಆಗಿರುವದರಿಂದ, ಅದನ್ನು ವಿಷಯವಾಗಿ ಉಳ್ಳದ್ದಾಗಿರುವದರಿಂದ ಅವಿದ್ಯೆಯೂ ಒಂದೇ ರೂಪವಾಗಿದೆಯೆಂಬುದೇ ನ್ಯಾಯವಾಗಿದೆ (ಹೊಂದಿಕೆಯಾಗುತ್ತದೆ.)

58. ಪ್ರಮೇಯಭೇದಭಿನ್ನತ್ವಂ ಜ್ಞಾನಾನಾಮಿವ ಭೇದಕಮ್ ।
ನಾವಿದ್ಯಾಯಾ ಯತೋಽಸ್ತೀಹ ದ್ವೈವಿಧ್ಯಂ ತೇನ ದುರ್ಘಟಮ್ ॥

ಬೇರೆ ಬೇರೆ ಪ್ರಮೇಯವಾದ ವಿಷಯಗಳು ಅನೇಕವಾಗಿ ಭಿನ್ನವಾಗಿರುವದರಿಂದ ಆ ಸಂಬಂಧವಾದ ಜ್ಞಾನಗಳಲ್ಲಿಯೂ ಭೇದವಿರುವದು ಸ್ವಾಭಾವಿಕವಾಗಿದೆ; ಆದರೆ ಅಪ್ರಮೇಯವಾದ ಆತ್ಮವು ಒಂದೇ ಆಗಿರುವದರಿಂದ, ಅಧ್ಯಾರೋಪದೃಷ್ಟಿಯಿಂದ ಅದನ್ನು ಪ್ರಮೇಯವಾಗಿ ಭಾವಿಸಿದರೂ ಅದಕ್ಕೆ ಸಂಬಂಧಪಟ್ಟ ವಿದ್ಯೆಯು (ಜ್ಞಾನವು) ಒಂದೇ ಆಗಿರುವಂತೆ, ಅವಿದ್ಯೆಯೂ ಒಂದೇ ಆಗಿರಬೇಕೇ ಹೊರತು, ಅದರಲ್ಲಿ ಎರಡುಬಗೆ ಎಂಬಿದು–ಸಾಧ್ಯವೇ ಅಲ್ಲ.

59. ಪ್ರತ್ಯಗಜ್ಞಾನಮೇವೇಹ ತದನ್ಯದ್ವಸ್ತುಕಾರಣಮ್ ।
ತದನ್ಯಕಾರಣಾಸತ್ತ್ವಾದ್ದ್ವೈವಿಧ್ಯಂ ತಮಸಃ ಕುತಃ ॥ ೨೦೦ ॥

ಎರಡನೆಯ ವಸ್ತುವಿನ ತೋರಿಕೆಗೆ ಪ್ರತ್ಯಗಾತ್ಮನ ಅಜ್ಞಾನವೇ ಕಾರಣವಾಗಿದೆ. ಈ ಅಜ್ಞಾನದ ಹೊರತು ಬೇರೊಂದು ಕಾರಣವಿರುವದಿಲ್ಲವಾದ್ದರಿಂದ ತಮಸ್ಸಿನಲ್ಲಿ ಅಥವಾ ಅಜ್ಞಾನದಲ್ಲಿ ಎರಡು ಬಗೆ ಎಲ್ಲಿಂದ ತಾನೆ ಬಂದೀತು ?

ಮೂಲಾವಿದ್ಯಾ-ತೂಲಾವಿದ್ಯಾ, ಎಂದು ಅವಿದ್ಯೆಯಲ್ಲಿಯೂ "ದ್ವೈವಿಧ್ಯ"ವನ್ನು (ಎರಡು ಬಗೆಗಳನ್ನು) ಕಲ್ಪಿಸತಕ್ಕಂಥ ವ್ಯಾಖ್ಯಾನ ಪ್ರಸ್ಥಾನಕಾರರಾದ ಮಹನೀಯರು ಮುಂದೆ ಅವತರಿಸಬಹುದೆಂಬ ಭವಿಷ್ಯಜ್ಞಾನದ ನಿರೀಕ್ಷೆಯ ಸಾತ್ತ್ವಿಕಭಯದಿಂದಲೋ ಎಂಬಂತೆ ಸುರೇಶ್ವರರು ಯಾವ ಬಗೆಯ ಯುಕ್ತಿಯ ಬಲದಿಂದಲೂ ಅವಿದ್ಯೆಯಲ್ಲಿ (ತಮಸ್ಸಿನಲ್ಲಿ) ಎರಡು ಬಗೆಗಳನ್ನು ಹೇಳಲು ಸಾಧ್ಯವಿಲ್ಲ-ಎಂದು ಸ್ಪಷ್ಟ ವಾಗಿಯೂ ನಿಷ್ಕೃಷ್ಟವಾಗಿಯೂ ಸಾರಿ ಹೇಳಿದ್ದಾರೆ. ಅವರ ಶಂಕೆಯು ಭವಿಷ್ಯವಾಣಿಯೇನೋ ಸತ್ಯವಾಯಿತು ; ಆದರೆ, ಅವರ ಸಮ್ಯಗ್ ಬೋಧವು ಅರಣ್ಯರೋದನವಾಯಿತು.

1) ಅವಿದ್ಯೆಯು ಒಂದೇ ಆದರೂ ಅದು ಮೂರು ಬಗೆಯಿಂದ ತೋರಿ ಕೊಳ್ಳುತ್ತದೆ. ಅಗ್ರಹಣ, ವಿಪರೀತಗ್ರಹಣ, ಸಂಶಯ; ಇವೇ ಮೂರು ಬಗೆಗಳು. ಈ ಮೂರನ್ನೂ ಅವಿದ್ಯೆ ಎನ್ನುವರೇ ಹೊರತು, ಇದರಲ್ಲಿ ಮತ್ತೊಂದು ಬಗೆಯಿಲ್ಲ. ಇವುಗಳಲ್ಲಿ ವಿಪರೀತಜ್ಞಾನಕ್ಕೂ ಸಂಶಯಕ್ಕೂ ಅಗ್ರಹಣವೇ (ಜ್ಞಾನಾಭಾವವೇ) ಕಾರಣವಾದ್ದರಿಂದ ಅಗ್ರಹಣವನ್ನು ಕಾರಣಾವಿದ್ಯೆಯೆಂದೂ ಉಳಿದೆರಡನ್ನು ಕಾರ್ಯಾವಿದ್ಯೆಗಳೆಂದೂ ಗೌಡಪಾದಕಾರಿಕೆಗಳಲ್ಲಿಯೂ ಭಾಷ್ಯ ಗಳಲ್ಲಿಯೂ ಲೋಕಾನುಭವಕ್ಕೆ ಅನುಸಾರವಾಗಿ ವ್ಯಾವಹಾರಿಕದೃಷ್ಟಿಯಿಂದ ಹೇಳಿದೆ. ಹುಸಿತೋರಿಕೆಯನ್ನು ಅಲ್ಲಗಳೆಯುವದರಿಂದ ತತ್ತ್ವವನ್ನು ತಿಳಿಸುವ ದಕ್ಕಾಗಿಯೇ ಮಾಡಿದ ಅಧ್ಯಾರೋಪವಿದು. (ಗೀ. ೧೩-೨ ; ಬೃ. ೩-೩-೧ ; ಮಾಂ. ಗೌ. ಕಾ. ೧-೧೧ ಇಂದ ೧೫)

2) ಸ್ವಾಭಾವಿಕವಾದ ಈ ಅವಿದ್ಯೆಯೂ ಸಾಧನೆಯಿಂದ ಬರುವ ವಿದ್ಯೆಯೂ ಅಂತಃಕರಣ ವೃತ್ತಿಗಳೇ ಹೊರತು, ಇವು ಆತ್ಮನಿಗೆ ಸಂಬಂಧವಿಲ್ಲ.
(ಗೀ. ೧೩-೨ ; ತೈ. ೨-೮)

3) ನವೀನವೇದಾಂತಿಗಳು ಅವಿದ್ಯೆಯಲ್ಲಿ ಮೂಲಾವಿದ್ಯೆ ಮತ್ತು ತೂಲಾ ವಿದ್ಯೆ ಎಂದು ಎರಡು ಬಗೆಗಳನ್ನು ಹೇಳುತ್ತಾರೆ. ಮೂಲಾವಿದ್ಯೆ ಎಂದರೆ, ಆತ್ಮ ನನ್ನು ಆಶ್ರಯಿಸಿ, ಆತ್ಮನನ್ನು ಆವರಿಸಿ, ಅಹಂಕಾರವಾಗಿಯೂ ಜಗತ್ತಾಗಿಯೂ ಪರಿಣಮಿಸಬಲ್ಲ ಆತ್ಮನ ಜಡಶಕ್ತಿವಿಶೇಷವು. ಅಗ್ರಹಣಾದಿಗಳಿಗೆಲ್ಲಾ ಇದೇ ಉಪಾದಾನಕಾರಣವು. ಹೊರಗಿನ ಪದಾರ್ಥಗಳನ್ನು ಆವರಿಸಿರುವ ಅವಿದ್ಯೆಯೇ ತೂಲಾವಿದ್ಯೆ; ಮತ್ತು ಭ್ರಾಂತಿಯಿಂದ ತೋರುವ ರಜ್ಜುಸರ್ಪಾದಿಗಳಿಗೆ ಉಪಾ ದಾನಕಾರಣವಾಗಿರುವದೂ ತೂಲಾವಿದ್ಯೆಯೇ.

4) ಪ್ರಪಂಚಕ್ಕೆಲ್ಲಾ ಮೂಲ (ಕಾರಣ)ವಾದ ಪ್ರಕೃತಿಯೇ ಮಾಯಾ ಶಕ್ತಿ ಎನಿಸಿದೆ. ಈ ಅವಿದ್ಯೆಯು ಒಂದೇ ಆದರೂ ಇದರ ಅಂಶಗಳು ಅನೇಕವಾಗಿ

ಬೇರೆಬೇರೆಯ ಜೀವರಿಗೆ ಬೇರೆಬೇರೆಯ ಉಪಾಧಿಗಳಾಗಿವೆ. ಯಾವ ಜೀವನು ಜ್ಞಾನವನ್ನು ಪಡೆಯುವನೋ ಅವನ ಅವಿದ್ಯೆಯು ಮಾತ್ರ ನಾಶವಾಗಿ, ಮಿಕ್ಕ ಜೀವರ ಅವಿದ್ಯೆಗಳು ಹಾಗೇ ಉಳಿದಿರುವದರಿಂದ ಅವರಿಂದ ಜಗತ್ತು ಮುಂದು ವರಿಯಬಹುದಾಗಿದೆ. ಹೀಗೆ ಭಾಮತೀಕಾರರು ಅವಿದ್ಯೆಯಲ್ಲಿ ದ್ವೈವಿಧ್ಯ ವನ್ನೂ ನಾನಾತ್ವವನ್ನೂ ಒಪ್ಪಿರುತ್ತಾರೆ.

60. ಆತ್ಮಾಸಾಮಾನ್ಯರೂಪೋತ್ಥಂ ಜ್ಞಾನಮಜ್ಞಾನಮಾತ್ಮನಿ ।
ಸಕೃಜ್ಜಾತಂ ನ ಚೇದ್ಧನ್ತಿ ಜ್ಞಾನಮೇವ ನ ತದ್ಭವೇತ್ ॥ ೨೦೮ ॥

ಆತ್ಮನು ಇಂಥ ಸ್ವರೂಪದವನೆಂದು ಒಂದುಸಲ ಹುಟ್ಟಿದ ಸರಿಯಾದ ಜ್ಞಾನವು ಆತ್ಮನ ವಿಷಯದ ಅಜ್ಞಾನವನ್ನು ಕಳೆಯುವದಿಲ್ಲವೆಂದಾದರೆ, ಆಗ ಅದು ಜ್ಞಾನವೇ ಆಗಲಾರದು.

61. ಸಮ್ಯಗ್ಜ್ಞಾನಂ ಯದಾಶ್ರಿತ್ಯ ತನ್ಮೋಹೋಽಪಿ ತದಾಶ್ರಯಃ ।
ಅಬಾಧಿತಂ ತಮೋಽತ್ರಾಽಸ್ತ ಇತ್ಯುಕ್ತಿರ್ಜಡವಕ್ತೃಕಾ ॥ ೨೦೯ ॥

ಎಲ್ಲಿ ಮೋಹರೂಪವಾದ ಅಜ್ಞಾನವು ಇರುತ್ತದೆಯೋ ಅಲ್ಲಿಯೇ (ಆತ್ಮ ನಲ್ಲಿಯೇ) ಸಮ್ಯಗ್ಜ್ಞಾನವು (ಸರಿಯಾದ ಜ್ಞಾನವು) ಹುಟ್ಟುವದರಿಂದ ಜ್ಞಾನವು ಬಂದಮೇಲೂ ಆ ಜ್ಞಾನಿಗೆ ಅಜ್ಞಾನವು ಬಾಧಿತವಾಗದೆ ಉಳಿದು ಕೊಂಡಿರುತ್ತದೆ-ಎನ್ನುವದು ಮೂರ್ಖನ ಮಾತಾಗುತ್ತದೆ.

62. ದರ್ಶನಸ್ಯಾವಿಧೇಯತ್ವಾತ್ತದುಪಾಯೋ ವಿಧೀಯತೇ ।
ವೇದಾನ್ತಶ್ರವಣಂ ಯತ್ನಾದುಪಾಯಸ್ತರ್ಕ ಏವ ಚ ॥ ೨೧೦ ॥

ಆತ್ಮದರ್ಶನವನ್ನು ವಿಧಾನಮಾಡಲು ಸಾಧ್ಯವಾಗದೇ ಇರುವದರಿಂದ ಆತ್ಮದರ್ಶನಕ್ಕೆ ಸಾಧನವಾಗಿ ಶ್ರವಣ, ಮನನಾದಿಗಳನ್ನು ಉಪಾಯವೆಂದು ವಿಧಿಸಿರುತ್ತಾರೆ.

63. ಆಗಮಾದ್ದರ್ಶನಂ ಪೂರ್ವಮಾಗಮಾಚಾರ್ಯತೋ ಮತಿಃ ।
ತ್ರಯಾಣಾಮಪಿ ಸಂಗಾನಾಚ್ಛಾಸ್ತ್ರಾಚಾರ್ಯಾತ್ಮನಾಂ ಸ್ಥಿರಮ್ ॥ ೨೧೧ ॥

ಮೊದಲು ಆಗಮದಲ್ಲಿ ಓದಿದುದನ್ನೂ ಅನಂತರ ಆಚಾರ್ಯರಿಂದ ಕೇಳಿದ ಬೋಧೆಯನ್ನೂ ತಾನು ಯುಕ್ತಿಯಿಂದ ವಿಚಾರ ಮಾಡಿ, ಸ್ವಂತ ಅನುಭವದಲ್ಲಿ ಅಳವಡಿಸಿಕೊಳ್ಳಬೇಕು; ಹೀಗೆ, ಶಾಸ್ತ್ರ, ಸದ್ಗುರು, ಮತ್ತು ಸ್ವಾನುಭವ, ಈ ಮೂರರ ಸಂಗಾನದಿಂದ 'ಸಮ್ಯಗ್ದರ್ಶನ'ವು ಸ್ಥಿರವೂ ದೃಢವೂ ಆಗುತ್ತದೆ.

64. ಸರ್ವಮಾತ್ಮೇತಿ ಸಮ್ಯಗ್‌ಧೀಜನ್ಮನೈವಾಖಿಲಂ ತಮಃ ।
ಧ್ವಂಸಮೇತಿ ತತಃ ಸಂಜ್ಞಾ ನಾವಿದ್ಯೋತ್ಥಾಽವಶಿಷ್ಯತೇ ॥ ೪೩೭ ॥

"ಇದೆಲ್ಲವೂ ಆತ್ಮನೇ" ಎಂಬ ಸಮ್ಯಗ್ಜ್ಞಾನವು (ಸಮ್ಯಗ್ದರ್ಶನವು) ಉದಯಿಸಿದ ಕೂಡಲೇ ಎಲ್ಲಾ ತಮಸ್ಸೂ ಸಂಪೂರ್ಣವಾಗಿ ನಾಶವಾಗುವದರಿಂದ ಅವಿದ್ಯೆಯಿಂದ ಹುಟ್ಟಿದ ಸಂಜ್ಞೆಯು (ವಿಶೇಷಜ್ಞಾನವು) ಸ್ವಲ್ಪವೂ ಉಳಿದು ಕೊಳ್ಳುವದಿಲ್ಲ.

ದೇಹವಿರುವವರೆಗೂ ಜ್ಞಾನಿಯಲ್ಲಿ ಆದರೂ ಅವಿದ್ಯಾಲೇಶವು ಉಳಿದಿರುತ್ತದೆ; ಆದ್ದರಿಂದ ಜ್ಞಾನಿಯು ದೇಹಪಾತಾನಂತರ, ಪೂರ್ಣ ವಾಗಿ ಮುಕ್ತನಾಗುತ್ತಾನೆ–ಎಂಬ ಈಚಿನ ಅಪ್ರಬುದ್ಧ ವೇದಾಂತಿಗಳ ಮಿಥ್ಯಾವಾದಕ್ಕೆ ಸುರೇಶ್ವರರ ಈ ಮೇಲಿನ ವಾಕ್ಯವು ಆಟಂಬಾಂಬಿ ನಂತಿದೆ.

65- ವಿಶೇಷಸಂಜ್ಞಾ ಯಾಽಸ್ಯಾಭೂದ್ವಿಜ್ಞಾನಾತ್ಮಾದಿಲಕ್ಷಣಾ ।
ಸಮ್ಯಗ್ಧೀಧ್ವಸ್ತಮೋಹಸ್ಯ ಸಾ ಕೃತ್ಸ್ನಾ ವಿನಿವರ್ತತೇ ॥ ೪೪೯ ॥

ಜ್ಞಾನವು ಹುಟ್ಟುವದಕ್ಕಿಂತ ಮುಂಚೆ ತನ್ನನ್ನು ವಿಜ್ಞಾನಾತ್ಮನು(ಜೀವನು) ಎಂದು ಮುಂತಾಗಿ ತಿಳಿದಿರುತ್ತಾನೆ. ಸಮ್ಯಗ್ಜ್ಞಾನವು ಹುಟ್ಟಿದ ಕೂಡಲೇ ಮೋಹವು ನಾಶವಾಗಿಬಿಡುವದರಿಂದ ಆ ವಿಶೇಷಜ್ಞಾನವು (ಸಂಜ್ಞೆಯು)ಪೂರಾ ಬಾಧಿತವಾಗಿಬಿಡುತ್ತದೆ.

66. ಸತೋಽಭಿವ್ಯಞ್ಜಕಂ ಮಾನಂ ಸ್ವಭಾವೋಽಯಂ ಮಿತೇರ್ಭವೇತ್ ।
ಅವಿದ್ಯಾಯಾಃ ಸ್ವಭಾವೋಽಯಂ ಯದಸತ್ಕರಣಂ ಮೃಷಾ ॥ ೪೫೬ ॥

ಇರುವ ವಸ್ತುವನ್ನು ಮಾತ್ರ ಪ್ರಮಾಣವು ತಿಳಿಸುತ್ತದೆ ; ಇದು ಪ್ರಮಾ ಣದ ಸ್ವಭಾವವು; ಇಲ್ಲದಿರುವ ವಸ್ತುವನ್ನೇ–ಸುಳ್ಳುಸುಳ್ಳಾಗಿ–ಇರುವಂತೆ ತೋರಿ ಸುವದೇ ಅವಿದ್ಯೆಯ ಸ್ವಭಾವವು.

67. ಸಂಜ್ಞೇಯಂ ಕಿಮು ವಿಧ್ವಸ್ತಸಂಸಾರಾನರ್ಥಕಾರಣೇ ।
ಉದಿತೈಕಾತ್ಮ್ಯಯಾಥಾತ್ಮ್ಯ ಸಮ್ಯಗ್ಜ್ಞಾನದಿವಾಕರೇ ॥ ೪೮೨ ॥

ಸ್ವಯಂಚಿಜ್ಯೋತಿಸ್ಸ್ವರೂಪನಾದ ಆತ್ಮನು ಒಬ್ಬನೇ–ಎಂಬ ಯಥಾರ್ಥ ವಾದ ಸಮ್ಯಗ್ಜ್ಞಾನವೆಂಬ ಸೂರ್ಯಪ್ರಕಾಶದ ಉದಯದಿಂದ ಸಂಸಾರಾನರ್ಥ ಕಾರಣವಾದ ಅವಿದ್ಯಾ ತಮಸ್ಸು ನಾಶವಾಗಿರಲು ಆ ಜ್ಞಾನಿಯಲ್ಲಿ ಸಂಜ್ಞೆಯು (ವಿಶೇಷಜ್ಞಾನವು) ಹೇಗೆ ತಾನೇ ಉಳಿಯಲು ಸಾಧ್ಯ ?

68. ಯತ ಏವಮತಃ ಸಿದ್ಧಂ ದರ್ಶನಂ ಪ್ರತ್ಯಗಾತ್ಮನಃ ।
ಶ್ರುತ್ಯಾದಿಸಾಧನಂ ಸಾಕ್ಷಾತ್ ಸರ್ವಮಾತ್ಮೇತ್ಯುದೀರಿತಮ್ ॥ ೪೮೫ ॥

ಹೀಗಿರುವದರಿಂದ, ಪ್ರತ್ಯಗಾತ್ಮನ ದರ್ಶನವು ಸಿದ್ಧವಾಯಿತು. ಇದಕ್ಕೆ ಶ್ರವಣಾದಿಗಳೇ ಸಾಕ್ಷಾತ್ ಸಾಧನವು; ಇದರಿಂದ ಸರ್ವವೂ ಆತ್ಮವೇ ಎಂಬ ಅನುಭವವಾಗುತ್ತದೆ-ಎಂದು ಹೇಳಿದೆ.

## ಉಪಸಂಹಾರ

ಲೌಕಿಕವಾದ ಯಾವ ಸಂಪತ್ತಿನಿಂದಲೂ ಸಾಧನೆಯಿಂದಲೂ ಮರ್ತ್ಯರು ಅಮೃತತ್ವವನ್ನು ಪಡೆಯಲು ಸಾಧ್ಯವಿಲ್ಲವೆಂದು ವಿಚಾರದಿಂದ ಮನಗಂಡ ಮೈತ್ರೇಯಿಯು, ವಿರಕ್ತಳಾಗಿ, ಅಮೃತತ್ವದ ಅಪೇಕ್ಷೆಯಿಂದಲೇ ಯಾಜ್ಞವಲ್ಕ್ಯರನ್ನು ಅದಕ್ಕೆ ಉಪಾಯವೇನೆಂದು ಪ್ರಶ್ನೆಮಾಡುತ್ತಾಳೆ.

ಸಮಸ್ತ ಜಗತ್ತಿನ ಆತ್ಮನಾದ ಪರಮಾತ್ಮನೊಬ್ಬನೇ ಮಹತ್ತಾದ ಅಜನೂ ಅಜರನೂ ಅಮರನೂ ಅಮೃತನೂ ಅಭಯನೂ ಆಗಿರುವದರಿಂದ, ಹೃದಯದಲ್ಲಿರುವ ಅವಿದ್ಯಾಕಾಮಗಳನ್ನೆಲ್ಲಾ ಕಳೆದುಕೊಂಡ ಮುಮುಕ್ಷುಸಂನ್ಯಾಸಿಯು ಅಮೃತಸ್ವರೂಪ ಪರಮಾತ್ಮನನ್ನು ಅರಿತರೆ ಅಮೃತನಾ(ಳಾ)ಗ ಬಹುದೆಂದು ಯಾಜ್ಞವಲ್ಕ್ಯರು ತಮ್ಮ ಆತ್ಮೋಪದೇಶವನ್ನು ಪ್ರಾರಂಭಿಸುತ್ತಾರೆ.

ಅಮೃತತ್ವದ ಲಾಭಕ್ಕೆ ಉಪಾಯವಾಗಿ ಕರ್ತೃತಂತ್ರವಾದ ಉಪಾಸನಾದಿಗಳನ್ನು ಹೇಳದೆ, ಉತ್ತಮಾಧಿಕಾರಿಣಿಯಾದ ಪ್ರಿಯೆ ಮೈತ್ರೇಯಿಗೆ ವಿವೇಕಪೂರ್ಣವೂ ವಸ್ತುತಂತ್ರವೂ ಆದ ಸಮ್ಯಗ್ದರ್ಶನವನ್ನೇ ಭಗವಾನರು ಬೋಧಿಸುತ್ತಾರೆ. ಶಾಸ್ತ್ರಾಚಾರ್ಯರ ಅನುಗ್ರಹದಿಂದ ಮುಖ್ಯವಾಗಿ ಶ್ರವಣಾದಿಸಾಧನೆಗಳನ್ನು ನಡೆಸಿದರೆ, ಉತ್ತಮವಿವೇಕಿಯು ಅಮೃತಾತ್ಮನನ್ನು ತನ್ನ ಅನುಭವದಲ್ಲಿ ಕಂಡುಕೊಳ್ಳುವದೆಂಬ ಸಮ್ಯಗ್ದರ್ಶನವನ್ನು ಪಡೆಯಬಹುದೆಂದು ಯಾಜ್ಞವಲ್ಕ್ಯರು ಹೇಳುತ್ತಾರೆ. ಈ ಎಲ್ಲವೂ ಆತ್ಮನೇ ಆಗಿರುವದರಿಂದ, ಆತ್ಮನನ್ನು ಅರಿತರೆ ಎಲ್ಲವನ್ನೂ ಅರಿತಂತೆ ಆಗುತ್ತದೆ-ಎಂದೂ ಅವರು ಪ್ರತಿಜ್ಞೆ ಮಾಡುತ್ತಾರೆ. ಈ ಆತ್ಮಜ್ಞಾನದ (ಜ್ಞಾನನಿಷ್ಠೆಯ) ಪರಿಪಾಕಕ್ಕೆ ಏಷಣಾತ್ರಯ ತ್ಯಾಗರೂಪವಾದ ಪಾರಿವ್ರಾಜ್ಯವೇ (ಸಂನ್ಯಾಸವೇ) ಮುಖ್ಯ ಸಾಧನವೆಂದೂ ಅದು ಜ್ಞಾನನಿಷ್ಠೆಯ ಸ್ವಾಭಾವಿಕಫಲವೂ ಆಗಬಹುದೆಂದೂ ಅವರು ಹೇಳಿದ್ದಾರೆ.

ಯಾವ ಮಾತಿನಿಂದಲೂ ಯಾವ ಪ್ರತ್ಯಯದ ಮೂಲಕವೂ ತಿಳಿಸುವದಕ್ಕೆ ಸಾಧ್ಯವಿಲ್ಲದ ನಿರ್ಗುಣನೂ ನಿರಾಕಾರನೂ ನಿರ್ವಿಶೇಷನೂ ನಿರ್ವಿಷಯನೂ ಅಪ್ರಮೇಯನೂ ಆಗಿರುವ ಪರಮಾತ್ಮನ ಸ್ವರೂಪವನ್ನು ತಿಳಿಸುವದಕ್ಕೋಸ್ಕರ ಅಜ್ಞರ ಲೋಕಾನುಭವವನ್ನು ಅನುಸರಿಸಿ, ವ್ಯವಹಾರದೃಷ್ಟಿಯಿಂದ ತೋರುವ (ಪ್ರಿಯಸಂಸೂಚಿತ) ಭೋಕ್ತೃತ್ವವನ್ನೂ (ವಿ)ಜ್ಞಾತೃತ್ವವನ್ನೂ ಉತ್ಕ್ರಮಣ

ತ್ವವನ್ನೂ ವಿಶೇಷಸಂಜ್ಞತ್ವವನ್ನೂ ಅನುವಾದಮಾಡಿಕೊಂಡು, ಯಾಜ್ಞವಲ್ಕ್ಯರು, (ಗೌಡಪಾದರಿಗೂ ಶಂಕರರಿಗೂ ಸುರೇಶ್ವರರಿಗೂ ಸಮ್ಮತವಾದ) ಕಾಶಕೃತ್ಸ್ನರ ಶ್ರೌತಮತದಂತೆ.(ಕರ್ತೃವಿಗೂ ಭೋಕ್ತೃವಿಗೂ ಪ್ರಮಾತೃವಿಗೂ ಸಾಕ್ಷಿಯಾದ) ಪ್ರಜ್ಞಾನಘನನಾದ ಪರಮಾತ್ಮನೇ ವಿಜ್ಞಾನಾತ್ಮನಾದ ಜೀವನಾಗಿ ತೋರುತ್ತಿದ್ದಾನೆ-ಎಂದು ಪ್ರಸಿದ್ಧವಾದ ಅಧ್ಯಾರೋಪ ಅಪವಾದವೆಂಬ ವೇದಾಂತ ನ್ಯಾಯದಂತೆ ಬೋಧಿಸಿದ್ದಾರೆ. "ಸಾಕ್ಷಿಚೈತನ್ಯಸ್ವರೂಪನಾ(ಳಾ)ದ ನಾನು ಎಂದೆಂದಿಗೂ ಅಮೃತಸ್ವರೂಪವಾಗಿಯೇ ಇದ್ದೇನೆ'-ಎಂಬಿದನ್ನು ಪರಮಾರ್ಥ ದೃಷ್ಟಿಯ ಸಮ್ಯಗ್ದರ್ಶನದಿಂದ ಈಗಲೇ, ಇಲ್ಲಿಯೇ (ಅನುಭವದಲ್ಲಿ) ಕಂಡುಕೊಳ್ಳಬೇಕೇ ಹೊರತು, ಅಮೃತತ್ವವನ್ನು ಹೊಸದಾಗಿ ಸಾಧನೆಯಿಂದ ಪಡೆಯುವದಲ್ಲ; ಹೀಗೆ ತಿಳಿಯಬೇಕೆಂಬುದೇ ಯಾಜ್ಞವಲ್ಕ್ಯರ ಉಪದೇಶದ ಸಾರವಾಗಿದೆ.

ಈ ಗ್ರಂಥ ರಚನೆಯಲ್ಲಿ ಹೊಳೆನರಸೀಪುರದ ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಪ್ರಸ್ಥಾನತ್ರಯಭಾಷ್ಯಗ್ರಂಥಗಳನ್ನು ಉಪಯೋಗಿಸಿರುವದರಿಂದ, ಆ ಪೂಜ್ಯರಿಗೆ ಅನಂತ ಪ್ರಣಾಮಪೂರ್ವಕ ಕೃತಜ್ಞತೆಗಳು ಸಲ್ಲಬೇಕಾಗಿದೆ.

ಇದನ್ನು ಸಕಾಲದಲ್ಲಿ (ಹೆಚ್ಚು) ತಪ್ಪುಗಳಿಲ್ಲದಂತೆ ಮುದ್ದಾಗಿ ಮುದ್ರಿಸಿಕೊಟ್ಟಿದ್ದಕ್ಕಾಗಿ ಹೊಳೆನರಸೀಪುರದ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಪಂಡಿತರಾದ ಅಧ್ಯಾತ್ಮ ವಿದ್ಯಾ ಪ್ರವೀಣ ವೇ|| ಬ್ರ|| ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳಿಗೂ, ಮುದ್ರಣಕಾರ್ಯಕರ್ತರಿಗೂ ಗುರುದೇವನು ಸಕಲ ಶುಭಗಳನ್ನೂ ಅನುಗ್ರಹಿಸಲಿ !

# ಪರಿಶಿಷ್ಟ

ವೇದಾಂತವಾಕ್ಯಗಳ ತಾತ್ಪರ್ಯವೇನೆಂಬುದನ್ನು ವಿಚಾರಪೂರ್ವಕವಾಗಿ ನಿರ್ಣಯಿಸುವದಕ್ಕಾಗಿಯೇ ಇರುವ ಬ್ರಹ್ಮಸೂತ್ರಗಳೆಂಬ ''ವೇದಾಂತದರ್ಶನ'' ದಲ್ಲಿ (ವೇದಾಂತಮೀಮಾಂಸಾಶಾಸ್ತ್ರದಲ್ಲಿ) ಒಂದನೆಯ ಅಧ್ಯಾಯದ ನಾಲ್ಕನೆಯ ಪಾದದಲ್ಲಿ, ಆರನೆಯ ವಾಕ್ಯಾನ್ವಯಾಧಿಕರಣದಲ್ಲಿ "ವಾಕ್ಯಾನ್ವಯಾತ್" ಎಂಬ ಹತ್ತೊಂಬತ್ತನೆಯ ಸೂತ್ರವಿದೆ. ಬೃಹದಾರಣ್ಯಕೋಪನಿಷತ್ತಿನ ಮೈತ್ರೇಯೀಬ್ರಾಹ್ಮಣದಲ್ಲಿ, "ನ ವಾ ಅರೇ ಪತ್ಯುಃ ಕಾಮಾಯ" "ಎಲೆ, ಮೈತ್ರೇಯಿ, ಪತಿಯ ಕಾಮಕ್ಕಾಗಿ ಪತಿಯು ಪ್ರಿಯನಾಗುವದಿಲ್ಲ" ಎಂದು ಉಪಕ್ರಮಿಸಿ, "ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ, ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ........ ವಿಜ್ಞಾನೇನೇದಂ ಸರ್ವಂ ವಿದಿತಮ್" (ಬೃ. ೨-೪-೫)

''ಎಲೆ, ಎಲ್ಲದರ ಕಾಮಕ್ಕಾಗಿ ಎಲ್ಲವೂ ಪ್ರಿಯವಾಗುವದಿಲ್ಲ; ಮತ್ತೆ ಏತಕ್ಕೆಂದರೆ, ಆತ್ಮನ ಕಾಮಕ್ಕಾಗಿಯೇ ಎಲ್ಲವೂ ಪ್ರಿಯವಾಗಿರುತ್ತವೆ. ಎಲೆ, ಆತ್ಮನನ್ನೇ ಕಂಡುಕೊಳ್ಳಬೇಕು. (ಇದಕ್ಕಾಗಿ ಆ ವಿಷಯವನ್ನು) ಕೇಳಬೇಕು, ವಿಚಾರಮಾಡಬೇಕು, ಚಿಂತಿಸಬೇಕು; ಎಲೆ, ಮೈತ್ರೇಯಿ, ಆತ್ಮನನ್ನು ಹೀಗೆ ಕಂಡುಕೊಳ್ಳುವದರಿಂದ, (ಇದಕ್ಕಾಗಿ ಮಾಡುವ) ಆತ್ಮವಿಚಾರದ ಶ್ರವಣದಿಂದ, ಮನನದಿಂದ, ವಿಜ್ಞಾನದಿಂದ ಇದೆಲ್ಲವೂ ವಿದಿತವಾಗುವದು." ಎಂದು ಉಪಸಂಹಾರಮಾಡಿರುವ ಉಪದೇಶದ ತಾತ್ಪರ್ಯವೇನೆಂಬುದನ್ನು ನಿರ್ಣಯಿಸುವದಕ್ಕಾಗಿಯೇ ಈ "ವಾಕ್ಯಾನ್ವಯಾತ್" ಎಂಬ (19ನೇ) ಸೂತ್ರದಿಂದ ಹಿಡಿದು "ಅವಸ್ಥಿತೇರಿತಿ ಕಾಶಕೃತ್ಸ್ನಃ" ಎಂಬ (22ನೇ) ಸೂತ್ರದ ವರೆಗಿನ ನಾಲ್ಕು ಸೂತ್ರಗಳು ಈ ಅಧಿಕರಣದಲ್ಲಿ ಬಂದಿವೆ.

ವಿಷಯೋ ವಿಶಯಶ್ಚೈವ, ಪೂರ್ವಪಕ್ಷಸ್ತಥೋತ್ತರಮ್ ।
ನಿರ್ಣಯಶ್ಚೇತಿ ಸಿದ್ಧಾನ್ತಃ, ಶಾಸ್ತ್ರೇಽಧಿಕರಣಂ ಸ್ಮೃತಮ್ ॥

1) ವಿಷಯ 2) ಸಂಶಯ 3) ಪೂರ್ವಪಕ್ಷ (ಅಥವಾ ಆಕ್ಷೇಪ) 4) ಉತ್ತರ (ಪಕ್ಷ) ಅಥವಾ ಸಮಾಧಾನ 5) ನಿರ್ಣಯರೂಪಸಿದ್ಧಾಂತ. ಹೀಗೆ ಈ ಐದು ಅಂಶಗಳಿಂದ ಕೂಡಿರಬೇಕೆಂದು ಅಧಿಕರಣದ ಲಕ್ಷಣವನ್ನು ಮೀಮಾಂಸಾಶಾಸ್ತ್ರದಲ್ಲಿ ಹೇಳಿದೆ. ಈ ಶಾಸ್ತ್ರವಾಕ್ಯಕ್ಕೆ ಅನುಗುಣವಾಗಿ ಈ ವಾಕ್ಯಾನ್ವಯಾಧಿಕರಣದಲ್ಲಿ ಮುಖ್ಯಲಕ್ಷಣಗಳು ಹೀಗಿವೆ :

1) ವಿಷಯವಾಕ್ಯ : "ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ, ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ।" ಎಂದು ಮುಂತಾಗಿರುವ ವಾಕ್ಯವಿದೆ. ಇಲ್ಲಿ, "ಆತ್ಮನ ಕಾಮಕ್ಕಾಗಿಯೇ ಎಲ್ಲವೂ ಪ್ರಿಯವಾಗುತ್ತವೆ. ಆದ್ದರಿಂದ, ಆತ್ಮನೇ ದ್ರಷ್ಟವ್ಯನು, ಶ್ರೋತವ್ಯನು, ಮಂತವ್ಯನು, ನಿದಿಧ್ಯಾಸಿತವ್ಯನು ; ಎಲೈ ಮೈತ್ರೇಯಿ, ಆತ್ಮನ ದರ್ಶನದಿಂದ, (ಇದಕ್ಕಾಗಿ ಮಾಡುವ) ಶ್ರವಣದಿಂದ, ಮನನದಿಂದ, ಹಾಗೂ ವಿಜ್ಞಾನದಿಂದ ಇವೆಲ್ಲವೂ ವಿದಿತವಾಗುವವು, ತಿಳಿಯಲ್ಪಡುವವು" ಎಂದು ಹೇಳಿದೆ.

2) ಸಂಶಯ : ಈ ವಾಕ್ಯವು ವಿಜ್ಞಾನಾತ್ಮನಾದ ಜೀವನನ್ನು ಕುರಿತು ಹೇಳುವದೋ ಪರಮಾತ್ಮನ ವಿಷಯವನ್ನು ಹೇಳುವದೋ ? ಹೀಗೆಂಬುದೇ ಸಂಶಯ. ಏಕೆಂದರೆ, ಇಲ್ಲಿ

ಅ) ಪತಿ, ಪತ್ನೀ, ಪುತ್ರ, ವಿತ್ತಾದಿಸಂಸಾರಸಂಬಂಧವನ್ನು ಹೇಳಿದೆ. ಅಲ್ಲದೆ, ಜೀವನಿಗೆ ಸಂಬಂಧಪಟ್ಟ ಬ್ರಾಹ್ಮಣ, ಕ್ಷತ್ರಿಯ ಮೊದಲಾದ ವರ್ಣಗಳನ್ನೂ ಹೇಳಿದೆ.

ಆ) "ಏತೇಭ್ಯೋ ಭೂತೇಭ್ಯಃ ಸಮುತ್ಥಾಯ ತಾನ್ಯೇವಾನು ವಿನಶ್ಯತಿ । (ಬೃ. ಉ. ೨-೪-೧೨) ದೇಹವನ್ನು ಬಿಟ್ಟುಹೋದಮೇಲೆ ಈ ಭೌತಿಕದೇಹವು ನಶ್ವರವಾದ ಭೂತಗಳ ಗುಣವನ್ನನುಸರಿಸಿ ನಾಶವಾಗುವದು.

ಇ) "ನ ಪ್ರೇತ್ಯ ಸಂಜ್ಞಾಸ್ತಿ" (ಬೃ. ಉ. ೨-೪-೧೨, ೧೩) ಈ ದೇಹವನ್ನು ಬಿಟ್ಟು ಜೀವನು ಹೊರಟುಹೋದ (ಸತ್ತ) ಬಳಿಕ ಶರೀರದಲ್ಲಿ ಅರಿವೇ ಇರುವದಿಲ್ಲ.

ಈ) "ವಿಜ್ಞಾತಾರಮರೇ ಕೇನ ವಿಜಾನೀಯಾತ್" ॥ (ಬೃ. ೨-೪-೧೪) "ಎಲೈ ಮೈತ್ರೇಯಿ ! ವಿಜ್ಞಾತೃವನ್ನು (ಅರಿಯುವವನನ್ನು) ಏತರಿಂದ ಅರಿಯುವದು ಸಾಧ್ಯ ?" ಇವೇ ಮುಂತಾದ ವಾಕ್ಯಗಳಿಂದ ಇವು ವಿಜ್ಞಾತೃವೂ ಭೋಕ್ತೃವೂ ಆದ ಜೀವನನ್ನು ಕುರಿತ ವಿಷಯವೇ ಹೊರತು ಪರಮಾತ್ಮನ ವಿಷಯವಲ್ಲ ಎಂದು ತೋರುತ್ತದೆ. ಆದರೆ,

ಅ) "ಆತ್ಮನೋ ವಾ ಅರೇ ದರ್ಶನೇನ....। ಇದಗ್ಂ ಸರ್ವಂ ವಿದಿತಮ್" ॥ (ಬೃ. ಉ. ೨-೪-೫) "ಆತ್ಮನನ್ನು ಅರಿತರೆ ಎಲ್ಲವನ್ನೂ ಅರಿತಂತಾಯಿತು."

ಆ) ಬೆಂಕಿಯಿಂದ ಹೊಗೆ, ಕಿಡಿ, ಮುಂತಾದವು ಹೊರಕ್ಕೆ ಬರುವಂತೆ ವೇದಾದಿ ನಾಮ-ರೂಪಾತ್ಮಕ ಜಗತ್ತೆಲ್ಲವೂ ಪರಮಾತ್ಮನಿಂದಲೇ ಉತ್ಪನ್ನವಾಗಿವೆ. (ಬೃ. ಉ. ೨-೪-೧೦)

ಇ) ನದೀನದಗಳು ಸಮುದ್ರದಲ್ಲಿ ಲಯವಾಗುವಂತೆ ಜಗತ್ತೆಲ್ಲಾ ಕೊನೆಯ ಪ್ರಲಯದಲ್ಲಿ ಪರಮಾತ್ಮನಲ್ಲಿಯೇ ಲಯವಾಗುತ್ತವೆ. (ಬೃ. ೨-೪-೧೧)

ಈ) ದುಂದುಭಿ-ವೀಣಾ ಇತ್ಯಾದಿ ದೃಷ್ಟಾಂತಗಳಿಂದ ಸ್ಥಿತಿಕಾಲದಲ್ಲಿಯೂ ಚಿತ್‌ಸ್ವರೂಪ ಪರಮಾತ್ಮನನ್ನು ಬಿಟ್ಟು ಬೇರೇನೂ ಇಲ್ಲ-ಎಂದು ಹೇಳಿದೆ. (ಬೃ. ಉ. ೨-೪-೭, ೮)

ಉ) "ಬ್ರವೀಮಿ ಅಲಂ ವಾ ಅರ ಇದಂ ವಿಜ್ಞಾನಾಯ" ॥ (ಬೃ. ಉ. ೨-೪-೧೩) "ಈ ವಿವೇಕಜ್ಞಾನವೇ ಅಮೃತತ್ವಕ್ಕೆ ಸಾಕು.

ಇವೇ ಮೊದಲಾದ ವಾಕ್ಯಗಳಿಂದ ಈ ಉಪದೇಶವು ಪರಮಾತ್ಮವಿಜ್ಞಾನದ ವಿಷಯವೇ ಹೊರತು ಜೀವನ ವಿಷಯವಲ್ಲ-ಎಂದೂ ಹೇಳಬಹುದಾದ್ದರಿಂದ, ಈ ಉಭಯಪಕ್ಷಗಳ ಸಮರ್ಥನಸ್ಥಿತಿಯಲ್ಲಿ, ಯಾವದು ಹೆಚ್ಚು ಯುಕ್ತಿಯುಕ್ತ ವಾದುದೆಂದು ಸಂಶಯವು ಬರುವದು ಸ್ವಾಭಾವಿಕವಾಗಿದೆ.

3) ಪೂರ್ವಪಕ್ಷ : (ಕ) ಈ ಉಪದೇಶದ ಉಪಕ್ರಮದಲ್ಲಿ, ಪತಿಪತ್ನಿಯರ ಪ್ರೇಮಭಾವದ ದೃಷ್ಟಾಂತದಿಂದ, ಪ್ರಿಯಸಂಸೂಚಿತ ಭೋಕ್ತೃವಾದ ಆತ್ಮ ನನ್ನೇ ತಿಳಿಸಿ, ಆತ್ಮದರ್ಶನಾದಿಗಳನ್ನು ಹೇಳಿರುವದರಿಂದ, ಇಲ್ಲಿ ವಿಜ್ಞಾನಾತ್ಮ ನಾದ ಜೀವನನ್ನೇ ಹೇಳಿದೆ ಎನ್ನಬೇಕು.

ಖ) ಈ ಬೋಧೆಯ ಮಧ್ಯದಲ್ಲಿ, "ಅನಂತವೂ ಅಪಾರವೂ ಆದ ಈ ಮಹದ್‌ಭೂತಗಳೊಳಗಿಂದ ಎದ್ದುಹೋದಮೇಲೆ (ಈ ದೇಹವು) ಆ ನಶ್ವರ ಭೂತಗಳನ್ನೇ ಅನುಸರಿಸಿ ನಾಶವಾಗುತ್ತದೆ. ಆಗ ಅರಿವೇ ಇರುವದಿಲ್ಲ.'' ಎಂದು ಜೀವನ ವಿಜ್ಞಾತೃಸ್ವರೂಪವನ್ನೇ ಹೇಳಿದೆ.

ಗ) ಕೊನೆಗೆ, ಈ ಉಪದೇಶದ ಉಪಸಂಹಾರದಲ್ಲಿ, "ಎಲೆ, ವಿಜ್ಞಾತೃ ವನ್ನು ಏತರಿಂದ ಅರಿಯಲು ಸಾಧ್ಯ ?'' ಎಂದು ಕೇಳಿರುವದರಿಂದ ಜ್ಞಾನ ಕ್ರಿಯೆಗೆ ಕರ್ತೃವೂ ಅಹಂಪ್ರತ್ಯಯಗಮ್ಯನೂ ಆದ ವಿಜ್ಞಾನಮಯ ಜೀವನನ್ನೇ ಇದರಲ್ಲಿ ಹೇಳಿದೆ-ಎಂದು ಸ್ಪಷ್ಟವಾಗುತ್ತದೆ. (ಬೃ. ಉ. ೨-೪-೧೪)

ಘ) ಇನ್ನು, ವಿಜ್ಞಾನಾತ್ಮನೇ ಕರ್ತೃವೂ ಭೋಕ್ತೃವೂ ಆಗಿರುವದ ರಿಂದಲೂ ಜಡವಾದ ಭೋಗ್ಯಜಗತ್ತೆಲ್ಲವೂ ಚೇತನನಾದ ಭೋಕ್ತೃವಿಗಾಗಿಯೇ ಇರುವದರಿಂದಲೂ ವಿಜ್ಞಾತೃವಾದ ಭೋಕ್ತೃವಿಗೇ ಬೆಲೆಯೂ ಪ್ರಾಧಾನ್ಯವೂ ಹೆಚ್ಚು. ಆದ್ದರಿಂದಲೇ "ಆತ್ಮನೋ ವಾ ಅರೇ ವಿಜ್ಞಾನೇನ ಇದಗ್‌ಂ ಸರ್ವಂ ವಿದಿತಮ್‌ ॥ (ಬೃ. ಉ. ೨-೪-೫) ಆತ್ಮವಿಜ್ಞಾನದಿಂದ ಸರ್ವ ವನ್ನೂ ಅರಿತುಕೊಂಡಂತೆ ಆಗುವದು ; ಏಕೆಂದರೆ, ಆತ್ಮನಿಂದಲೇ ಸರ್ವವೂ ಉದಯವಾಗಿ, ಆತ್ಮನಲ್ಲಿಯೇ, ಆತ್ಮನಿಗಾಗಿಯೇ ನಿಂತು, ಬದುಕಿ, ಬೆಳಗಿ

ಆತ್ಮನಲ್ಲಿಯೇ ಅಡಗುವದರಿಂದ ಈ ವಿಜ್ಞಾನಾತ್ಮನನ್ನು ಅರಿತರೆ ಸರ್ವವನ್ನೂ ಅರಿತಂತೆ ಆಗುವದು-ಎಂದೂ ಈ ಬೋಧೆಯಲ್ಲಿ ಹೇಳಿದೆ. ಈ ಇಡೀ ಸೃಷ್ಟಿಯಲ್ಲಿ ಮಹಾ (ಸತ್ಯ) ಶೋಧಕನೂ ಸಾಧಕನೂ ಆದ ವಿಜ್ಞಾನಮಯಾತ್ಮನ ಸರ್ವಾತಿಶಯವಾದ ಹೆಚ್ಚುಗಾರಿಕೆಯನ್ನು ಹೊಗಳುವದಕ್ಕಾಗಿಯೇ ಅರ್ಥವಾದದಂತೆ ಈ ವಾಕ್ಯಗಳು ಬಂದಿವೆಯೆಂದೂ ಇಟ್ಟುಕೊಳ್ಳಬಹುದು. ಅಂತು ಒಟ್ಟಿನ ಮೇಲೆ, ವಿಚಾರಮಾಡಿದರೆ, ಈ ಎಲ್ಲಾ ವಾಕ್ಯಗಳೂ ಮಹದಹಂಕಾರದಿಂದ ಸೂಚ್ಯವಾಗುವ ಮಹಾಸಾಹಸಿಯಾದ ಜೀವನ ವಿಷಯವನ್ನು ಹೇಳುತ್ತವೆಯೇ ಹೊರತು ನಿರ್ಗುಣನೂ ನಿರಾಕಾರನೂ ನಿಸ್ಸತ್ತ್ವನೂ ಆದ ಪರಮಾತ್ಮನ ವಿಷಯವನ್ನು ಹೇಳುತ್ತಿಲ್ಲ-ಎಂಬಿದು ಸಿದ್ಧವಾಗುತ್ತದೆ.

**4) ಉತ್ತರ(ಪಕ್ಷ), ಸಮಾಧಾನ :** ಕ) ವಿರಕ್ತರೂ ವಿದ್ವಾಂಸರೂ ಬ್ರಹ್ಮನಿಷ್ಠರೂ ಆದ ಯಾಜ್ಞವಲ್ಕ್ಯಮಹರ್ಷಿಗಳು ವಿದ್ವತ್‌ಸಂನ್ಯಾಸವನ್ನು ಪರಿಗ್ರಹಿಸುವದಕ್ಕಾಗಿ, ತಮ್ಮ ಇಬ್ಬರು ಪತ್ನಿಯರಾದ ಕಾತ್ಯಾಯನೀ ಮತ್ತು ಮೈತ್ರೇಯೀ ದೇವಿಯರನ್ನು ಕರೆದು, ದೈವಾಯತ್ತವಾದ ತಮ್ಮ ಲೌಕಿಕಸಂಪತ್ತನ್ನು ಎರಡು ಸಮಭಾಗಮಾಡಿ, ಇಬ್ಬರಿಗೂ ಹಂಚಿಕೊಟ್ಟು, ಗೃಹಸ್ಥಾಶ್ರಮವನ್ನು ಬಿಟ್ಟು ಉತ್ತಮವಾದ 'ಪಾರಿವ್ರಾಜ್ಯ'ವೆಂಬ ಆಶ್ರಮಾಂತರವನ್ನು ಸ್ವೀಕರಿಸುವದಕ್ಕೋಸ್ಕರ, ಆ ಮಹಾಸಾಧ್ವಿಯರ ಅನುಮತಿಯನ್ನು "ಅನುಮತಿಂ ಪ್ರಾರ್ಥಯಾಮಿ ತೇ" (ಬೃ.ಭಾ. ೨-೪-೧)ಎಂದು ಬೇಡುತ್ತಾರೆ. ಈ ವ್ಯಾಖ್ಯಾನವು ಹೀಗೆ ಪ್ರಾರಂಭವಾಗಿದೆ. ಯಾಜ್ಞವಲ್ಕ್ಯರ ಪ್ರಾರ್ಥನೆಗೆ ಮೈತ್ರೇಯಿಯು ಕೊಟ್ಟಿರುವ ಉತ್ತರವು ಬಹಳ ಮಹತ್ತ್ವಪೂರ್ಣವಾಗಿದೆ. ಆಕೆ ಕೇಳುವದೇನೆಂದರೆ, '....ಭಗೋಃ ಸರ್ವಾ ಪೃಥಿವೀ ವಿತ್ತೇನ ಪೂರ್ಣಾ ಸ್ಯಾತ್ ಕಥಂ ತೇನ ಅಮೃತಾ ಸ್ಯಾಮ್ ?' (ಬೃ.ಉ. ೨-೪-೨)

'ಭಗವಂತನೆ, ಸಕಲ ಸಂಪದ್‌ಭರಿತವಾದ ಈ ಸಮಸ್ತ ಪೃಥಿವಿಯೇ ನಮ್ಮ ಕೈಸೇರಿದರೂ ಅದರಿಂದ ನಾವು ಅಮೃತರಾಗಬಹುದೆ ? ಹುಟ್ಟುಸಾವುಗಳನ್ನು ಕಳೆದುಕೊಳ್ಳಬಹುದೆ ? ನಾವು ಮೃತ್ಯುವಿನಿಂದ ಪಾರಾಗಬಹುದೆ, ಹೇಗೆ ?

ಇದಕ್ಕೆ ಯಾಜ್ಞವಲ್ಕ್ಯರು, ಐಶ್ವರ್ಯದಿಂದ ಶ್ರೀಮಂತರು ಹೇಗೆ ಸುಖವಾಗಿ ಬದುಕಬಹುದೋ ಹಾಗೇ ನೀವಾದರೂ ಸುಖಜೀವನವನ್ನು ನಡೆಸಬಹುದು." "ಅಮೃತತ್ವಸ್ಯ ತು ನಾಶಾಸ್ತಿ ವಿತ್ತೇನ" (ಬೃ. ೨-೪-೨) ಆದರೆ, ವಿತ್ತದಿಂದ -ಧನದಿಂದ- ಅಮೃತತ್ವದ ಆಶೆಯಿಲ್ಲ" ಎನ್ನುತ್ತಾರೆ.

**ಮೈತ್ರೇಯಿ : ಯೇನಾಹಂ ನಾಮೃತಾ ಸ್ಯಾಂ ಕಿಮಹಂ ತೇನ ಕುರ್ಯಾಂ ಯದೇವ ಭಗವಾನ್ ವೇದ ತದೇವ ಮೇ ಬ್ರೂಹಿ ॥**
(ಬೃ. ೨-೪-೩) ಯಾವದರಿಂದ ನಾವು ಅಮೃತರಾಗಲಾರೆವೋ, ಅದನ್ನು

ಪಡೆಯುವದರಿಂದ ನಮಗೇನು ಪ್ರಯೋಜನ ? ಯಾವದನ್ನು ಪಡೆದುದರಿಂದ ನೀವು ಅಮೃತರಾಗಿರುವಿರೋ ಅದನ್ನೇ ನಮಗೂ ತಿಳಿಸಿ.

ಯಾಜ್ಞವಲ್ಕ್ಯ : ನಮಗೆ ಅತ್ಯಂತಪ್ರಿಯವಾಗಿರುವದನ್ನೇ ನೀನೂ ಕೇಳುತ್ತಿದ್ದೀಯೆ. ಪ್ರಿಯೆ ಬಾ, ಕುಳಿತುಕೊ ; ನಿನಗೆ ಆ ಅಮೃತತ್ವಸ್ವರೂಪವನ್ನೂ ಅದರ ಸಾಧನವನ್ನೂ ತಿಳಿಸುತ್ತೇನೆ. ನಾನು ತಿಳಿಸುವ ಅಮೃತಮಯವಾದ ಆತ್ಮವಿಚಾರವನ್ನು ಚೆನ್ನಾಗಿ ಆಲಿಸಿ, ಮನನನಿದಿಧ್ಯಾಸನಗಳ ಮೂಲಕ ಅನುಭವದಲ್ಲಿ ನಿನ್ನ ಸ್ವರೂಪವೇ- ನಮ್ಮೆಲ್ಲರ ಸ್ವರೂಪವೇ- ಅಮೃತಸ್ವರೂಪವೆಂದು 'ದ್ರಷ್ಟವ್ಯಃ' ಕಂಡುಕೊಳ್ಳಬೇಕು.

'ಅಮೃತಂ ಬ್ರಹ್ಮ' ಅಮೃತವೆಂದರೆ ಬ್ರಹ್ಮ, ಪರಮಾತ್ಮ. 'ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ ಬ್ರಹ್ಮಾಽಭಯಂ ವೈ ಬ್ರಹ್ಮ....ಬ್ರಹ್ಮ ಭವತಿ ಯ ಏವಂ ವೇದ' ॥ (ಬೃ ೪-೪-೨೫)

ಆ ಈತನೇ (ಸಂಸಾರಿಯಾಗಿ ತೋರುವ ಆತ್ಮನೇ) ಮಹಾಂತನೂ ಅಜನೂ (ಜನ್ಮವಿಲ್ಲದವನೂ), ಆಜರನೂ (ಜೀರ್ಣವಾಗದವನು, ಮುಪ್ಪಿಲ್ಲದವನು, ವಿಪರಿಣಾಮಹೊಂದದವನು), ಅಮರನೂ (ಹುಟ್ಟು ಇಲ್ಲದ್ದರಿಂದ ಮುಪ್ಪೂ ಸಾವೂ ಇಲ್ಲದವನು), ಅಮೃತನೂ (ಕಾಮ, ಕರ್ಮ, ಮೋಹ ಮುಂತಾದ ಮೃತ್ಯುವಿಲ್ಲದವನು) ಅಭಯನೂ (ಭಯರಹಿತನು) ಆಗಿರುವನು. ಯಾವನು ಹೀಗೆಂದು ಅರಿತುಕೊಳ್ಳುವನೋ ಅವನು ಅಮೃತವೂ ಅಭಯವೂ ಆದ ಬ್ರಹ್ಮವೇ ಆಗುವನು.

**ಯದಾ ಸರ್ವೇ ಪ್ರಮುಚ್ಯನ್ತೇ ಕಾಮಾ ಯೇಽಸ್ಯ ಹೃದಿ ಶ್ರಿತಾಃ ।**
**ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ ॥**
(ಬೃ. ಉ. ೪-೪-೭)

ಯಾವಾಗ ಇವನ ಹೃದಯದಲ್ಲಿ ಆಶ್ರಯಿಸಿಕೊಂಡಿರುವ ಕಾಮಗಳೆಲ್ಲವೂ ಬಿಟ್ಟುಹೋಗುವವೋ ಆಗ ಮರ್ತ್ಯನು ಅಮೃತನಾಗುತ್ತಾನೆ ; ಇಲ್ಲಿಯೇ ಅವನು ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ. (ಕಠ. ೨-೩-೧೪)

ಹೀಗೆ, ಈ ಆಖ್ಯಾನದ ಉಪಕ್ರಮದಲ್ಲಿ, ಮೈತ್ರೇಯಿಯು ಕೇಳಿರುವದೂ ಅಮೃತತ್ವವನ್ನೇ ಎಂದರೆ ಮೋಕ್ಷವನ್ನೇ ಮತ್ತು ಅದಕ್ಕೆ ಸಾಧನವಾದ ಬ್ರಹ್ಮವಿದ್ಯೆಯನ್ನೇ (ಪರಮಾತ್ಮವಿಚಾರವನ್ನೇ) ಹೊರತು ಜೀವಾತ್ಮನ ವಿಚಾರವನ್ನಲ್ಲ, ಯಾಜ್ಞವಲ್ಕ್ಯರು ಬೋಧಿಸುವದಕ್ಕೆ ಪ್ರಾರಂಭಿಸಿರುವದೂ ಪ್ರತಿಜ್ಞೆಮಾಡಿರುವದೂ ಪರಮಾತ್ಮವಿಚಾರವನ್ನೇ. ಆದ್ದರಿಂದ ಈ ವಾಕ್ಯಗಳು ಪರಮಾತ್ಮವಿಚಾರದಲ್ಲಿಯೇ (ಉಪಕ್ರಮದ ಸಾಮರ್ಥ್ಯದಿಂದ) ಅನ್ವಯವಾಗುತ್ತವೆ ; ಹೊಂದಿಕೆಯಾಗುತ್ತವೆ.

ಖ) ಯಾಜ್ಞವಲ್ಕ್ಯರು, ಆತ್ಮನೋ ವಾ ಅರೇ....ವಿಜ್ಞಾನೇನ ಇದಂ ಸರ್ವಂ ವಿದಿತಮ್ ॥ (ಬೃ. ಉ. ೨-೪-೫)

"ಆತ್ಮನನ್ನು ಅರಿತರೆ ಸಕಲವನ್ನೂ ಅರಿತಂತಾಗುತ್ತದೆ" ಎಂದು ಹೇಳಿರುವದು ಪರಮಾತ್ಮನ (ಆತ್ಮನ) ವಿಷಯದಲ್ಲಿಯೇ ಮುಖ್ಯಾರ್ಥದಲ್ಲಿ ಹೊಂದುತ್ತದೆ. ಏಕೆಂದರೆ, ಹಗ್ಗದ ಹಾವಿನ (ರಜ್ಜುಸರ್ಪದ) ದೃಷ್ಟಾಂತದಲ್ಲಿರುವ ಹಗ್ಗದಂತೆ, ಆತ್ಮ ಒಂದೇ ಸತ್ಯ, ಅವಿದ್ಯಾಕಲ್ಪಿತವಾಗಿರುವ ಹಾವಿನಂತಿರುವ ಅನಾತ್ಮವಾದ ಈ ಸಕಲಜಗತ್ತು ಎಷ್ಟು ಮಾತ್ರವೂ ಇಲ್ಲವೇ ಇಲ್ಲ, ನಿಜವಾಗಿಲ್ಲವಾದರೂ ಇದ್ದಂತೆ ಮಾಯೆಯಿಂದ ತೋರುತ್ತಿದೆ. ಆದ್ದರಿಂದ ಆತ್ಮನನ್ನರಿತರೆ ಎಲ್ಲವನ್ನೂ ಅರಿತಂತಾಯಿತು.

ಇನ್ನು ಸಮುದ್ರದಲ್ಲಿರುವ ನೀರಿನಂತೆ ಆತ್ಮವೂ, ತೋರಿ ಅಡಗುತ್ತಿರುವ ಅನಂತಾನಂತ ತೆರೆ, ನೊರೆ, ಗುಳ್ಳೆಗಳಂತೆ ಸಕಲಜಗತ್ತೂ ಇವೆಯೆಂದು ಇಟ್ಟುಕೊಂಡರೂ ನೀರೊಂದೇ ನಿಜವಾಗಿರುವದರಿಂದಲೂ ನೀರನ್ನು ಬಿಟ್ಟು ತೆರೆನೊರೆಗಳು ಬೇರೆ ಸ್ವತಂತ್ರವಾಗಿಲ್ಲದಿರುವದರಿಂದಲೂ ನೀರೇ ತೆರೆನೊರೆಗಳಾಗಿ ತೋರುತ್ತಿರುವದರಿಂದಲೂ ತೆರೆನೊರೆಗಳಿಲ್ಲವಾದರೂ ನೀರು ಮಾತ್ರ ಇದ್ದೇ ಇರುವದರಿಂದಲೂ ಆದರೆ, ನೀರಿಲ್ಲವಾದರೆ ತೆರೆನೊರೆಗಳಿಲ್ಲದಿರುವದರಿಂದಲೂ ಹೀಗೆ ನೀರನ್ನು ಅರಿತರೆ ಸಕಲ ತೆರೆನೊರೆಗಳನ್ನೂ ಅರಿತಂತೆ ಆಗುತ್ತದೆ. ಇದರಂತೆ, ಅಜ್ಞಾತ (ಅರಿಯದ) ಆತ್ಮನೇ ಸಕಲ ಜಗತ್ತಾಗಿ ತೋರುತ್ತಿರುವದರಿಂದಲೂ ಆತ್ಮನನ್ನು ಬಿಟ್ಟು ಬ್ರಹ್ಮಕ್ಷತ್ರಾದಿ ಜಗತ್ತಿಗೆ ಬೇರೆ ಸ್ವತಂತ್ರವಾದ ಇರುವಿಕೆ ಇಲ್ಲವಾದ್ದರಿಂದಲೂ ಆತ್ಮನನ್ನು ಅರಿತರೆ ಸಕಲವನ್ನೂ ಅರಿತಂತೆ ಆಗುತ್ತದೆ-ಎಂದು ಯಾಜ್ಞವಲ್ಕ್ಯರು ಹೇಳಿರುವದು ಸರ್ವರ ಆತ್ಮನಾದ ಪರಮಾತ್ಮನ ವಿಷಯದಲ್ಲಿಯೇ ಪೂರ್ಣವಾಗಿ ಸಮಂಜಸವಾಗುತ್ತದೆ.

ಗ) ದುಂದುಭಿ, ಶಂಖ, ವೀಣಾ ಮೊದಲಾದ ವಾದ್ಯಗಳಿಂದ ಎಷ್ಟು ಬಗೆಬಗೆಯ ನಾದಗಳು ಹೊರಟರೂ ಆಯಾ ವಾದ್ಯಗಳ ವಿಶೇಷ ನಾದಸ್ವರಗಳಲ್ಲಿ ಆಯಾ ವಾದ್ಯಗಳ ಸಾಮಾನ್ಯನಾದಗುಣವು ವ್ಯಾಪಕವಾಗಿಯೇ ಇರುತ್ತದೆ. ಅಂದರೆ, ವೀಣೆಯಿಂದ ಎಷ್ಟೆಷ್ಟು ಬಗೆಯ ವಿಶೇಷನಾದಗಳನ್ನು ಹೊರಡಿಸಿದರೂ ಒಂದೊಂದರಲ್ಲಿಯೂ ವೀಣೆಯ ಸಾಮಾನ್ಯನಾದಗುಣವು ವ್ಯಾಪಕವಾಗಿರುವದೇ ಹೊರತು, ಅವುಗಳಲ್ಲಿ ಯಾವದೊಂದೂ ಶಂಖನಾದವೋ ಭೇರಿಯ ನಾದವೋ ಆಗಲಾರದು. ಹೀಗೆ, ಯಾಜ್ಞವಲ್ಕ್ಯರು ಈ ದುಂದುಭಿ, ಶಂಖ, ವೀಣೆ ಮೊದಲಾದ ದೃಷ್ಟಾಂತಗಳಲ್ಲಿರುವ ಸಾಮಾನ್ಯವಿಶೇಷಪ್ರಕ್ರಿಯೆಯಿಂದ "....ಇದಂ ಸರ್ವಂ ಯದಯಮಾತ್ಮಾ ॥" (ಬೃ. ೨-೪-೬) ಜ್ಞಾತೃ-ಜ್ಞಾನ-ಜ್ಞೇಯಗಳೆಂಬ ವಿಶೇಷರೂಪವಾಗಿ ತೋರುವ ಈ ಜಗತ್ತೆಲ್ಲವೂ ಇದರಲ್ಲಿ

ಸಾಮಾನ್ಯವಾಗಿ ಸರ್ವವ್ಯಾಪಕನಾಗಿರುವ ಪ್ರಜ್ಞಾನಘನನಾದ (ಚಿನ್ಮಾತ್ರ ಸ್ವರೂಪ) ಆತ್ಮನೇ ಆಗಿದೆ ; ಚಿದನುಗತವಾದ ಜ್ಞಾತೃ-ಜ್ಞಾನ-ಜ್ಞೇಯಗಳೆಂಬ (ಅಹಂ-ಇದಂ) ನಾನು ಮತ್ತು ಈ ಜಗತ್ತು ಎಂಬ ಎಚ್ಚರಕನಸುಗಳ ವಿಶೇಷ ರೂಪವು ಚಿನ್ಮಾತ್ರಸ್ವರೂಪನಾದ ಆತ್ಮನ (ಪರಮಾತ್ಮನ) ಚಿತ್-ಸಾಮಾನ್ಯ ವನ್ನು ಬಿಟ್ಟು ಬೇರೆ ಸ್ವತಂತ್ರವಾಗಿಲ್ಲ-ಎಂದು ಬೋಧಿಸಿದ್ದಾರೆ. ದುಂದುಭ್ಯಾದಿ ದೃಷ್ಟಾಂತಗಳಿಂದಲೂ ಇದು ಪರಮಾತ್ಮನ ವಿಚಾರವೇ ಎಂಬುದು ದೃಢವಾಗು ತ್ತದೆ.

ಘ) "ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ ಯದ್ ಋಗ್ವೇದೋ ಯಜುರ್ವೇದಃ ॥ (ಬೃ. ಉ. ೨-೪-೧೦) "ನಾಮ ರೂಪಾತ್ಮಕವಾದ ಋಗ್ವೇದಾದಿ ಜಗತ್ತು "ಅಸ್ಯ ಪರಮಾತ್ಮನಃ ಪ್ರಕೃತಸ್ಯ ಮಹತೋ ಭೂತಸ್ಯ ನಿಃಶ್ವಸಿತಮ್ ॥ (ಬೃ. ಭಾ.) (ಈ ದೊಡ್ಡ ಭೂತದ) ಪ್ರಕೃತನಾಗಿರುವ ಪರಮಾತ್ಮನಿಂದ ಪ್ರಯತ್ನವಿಲ್ಲದೆ ಸಹಜವಾಗಿ (ನಿರಾಯಾಸ ವಾಗಿ) ಹೊರಹೊಮ್ಮಿರುವ ನಿಃಶ್ವಾಸದಂತೆ (ಕೆಳಉಸಿರಿನಂತೆ) ಇದೆ. ಹೀಗೆ, ಸರ್ವವೂ ಪರಮಾತ್ಮನಿಂದಲೇ ಉತ್ಪನ್ನವಾಗಿವೆ-ಎಂಬ ಆತ್ಮಜತ್ವಪ್ರಕ್ರಿಯೆ ಯಿಂದ, ಆತ್ಮನಿಗೆ ಜಗತ್‌ಕಾರಣತ್ವವನ್ನು ಹೇಳಿರುವದರಿಂದ ಇದು ಪರ ಮಾತ್ಮನ ವಿಷಯವೇ ಆಗಿದೆ ಎಂಬುದು ಸ್ಪಷ್ಟವಾಗಿದೆ.

ಙ) ಮತ್ತೊಂದೇನೆಂದರೆ, ಕೇವಲ ಉತ್ಪತ್ತಿ ಮತ್ತು ಸ್ಥಿತಿಕಾಲಗಳಲ್ಲಿ ಮಾತ್ರ ಪ್ರಜ್ಞಾನಕ್ಕಿಂತ (ಬರಿಯ ಅರಿವಿಗಿಂತ) ಬೇರೆಯಾಗಿಲ್ಲವಾದ್ದರಿಂದ ಜಗತ್ತು ಬ್ರಹ್ಮಾತ್ಮವಾಗಿದೆ-ಎಂದಲ್ಲ. "ಪ್ರಲಯಕಾಲೇ ಚ ಜಲಬುದ್ಬುದಫೇನಾ ದೀನಾಮಿವ" (ಬೃ. ಭಾ. ೨-೪-೧೧) (ನೀರಿನಗುಳ್ಳೆ, ನೊರೆ, ತೆರೆ-ಮುಂತಾ ದವುಗಳು ನೀರನ್ನು ಬಿಟ್ಟು ಹೇಗೆ ಬೇರೆಯಿರುವದಿಲ್ಲವೋ, ಮತ್ತು ನೀರಿನ ಕಾರ್ಯವಾದ ಆ ನಾಮರೂಪಕರ್ಮಗಳು ನೀರಿನಲ್ಲಿಯೇ ತೋರಿ ನೀರಿನಲ್ಲಿಯೇ ಅಡಗುವದರಿಂದ ಹೇಗೆ ಎಲ್ಲವೂ ನೀರೇ ಆಗಿವೆಯೋ ಹಾಗೆ) ಪ್ರಜ್ಞಾನದ ಕಾರ್ಯವಾದ ನಾಮರೂಪಾತ್ಮಕ ಜಗತ್ತು ಪ್ರಲಯಕಾಲದಲ್ಲಿಯೂ ಆ ಪ್ರಜ್ಞಾನ ಘನವನ್ನು ಬಿಟ್ಟು ಬೇರೆಯಾಗಿರುವದಿಲ್ಲ-ಎಂದು ಹೇಳಿರುವದರಿಂದ ಈ ವಿಷಯವು ಪ್ರಜ್ಞಾನಘನವೂ ಏಕರಸವೂ ಆದ ಪರಮಾತ್ಮನ ವಿಚಾರವೇ ಎಂಬುದು ನಿರ್ವಿ ವಾದವಾಗಿದೆ.

ಇದನ್ನು ತಿಳಿಸುವದಕ್ಕಾಗಿಯೇ ಸಮುದ್ರದ ಇನ್ನೊಂದು ದೃಷ್ಟಾಂತವೂ ಬಂದಿದೆ. ಸಮುದ್ರದಲ್ಲಿ ನೀರಿನ ಸಾಮಾನ್ಯರೂಪವಿದೆ ; ಆದರೆ, ಗಂಗಾ, ಯಮುನಾ, ಬ್ರಹ್ಮಪುತ್ರಾ ಮೊದಲಾದ ನದೀನದಗಳಲ್ಲಿಯೂ ಕೆರೆ, ಬಾವಿ, ಸರೋವರ ಮೊದಲಾದವುಗಳಲ್ಲಿಯೂ ನೀರಿನ ವಿಶೇಷರೂಪಗಳಿವೆ. ನದೀನದ

ವಾಪೀಕೂಪತಟಾಕಾದಿಗಳು ಸಮುದ್ರವನ್ನು ಸೇರಿದಾಗ ಅವು ತಮ್ಮ ವಿಶೇಷ ರೂಪಗಳನ್ನು ಕಳೆದುಕೊಂಡು, ಸಮುದ್ರಜಲದ ಸಾಮಾನ್ಯರೂಪವನ್ನು ಪಡೆಯುತ್ತವೆ. ಜಗತ್ತಿನಲ್ಲಿ ನದೀನದಾದಿ ಸಕಲಜಲಾಶಯಗಳಿಗೂ ಸಮುದ್ರಜಲವೇ ಮೂಲವೂ ಮುಕ್ತಿಯ ಲಯಸ್ಥಾನವೂ ಆಗಿದೆ. ಆದ್ದರಿಂದ "ಸರ್ವಾಸಾಂ ನದೀವಾಪೀತಡಾಗಾದಿಗತಾನಾಮ್ ಅಪಾಂ ಸಮುದ್ರಃ-ಏಕಾಯನಮ್ -ಏಕಪ್ರಲಯಃ" (ಬೃ. ಭಾ. ೨-೪-೧೧) ಸಮುದ್ರವೇ ಸಕಲಜಲವಿಶೇಷಗಳಿಗೂ ಏಕಾಯನವೆನಿಸಿದೆ.

"ತಥೈವ ಏಕಾಯನಪ್ರಕ್ರಿಯಾಯಾಮಪಿ (ಬೃ. ೨-೪-೧೧, ೪-೫-೧೨) ಸವಿಷಯಸ್ಯ ಸೇನ್ದ್ರಿಯಸ್ಯ ಸಾನ್ತಃಕರಣಸ್ಯ ಪ್ರಪಞ್ಚಸ್ಯೈಕಾಯನಮ್ ಅನನ್ತರಮ್ ಅಬಾಹ್ಯಂ ಕೃತ್ಸ್ನಂ ಪ್ರಜ್ಞಾನಘನಂ ವ್ಯಾಚಕ್ಷಾಣಃ ಪರಮಾತ್ಮಾನಮೇನಂ ಗಮಯತಿ । ತಸ್ಮಾತ್ ಪರಮಾತ್ಮನ ಏವಾಯಂ ದರ್ಶನಾದ್ಯುಪದೇಶಃ ಇತಿ ಗಮ್ಯತೇ" ॥ (ಸೂ. ಭಾ. ೧-೪-೧೯)

"ಇದರಂತೆಯೇ ಏಕಾಯನಪ್ರಕ್ರಿಯೆಯಲ್ಲಿಯೂ ವಿಷಯಗಳಿಂದಲೂ ಇಂದ್ರಿಯಗಳಿಂದಲೂ ಅಂತಃಕರಣಗಳಿಂದಲೂ ಕೂಡಿದ ಆಧಿಭೌತಿಕ, ಆಧ್ಯಾತ್ಮಿಕ, ಆಧಿದೈವಿಕವಾದ ಪ್ರಪಂಚಕ್ಕೆ ಒಂದೇ ಅಯನ (ಲಯಸ್ಥಾನ) ವಾಗಿರುವ ತತ್ತ್ವವು ಒಳಗಿಲ್ಲದ್ದೂ ಹೊರಗಿಲ್ಲದ್ದೂ ಪೂರ್ಣವೂ ಪ್ರಜ್ಞಾನಘನವೂ ಆಗಿದೆ-ಎಂದು ಹೇಳಿರುವದರಿಂದ ಇವನು ಪರಮಾತ್ಮನೇ ಎಂದು ಯಾಜ್ಞವಲ್ಕ್ಯರು ತಿಳಿಸಿರುತ್ತಾರೆ. ಆದ್ದರಿಂದ ಈ (ದ್ರಷ್ಟವ್ಯಃ) ದರ್ಶನವೇ ಮುಂತಾದುದನ್ನು ಹೇಳಿರುವದು ಪರಮಾತ್ಮನ ವಿಷಯವೇ ಎಂದು ನಿಶ್ಚಯವಾಗುತ್ತದೆ.

ಮಯ್ಯೇವ ಸಕಲಂ ಜಾತಂ, ಮಯಿ ಸರ್ವಂ ಪ್ರತಿಷ್ಠಿತಮ್ ।
ಮಯಿ ಸರ್ವಂ ಲಯಂ ಯಾತಿ ತದ್ಬ್ರಹ್ಮಾದ್ವಯಮಸ್ಮ್ಯಹಮ್ ॥

ಕಾಲ-ದೇಶ-ಕಾರ್ಯಕಾರಣಭಾವಗಳಿಂದಲೂ ಅನೇಕ ಜೀವರುಗಳಿಂದಲೂ ನಿಶ್ಚಿತವಾದ ಕ್ರಿಯಾಕಾರಕಫಲಗಳಿಂದಲೂ ಕೂಡಿದ ಆಧಿಭೌತಿಕ ಹಾಗೂ ಆಧಿದೈವಿಕ ಜಗತ್ತಿನ ದೃಶ್ಯರಾಶಿಯೂ ದೇಹೇಂದ್ರಿಯಗಳು, ಮನ-ಬುದ್ಧಿ-ಚಿತ್ತ-ಅಹಂಕಾರಗಳು-ಎಂಬ ಆಧ್ಯಾತ್ಮಿಕಜಗತ್ತಿನ ದೃಶ್ಯವೂ ನಮ್ಮ ಎಚ್ಚರ-ಕನಸುಗಳಲ್ಲಿ ತೋರಿ, ನಿದ್ರೆಯಲ್ಲಿ ಅಡಗುತ್ತಿವೆ. ಈ ಎಚ್ಚರ-ಕನಸು-ನಿದ್ರೆಗಳಾದರೋ ಚಿನ್ಮಾತ್ರವಾದ ನಮ್ಮ ಸ್ವರೂಪದಲ್ಲಿ ತೋರುವಾಗ ಚಿದ್ವ್ಯಾಪ್ತವಾಗಿಯೇ ತೋರಿ, ಹಾರುತ್ತಿವೆ. ಎಚ್ಚರ-ಕನಸು-ನಿದ್ರೆಗಳು ಅನುಭವದಲ್ಲಿ ಒಂದಿದ್ದಾಗ ಇನ್ನೊಂದು ಇರುವದಿಲ್ಲವಾದ್ದರಿಂದಲೂ ಪ್ರಜ್ಞಾನಘನವಾದ ನಮ್ಮ ಸ್ವರೂಪವು ಮಾತ್ರ ನಿತ್ಯಸಂತತವಾಗಿ ಇರುವದರಿಂದಲೂ ಪ್ರಜ್ಞಾನಸ್ವರೂಪವಾದ ಆತ್ಮವು

ಒಂದೇ ಸತ್ಯ ; ಎಚ್ಚರ, ಕನಸು ಮೊದಲಾದ ಅವಸ್ಥೆಗಳು ಕೇವಲ ಮಿಥ್ಯೆ ; ಅವಿದ್ಯಾಕಲ್ಪಿತವಾದ ಮಾಯೆ, ಬರಿ ಹುಸಿತೋರಿಕೆ. ಆತ್ಮ ಒಂದೇ ಸತ್ಯವೆಂಬ ನಿಶ್ಚಯಜ್ಞಾನವಿಲ್ಲದಿರುವಾಗ (ಅಜ್ಞಾನದಿಂದ) ನಸುಬೆಳಕಿನಲ್ಲಿ ಹಗ್ಗವೇ ಹಾವು, ಹೂವಿನಮಾಲೆ ಮೊದಲಾದ ಬೇರೆ ರೂಪಗಳಿಂದ ತೋರಿಕೊಳ್ಳುವಂತೆ, ಆತ್ಮನ ಚಿನ್ಮಾತ್ರವೇ ಎಚ್ಚರ ಮೊದಲಾದ ಅವಸ್ಥೆಗಳಾಗಿ ತೋರಿಕೊಳ್ಳುತ್ತಿದೆ. ದೃಢವಾದ ಈ ವಿವೇಕವಿಜ್ಞಾನದಿಂದ ಅನಾತ್ಮವಾದ ಸಕಲದೃಶ್ಯವೂ ಬಾಧಿತವಾಗುವದ ರಿಂದ ಈಗಲೇ ಇಲ್ಲಿಯೇ ಅದ್ವಿತೀಯನಾದ ಚಿದಾನಂದಾತ್ಮನ ಅನುಭವವುಂಟಾ ಗುತ್ತದೆ. ಇಂಥಾ ಅಮೃತಾನುಭವಕ್ಕೆ ವೇದಾಂತವಾಕ್ಯಗಳ ಶ್ರವಣ, ಮನನ, ನಿದಿಧ್ಯಾಸನಗಳೇ ನೇರಾದ ಸಾಧನೆ.

5- ಸಿದ್ಧಾಂತ : ಪೂರ್ವಪಕ್ಷದ ವಾದದಲ್ಲಿಯ ಮುಖ್ಯವಾದ ಮೂರು ಆಕ್ಷೇಪಗಳಿಗೆ ಸಿದ್ಧಾಂತಿಯ ಸಮಾಧಾನವೇನೆಂಬುದನ್ನು ಈಗ ಕಂಡುಕೊಳ್ಳ ಬೇಕು :

ಅ) ಪ್ರಿಯಸಂಸೂಚಿತನಾದ ವಿಜ್ಞಾನಾತ್ಮನನ್ನು ಈ ಪ್ರಕರಣದ ಉಪ ಕ್ರಮದಲ್ಲಿ ಹೇಳಿರುವದರಿಂದ ವಿಜ್ಞಾನಾತ್ಮನನ್ನೇ ಶ್ರವಣಾದಿಗಳಿಂದ ದರ್ಶನ ಮಾಡಬೇಕು–ಎಂದು ಮುಂತಾಗಿ ಈ ಉಪದೇಶವು ಹೇಳುತ್ತದೆ. ಹೀಗಲ್ಲದೆ, ಇದು ಪರಮಾತ್ಮನ ಪ್ರಕರಣವೇ ಆಗಿದ್ದರೆ, ಇದರಲ್ಲಿ ಪತಿಪತ್ನೀಪುತ್ರಾದಿಗಳ ಸಂಸಾರಪ್ರೇಮದ ವಿಚಾರವೇ ಬರುತ್ತಿರಲಿಲ್ಲ. ಇದು ಪೂರ್ವಪಕ್ಷಿಯ ಆಕ್ಷೇಪ.

ಆ) "ನ ಪ್ರೇತ್ಯ ಸಂಜ್ಞಾಸ್ತಿ" "(ಈ ದೇಹವನ್ನು ಬಿಟ್ಟು) ಹೊರಟು ಹೋದ ಬಳಿಕ ಅರಿವೇ ಇರುವದಿಲ್ಲ." ಇದು ಪರಮಾತ್ಮ ಪ್ರಕರಣದಲ್ಲಿ ಹೇಗೆ ಹೊಂದುತ್ತದೆ ?

ಇ) "ವಿಜ್ಞಾತಾರಮರೇ ಕೇನ ವಿಜಾನೀಯಾತ್" "ವಿಜ್ಞಾತೃವನ್ನು ಏತರಿಂದ ಅರಿತುಕೊಂಡಾನು ?" (ಬೃ. ೨–೪–೧೪) ಕರ್ತೃವಾಚಕವಾದ ತೃಚ್ ಪ್ರತ್ಯಯದಿಂದ ತಿಳಿಸಲ್ಪಟ್ಟಿರುವ ಈ ವಿಜ್ಞಾತೃವು ವಿಜ್ಞಾನಾತ್ಮನಾದ ಜೀವನೇ ಹೊರತು ಅಕರ್ತೃವಾದ ಪರಮಾತ್ಮನು ಹೇಗಾದಾನು ?

ಈ ಪ್ರಕರಣದ ಉಪಕ್ರಮವು ಪ್ರಿಯಸಂಸೂಚನೆಯಿಂದಲೂ ಉಪ ಸಂಹಾರವೂ ವಿಜ್ಞಾತೃವಿನಿಂದಲೂ ಮಧ್ಯದಲ್ಲಿ 'ಈ ಭೂತಗಳೊಳಗಿಂದ ಮೇಲ ಕ್ಕೆದ್ದು, ಅವುಗಳನ್ನೇ ಅನುಸರಿಸಿ ಲಯವಾಗುತ್ತಾನೆ.' 'ಹೊರಟು ಹೋದ ಮೇಲೆ–ವಿಶೇಷವಿಜ್ಞಾನ–ಅರಿವು ಇರುವದಿಲ್ಲ' ಎಂದು ಮುಂತಾಗಿ ಹೇಳಿರುವದ ರಿಂದಲೂ ಇಲ್ಲಿ ಪರಮಾತ್ಮನಿಂದ ಭಿನ್ನವಾದ ವಿಜ್ಞಾನಾತ್ಮನನ್ನು ಹೇಳಿದೆಯೇ ಹೊರತು ಪರಮಾತ್ಮನನ್ನು ಹೇಳಿಲ್ಲ. ಹೀಗೆಂಬುದೇ ಪೂರ್ವಪಕ್ಷವಾದದ

ಸಾರವಾಗಿದೆ. ಇದಕ್ಕೆ ಮುಂದಿನ ೨೦, ೨೧, ೨೨ ಈ ಮೂರು ಸೂತ್ರಗಳಲ್ಲಿ ವಿವರಿಸಿರುವ ಆಶ್ಮರಥ್ಯ, ಔಡುಲೋಮಿ ಮತ್ತು ಕಾಶಕೃತ್ಸ್ನ ಎಂಬ ಮೂವರು ಆಚಾರ್ಯರ ಬೇರೆಬೇರೆಯ ದೃಷ್ಟಿಯ ವಾದಗಳಿಂದ ಸಿದ್ಧಾಂತಿಯ ಸಮಾಧಾನದ ಮಂಡನವಿದೆ.

ಇದನ್ನು ಅರ್ಥಮಾಡಿಕೊಳ್ಳುವದಕ್ಕಾಗಿ ನಾವು ಮೊದಲು ವೇದಾಂತ ವಿಜ್ಞಾನದ ನಿಶ್ಚಿತಾರ್ಥವಾದ ಸಿದ್ಧಾಂತವೇನೆಂಬುದನ್ನೂ ಇದರ ಫಲವಾದ ಅಮೃತತ್ವವನ್ನೇ ಬಯಸಿ ಪ್ರಶ್ನೆಮಾಡಿದ ಮೈತ್ರೇಯಿಗೆ ಗಂಭೀರವಾದ ಸದುತ್ತರ ವನ್ನು ಹೇಳಹೊರಟ ಯಾಜ್ಞವಲ್ಕ್ಯರ ತತ್ತ್ವೋಪದೇಶದ ಪ್ರಾರಂಭದ ಪ್ರತಿಜ್ಞೆ ಏನೆಂಬುದನ್ನೂ ಮೇಲಿನ ಆಶ್ಮರಥ್ಯ ಮೊದಲಾದ ಆಚಾರ್ಯತ್ರಯರ ಮೂರು ದೃಷ್ಟಿಯಿಂದಲೂ ಆ ಪ್ರತಿಜ್ಞೆಯು ಹೇಗೆ ಸಫಲವಾಗಿದೆಯೆಂಬುದನ್ನೂ ವಿಚಾರದಿಂದ ಕಂಡುಕೊಳ್ಳಬೇಕು.

ಕ) ವೇದಾಂತವಿಜ್ಞಾನದ ಸುನಿಶ್ಚಿತಾರ್ಥ (ಸಿದ್ಧಾಂತ) :

"ಶಾಸ್ತ್ರಯೋನಿತ್ವಾತ್ ॥ (ಸೂ. ಭಾ. ೧-೧-೩) ಸರ್ವಜ್ಞವೂ ಸರ್ವ ಶಕ್ತವೂ ಆದ ಬ್ರಹ್ಮಕ್ಕೆ ವೇದಾಂತಶಾಸ್ತ್ರವೇ ಪ್ರಮಾಣವು. ಸರ್ವಜಗತ್ತಿಗೂ (ವಿಶೇಷವಾಗಿ) ಶಾಸ್ತ್ರಕ್ಕೂ ಕಾರಣವಾದ್ದರಿಂದ ಬ್ರಹ್ಮವು ಸರ್ವಜ್ಞವು ; ಆದ್ದ ರಿಂದಲೇ ಸರ್ವಶಕ್ತವೂ ಆಗಿದೆ.

"ತತ್ತ್ವಮಸಿ" (ಛಾಂ. ೬-೮-೭) ಇತಿ ಬ್ರಹ್ಮಾತ್ಮಭಾವಸ್ಯ ಶಾಸ್ತ್ರಮನ್ತರೇಣಾನವಗಮ್ಯಮಾನತ್ವಾತ್ । ....ಆತ್ಮವಿಜ್ಞಾನಸ್ಯ ಫಲಪರ್ಯನ್ತತ್ವಾತ್ ನ ತದ್ವಿಷಯಸ್ಯ ಶಾಸ್ತ್ರಸ್ಯ ಪ್ರಾಮಾಣ್ಯಂ ಶಕ್ಯಂ ಪ್ರತ್ಯಾಖ್ಯಾತುಮ್ । ನ ಚ ಅನುಮಾನಗಮ್ಯಂ ಶಾಸ್ತ್ರ-ಪ್ರಾಮಾಣ್ಯಮ್ ॥ (ಸೂ. ಭಾ. ೧-೧-೪)

"ಅದೇ (ಬ್ರಹ್ಮವೇ) ನೀನಾಗಿರುವೆ" ಎಂಬ ಶ್ರುತಿಯಲ್ಲಿ ಹೇಳಿ ರುವ ಬ್ರಹ್ಮಾತ್ಮಭಾವವನ್ನು ಶಾಸ್ತ್ರವಿಲ್ಲದೆ ತಿಳಿಯುವದಕ್ಕೆ ಆಗುವದಿಲ್ಲ. ಆತ್ಮಜ್ಞಾನವು ಫಲದಲ್ಲಿ (ಅನುಭವದಲ್ಲಿ) ಕೊನೆಗಾಣುತ್ತಿರುವದರಿಂದ, ಅದರ ವಿಷಯವಾದ ಶಾಸ್ತ್ರವು ಪ್ರಮಾಣವೆಂಬುದನ್ನು ನಿರಾಕರಿಸು ವದಕ್ಕೆ ಆಗುವದಿಲ್ಲ. ಇದಲ್ಲದೆ, ಶಾಸ್ತ್ರದ ಪ್ರಾಮಾಣ್ಯವನ್ನು (ಶಾಸ್ತ್ರವು ಏಕೆ ಪ್ರಮಾಣವೆಂದರೆ-ಎಂದು) ಅನುಮಾನದಿಂದ ಗೊತ್ತುಪಡಿಸಬೇಕಾದದ್ದಲ್ಲ. (ಶಾಸ್ತ್ರವು ಸ್ವತಃ ಪ್ರಮಾಣವಾಗಿದೆ ; ಇದರ ಪ್ರಾಮಾಣ್ಯವನ್ನು ಮತ್ತೊಂದ ರಿಂದ ತೋರಿಸಿಕೊಡಬೇಕಾದದ್ದಿಲ್ಲ.)

....ನ ಹಿ ಏಕತ್ವವಿಜ್ಞಾನೇನ ಉನ್ಮಥಿತಸ್ಯ ದ್ವೈತವಿಜ್ಞಾನಸ್ಯ ಪುನಃ ಸಂಭವೋಽಸ್ತಿ । (ಸೂ. ಭಾ. ೧-೧-೪)

''ಏಕತ್ವವಿಜ್ಞಾನದಿಂದ ನಾಶವಾದ ದ್ವೈತಜ್ಞಾನವು ಮತ್ತೆ ಹುಟ್ಟುವ ಸಂಭವವೇ ಇಲ್ಲ.''

ವಾಕ್ಯಾರ್ಥವಿಚಾರಣಾಧ್ಯವಸಾನನಿರ್ವೃತ್ತಾ ಹಿ ಬ್ರಹ್ಮಾವಗತಿಃ ನ ಅನುಮಾನಾದಿಪ್ರಮಾಣಾನ್ತರನಿರ್ವೃತ್ತಾ ॥ (ಸೂ. ಭಾ. ೧-೧-೨)

ಬ್ರಹ್ಮದ ಅರಿವೆಂಬುದು (ಬ್ರಹ್ಮಾನುಭವವು) ವೇದಾಂತವಾಕ್ಯಗಳ ಅರ್ಥವನ್ನು ವಿಚಾರಮಾಡಿ ನಿಶ್ಚಯಿಸಿಕೊಳ್ಳುವದರಿಂದ ಆಗುವದೇ ಹೊರತು ಅನುಮಾನವೇ ಮುಂತಾದ ಬೇರೆಯ ಪ್ರಮಾಣಗಳಿಂದ ಆಗತಕ್ಕದ್ದಲ್ಲ.

ಆತ್ಮನಃ ಸ್ವತಃಸಿದ್ಧತ್ವಾತ್ । ಸಿದ್ಧೇ ಹಿ ಆತ್ಮನಿ ಪ್ರಮಾತರಿ ಪ್ರಮಿತ್ಸೋಃ ಪ್ರಮಾಣಾನ್ವೇಷಣಾ ಭವತಿ । ಶಾಸ್ತ್ರಂ ತು ಅನ್ತ್ಯಂ ಪ್ರಮಾಣಮ್ ಅತದ್ಧರ್ಮ-ಅಧ್ಯಾರೋಪಣಮಾತ್ರನಿವರ್ತಕತ್ವೇನ ಪ್ರಾಮಾಣ್ಯಮ್ ಆತ್ಮನಃ ಪ್ರತಿಪದ್ಯತೇ, ನ ತು ಅಜ್ಞಾತಾರ್ಥ ಜ್ಞಾಪಕತ್ವೇನ। ತಥಾ ಚ ಶ್ರುತಿಃ-"ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ"

(ಬೃ. ೩-೪-೧) (ಗೀ. ಭಾ. ೨-೧೮)

ಆತ್ಮನು ಸ್ವತಃಸಿದ್ಧನಾಗಿರುತ್ತಾನೆ. ಆತ್ಮನೆಂಬ ಪ್ರಮಾತೃವು (ಅರಿಯಬೇಕೆನ್ನುವವನು) ಸಿದ್ಧವಾಗಿದ್ದರೇ ಅಲ್ಲವೆ, ಅರಿತುಕೊಳ್ಳಬೇಕೆಂಬಾತನಿಗೆ ಪ್ರಮಾಣವನ್ನು ಹುಡುಕುವದೆಂಬುದು ಸರಿಯಾಗುತ್ತದೆ. 'ನಾನು ಇಂಥವನು' ಎಂದು ಮೊದಲು ತನ್ನನ್ನು ಪ್ರಮಾಣಗಳಿಂದ ಗೊತ್ತುಮಾಡಿಕೊಂಡು ಆಮೇಲೆ ಪ್ರಮೇಯವನ್ನು ಗೊತ್ತುಪಡಿಸುವದಕ್ಕೆಂದು ಯಾರೂ ಹೊರಡುವದಿಲ್ಲ. ಏಕೆಂದರೆ ಆತ್ಮನೆಂಬುವನು ಯಾರಿಗೂ ಅಪ್ರಸಿದ್ಧನಾಗಿರುವದಿಲ್ಲ. ಶಾಸ್ತ್ರವಾದರೋ ಅಂತ್ಯಪ್ರಮಾಣವು ; ಅದು ಆತ್ಮನದಲ್ಲದ ಧರ್ಮಗಳ ಆರೋಪಣೆಯನ್ನು (ಕಲ್ಪನೆಯನ್ನು) ತೆಗೆದುಹಾಕುವದರಿಂದ ಮಾತ್ರ ಆತ್ಮನ ವಿಷಯದಲ್ಲಿ ಪ್ರಮಾಣತ್ವವನ್ನು ಪಡೆಯುವದೇ ಹೊರತು, ತಿಳಿಯದ ವಿಷಯವನ್ನು ತಿಳಿಸಿಕೊಡುವದರಿಂದ ಪ್ರಮಾಣವೆನಿಸುವದಿಲ್ಲ. ಆದ್ದರಿಂದಲೇ ಶ್ರುತಿಯು "ಯಾವದು ನೇರಾಗಿಯೂ ಅಪರೋಕ್ಷವಾದ ಬ್ರಹ್ಮವಾಗಿರುವದೋ ಯಾವದು ಎಲ್ಲಕ್ಕೂ ಒಳಗಿರುವ ಆತ್ಮನಾಗಿರುವದೋ ಅದನ್ನು ಹೇಳು'' ಎಂದು ಹೇಳುತ್ತದೆ.

ಆತ್ಮನಲ್ಲಿ ಅವಿದ್ಯೆಯಿಂದ ಆರೋಪಿತವಾಗಿರುವ ಪ್ರಮಾತೃತ್ವವನ್ನು ಶಾಸ್ತ್ರವು ಅಲ್ಲಗಳೆಯುವದರಿಂದಲೇ ಅದು ಪ್ರಮಾಣವೆನಿಸುತ್ತದೆ. ಪ್ರಮಾಣ ವ್ಯವಹಾರವು ಅವಿದ್ಯಾಕಲ್ಪಿತವೆಂದು ತಿಳಿಸಿಕೊಡುವದರಿಂದ ಶಾಸ್ತ್ರವು ಅಂತ್ಯ ಪ್ರಮಾಣವೆನಿಸಿದೆ. ಪ್ರಮಾಣವ್ಯವಹಾರವೆಲ್ಲವೂ ಕನಸಿನಲ್ಲಿಯ ಪ್ರಮಾಣ

ವ್ಯವಹಾರದಂತೆ ಆತ್ಮಜ್ಞಾನವಾಗುವವರೆಗೆ ಮಾತ್ರ ಪ್ರಮಾಣವಾಗಿದೆ. (ಸೂ. ಭಾ. ೨-೧-೧೪ ; ೪-೩-೧೪) (ಗೀ. ಭಾ. ೨-೬೯)

ಯೋಽಸೌ ಉಪನಿಷತ್ಸ್ವೇವ ಅಧಿಗತಃ ಪುರುಷಃ ಅಸಂಸಾರೀ ಬ್ರಹ್ಮ.... (ಸೂ. ಭಾ. ೧-೧-೪)

ಉಪನಿಷತ್ತುಗಳಿಂದ ಮಾತ್ರವೇ ತಿಳಿಯುಬರುವ ಈ ಪುರುಷನು (ಆತ್ಮನು) ಸಂಸಾರಿಯಲ್ಲದ ಬ್ರಹ್ಮವು.

ಖ) ಹೀಗೆ, ಆತ್ಮಜ್ಞಾನಕ್ಕೆ ಏಕೈಕ ಪ್ರಮಾಣವಾದ ಶಾಸ್ತ್ರವು ತಿಳಿಸುವ ಬ್ರಹ್ಮಾತ್ಮನ ಸ್ವರೂಪವೇನೆಂದರೆ ;

ಅತಶ್ಚ ವಿಜ್ಞಾನಾತ್ಮಪರಮಾತ್ಮನೋಃ ಅವಿದ್ಯಾಪ್ರತ್ಯುಪಸ್ಥಾಪಿತನಾಮರೂಪರಚಿತದೇಹಾದ್ಯುಪಾಧಿನಿಮಿತ್ತೋ ಭೇದಃ ನ ಪಾರಮಾರ್ಥಿಕಃ ಇತ್ಯೇಷೋಽರ್ಥಃ ಸರ್ವೈರ್ವೇದಾನ್ತವಾದಿಭಿಃ ಅಭ್ಯುಪಗನ್ತವ್ಯಃ । "ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್" (ಛಾಂ. ೬-೨-೧) "ಆತ್ಮೈವೇದಂ ಸರ್ವಮ್" "(ಛಾಂ. ೭-೨೫-೨) "ಬ್ರಹ್ಮೈವೇದಂ ಸರ್ವಮ್" (?) "ನಾನ್ಯೋಽತೋಽಸ್ತಿ ದ್ರಷ್ಟಾ" (ಬೃ. ೩-೭-೨೩) ಇತ್ಯೇವಂರೂಪಾಭ್ಯಃ ಶ್ರುತಿಭ್ಯಃ । ಸ್ಮೃತಿಭ್ಯಶ್ಚ "ವಾಸುದೇವಃ ಸರ್ವಮಿತಿ" (ಗೀ. ೭-೧೯) "ಸಮಂ ಸರ್ವೇಷು ಭೂತೇಷು ತಿಷ್ಠನ್ತಂ ಪರಮೇಶ್ವರಮ್" (ಗೀ. ೧೩-೨೭) 'ಯೋಽನ್ಯಾಂ ದೇವತಾಮುಪಾಸ್ತೇ ಅನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುಃ' (ಬೃ. ೧-೪-೧೦) "ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ ಬ್ರಹ್ಮ" (ಬೃ. ೪-೪-೨೫) ಇತಿ ಚ ಆತ್ಮನಿ ಸರ್ವವಿಕ್ರಿಯಾಪ್ರತಿಷೇಧಾತ್ । ಅನ್ಯಥಾ ಚ ಮುಮುಕ್ಷೂಣಾಂ ನಿರಪವಾದವಿಜ್ಞಾನ-ಅನುಪಪತ್ತೇಃ । ಸುನಿಶ್ಚಿತಾರ್ಥತ್ವ ಅನುಪಪತ್ತೇಶ್ಚ । ....। "ವೇದಾನ್ತವಿಜ್ಞಾನಸುನಿಶ್ಚಿತಾರ್ಥಾಃ" (ಮುಂ. ೩-೨-೬) ಇತಿ ಚ ಶ್ರುತೇಃ । "ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ" (ಈ. ೭) ಇತಿ ಚ । ಸ್ಥಿತೇ ಚ ಕ್ಷೇತ್ರಜ್ಞಪರಮಾತ್ಮೈಕತ್ವವಿಷಯೇ ಸಮ್ಯಗ್ದರ್ಶನೇ ಕ್ಷೇತ್ರಜ್ಞಃ ಪರಮಾತ್ಮಾ ಇತಿ ನಾಮಮಾತ್ರಭೇದಾತ್ । ಯೇ ತು ನಿರ್ಬನ್ಧಂ ಕುರ್ವನ್ತಿ ತೇ ವೇದಾನ್ತಾರ್ಥಂ ಬಾಧಮಾನಾಃ ಶ್ರೇಯೋದ್ವಾರಂ ಸಮ್ಯಗ್ದರ್ಶನಮೇವ ಬಾಧನ್ತೇ । ಕೃತಕಮ್ ಅನಿತ್ಯಂ ಚ ಮೋಕ್ಷಂ ಕಲ್ಪಯನ್ತಿ ॥ (ಸೂ. ಭಾ. ೧-೪-೨೨)

ಆದ್ದರಿಂದಲೂ ವಿಜ್ಞಾನಾತ್ಮಪರಮಾತ್ಮರುಗಳಿಗೆ ಕಾಣುವ ಭೇದವು ಅವಿದ್ಯೆಯು ತಂದೊಡ್ಡಿದ ನಾಮರೂಪಗಳಿಂದಾಗಿರುವ ದೇಹಾದ್ಯುಪಾಧಿಗಳ ನಿಮಿತ್ತದಿಂದಾಗಿರುವದೇ ಹೊರತು ಪಾರಮಾರ್ಥಿಕವಲ್ಲ-ಎಂಬೀ ವಿಷಯವನ್ನು ಎಲ್ಲಾ ವೇದಾಂತವಾದಿಗಳೂ ಒಪ್ಪಬೇಕು. "ಸೋಮ್ಯನೆ, ಮೊದಲು ತನಗೆರಡನೆಯದಿಲ್ಲದ ಸತ್ತು ಒಂದೇ ಇತ್ತು" "ಇದೆಲ್ಲವೂ ಆತ್ಮನೇ" "ಇದೆಲ್ಲವೂ ಬ್ರಹ್ಮವೇ" (?), "ಇದೆಲ್ಲವೂ ಈ ಆತ್ಮನೆಂಬುವನೇ" "ಇವನಿಗಿಂತ ಬೇರೆ ದ್ರಷ್ಟೃವಿಲ್ಲ" –ಎಂಬೀ ರೂಪದ ಶ್ರುತಿಗಳಿಂದ ಹೀಗೆಂದು ಸಿದ್ಧವಾಗುತ್ತದೆ. "ವಾಸುದೇವನೇ ಎಲ್ಲವೂ"–ಎಂದು, ಮತ್ತು "ಎಲ್ಲಾ ಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನನ್ನು ನಾನೆಂದು ತಿಳಿದುಕೊ" "ಸರ್ವಭೂತಗಳಲ್ಲಿಯೂ ಸಮನಾಗಿ ಇದ್ದುಕೊಂಡಿರುವ ಪರಮೇಶ್ವರನನ್ನು" ಎಂಬೀ ರೂಪದ ಸ್ಮೃತಿಗಳಿಂದಲೂ ಹೀಗೆಂದು ಸಿದ್ಧವಾಗುತ್ತದೆ. "ಈ ದೇವತೆ ಬೇರೆ, ನಾನು ಬೇರೆಯಾಗಿರುವೆನು ಎಂದು ಉಪಾಸನೆ ಮಾಡುವನಲ್ಲ, ಅವನು ಪಶುವಿನಂತೆ ತತ್ತ್ವವನ್ನು ಅರಿಯನು." "ಯಾವನು ಇಲ್ಲಿ ನಾನಾ ಇರುವಂತೆ ಕಾಣುವನೋ ಅವನು ಸಾವಿನ ಮೇಲೆ ಸಾವನ್ನು ಪಡೆಯುವನು." ಎಂಬೀ ಜಾತಿಯ ಭೇದದರ್ಶನ ನಿಂದೆಯಿಂದಲೂ ಹೀಗೆಂದು–ಭೇದವು ಪಾರಮಾರ್ಥಿಕವಲ್ಲವೆಂದು–ಸಿದ್ಧವಾಗುತ್ತದೆ. ಆ ಈ ಆತ್ಮನೇ ದೊಡ್ಡವನು, ಅಜನು, ಅಜರನು, ಅಮರನು, ಅಮೃತನು, ಬ್ರಹ್ಮವು" ಎಂದು ಆತ್ಮನಲ್ಲಿ ಎಲ್ಲಾ ವಿಕಾರಗಳನ್ನು ಅಲ್ಲಗಳೆದಿರುವದರಿಂದಲೂ ವಿಕಾರಗಳು ಅವಿದ್ಯಾಕಲ್ಪಿತದೇಹೇಂದ್ರಿಯಾದಿಗಳ ಅಭಿಮಾನದಿಂದ ತೋರುವವೆಂದು ಸಿದ್ಧವಾಗುತ್ತದೆ. ಹೀಗಲ್ಲದಿದ್ದರೆ ಮುಮುಕ್ಷುಗಳಿಗೆ ಅಬಾಧಿತವಾದ ವಿಜ್ಞಾನವು ಆಗುವಂತಿಲ್ಲ. ವಿಷಯವನ್ನು ಸುನಿಶ್ಚಿತವಾಗಿ ತಿಳಿದುಕೊಳ್ಳುವದು ಆಗುವಂತಿಲ್ಲ. ಆತ್ಮವಿಷಯವಾದ ವಿಜ್ಞಾನವು ಅಬಾಧಿತವಾಗಿಯೂ ಎಲ್ಲಾ ಆಕಾಂಕ್ಷೆಗಳನ್ನೂ ತೊಲಗಿಸುವದಾಗಿಯೂ ಇರಬೇಕೆಂದಲ್ಲವೆ ವೇದಾಂತಿಗಳಿಗೆ ಇಷ್ಟವಾಗಿರುವದು ? (ಎಚ್ಚರಕನಸುಗಳಲ್ಲಿಯ ದೇಹೇಂದ್ರಿಯ ಮನಸ್ಸುಗಳ ವ್ಯಾಪಾರದ ಯಾವ ಆಯಾಸವೂ ಶ್ರಮವೂ ಕ್ಲೇಶವೂ ದುಃಖವೂ ಇಲ್ಲದೆ ಗಾಢನಿದ್ರೆಯಲ್ಲಿ ಸುಖವಾಗಿರುತ್ತೇವೆ. ಇದು ಎಲ್ಲರ ಅನುಭವ. ಆದರೆ ಈ ಸುಖವು ಎಚ್ಚರಕನಸುಗಳಲ್ಲಿಯ ಸುಖದುಃಖಗಳೊಳಗಿನ ಸುಖವಲ್ಲ. ಇದು ಕೇವಲ ಮಾನಸಸುಖವೂ ಅಲ್ಲ. ಏಕೆಂದರೆ, ಸುಷುಪ್ತಿಯಲ್ಲಿ ಮನಸ್ಸೇ ಇಲ್ಲ. ಮನಸ್ಸು ಬಂದೊಡನೆ (ಅಹಂ-ಇದಂ) ನಾನು–ಈ ಜಗತ್ತು ಎನ್ನುವ ಭಾವನೆ ಬಂದೇ ಬರುತ್ತದೆ ; ಇದು ಎಚ್ಚರವಾದರೂ ಆಗಬಹುದು, ಕನಸಾದರೂ ಆಗಬಹುದು. ಎಚ್ಚರ–ಕನಸುಗಳ ಅನುಭವ ಇರುವದರಿಂದ, ಇವಕ್ಕೆ ಸಾಪೇಕ್ಷವಾಗಿ ಈ ಅನುಭವವಲ್ಲದ ಅನುಭವವನ್ನು ನಿದ್ರೆಯೆಂದೂ ತಮಸ್ಸೆಂದೂ ಹೇಳುತ್ತೇವೆಯೇ ಹೊರತು (ಇಲ್ಲವಾದರೆ) ಆ ಅನುಭವವು ನಮ್ಮ ಸ್ವರೂಪವೇ, ಆತ್ಮವೇ ಆಗಿದೆ.

ಬ್ರಹ್ಮ ತು ಅನಪಾಯಿ ಸುಪ್ತಿಸ್ಥಾನಮ್ ಇತ್ಯೇತತ್ ಪ್ರತಿಪಾದಯಾಮಃ । ....ತಸ್ಮಾದಾತ್ಮೈವ ಸುಪ್ತಿಸ್ಥಾನಮ್ ॥
(ಸೂ. ಭಾ. ೩-೨-೭)

ಆ ಸ್ವರೂಪದ ಮರವೆಯೆಂಬ ಅವಿದ್ಯೆಯೇ (ಅವಿದ್ಯಾ ಅಹಂಮತಿಃ) ನಾನು-ಈ ಪ್ರಪಂಚ ಎಂದು ಭಾವಿಸುವ ಮನಸ್ಸಾಗುತ್ತದೆ. ಆದ್ದರಿಂದ ಮನಸ್ಸು ಇರುವವರೆಗೂ ದೇಹೇಂದ್ರಿಯಾದಿಗಳೂ ದೇಶಕಾಲ, ಕಾರಣಕಾರ್ಯಭಾವಾದಿಗಳೂ ಇದ್ದೇ ಇರುತ್ತವೆ. "ಜನನ-ಮರಣ, ಹಸಿವು-ಬಾಯಾರಿಕೆ, ಶೋಕ-ಮೋಹ, ಪುಣ್ಯ-ಪಾಪ, ಸುಖ-ದುಃಖ, ಸ್ವರ್ಗ-ನರಕ ಮೊದಲಾದ ಸಂಸಾರ ಬಂಧದಿಂದ ಬಿಡುಗಡೆಯನ್ನು ಪಡೆಯಬೇಕೆಂದು ಪೇಚಾಡುವ ಮನಸ್ಸಿನ ಹಂಬಲದ ಸಮಾಧಾನಕ್ಕಾಗಿ ಒಂದೊಂದು ಮತಧರ್ಮದ ಒಂದೊಂದು ತತ್ತ್ವಶಾಸ್ತ್ರವು ಒಂದೊಂದು ಬಗೆಯ ಸಾಧನೆಯನ್ನೂ ಮುಕ್ತಿಯೆಂಬ ಒಂದೊಂದು ಬಗೆಯ ಫಲವನ್ನೂ ಹೇಳುತ್ತಿದೆ. ಎಷ್ಟೆಷ್ಟೋ ಬಗೆಯ ಮುಕ್ತಿಗಳನ್ನೂ ಹಲವು ಶಾಸ್ತ್ರಗಳು ಹೇಳುತ್ತಿರುವಾಗ, ಇವುಗಳಲ್ಲಿ ಯಾವದು ಸರಿ, ಯಾವದು ನಿಜ-ಎಂಬ ನಿಶ್ಚಯವು, ತೊಳಲಾಡುವ ಮನಸ್ಸಿಗೆ ಬರುವದೇ ಇಲ್ಲ. ಇದೇ ಅಂತಿಮ ಪರಮಾರ್ಥಸತ್ಯ-ಎಂಬ ನಮ್ಮ ಇಂದಿನ ನಿಶ್ಚಯಜ್ಞಾನವು ಮುಂದೆ ಎಂದಾದರೂ ಯಾರಾದರೂ ಮಂಡಿಸುವ ಹೆಚ್ಚು ಪ್ರಬಲವಾದ ಯುಕ್ತಿ ಅನುಭವಗಳಿಂದ ಬಾಧಿತವಾಗಬಹುದು-ಎಂಬ ಶಂಕೆಯೂ ಆಕಾಂಕ್ಷೆಯೂ ಉಳಿದೇ ಉಳಿಯುತ್ತದೆ. ಆದ್ದರಿಂದ ಈ ಬಗೆಯ ಸಂಶಯಗಳಿಗೂ ಭಯಕ್ಕೂ ಕಾರಣವಾದ ದೇಶಕಾಲಾದಿಗಳನ್ನು ಕಲ್ಪನೆಮಾಡುತ್ತಿರುವ ಮನಸ್ಸೇ ಆತ್ಮನಲ್ಲಿ ಮುಳುಗಿ ಅಮನಸ್ಸಾಗಬೇಕು. ಹೀಗೆ ಆಗುವವರೆಗೂ ನಮ್ಮ ಜ್ಞಾನವು ಅಬಾಧಿತವೂ ಆಕಾಂಕ್ಷಾರಹಿತವೂ ಆಗಲಾರದು. ಮುಮುಕ್ಷುವಿಗೆ ಈ ಜ್ಞಾನನಿಷ್ಠೆಯ ಸ್ಥಿತಪ್ರಜ್ಞತೆ ಬರಬೇಕಾದರೆ, "ಆತ್ಮಸತ್ಯಾನುಬೋಧೇನ ನ ಸಂಕಲ್ಪಯತೇ ಯದಾ । ಅಮನಸ್ತಾಂ.... (ಗೌ. ಕಾ. ೩-೩೨) ಆತ್ಮ ಒಂದೇ ಸತ್ಯ ಎಂಬ ನಿಶ್ಚಯಜ್ಞಾನವಾಗಬೇಕು. ಶಾಸ್ತ್ರಾಚಾರ್ಯರ ಅನುಗ್ರಹದಿಂದ "ವೇದಾಂತವಿಜ್ಞಾನದಿಂದ ಸುನಿಶ್ಚಿತಾರ್ಥರಾದ" (ಮುಂ. ೩-೨-೬) ಎಂದೂ "ಅಲ್ಲಿ ಏಕತ್ವವನ್ನು ಕಂಡುಕೊಂಡವರಿಗೆ ಯಾವ ಮೋಹವು, ಯಾವ ಶೋಕವು ?" (ಈ. ೭) ಎಂದೂ ಶ್ರುತಿಯಿರುವದರಿಂದ ಏಕತ್ವವೇ ಪರಮಾರ್ಥಸತ್ಯವೆಂದೂ ಸಿದ್ಧವಾಗುತ್ತದೆ. ಸ್ಥಿತಪ್ರಜ್ಞನ ಲಕ್ಷಣವನ್ನು ಹೇಳುವ ಸ್ಮೃತಿಯಿಂದಲೂ ಅಭೇದವೇ ಸತ್ಯ ಎಂಬಿದು ಸಿದ್ಧವಾಗುತ್ತದೆ. ಭೇದವೂ ಸತ್ಯ, ಅಭೇದವೂ ಸತ್ಯ-ಎಂಬ ಮತದಲ್ಲಿ ಜ್ಞಾನವು ನಿಲುಗಡೆಗೇ ಬರುವಹಾಗಿಲ್ಲ; ಆದ್ದರಿಂದ ಸ್ಥಿತಪ್ರಜ್ಞೆಯೂ ಸಾಧ್ಯವಿಲ್ಲ.

ಕ್ಷೇತ್ರಜ್ಞಪರಮಾತ್ಮರ ಏಕತ್ವವಿಷಯಕವಾದ ಸಮ್ಯಗ್ದರ್ಶನ ಇರುತ್ತಿರುವಾಗ ಕ್ಷೇತ್ರಜ್ಞ, ಪರಮಾತ್ಮ-ಎಂಬುದು ನಾಮಮಾತ್ರದ ಭೇದವಾಗಿರುವದರಿಂದ ಈ ಕ್ಷೇತ್ರಜ್ಞನು ಪರಮಾತ್ಮನಿಗಿಂತ ಭಿನ್ನನು-ಎಂಬೀ ಜಾತಿಯ ಆತ್ಮಭೇದ ವಿಷಯಕವಾದ ನಿರ್ಬಂಧವು ನಿರರ್ಥಕವು. ಏಕೆಂದರೆ, ಈ ಆತ್ಮನು ಒಬ್ಬನೇ ಆಗಿದ್ದು ಬರಿಯ ನಾಮದ ಭೇದದಿಂದ ಬಗೆ ಬಗೆಯಾಗಿ ಕರೆಯಲ್ಪಡುತ್ತಿದ್ದಾನೆ. ಯಾರಾದರೆ ಕ್ಷೇತ್ರಜ್ಞಪರಮಾತ್ಮರು ಬೇರೆಬೇರೆಯೆಂದು ನಿರ್ಬಂಧವನ್ನು ಮಾಡುವರೋ ಅವರು ವೇದಾಂತಾರ್ಥವನ್ನು ಬಾಧಿಸುತ್ತಾರಾದ್ದರಿಂದ (ಶ್ರೇಯೋದ್ವಾರವಾದ) ಮೋಕ್ಷದ್ವಾರವಾದ ಸಮ್ಯಗ್ದರ್ಶನವನ್ನೇ ಬಾಧಿಸಿದವರಾಗುತ್ತಾರೆ. ಮೋಕ್ಷವು ಕೃತಕವೂ ಅನಿತ್ಯವೂ ಆಗಿರುವದೆಂದು ಕಲ್ಪಿಸಿದವರಾಗುತ್ತಾರೆ. (ಏಕೆಂದರೆ, ಅವರ ಪಕ್ಷದಲ್ಲಿ ಮೋಕ್ಷವು ಹೊಸದಾಗಿ ಉಂಟಾಗತಕ್ಕದ್ದಾಗಿರುತ್ತದೆ.)

ಗ) ಪ್ರಸಿದ್ಧವಾದ ಮೇಲಿನ ವೇದಾಂತಸಿದ್ಧಾಂತಕ್ಕೆ ಅನುಗುಣವಾಗಿ ಯಾಜ್ಞವಲ್ಕ್ಯರ ಉಪದೇಶದ ಪ್ರಾರಂಭದ ಪ್ರತಿಜ್ಞೆಯಾಗಿದೆ.

"ಆತ್ಮನಿ ವಿದಿತೇ ಸರ್ವಂ ವಿದಿತಂ" "ಆತ್ಮನೋ ವಾ ಅರೇ ದರ್ಶನೇನ ವಿಜ್ಞಾನೇನ ಇದಗ್ಂ ಸರ್ವಂ ವಿದಿತಮ್" ॥ (ಬೃ. ೨-೪-೫) "ಇದಂ ಸರ್ವಂ ಯದಯಮಾತ್ಮಾ" (ಬೃ .೨-೪-೬)

"ಆತ್ಮನನ್ನು ಅರಿತುಕೊಂಡರೆ, ಎಲ್ಲವನ್ನೂ ಅರಿತಂತೆ ಆಗುತ್ತದೆ" "ಆತ್ಮನ ದರ್ಶನದಿಂದ ವಿಜ್ಞಾನದಿಂದ ಈ ಸರ್ವವೂ ಅರಿಯಲ್ಪಡುತ್ತದೆ. "ಇದೆಲ್ಲವೂ ಈ ಆತ್ಮನೆಂಬುದೇ.

ಈಗ ಆಶ್ಮರಥ್ಯಾದಿ ಆಚಾರ್ಯತ್ರಯರ ಬೇರೆಬೇರೆ ದೃಷ್ಟಿವಾದಗಳಿಂದ ಯಾಜ್ಞವಲ್ಕ್ಯರ ಉಪದೇಶದಲ್ಲಿಯ ಪ್ರತಿಜ್ಞೆಯು ಹೇಗೆ ಯುಕ್ತಿಯುಕ್ತವಾಗಿ ಸಫಲವಾಗಿದೆ ಎಂಬುದನ್ನು ವಿಚಾರಿಸಬೇಕು.

ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತೇ ಇತಿ ಅವಿಪ್ರತಿಪತ್ತಿಃ ಸರ್ವೇಷಾಮ್ ಉಪನಿಷದ್ವಾದಿನಾಮ್ । (ಬೃ. ಭಾ. ೨-೧-೨೦)

ಎಲ್ಲಾ ಉಪನಿಷತ್ತುಗಳಲ್ಲಿಯೂ ವಿಜ್ಞಾನಾತ್ಮನಿಗೂ ಪರಮಾತ್ಮನಿಗೂ ಏಕತ್ವಪ್ರತ್ಯಯವನ್ನೇ ಉಪದೇಶಿಸಿದೆ-ಎಂಬ ವಿಷಯದಲ್ಲಿ ಉಪನಿಷದ್ವಾದಿಗಳಲ್ಲಿ ಯಾರಿಗೂ ವಿರುದ್ಧಾಭಿಪ್ರಾಯವಿರುವದಿಲ್ಲ. ಸೂತ್ರಕಾರರ ಕಾಲಕ್ಕೂ ಶಂಕರಾಚಾರ್ಯರ ಕಾಲಕ್ಕೂ ಉಪನಿಷದ್ವಾದಿಗಳೆಲ್ಲರೂ ಅದ್ವೈತಿಗಳೇ ಆಗಿದ್ದರು-ಎಂಬಿದು ಮೇಲಿನ ಭಾಷ್ಯವಾಕ್ಯದಿಂದ ಸ್ಪಷ್ಟವಾಗುತ್ತದೆ. ಮತ್ತು

"ಏಕತ್ವವಾದೀ ತ್ವಮ್, ವೇದಾರ್ಥಪರತ್ವಾತ್ । ಬಹವೋ ಹಿ ನಾನಾತ್ವವಾದಿನೋ ವೇದಬಾಹ್ಯಾಃ ತ್ವತ್ ಪ್ರತಿಪಕ್ಷಾಃ ॥
(ತೈ. ಭಾ. ೨-೮-೫)

'ನೀನು ವೇದಾರ್ಥದಲ್ಲಿಯೇ ತಾತ್ಪರ್ಯವುಳ್ಳವನಾದುದರಿಂದ ಏಕತ್ವ ವಾದಿಯಾಗಿರುತ್ತೀಯೆ. ನಿನಗೆ ಪ್ರತಿಪಕ್ಷದವರಾದ ನಾನಾತ್ವವಾದಿಗಳು ವೇದ ಬಾಹ್ಯರಾಗಿರುವದರಿಂದ ಅನೇಕರಿರುತ್ತಾರೆ.' ....ಈ ಭಾಷ್ಯವಾಕ್ಯಗಳ ಪ್ರಮಾಣ ದಿಂದ ವೇದವಾದಿಗಳೆಲ್ಲರೂ (ತೈ. ಭಾ. ೨-೮-೫), ಏಕತ್ವವಾದಿಗಳಾಗಿದ್ದುದ ರಿಂದ ಆಶ್ಮರಥ್ಯಾದಿ ಮೂವರು ಆಚಾರ್ಯರೂ ಜೀವನ ಮುಕ್ತ್ಯಸ್ಥಿತಿಯಲ್ಲಿ ವಿಜ್ಞಾ ನಾತ್ಮನು ಪರಮಾತ್ಮನೇ ಹೊರತು ಬೇರೆಯಲ್ಲ-ಎಂದು ಒಪ್ಪುತ್ತಿದ್ದರೆಂದು ನಿಶ್ಚಯವಾಗುತ್ತದೆ.

ಅದ್ವೈತಿಗಳಾದ ಈ ಮೂವರು ಆಚಾರ್ಯರೂ ಮೋಕ್ಷದಶೆಯಲ್ಲಿ ಜೀವ ನಿಗೂ ಬ್ರಹ್ಮಕ್ಕೂ ಅಭೇದವನ್ನೇ ಒಪ್ಪಿದರೂ ಜೀವನ ಅವಿದ್ಯಾಸ್ಥಿತಿಯ ವಿಷಯದಲ್ಲಿ ಆ ಮೂವರಿಗೂ ಮತಭೇದವಿದ್ದಿತು.

1) ಆಶ್ಮರಥ್ಯರ ಅಭಿಪ್ರಾಯ: ಜಗತ್ಕಾರಣವಾದ ಬ್ರಹ್ಮದ ಕಾರ್ಯವು ಜೀವನಾದ್ದರಿಂದ ಅಜ್ಞಾನದಶೆಯಲ್ಲಿ ಸಂಸಾರಿಯಾದ ಜೀವನು ಪರಮಾತ್ಮನಿಂದ ಬೇರೆಯೇ ಆಗಿರುತ್ತಾನೆ. ವಿದ್ಯೆಯಿಂದ ಅವಿದ್ಯೆಯು (ಬಾಧಿತವಾದಾಗ) ನಾಶ ವಾದಾಗ, ತಾನೇ ಪರಮಾತ್ಮನೆಂದು ಜೀವನು ಅರಿತುಕೊಳ್ಳುತ್ತಾನೆ. ಮುಮುಕ್ಷುವು ಜೀವಂತನಿರುವಾಗಲೇ ವಿದ್ಯೆಯಿಂದ ಮುಕ್ತನಾಗಬಹುದು. ಮರಣಾನಂತರ ಲೋಕಾಂತರದಲ್ಲಿಯೂ ಕಾಲಾಂತರದಲ್ಲಿಯೂ ಮೋಕ್ಷವಾಗ ಬೇಕಾಗಿಲ್ಲ. ಭೇದವೂ ಸತ್ಯ, ಅಭೇದವೂ ಸತ್ಯ-ಎಂಬ ವಾದದವರು ಇವರು. ಜ್ಞಾನಿಗೆ ಅಭೇದವು ಎಷ್ಟು ಸತ್ಯವೋ ಅಜ್ಞಾನಿಯ ಅನುಭವದಲ್ಲಿ ಭೇದವೂ ಅಷ್ಟೇ ಸತ್ಯ-ಎನ್ನುತ್ತಾರೆ. ಜೀವನು ಕಾರ್ಯವಾಗಿರುವದರಿಂದ ಕಾರಣನಾದ ಪರಮೇಶ್ವರನಿಗಿಂತ ಅಜ್ಞದಶೆಯಲ್ಲಿ ಬೇರೆಯೇ ಇರುತ್ತಾನೆ ; ಜ್ಞಾನದ ಫಲವಾದ ಮುಕ್ತ್ಯಸ್ಥಿತಿಯಲ್ಲಿ ತಾನು ಪರಮಾತ್ಮನೆಂದೇ ಜೀವನು ಅರಿಯುತ್ತಾನೆ.

ಈ ವಾದದ ಪ್ರಕಾರ, ಯಾಜ್ಞವಲ್ಕ್ಯರ ಉಪದೇಶದ ಉಪಕ್ರಮದಲ್ಲಿ ಹೇಳಿರುವ ಪ್ರಿಯಸಂಸೂಚಿತ ವಿಜ್ಞಾನಾತ್ಮನು ಪರಮಾತ್ಮನಿಂದ ಬೇರೆಯಾದ್ದ ರಿಂದ, ವಿಜ್ಞಾನಾತ್ಮನನ್ನು ಅರಿತರೆ ಪರಮಾತ್ಮನನ್ನು ಅರಿತಂತಾಗಲೀ ಪರ ಮಾತ್ಮನನ್ನು ಅರಿತರೂ ವಿಜ್ಞಾನಾತ್ಮನನ್ನು ಅರಿತಂತಾಗಲೀ ಆಗುವದಿಲ್ಲ. ಆದ್ದ ರಿಂದ ಒಂದನ್ನು ಅರಿತರೆ ಎಲ್ಲವನ್ನೂ ಅರಿತುಕೊಳ್ಳಬಹುದು-ಎಂಬ ಯಾಜ್ಞ ವಲ್ಕ್ಯರ ಪ್ರತಿಜ್ಞೆಯು ವ್ಯರ್ಥವಾಗುವದು, ಸುಳ್ಳಾಗುವದು. ಆದರೆ ಮುಕ್ತ ಸ್ಥಿತಿಯಲ್ಲಿ ಜೀವಪರಮಾತ್ಮರಿಗಿರುವ ಅಭೇದಲಕ್ಷಣವನ್ನು ಭಗವಾನರು

ಲಕ್ಷ್ಯದಲ್ಲಿರಿಸಿಕೊಂಡು, ಅದೇ ಪರಮಸತ್ಯವೆಂದು ಮನ್ನಿಸಿ, ಜಗತ್ಕಾರಣನಾದ ಪರಮಾತ್ಮನನ್ನು ಅರಿತರೆ (ಸರ್ವವನ್ನೂ) ಅರಿತಂತಾಗುತ್ತದೆ-ಎಂದು ಅವರು ಬೋಧಿಸಿದ್ದಾರೆ. ಅನಾತ್ಮವಾದ ಸಕಲ ಜಗತ್ತಿನಲ್ಲಿ, ಯಾವದೊಂದಾಗಲಿ, ಎಲ್ಲವಾಗಲಿ ಪ್ರಿಯವಾಗುವದು ಆತ್ಮನಾದ ತನಗಾಗಿಯೇ ಹೊರತು ಅವುಗಳಿಗಾಗಿ ಅಲ್ಲ-ಎಂದು ಲೋಕದ ವಸ್ತುಸ್ಥಿತಿಯನ್ನು ಭಗವಾನರು ಅನುವಾದಮಾಡಿಕೊಂಡಿರುವದು, ಅನಾತ್ಮವಾದ ಸಮಸ್ತಜಗತ್ತಿಗಿಂತಲೂ ಆತ್ಮನೇ ಹೆಚ್ಚು ಪ್ರಧಾನ, ಹೆಚ್ಚು ಸತ್ಯ ; ಆದ್ದರಿಂದ ಆ ಆತ್ಮನ ಸ್ವರೂಪವನ್ನೇ ಅನುಭವದಲ್ಲಿ ಕಂಡುಕೊಳ್ಳಬೇಕು ; ಇದಕ್ಕಾಗಿ ಆಚಾರ್ಯರಲ್ಲಿ ಶ್ರವಣಾದಿಗಳನ್ನು ನಡೆಸಬೇಕು-ಎಂದೂ ಉಪದೇಶಿಸಿದ್ದಾರೆ. ಈ ದೃಷ್ಟಿಯಿಂದ "ಆತ್ಮನಿ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ" ಎಂಬ ಭಗವಾನರ ಪ್ರತಿಜ್ಞೆಯು ಸಾರ್ಥಕವಾಗಿದೆ-ಎಂದು ಆಶ್ಮರಥ್ಯರ ವ್ಯಾಖ್ಯಾನ. (ಸೂ. ಭಾ. ೧-೪-೨೦)

2) ಔಡುಲೋಮಿ ಆಚಾರ್ಯರ ಅಭಿಪ್ರಾಯ :

ದೇಹ-ಇಂದ್ರಿಯ-ಮನಸ್ಸು-ಬುದ್ಧಿ ಇವೇ ಮುಂತಾದ ಉಪಾಧಿಯ ಅಭಿಮಾನದಿಂದ ಕಲುಷಿತನಾಗಿರುವ ಜೀವನು ಸಂಸಾರಬಂಧದಲ್ಲಿ ಸಿಕ್ಕಿ ದುಃಖಿತನಾಗಿರುವ ಜೀವನೇ ಹೊರತು, ಈ ಅಜ್ಞಾನದಶೆಯಲ್ಲಿ ಅವನು ನಿತ್ಯಮುಕ್ತನಾದ ಪರಮಾತ್ಮನಲ್ಲ. ಆದರೆ, ಈ ವಿಜ್ಞಾನಾತ್ಮನು ಜ್ಞಾನಧ್ಯಾನಗಳೇ ಮುಂತಾದ ಸಾಧನಗಳ ಅನುಷ್ಠಾನದಿಂದ ನಿರ್ಮಲನಾಗಿ ದೇಹಾದಿಗಳ ಸಂಘಾತವನ್ನು (ಅಭಿಮಾನವನ್ನೂ) ಬಿಟ್ಟು ಹೊರಟಾಗ ಪರಮಾತ್ಮನೊಡನೆ ಐಕ್ಯವಾಗಬಹುದಾದ್ದರಿಂದ, ಈ ಐಕ್ಯಭಾವವನ್ನು ಗಮನದಲ್ಲಿಟ್ಟುಕೊಂಡು ಯಾಜ್ಞವಲ್ಕ್ಯರು "ಪರಮಾತ್ಮನನ್ನು ಅರಿತರೆ ಎಲ್ಲವನ್ನೂ ಅರಿತಂತಾಗುತ್ತದೆ"-ಎಂದಿದ್ದಾರೆ. ಛಾಂದೋಗ್ಯ ಶ್ರುತಿಯೂ ಹೀಗೆಯೇ ಹೇಳುತ್ತಿದೆ :

> ....ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ ಸ ಉತ್ತಮಃ ಪುರುಷಃ ॥ (ಛಾ. ೮-೧೨-೩)

ನಿಜವಾಗಿಯೂ ಅಮೃತನೂ ಅಶರೀರನೂ ಆಗಿರುವ ಸಂಪ್ರಸಾದಾತ್ಮನು ಅವಿದ್ಯಾವಸ್ಥೆಯಲ್ಲಿ, ಮರ್ತ್ಯವಾದ ಈ ಶರೀರೇಂದ್ರಿಯಾದಿಗಳೇ ತಾನೆಂದು ಅಭಿಮಾನಿಸಿ, 'ನಾನು ಇಂಥವನ ಮಗನು, ನಾನು ಹುಟ್ಟಿ ಇಷ್ಟು ವರ್ಷಗಳಾಯಿತು, ಈಗ ಮುದುಕನಾದೆನು, ಎಂದೋ ಒಂದುದಿನ ಸಾಯುವೆನು' -ಎಂದು ಭಾವಿಸಿ ಸಂಸಾರಿಯಾಗಿರುತ್ತಾನೆ. ಆದರೆ, ಈಶ್ವರಾನುಗ್ರಹದಿಂದ ಶ್ರೋತ್ರಿಯಬ್ರಹ್ಮನಿಷ್ಠಸದ್ಗುರುವು 'ನೀನು ಈ ದೇಹೇಂದ್ರಿಯಾದಿಗಳ ಧರ್ಮಗಳುಳ್ಳವನಲ್ಲ ; ಇವುಗಳನ್ನೆಲ್ಲಾ ಬೆಳಗುವ ಸಾಕ್ಷಿಚೈತನ್ಯರೂಪ ಬ್ರಹ್ಮವೇ ನೀನಾಗಿರುವೆ' ಎಂದು

ಬೋಧಿಸಿದಾಗ ಈ ಸಂಪ್ರಸಾದನು ದೇಹವೇ ತಾನೆಂಬ ಭಾವನೆಯನ್ನು ಬಿಟ್ಟಿದ್ದು, (ಭ್ರಾಂತಿಯಿಂದ ಹಾವಾಗಿ ಕಂಡ ಹಗ್ಗವು ಬೆಳಕಿನಿಂದ ಹಗ್ಗವಾಗಿಯೇ ಕಂಡಂತೆ) ಸತ್ಯವಾದ ತನ್ನ ಪರಂಜ್ಯೋತಿರೂಪದಿಂದಲೇ ಸಿದ್ಧನಾಗಿ ಉತ್ತಮಪುರುಷ (ಅಥವಾ ಪುರುಷೋತ್ತಮ)ನಾಗುತ್ತಾನೆ.

ಯಥಾ ನದ್ಯಃ ಸ್ಯನ್ದಮಾನಾ ಸಮುದ್ರೇ
ಅಸ್ತಂ ಗಚ್ಛನ್ತಿ ನಾಮರೂಪೇ ವಿಹಾಯ ।
ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ।
ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥

(ಮು. ೩-೨-೮)

ಗಂಗಾ. ಯಮುನಾ, ಬ್ರಹ್ಮಪುತ್ರಾ ಮುಂತಾದ ನದಿಗಳು ಹರಿಯುತ್ತಾ ಹೋಗಿ ಸಮುದ್ರವನ್ನು ಸೇರಿದ ಬಳಿಕ ಹೇಗೆ ತಮ್ಮ ವಿಶೇಷವಾದ ನಾಮರೂಪಗಳನ್ನು ಬಿಟ್ಟು ಅಪಾರವಾದ ಸಮುದ್ರವೇ ಆಗುವವೋ ಹಾಗೆ ವಿದ್ವಾಂಸನು ಅವಿದ್ಯೆಯಿಂದಾಗಿರುವ ನಾಮರೂಪಗಳಿಂದ ಬಿಡುಗಡೆ ಹೊಂದಿದವನಾಗಿ, ಅವ್ಯಾಕೃತಕ್ಕಿಂತ ಶ್ರೇಷ್ಠನಾದ ದಿವ್ಯಪುರುಷನನ್ನು (ಸರ್ವಕಾರಣನೂ ಸರ್ವಾಧಾರನೂ ಸರ್ವಾತ್ಮನೂ ಆಗಿರುವ ಸರ್ವರ ಹೃದಯದಲ್ಲಿರುವ ದಿವ್ಯಪುರುಷನನ್ನು) ಸೇರಿಕೊಳ್ಳುವನು.

ವಿಜ್ಞಾನಾತ್ಮನು ಹೀಗೆ ವಿದ್ಯಾವಸ್ಥೆಯಲ್ಲಿ ಪರಮಾತ್ಮನೊಡನೆ ಒಂದಾಗಿರುವಿಕೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ಪರಮಾತ್ಮನನ್ನು ಅರಿತರೆ (ಅವನೇ ಸಕಲವಾಗಿರುವದರಿಂದ) ಎಲ್ಲವನ್ನೂ ಅರಿತಂತಾಗುತ್ತದೆ-ಎಂದು ಯಾಜ್ಞವಲ್ಕ್ಯರು ಹೇಳಿದ್ದಾರೆ. ಈ ಪ್ರತಿಜ್ಞಾಸಿದ್ಧಿಗಾಗಿಯೇ ಆತ್ಮನನ್ನು ಶ್ರವಣಾದಿಗಳಿಂದ ಅನುಭವದಲ್ಲಿ ಕಂಡುಕೊಳ್ಳಬೇಕೆಂದೂ ಹೇಳಿದ್ದಾರೆ. (ಸೂ.ಭಾ. ೧-೪-೨೧) ಜ್ಞಾನದ ಜೊತೆಗೆ ಧ್ಯಾನಾದಿ (ಉಪಾಸನಾದಿ) ಸಾಧನಗಳನ್ನೂ ಈ ಆಚಾರ್ಯರು ಹೇಳಿರುವದರಿಂದಲೂ ಉತ್ಕ್ರಮಣವನ್ನು ಹೇಳಿರುವದರಿಂದಲೂ ಇವರ ಮತದಂತೆ, ಮೋಕ್ಷವು ಮರಣಾನಂತರ ಲೋಕಾಂತರದಲ್ಲಿ, ಕಲ್ಪಾಂತರದಲ್ಲಿಯೇ ಸಾಧ್ಯವೆಂದು ಹೇಳಬಹುದು.

### 3) ಕಾಶಕೃತ್ಸ್ನ ಮಹರ್ಷಿಗಳ ಅಭಿಪ್ರಾಯ :

ಪರಮಾತ್ಮನೇ ವಿಜ್ಞಾನಾತ್ಮರೂಪದಿಂದಲೂ ಇದ್ದುಕೊಂಡಿರುವದರಿಂದ (ತೋರುತ್ತಿರುವದರಿಂದ) ಅಭೇದಭಾವದ ಪ್ರತಿಜ್ಞೆಯಿಂದ ಯಾಜ್ಞವಲ್ಕ್ಯರ ಬೋಧವು ಪ್ರಾರಂಭವಾಗಿದೆ.

"ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ" (ಛಾಂ. ೬-೩-೨)

ಆದ್ದರಿಂದಲೇ "ಈ ಜೀವಾತ್ಮನ ರೂಪದಿಂದ ಒಳಹೊಕ್ಕು ನಾಮರೂಪಗಳನ್ನು ವ್ಯಾಕರಣ (ಬಿಡಿಬಿಡಿಯಾಗಿ) ಮಾಡುವೆನು" ಎಂಬೀ ಜಾತಿಯ ಬ್ರಾಹ್ಮಣಮಂತ್ರವು ಪರಮಾತ್ಮನೇ ಜೀವಭಾವದಿಂದ ಇದ್ದುಕೊಂಡಿರುತ್ತಾನೆಂದು ತಿಳಿಸುತ್ತದೆ. ತೇಜಸ್ಸೇ ಮುಂತಾದವುಗಳ ಸೃಷ್ಟಿಯನ್ನು ಹೇಳುವಲ್ಲಿ ಜೀವನ ಸೃಷ್ಟಿಯನ್ನು ಬೇರೆಯಾಗಿ ಶ್ರುತಿಯಲ್ಲಿ ಹೇಳಿಯೂ ಇಲ್ಲ. ಹೀಗಾದರೆ, ಜೀವನು ಪರಮಾತ್ಮನಿಗಿಂತ ಬೇರೆಯಾಗಿ ಅವನ ಕಾರ್ಯವಾಗಿರುತ್ತಾನೆ-ಎಂದ ಹೇಳಬಹುದಾಗಿತ್ತು.

ಆದ್ದರಿಂದ, "ಕಾಶಕೃತ್ಸ್ನಸ್ಯ ಆಚಾರ್ಯಸ್ಯ ಅವಿಕೃತಃ ಪರಮೇಶ್ವರೋ ಜೀವೋ ನಾನ್ಯಃ ಇತಿ ಮತಮ್ । (ಸೂ. ಭಾ. ೧-೪-೨೨) ಕಾಶಕೃತ್ಸ್ನನೆಂಬ ಆಚಾರ್ಯನ ಮತದಲ್ಲಿ, ಜೀವನು ಯಾವ ವಿಕಾರವನ್ನೂ ಹೊಂದದಿರುವ ಪರಮೇಶ್ವರನೇ, ಹೊರತು ಮತ್ತೊಬ್ಬನಲ್ಲ. (ಜೀವನು ಈಗ ಬಂಧಾವಸ್ಥೆಯಲ್ಲಿ ಇರುವಾಗ ಸಹ ನಿತ್ಯಮುಕ್ತನಾದ ಪರಮೇಶ್ವರನೇ ಹೊರತು ಬೇರೊಬ್ಬನಲ್ಲ.)

ಆಶ್ಮರಥ್ಯನ ಅಭಿಪ್ರಾಯದಲ್ಲಿ, ಜೀವನು ಪರಮೇಶ್ವರನಿಗಿಂತ ಬೇರೆಯಲ್ಲವೆಂಬುದೇ ಅಭಿಪ್ರಾಯವು ; ಆದರೂ ಜೀವೇಶ್ವರರಿಗೆ ಸ್ವಲ್ಪ ಕಾರ್ಯಕಾರಣಭಾವವೂ ಇದೆ. ಈಗ ಕಾರ್ಯವಾಗಿ ಜೀವನಾಗಿರುತ್ತಾನೆ. ಪರಮೇಶ್ವರನಿಂದ ಬೇರೆಯೂ ಆಗಿರುತ್ತಾನೆ. ಆದರೆ ಮೋಕ್ಷದಲ್ಲಿ ಮಾತ್ರ ಅಭೇದ ಒಂದೇ ಸತ್ಯ. ಬದುಕಿರುವಾಗಲೇ ಮುಕ್ತನಾಗಬಹುದೆಂಬ ಜೀವನ್ಮುಕ್ತಿಯನ್ನೂ ಇವರು ಒಪ್ಪುತ್ತಾರೆ.

ಔಡುಲೋಮಿಯ ಪಕ್ಷದಲ್ಲಂತೂ ಅವಿದ್ಯಾವಸ್ಥೆ ಮತ್ತು ವಿದ್ಯಾವಸ್ಥೆಗಳ ಅಪೇಕ್ಷೆಯಿಂದ ಭೇದವೂ ಸತ್ಯ. ಅಭೇದವೂ ಸತ್ಯ. ಇವರು ವಿದೇಹಮುಕ್ತಿವಾದಿಗಳೆಂದು ತೋರುತ್ತದೆ ; ಆದ್ದರಿಂದ ಜೀವನ್ಮುಕ್ತಿಯನ್ನು ಒಪ್ಪಲಾರರು.

> ತತ್ರ ಕಾಶಕೃತ್ಸ್ನೀಯಂ ಮತಂ ಶ್ರುತ್ಯನುಸಾರೀ ಇತಿ ಗಮ್ಯತೇ । ತತ್ತ್ವಮಸಿ ಇತ್ಯಾದಿಶ್ರುತಿಭ್ಯಃ । ಏವಂ ಚ ಸತಿ ತಜ್ಜ್ಞಾನಾತ್ ಅಮೃತತ್ವಮ್ ಅವಕಲ್ಪತೇ ।
>
> (ಸೂ. ಭಾ. ೧-೪-೨೨

ಇವುಗಳಲ್ಲಿ ಕಾಶಕೃತ್ಸ್ನನ ಮತವು ಶ್ರುತ್ಯನುಸಾರವಾಗಿದೆ-ಎಂದು ನಿಶ್ಚಯಿಸಬೇಕಾಗಿದೆ. ಏಕೆಂದರೆ, ಅದು ಶ್ರುತಿಯಲ್ಲಿ ಪ್ರತಿಪಾದಿಸಬೇಕೆಂದಿರುವ ಅರ್ಥಕ್ಕೆ ಅನುಸಾರವಾಗಿರುತ್ತದೆ. "ಅದೇ ನೀನಾಗಿರುವೆ" (ಛಾ. ೬-೭-೮) ಎಂದು ಮುಂತಾಗಿರುವ ಶ್ರುತಿಗಳಿಂದ ಇದು

ಗೊತ್ತಾಗುತ್ತದೆ. ಮತ್ತು ಹೀಗಾದರೇ "ಜ್ಞಾನದಿಂದ ಅಮೃತತ್ವ ವುಂಟಾಗುವದೆಂಬುದು ಹೊಂದುತ್ತದೆ.

ಒಟ್ಟಿನಮೇಲೆ, ಪ್ರಿಯಸಂಸೂಚಿತ ಭೋಕ್ತೃವಾದ ವಿಜ್ಞಾನಾತ್ಮನ ವಿಷಯದಿಂದಲೇ ಈ ಪ್ರಕರಣವು ಪ್ರಾರಂಭವಾಗಿದ್ದರೂ ಸಹ, ವಿಜ್ಞಾನಾತ್ಮನ ಪರಮಾರ್ಥರೂಪವಾದ ಪರಮಾತ್ಮನ ವಿಚಾರವನ್ನು ತಾತ್ಪರ್ಯದಿಂದ ತಿಳಿಸ ಲೋಸ್ಕರವೇ ಇದು ಬಂದಿದೆಯೆಂದೇ ಮೂವರು ಆಚಾರ್ಯರೂ ಅಭಿಪ್ರಾಯ ಪಟ್ಟಿದ್ದಾರೆ.

4) ಈಗ ಪೂರ್ವಪಕ್ಷದ ಎರಡನೆಯ ಆಕ್ಷೇಪಕ್ಕೆ ಸಮಾಧಾನ : '.... ನ ಪ್ರೇತ್ಯ ಸಂಜ್ಞಾಸ್ತಿ' ಅಥವಾ 'ಪ್ರೇತ್ಯ' 'ನ ಸಂಜ್ಞಾಸ್ತಿ' ಈ ಭೂತಗಳಿಂದ (ಈ ಭೌತಿಕದೇಹದಿಂದ) ಜೀವನು ಮೇಲಕ್ಕೆದ್ದು ಹೊರಟುಹೋದ ಬಳಿಕ- ಸತ್ತಬಳಿಕ- (ವಿಶೇಷವಾದ) ಅರಿವೇ ಇರುವದಿಲ್ಲ.- ಇದು ಸಾಮಾನ್ಯವಾದ ಅರ್ಥ. ಇದು ಸ್ಪಷ್ಟವಾಗಿ ಜೀವನ ವಿಚಾರವಾದುದರಿಂದ, ಇದು ಪರಮಾತ್ಮನ ವಿಚಾರವೇ ಎಂದು ಹೇಳಲು ಹೇಗೆ ಸಾಧ್ಯ ? ಇದು ಪೂರ್ವಪಕ್ಷದವನ ಸಂಶಯ ಅಥವಾ ಆಕ್ಷೇಪ. ಏಕೆಂದರೆ, ಸುಡುವ ಬೆಂಕಿಯು ತಂಪಾಗಿದೆ, ಎಂದಂತೆ ವಿಜ್ಞಾನಘನನಾದ ಆತ್ಮನು ತನ್ನ ವಿಜ್ಞಾನವನ್ನು ಕಳೆದುಕೊಳ್ಳುತ್ತಾನೆ-ಎನ್ನು ವದು ಅಸಂಬದ್ಧವಾಗುವದು. ಮೈತ್ರೇಯಿಗೂ ಇದೇ ಸಂಶಯ.

ಕ) ಆಶ್ಮರಥ್ಯರ ಪ್ರಕಾರ ಈ ಸಂಶಯಕ್ಕೆ ಸಮಾಧಾನವೇನೆಂದರೆ : ಜೀವನು ಅವಿದ್ಯಾವಸ್ಥೆಯಲ್ಲಿ ಇರುವವರೆಗೂ ಭೌತಿಕವಾದ ಈ ದೇಹೇಂದ್ರಿಯಾದಿ ಗಳೇ ತಾನೆಂಬ ಅಭಿಮಾನವನ್ನು ಹೊಂದಿರುತ್ತಾನೆ; ಆದರೆ ವಿದ್ಯೆಯು ಬಂದೊಡನೆ ಆ ಅಭಿಮಾನವನ್ನು ಬಿಟ್ಟೇಳುವದೇ 'ಪ್ರೇತ್ಯ' ಎಂಬುದಕ್ಕೆ ಅರ್ಥವೇ ಹೊರತು ದೇಹವನ್ನೇ ಬಿಟ್ಟು ಹೋಗುವದು (ಸಾಯುವದು) ಎಂದೇನೂ ಅರ್ಥವಲ್ಲ. ಇನ್ನು ಅಜ್ಞಾನದಶೆಯಲ್ಲಿ ದೇಹಾಭಿಮಾನವಿರುವಾಗ, ನಾನಾರೂಪವಾದ ಜಗತ್ತು ಸತ್ಯವಾಗಿ ಕಾಣುವದರಿಂದ, ಜೀವನಿಗೆ ವಿಶೇಷವಿಜ್ಞಾನವು (ಬಿಡಿಬಿಡಿಯಾದ ಅರಿವು-ಜ್ಞಾತೃ-ಜ್ಞಾನ-ಜ್ಞೇಯಗಳೆಂಬ ತ್ರಿಪುಟಿಯು) ಇರುವದು ಸ್ವಾಭಾವಿಕ ವಾಗಿದೆ. ಆತ್ಮಜ್ಞಾನವು ಉದಯವಾದೊಡನೆ, ಅನಾತ್ಮವಾದ ದ್ವೈತವೆಲ್ಲಾ ಹುಸಿತೋರಿಕೆಯೆಂದು ಬಾಧಿತವಾಗುವದರಿಂದ, ವಿಶೇಷಸಂಜ್ಞೆಯು (ವಿಜ್ಞಾನ ವು) ಉಳಿಯುವದಿಲ್ಲ, ಬಾಧಿತವಾಗುತ್ತದೆ. ಈ ಅನುಭವಕ್ಕೆ ದೇಹದ ಅವಸಾನ ವನ್ನೇನೂ ಕಾಯಬೇಕಾಗಿಲ್ಲ. ವಿಶೇಷಸಂಜ್ಞೆ ಇರುವದಿಲ್ಲ-ಎನ್ನುವದಕ್ಕೆ ಈ ಅರ್ಥವೇ ಹೊರತು, ಸತ್ತಮೇಲೆ ಶರೀರದಲ್ಲಿ ಅರಿವು ಇರುವದಿಲ್ಲ-ಎಂದೇನೂ ಅರ್ಥವಲ್ಲ.

ಖ) ಔಡುಲೋಮಿಯ ಅಭಿಪ್ರಾಯ :

ದೇಹಾಭಿಮಾನದಿಂದ ಕಲುಷಿತಚಿತ್ತನಾದ ಜೀವನು, ಕರ್ಮೋಪಾಸನಾಜ್ಞಾನಗಳಿಂದ ಪರಿಶುದ್ಧಚಿತ್ತನಾಗಿ, ಮ ರ ಣಾ ನ ಂ ತ ರ ಲೋಕಾಂತರಕ್ಕೆ ತೆರಳಿ, ಕಲ್ಪಾಂತದಲ್ಲಿ ಬ್ರಹ್ಮದಲ್ಲಿ ಸೇರಿ ಸಾಯುಜ್ಯಮುಕ್ತಿಯನ್ನು ಪಡೆದಾಗ, ವಿಶೇಷವಿಜ್ಞಾನವಿರುವದಿಲ್ಲ. 'ಪ್ರೇತ್ಯ ಸಂಜ್ಞಾ ನಾಸ್ತಿ' ಎಂಬಿದಕ್ಕೆ ಇದೇ ಅರ್ಥವೇ ಹೊರತು, ಇದು ಜೀವನ ಸಂಬಂಧವಾದ ಪ್ರಕರಣವಲ್ಲವಾದ್ದರಿಂದ, ಸತ್ತ ಮೇಲೆ ದೇಹದಲ್ಲಿ ಯಾವ ಅರಿವೂ ಉಳಿಯುವದಿಲ್ಲ-ಎಂದು ಅರ್ಥಮಾಡಬಾರದು.

ಗ) ಕಾಶಕೃತ್ಸ್ನರ ಅಭಿಮತ :

"ಆತ್ಮಸತ್ಯಾನುಬೋಧೇನ...." [3]ಬ್ರಹ್ಮೈವ ಸತ್ಯಂ' ಎಲ್ಲರ ಆತ್ಮನಾದ ಪರಮಾತ್ಮ ಒಬ್ಬನೇ ಸತ್ಯ ಎಂಬ ಜ್ಞಾನವು ಶಾಸ್ತ್ರಾಚಾರ್ಯರ ಉಪದೇಶದಿಂದ ಉದಿಸಿದಾಗ "ನಾನು-ಇದು, ಈ ಜಗತ್ತು" ಎಂಬ ದ್ವೈತಭ್ರಾಂತಿಯೆಲ್ಲಾ ಬಾಧಿತವಾಗಿ ಪರಮ 'ಜ್ಞಾನನಿಷ್ಠೆಯು' ಬಲಿಯುತ್ತದೆ. ಹೀಗೆ ದ್ವೈತಭ್ರಾಂತಿಯಿಂದ ಮೇಲೇಳುವದೇ 'ಪ್ರೇತ್ಯ' ಎಂಬಿದಕ್ಕೆ ಅರ್ಥ. "ಭೂತೇಭ್ಯಃ ಸಮುತ್ಥಾಯ" ಭೂತಗಳಿಂದ ಮೇಲೇಳುವದು-ಎಂದರೆ, ಆತ್ಮನಿಂದ ಬೇರೆಯಾಗಿ ಭೂತಗಳಿವೆ-ಎಂಬ ಭ್ರಮೆಯಿಂದ ಮೇಲೇಳುವದು, ಎಂದೇ ಅರ್ಥ. ಹೀಗೆ, ಸಮಸ್ತದ್ವೈತವೂ (ಅವಿದ್ಯಾಕಲ್ಪಿತ) ಮಾಯಾಮಾತ್ರವಾದ ಹುಸಿತೋರಿಕೆ, ಎಂಬ ನಿಶ್ಚಯಜ್ಞಾನದಿಂದ ಬಾಧಿತವಾದಾಗ, ಜ್ಞಾತೃವಾದ ನಾನು ಈ ಜ್ಞೇಯವನ್ನು ಜ್ಞಾನದಿಂದ ಅರಿಯುತ್ತೇನೆ-ಎಂಬ ವಿಶೇಷವಿಜ್ಞಾನವೆಲ್ಲಾ ಸೂರ್ಯಪ್ರಕಾಶದ ಎದುರಿನ ಮಂಜಿನಂತೆ ಕರಗಿಹೋಗುತ್ತದೆ. ಉಜ್ಜ್ವಲವಾದ ವಿವೇಕದ ಪ್ರಭಾವದ ಫಲವಾಗಿ ಬರುವ ಈ ಅ ನು ಭ ವ ವ ನ್ನೇ 'ವಿಶೇಷಸಂಜ್ಞಾ ನಾಸ್ತಿ' ಎಂಬ ಶ್ರುತಿವಚನವು ತಿಳಿಸುತ್ತದೆ.

ಘ) ಇನ್ನು, "....ನನು ಉಚ್ಛೇದಾಭಿಧಾನಮ್ ಏತತ್" ಏತೇಭ್ಯೋ ಭೂತೇಭ್ಯಃ ಸಮುತ್ಥಾಯ ತಾನ್ಯೇವಾನು ವಿನಶ್ಯತಿ ನ ಪ್ರೇತ್ಯ ಸಂಜ್ಞಾಸ್ತಿ" (ಬೃ. ೨-೪-೧೨) (ಸೂ. ಭಾ. ೧-೪-೨೨).

ಆಕ್ಷೇಪ : ಈ ಭೂತಗಳೊಳಗಿಂದ (ಭೌತಿಕದೇಹದೊಳಗಿಂದ) ಜೀವನು ಮೇಲಕ್ಕೆದ್ದು ಅವುಗಳನ್ನೇ ಅನುಸರಿಸಿ ಲಯವಾಗುತ್ತಾನೆ. (ಬೃ: ೨-೪-೧೨) ಆದ್ದರಿಂದ 'ಪ್ರೇತ್ಯ' ಸತ್ತಬಳಿಕ 'ನ ಸಂಜ್ಞಾಸ್ತಿ' ಶರೀರದಲ್ಲಿ ಅರಿವು ಇರುವದಿಲ್ಲ-ಎಂದಲ್ಲವೆ ಇಲ್ಲಿ ಹೇಳಿರುವದು? ಹೀಗೆ ಜೀವನ ಮರಣವನ್ನೂ, ಮರಣಕಾಲದಲ್ಲಿ (ಶರೀರದಲ್ಲಿ) ಉಂಟಾಗುವ ಅರಿವಿನ ನಾಶವನ್ನೂ ಈ ಪ್ರಸಂಗದಲ್ಲಿ ಸ್ಪಷ್ಟವಾಗಿ ಹೇಳಿರುವದರಿಂದಲೇ ಇದು ಜೀವನ ಪ್ರಕರಣವೆಂದು ಸಿದ್ಧವಾಗುತ್ತದೆ. ಜೀವನು ಪ್ರಜ್ಞಾನಘನಸ್ವರೂಪನೆಂದೂ ಹೇಳಿ, ಅದರ ನಾಶವನ್ನೂ ಹೇಳುತ್ತಾ, ಪರಸ್ಪರ

ವಿರುದ್ಧಾಭಿಪ್ರಾಯದಿಂದ ಪೂಜ್ಯರಾದ ತಾವು ಮೋಹವನ್ನು ( ಗೊಂದಲವನ್ನು ) ಉಂಟುಮಾಡುತ್ತಿದ್ದೀರಿ. ಇಲ್ಲಿ ಸತ್ಯವೇನು? ಅಲ್ಲದೆ, ಜೀವನನ್ನು ಕುರಿತ ಈ ಪ್ರಕರಣವು ಜೀವೇಶ್ವರರ ಅಭೇದವನ್ನು ಹೇಳುತ್ತಿದೆ, ಎಂಬಿದು ಹೇಗೆ ?- ಹೀಗೆಂಬುದೇ ಮೈತ್ರೇಯಿಯ ಪ್ರಶ್ನೆಯ ಆಶಯವಾಗಿದೆ.

ಇದಕ್ಕೆ ಸಮಾಧಾನ :

**ಯಾಜ್ಞವಲ್ಕ್ಯ : "ನ ವಾ ಅರೇ ಅಹಂ ಮೋಹಂ ಬ್ರವೀಮಿ ಅವಿನಾಶೀ ವಾ ಅರೇಽಯಮಾತ್ಮಾ ಅನುಚ್ಛಿತ್ತಿಧರ್ಮಾ ಮಾತ್ರಾ-ಸಂಸರ್ಗಸ್ತ್ವಸ್ಯ ಭವತಿ" ( ಬೃ: ೪-೫-೧೪ ? ) । ಏತದುಕ್ತಂ ಭವತಿ-ಕೂಟಸ್ಥನಿತ್ಯ ಏವ ಅಯಂ ವಿಜ್ಞಾನಘನ ಆತ್ಮಾ ನಾಸ್ಯ ಉಚ್ಛೇದ ಪ್ರಸಙ್ಗೋಽಸ್ತಿ। ಮಾತ್ರಾಭಿಸ್ತು ಅಸ್ಯ ಭೂತೇನ್ದ್ರಿಯ ಲಕ್ಷಣಾಭಿಃ ಅವಿದ್ಯಾಕೃತಾಭಿಃ ಅಸಂಸರ್ಗೋ ವಿದ್ಯಯಾ ಭವತಿ । ಸಂಸರ್ಗಾಭಾವೇ ಚ ತತ್ಕೃತಸ್ಯ ವಿಶೇಷವಿಜ್ಞಾನಸ್ಯ ಅಭಾವಾತ್ ನ ಪ್ರೇತ್ಯ ಸಂಜ್ಞಾಸ್ತಿ ಇತ್ಯುಕ್ತಮ್ ಇತಿ॥ (ಸೂ.ಭಾ: ೧-೪-೨೨)**

"ಎಲೌ ಮೈತ್ರೇಯಿ ! ನಾನು ಭ್ರಾಂತಿಯನ್ನು ಹುಟ್ಟಿಸುತ್ತಿಲ್ಲ; ಈ ಆತ್ಮನು ಅವಿನಾಶಿಯು,-ನಾಶವಾಗುವ ಧರ್ಮವುಳ್ಳವನಲ್ಲ; ಆದರೆ, ಇವನಿಗೆ ಮಾತ್ರಾಸಂಸರ್ಗವು ಆಗುತ್ತದೆ" ಎಂದು ಬೇರೊಂದು ಅರ್ಥವನ್ನು ತಿಳಿಸಿರುತ್ತದೆ. ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ: ಈ ವಿಜ್ಞಾನಘನನಾದ ಆತ್ಮನು ಕೂಟಸ್ಥ-ನಿತ್ಯನೇ ಇರುವದರಿಂದ ಇವನು ನಾಶವಾಗುವ ಪ್ರಸಕ್ತಿಯೇ ಇಲ್ಲ. ಆದರೆ, ಅವಿದ್ಯಾಕೃತವಾದ ಭೂತೇಂದ್ರಿಯಗಳೆಂಬ ಮಾತ್ರೆಗಳ ಸಂಬಂಧದ ಅಭಾವವು ವಿದ್ಯೆಯಿಂದ ಆಗುತ್ತದೆ. ಆ ವಿಷಯೇಂದ್ರಿಯಗಳ ಸಂಬಂಧವು ಇಲ್ಲವಾಗಲು ಅದರಿಂದಾಗಿರುವ ವಿಶೇಷವಿಜ್ಞಾನವೂ ಇರುವದಿಲ್ಲವಾದ್ದರಿಂದ ಶರೀರವನ್ನು ಬಿಟ್ಟು ತೆರಳಿದ ಬಳಿಕ ಜ್ಞಾನವಿರುವದಿಲ್ಲ."

ಒಟ್ಟಿನಲ್ಲಿ ಇದರ ಅರ್ಥವೇನೆಂದರೆ ; ಸುಷುಪ್ತಿಯಲ್ಲಿ ಮನಸ್ಸಿನ ಚಲನೆಯಿಲ್ಲದಾಗ ( ಬಿಡಿಯರಿವು ತೋರದೆ) ವಿಶೇಷವಿಜ್ಞಾನವಿಲ್ಲದ ಜೀವನು ಹೇಗೆ ಪ್ರಜ್ಞಾನಘನನಾಗಿರುವನೋ ಹಾಗೆಯೇ ವಿದ್ಯೆಯಿಂದ ಅವಿದ್ಯೆಯೂ ಅವಿದ್ಯಾಕಲ್ಪಿತಗಳಾದ ದೇಹೇಂದ್ರಿಯಾದಿ ಉಪಾಧಿಗಳೂ ಬಾಧಿತವಾಗಿರುವ ವಿವೇಕಾವಸ್ಥೆಯಲ್ಲಿ ಸಹ ಅವನು ಕೇವಲ ಪ್ರಜ್ಞಾನಘನನಾಗಿಯೇ ಉಳಿದಿರುತ್ತಾನೆ. ಅಂತು, ವಿಶೇಷವಿಜ್ಞಾನದ ಇಲ್ಲದಿರುವಿಕೆಯು ಗಾಢನಿದ್ರೆಗೂ ವಿವೇಕಸ್ಥಿತಿಗೂ ಸಮಾನವಾಗಿರುತ್ತದೆ. ಗಾಢನಿದ್ರೆಯಲ್ಲಿ ಇದು ಸ್ವಾಭಾವಿಕವೂ ತಾತ್ಕಾಲಿಕವೂ ಆಗಿರುತ್ತದೆ; ವಿವೇಕದಶೆಯಲ್ಲಿ ಆ ನಿರ್ವಿಕಲ್ಪವು ಸತ್ಯವೂ ಸಹಜವೂ ನಿತ್ಯವೂ ಸ್ವರೂಪಸ್ಥಿತಿಯೂ ಆಗಿರುತ್ತದೆ. ಇದೇ ಜ್ಞಾನನಿಷ್ಠೆಯ ಅದ್ವಿತೀಯ ಆತ್ಮಾನುಭವ.

೫) ಇನ್ನು ಮೂರನೆಯ ಆಕ್ಷೇಪ :

"ವಿಜ್ಞಾತಾರಮರೇ ಕೇನ ವಿಜಾನೀಯಾತ್" ( ಬೃ. ೨-೪-೧೪; ೪-೫-೧೫ )

'ವಿಜ್ಞಾತಾರಂ' ಎಂದರೆ ಜ್ಞಾನಕ್ಕೆ ಕರ್ತೃತ್ವವುಳ್ಳ ಜ್ಞಾತೃವಾದ (ಅರಿಯುವವನಾದ) ವಿಜ್ಞಾನಾತ್ಮನನ್ನೇ (ಜೀವನನ್ನೇ) ಇಲ್ಲಿ ಹೇಳಿರುವಾಗ, ಇದು ಪರಮಾತ್ಮಸ್ವರೂಪವನ್ನು ಹೇಳುತ್ತಿದೆ-ಎಂಬಿದು ಹೇಗೆ ಸರಿ ?

ಸಮಾಧಾನ : ಇದಕ್ಕೆ ಕಾಶಕೃತ್ಸ್ನರ ದರ್ಶನವೇ ಸಮ್ಯಗ್ದರ್ಶನವೇ ಸಮಾಧಾನವನ್ನು ತಿಳಿಸುತ್ತದೆ. ಅರಿಯುವ ಕ್ರಿಯೆಯುಳ್ಳವನನ್ನು ನಾವು ಸಾಮಾನ್ಯವಾಗಿ, ಅಜ್ಞದೃಷ್ಟಿಯಿಂದ, ಜೀವನೆನ್ನುವದು ನಿಜವಾದರೂ ಪರಮಾರ್ಥದೃಷ್ಟಿಯಿಂದ ವಿಚಾರಮಾಡಿ ನೋಡಿದಾಗ, ಪ್ರಜ್ಞಾಘನನಾದ ಪರಮಾತ್ಮನಿಗಿಂತ ಬೇರೆಯಾದ ಇನ್ನೊಂದು ವಸ್ತು ಯಾವದೂ ಇಲ್ಲವಾದ್ದರಿಂದಲೂ ಪರಮಾತ್ಮನೇ ಪರಮಸತ್ಯನಾಗಿರುವದರಿಂದಲೂ, ಪರಮಾತ್ಮನೇ ಅವಿದ್ಯಾದೃಷ್ಟಿಗೆ ಪ್ರಮಾತೃವೂ (ವಿಜ್ಞಾತೃವೂ) ಕರ್ತೃವೂ ಭೋಕ್ತೃವೂ ಆದ ಜೀವನಾಗಿ (ವಿಜ್ಞಾನಾತ್ಮನಾಗಿ) ತೋರುತ್ತಿದ್ದಾನೆ. ಪ್ರಮಾತೃತ್ವವನ್ನು ವಿಷಯಮಾಡಿಕೊಂಡು ಬೆಳಗುತ್ತಿರುವ ಸಾಕ್ಷಿಯಾಗಿರುವದರಿಂದ, ಯಾವದಕ್ಕೂ ವಿಷಯವಲ್ಲದ ಅಪ್ರಮೇಯವಾದ ಪರಮಾತ್ಮಸ್ವರೂಪವನ್ನು ಏತರಿಂದ ಅರಿಯುವದು ಸಾಧ್ಯ ? ಅದನ್ನು (ಸರ್ವಸಾಕ್ಷಿಯನ್ನು ) ನೇರಾಗಿ (ವಿಧಿಮುಖವಾಗಿ) ತಿಳಿಸುವದು ಸಾಧ್ಯವಿಲ್ಲವಾದ್ದರಿಂದ, ಅಜ್ಞರ ವ್ಯವಹಾರದೃಷ್ಟಿಗೆ ತೋರುತ್ತಿರುವ ಜೀವಭಾವವನ್ನೇ ಅನುವಾದಮಾಡಿಕೊಂಡು, ಪ್ರಮಾತೃತ್ವಕ್ಕಿಂತಲೂ ಒಳಗಿನದೂ ಹೆಚ್ಚು ಸೂಕ್ಷ್ಮವೂ ಹೆಚ್ಚು ವ್ಯಾಪಕವೂ ಆದ ಸಾಕ್ಷಿತ್ವದ ಅಧ್ಯಾರೋಪದಿಂದ ಜೀವತ್ವವು ಕೇವಲ ಅಧ್ಯಾಸನಿಮಿತ್ತವಾದುದೆಂದು ತೋರಿಸಿ, ಅಲ್ಲಗಳೆದು, ಪ್ರತ್ಯಗಾತ್ಮನಾದ ಪರಮಾತ್ಮನನ್ನು ಮಾತ್ರ ವಿವೇಕಿಯ ಅನುಭವದಲ್ಲಿ ಆಚಾರ್ಯರು ಉಳಿಸಿ ತಿಳಿಸುತ್ತಾರೆ.

ಪ್ರಮಾಣ(ಇಂದ್ರಿಯ-ಮನಸ್ಸು)ಗಳಿಗಿಂತಲೂ ಮೊದಲೇ ಸಿದ್ಧನಾಗಿ, ಪ್ರಮಾಣಗಳನ್ನೂ ಬೆಳಗುತ್ತಾ ಪ್ರಮೇಯ(ವಿಷಯ)ಗಳನ್ನು ಅರಿಯುತ್ತಿರುವ (ಅಹಂಪ್ರತ್ಯಯಗಮ್ಯನಾದ) ಪ್ರಮಾತೃವನ್ನೇ ಏತರಿಂದಲೂ ವಿಷಯೀಕರಿಸಿ ಅರಿಯಲು ಸಾಧ್ಯವಿಲ್ಲವೆಂದಮೇಲೆ, ಪ್ರಮಾತೃತ್ವವನ್ನೂ (ಅರಿಯುವ ಕ್ರಿಯೆಯಿಲ್ಲದೆ) ಸ್ವಾಭಾವಿಕವಾಗಿ ಅರಿಯುತ್ತಿರುವ ಸಾಕ್ಷಿಯನ್ನು ಏತರಿಂದಲೂ ಅರಿಯುವದು ಸಾಧ್ಯವಿಲ್ಲ-ಎಂಬಿದು ಏನಾಶ್ಚರ್ಯ? ಆದ್ದರಿಂದ ಮನೋವ್ಯಾಪಾರವಿಲ್ಲದೆ ನಿದ್ರೆಯನ್ನೂ ಮಾಡದೆ ಸುಮ್ಮನಿರುವ ಉಜ್ಜ್ವಲ ಎಚ್ಚರವೇ

ಆತ್ಮಾನುಭವ ! ಹಗ್ಗದ ಹಾವಿನಲ್ಲಿ, ಆ ಹಗ್ಗವನ್ನು ಬಿಟ್ಟು ಹಾವು ಬೇರೆ ಸ್ವತಂತ್ರವಾಗಿಲ್ಲದಿರುವದರಿಂದ 'ನಿನಗೆ ನಸುಬೆಳಕಿನಲ್ಲಿ ತೋರುತ್ತಿರುವ (ಹುಸಿ) ಹಾವು, ನಿಜವಾಗಿ ಹಗ್ಗವೇಆಗಿದೆ'-ಎನ್ನುವಂತೆ, ಪರಮಾತ್ಮನನ್ನು ಬಿಟ್ಟು ಜೀವಾತ್ಮನು ಬೇರೆ ಸ್ವತಂತ್ರವಾಗಿಲ್ಲವಾದ್ದರಿಂದ, 'ನಾನ್ಯೋಽತೋಽಸ್ತಿ ದ್ರಷ್ಟಾ' 'ನಿನಗೆ ಅಜ್ಞಾನದಶೆಯಲ್ಲಿ 'ದ್ರಷ್ಟಾ, ಶ್ರೋತಾ, ಮನ್ತಾ, ವಿಜ್ಞಾತಾ' 'ನೋಡುವವನೂ, ಕೇಳುವವನೂ, ಮನನಮಾಡುವವನೂ, ಅರಿಯುವವನೂ' ಎಂದು ಮುಂತಾಗಿ ತೋರುತ್ತಿರುವ ವಿಜ್ಞಾನಾತ್ಮನು ಪರಮಾತ್ಮನೇ ಆಗಿದ್ದಾನೆ" -ಎಂದೇ ಶಾಸ್ತ್ರಾಚಾರ್ಯರು ತಿಳಿಸಬೇಕಾಗುತ್ತದೆ. ಎಷ್ಟು ಮಾತ್ರಕ್ಕೂ ಇಲ್ಲ ವಾದರೂ ನಿಜವಾಗಿರುವಂತೆಯೇ ತೋರುತ್ತಿರುವ ನಾಮರೂಪಗಳು (ಮಾಯೆ ಯು) ಸತ್ಯಕ್ಕೂ ಸತ್ಯವಾಗಿರುವ ಬ್ರಹ್ಮವನ್ನು ಮುಸುಕಿ ಮರೆಮಾಡಿರುವದರಿಂದ ನಾಮರೂಪಗಳನ್ನು ಅಲ್ಲಗಳೆದೇ ಬ್ರಹ್ಮವನ್ನು ತಿಳಿಸಬೇಕಾಗಿದೆ. ಜೀವತ್ವಕ್ಕೆ ಕಾರಣವಾದ ದೇಹೇಂದ್ರಿಯಾದಿ ಉಪಾಧಿಗಳೇ ಅವಿದ್ಯಾಕಲ್ಪಿತವಾದ ನಾಮ ರೂಪಗಳಾಗಿವೆ. ನಾಮರೂಪಕರ್ಮಾತ್ಮಕವಾದ ಜೀವಜಗತ್ತುಗಳು-ಹಗ್ಗದಲ್ಲಿ ಹಾವಿನಂತೆ-ಬ್ರಹ್ಮದಲ್ಲಿಯೇ ಅವಿದ್ಯೆಯಿಂದ ಕಲ್ಪಿತವಾಗಿವೆ. ಆದ್ದರಿಂದ, ಜೀವ ಜಗತ್ತುಗಳ ಹುಸಿತೋರಿಕೆಯನ್ನು ಅಲ್ಲಗಳೆದಲ್ಲದೆ ಬ್ರಹ್ಮನನ್ನು ತಿಳಿಸಲಾಗುವ ದಿಲ್ಲ.

ಬೆಂಕಿಯಿಂದ ಕೆಂಪಗೆ ಕಾದ ಕಬ್ಬಿಣದ ಸಲಾಕಿಯು ತಾನೇ ಬೆಂಕಿ ಯೆಂಬಂತೆ ಬೆಳಗುತ್ತಾ ಸುಡುತ್ತಾ ಇರುತ್ತದೆ. ಬೆಂಕಿಯಂತೆ ಬೆಳಗುವದೂ ಸುಡು ವದೂ ಸಲಾಕಿಯ ಗುಣವೆಂದು ತಿಳಿಯುವದೂ ಸಲಾಕಿಯನ್ನೇ ಬೆಂಕಿಯೆಂದು ತಿಳಿಯುವದೂ ತಪ್ಪುತಿಳಿವಳಿಕೆ, ಭ್ರಾಂತಿ. ಬೆಳಗುವದೂ ಸುಡುವದೂ ಬೆಂಕಿಯ ಗುಣವೇ ಹೊರತು ಸಲಾಕಿಯ ಸ್ವಂತ ಧರ್ಮವಲ್ಲ; ಏಕೆಂದರೆ, ಬೆಂಕಿ ಯಿಂದ ಕಾದಾಗ ಮಾತ್ರ ಸಲಾಕಿಯು ಬೆಂಕಿಯಂತೆ ತೋರಿಕೊಳ್ಳುವದೇ ಹೊರತು, ಬೆಂಕಿಯ ಸಂಸರ್ಗವಿಲ್ಲದಾಗ ಸಲಾಕಿಯು ಬೆಳಗುವದೂ ಇಲ್ಲ, ಸುಡು ವದೂ ಇಲ್ಲ. ಆದರೆ ಬೆಂಕಿಯು ಮಾತ್ರ ಯಾವಾಗಲೂ ಬೆಳಗುತ್ತಲೂ ಸುಡು ತ್ತಲೂ ಇರುತ್ತದೆ. ಏಕೆಂದರೆ ಬೆಳಗುವದೂ ಸುಡುವದೂ ಬೆಂಕಿಯ ಧರ್ಮ. ವಸ್ತುವಿನ ಧರ್ಮವು ಅದರ ಸ್ವರೂಪವೇ ಆದುದರಿಂದ ಯಾವ ವಸ್ತುವೂ ತನ್ನ ಸ್ವರೂಪವನ್ನು ಬಿಡುವದಿಲ್ಲ. ಹೀಗೆ, ಯಾವ ಧರ್ಮವು ಯಾವ ವಸ್ತುವಿನದು ? ಸಹಜಧರ್ಮ ಯಾವದು, ತಾತ್ಕಾಲಿಕ-ಆಗಂತುಕವಾದುದು ಯಾವದು?-ಎಂದು ಬಿಡಿಸಿ ತಿಳಿಯುವದೇ ವಿವೇಕ ; ಇದೇ ಸಮ್ಯಗ್ಜ್ಞಾನ ; ಇದೇ ಸರಿಯಾದ ತಿಳಿವಳಿಕೆ.

ಬುದ್ಧಿಯಿಂದ ಹಿಡಿದು ದೇಹದವರೆಗಿನ ಎಲ್ಲವುಗಳಲ್ಲಿಯೂ-ಸಲಾಕಿಯಲ್ಲಿ ಬೆಂಕಿಯ ಗುಣವೇ ತುಂಬಿ ತೋರುತ್ತಿರುವಂತೆ-ಆತ್ಮಚೈತನ್ಯವೇ ತುಂಬಿ

ತುಳಕುತ್ತಿದೆ. ಆದ್ದರಿಂದಲೇ ದೇಹವನ್ನೇ ಆತ್ಮವೆಂದೂ ಇಂದ್ರಿಯಗಳನ್ನೇ, ಪ್ರಾಣವನ್ನೇ, ಮನಸ್ಸನ್ನೇ, ಬುದ್ಧಿಯನ್ನೇ, ಅಹಂಕಾರವನ್ನೇ ಆತ್ಮನೆಂದೂ ತಪ್ಪಾಗಿ ತಿಳಿಯುತ್ತಿದ್ದೇವೆ. ಚೈತನ್ಯವು ನಿತ್ಯಸಿದ್ಧವೂ ಸ್ವತಃಸಿದ್ಧವೂ ಇರುವದರಿಂದ ಅದನ್ನು ಹೊಸದಾಗಿ ಪಡೆಯಬೇಕಾಗಿಲ್ಲ. ಅಸ್ತಿ, ಭಾತಿ, ಪ್ರಿಯಗಳು ಆತ್ಮನ ಧರ್ಮವೆನ್ನಬಹುದು; ದೇಹೇಂದ್ರಿಯಾದಿಗಳಲ್ಲಿ ಚೈತನ್ಯವು ( ಅರಿವು ) ವ್ಯಾಪಿಸಿರುವದರಿಂದಲೇ ಆತ್ಮನ (ಅಸ್ತಿತ್ವವೂ) ಇರುವಿಕೆಯೂ, (ಭಾತಿತ್ವವೂ) ತೋರುವಿಕೆಯೂ (ಪ್ರಿಯತ್ವವೂ) ಬೇಕೆನಿಸುವಿಕೆಯೂ (ಬೇಡವೆನಿಸುವದು ಸಹ) ಜಡವಾದ ದೇಹೇಂದ್ರಿಯಾದಿಗಳ ನಾಮರೂಪಗಳಲ್ಲಿ ಬೆಳಗುತ್ತಾ ಆ ನಾಮರೂಪ ಕರ್ಮಾದಿಗಳೇ ಸತ್ಯವೆನಿಸಿ ತೋರುತ್ತಿವೆ. ಇದಕ್ಕೆ ಅಜ್ಞಾನಜನ್ಯವಾದ ಅವಿವೇಕವೇ ಕಾರಣ. ತೋರಿ ಅಡಗುವ ಮಾಯಾಮಯವಾದ ನಾಮರೂಪಗಳಿಂದ ನಿತ್ಯವೂ ಸತ್ಯವೂ ಆದ ಅಸ್ತಿ-ಭಾತಿ-ಪ್ರಿಯ (ಸಚ್ಚಿದಾನಂದ) ಲಕ್ಷಣವುಳ್ಳ ಆತ್ಮಚೈತನ್ಯವನ್ನು ಬಿಡಿಸಿ ತಿಳಿಯುವದೇ ವಿವೇಕ. ಈ ವಿವೇಕದ ಬಲದಿಂದ ಅನಾತ್ಮವೆಲ್ಲಾ ಹುಸಿತೋರಿಕೆಯೆಂದು ಅದನ್ನು ಬಾಧಿಸಿ ಸಚ್ಚಿದಾನಂದ-ಆತ್ಮನಲ್ಲಿ ನೆಲೆನಿಲ್ಲುವದೇ ಆತ್ಮಾನುಭವ. (ಗೀ. ಭಾ. ೧೮-೫೦)

ಚ) "ಯತ್ರ ಹಿ ದ್ವೈತಮಿವ ಭವತಿ.... ಇತರಂ ಪಶ್ಯತಿ, ತದಿತರ ಇತರಂ ವಿಜಾನಾತಿ" (ಬೃ: ೨-೪-೧೪ : ಬೃ: ೪-೫-೧೫)

ಎಲ್ಲಿ ದ್ವೈತವಿದ್ದಂತೆ ಇರುವದೋ ಅಲ್ಲಿ ಒಬ್ಬನು ಇನ್ನೊಂದನ್ನು ಮೂಸುತ್ತಾನೆ, ಅಲ್ಲಿ ಒಬ್ಬನು ಇನ್ನೊಂದನ್ನು ಕಾಣುತ್ತಾನೆ, ಅಲ್ಲಿ ಒಬ್ಬನು ಇನ್ನೊಂದನ್ನು ಆಲೋಚಿಸುತ್ತಾನೆ, ಒಬ್ಬನು ಇನ್ನೊಂದನ್ನು ಅರಿತುಕೊಳ್ಳುತ್ತಾನೆ. ಹೀಗಿ ಶ್ರುತಿಯಲ್ಲಿ ಹೇಳಿರುವದರಿಂದ ದ್ವೈತವು ನಿಜವಾಗಿಲ್ಲವೆಂತಲೂ, ಅದು ಇರುವಂತೆ ತೋರುವಾಗಲೂ ಈ ಆತ್ಮನಲ್ಲಿ ತೋರುವ ವಿಜ್ಞಾತೃತ್ವವು ಸಹ ನಿಜವಲ್ಲವೆಂತಲೂ ನಿರ್ಣಯವಾಗುತ್ತದೆ.

ಯತ್ರ ವಾ ಅಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಜಿಘ್ರೇತ್ , ತತ್ಕೇನ ಕಂ ಪಶ್ಯೇತ್.... ತತ್ಕೇನ ಕಂ ಮನ್ವೀತ ತತ್ಕೇನ ಕಂ ವಿಜಾನೀಯಾತ್ । ಯೇನೇದಗ್ಂ ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾತ್ ವಿಜ್ಞಾತಾರಮರೇ ಕೇನ ವಿಜಾನೀಯಾತ್ ಇತಿ॥ ಬೃ: ೨-೪-೧೪; ೪-೫-೧೫)

(ದ್ವೈತದ ವಿಷಯವನ್ನು ಹೇಳುವಾಗ ಶ್ರುತಿಯು 'ದ್ವೈತಮಿವ' ದ್ವೈತದಂತೆ- ಎಂದು ಹೇಳುತ್ತದೆಯೇ ಹೊರತು ದ್ವೈತವೇ ಎಂದು ನಿಶ್ಚಿತವಾಗಿ ಹೇಳುವದಿಲ್ಲ. ಇದರಿಂದ 'ನಾನು ಮತ್ತು ಈ ಜಗತ್ತು' ಎನ್ನುವ ದ್ವೈತವು

ನಿಜವಲ್ಲ; ಅದು ನಿಜವಾಗಿಲ್ಲವಾದರೂ ಇದ್ದಂತೆ ತೋರುವ ಬರಿಯ ಹುಸಿ ತೋರಿಕೆ- ಎಂದು ಶ್ರುತಿಯು ನಿಶ್ಚಿತವಾಗಿ ಹೇಳಿದಂತೆ ಆಯಿತು. ಆದರೆ, ಆತ್ಮನ ವಿಷಯವನ್ನು ಹೇಳುವಾಗ ಮಾತ್ರ, ಮೊದಲೇ ಮಾಯಾಮಾತ್ರವಾದ ದ್ವೈತವನ್ನು ಅಲ್ಲಗಳೆದುದರಿಂದ ಉಳಿಯುವ (ದ್ವೈತಕಲ್ಪನೆಗೆ ಆಸ್ಪದವಾಗಿದ್ದ) ಪ್ರಜ್ಞಾನಘನನಾದ ಆತ್ಮನೊಬ್ಬನೇ ಸತ್ಯ, 'ಸರ್ವಂ ಆತ್ಮಾ ಏವ' ಸರ್ವವೂ ಆತ್ಮನೇ- ಎಂದು ಶ್ರುತಿಯು ನಿಶ್ಚಿತವಾಗಿ ಸಾರಿ ಹೇಳುತ್ತದೆ. ದ್ವೈತದ ವಿಷಯದಲ್ಲಿ 'ಇವ' ಎಂದಿದ್ದುದು ಆತ್ಮನ ವಿಷಯದಲ್ಲಿ 'ಏವ' ಆಗುತ್ತದೆ.)

ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಯಿತೋ ಅಲ್ಲಿ ಏತರಿಂದ ಏನನ್ನು ಮೂಸಿಯಾನು, ಅಲ್ಲಿ ಏತರಿಂದ ಏನನ್ನು ಕಂಡಾನು ? ಅಲ್ಲಿ ಏತರಿಂದ ಏನನ್ನು ಆಲೋಚಿಸಿಯಾನು ? ಅಲ್ಲಿ ಏತರಿಂದ ಏನನ್ನು ಅರಿತಾನು ? ಯಾವ ಚೈತನ್ಯ ಪ್ರಕಾಶದ ಮಹಿಮೆಯಿಂದ ಇದೆಲ್ಲವನ್ನೂ ಮನುಷ್ಯನು ಅರಿತುಕೊಳ್ಳು ತ್ತಿರುವನೋ ಆ ಪ್ರಜ್ಞಾನಾತ್ಮನನ್ನು ಏತರಿಂದ ಅರಿತುಕೊಂಡಾನು ? ಎಲೌ ಮೈತ್ರೇಯಿ, ವಿಜ್ಞಾತೃವನ್ನು (ವಿಜ್ಞಾತೃವಾಗಿ ತೋರುತ್ತಿರುವ ಪ್ರಜ್ಞಾನಾತ್ಮ ನನ್ನು) ಏತರಿಂದ ಅರಿತುಕೊಂಡಾನು ? (ಬೃ. ೨-೪-೧೪ ; ೪-೫-೧೫).

ಶಾಸ್ತ್ರಪ್ರಮಾಣ ಒಂದಕ್ಕೇ ( ಸೂಚ್ಯವಾಗಿಯೂ ಲಕ್ಷ್ಯವಾಗಿಯೂ ) ಗೋಚರವಾಗುವ ಆತ್ಮಸ್ವರೂಪವನ್ನು ಶಾಸ್ತ್ರಾಚಾರ್ಯರ ಉಪದೇಶಕ್ಕೆ ಅನು ಗುಣವಾಗಿ, ಉಜ್ಜ್ವಲವಾದ ವಿವೇಕಬಲದಿಂದ ಉತ್ತಮಾಧಿಕಾರಿಯು ವಿಚಾರ ಮಾಡಿದಾಗ, ಅವನಲ್ಲಿ ಮೂಡುವ ಆತ್ಮವಿದ್ಯೆಯ ಪರಮಾರ್ಥದೃಷ್ಟಿಗೆ, ಪ್ರಜ್ಞಾನ ಘನನಾದ ಆತ್ಮನು ಒಬ್ಬನೇ ಸತ್ಯನೆಂದೂ, ಅವಿದ್ಯೆಯ ವ್ಯವಹಾರದೃಷ್ಟಿಗೆ ಗೋಚರವಾಗುವ ನಾನಾರೂಪವಾದ ಜಗಜ್ಜೀವರೆಲ್ಲಾ ಮರುಭೂಮಿಯಲ್ಲಿ ತೋರುವ ಹುಸಿಯಾದ ಬಿಸಿಲ್‌ಕುದುರೆಯಂತೆ, ಆತ್ಮಸ್ವರೂಪದಲ್ಲಿಯೇ ಕಲ್ಪಿತ ವಾಗಿ ತೋರುತ್ತಿವೆಯೆಂದೂ ಜ್ಞಾತೃ-ಜ್ಞಾನ-ಜ್ಞೇಯ ಮೊದಲಾದ ಎಲ್ಲಾ ತ್ರಿಪುಟಿಗಳೂ ಹೀಗೆಯೇ ಮರುಮರೀಚಿಕೆಯಾಗಿವೆಯೆಂದೂ ಬಾಧಿತಾನುವೃತ್ತಿ ಯಿಂದ ಅವನಿಗೆ ಅನುಭವಕ್ಕೆ ಬರುತ್ತದೆ.

ಮೇಲಿನ "ಯತ್ರ ವಾ ಅಸ್ಯ ಸರ್ವಮ್ ಆತ್ಮೈವಾಭೂತ್" (ಬೃ. ೨-೪-೧೪) ಎಂಬ ಶ್ರುತಿವಚನವು ಮಹಾವಿವೇಕಿಯಾದ ಆತ್ಮಜ್ಞನ ಈ ಆತ್ಮಾನು ಭವವನ್ನೇ ತಿಳಿಸುತ್ತದೆ.

ಈ ದೃಷ್ಟಿಯಿಂದ 'ವಿಜ್ಞಾತಾರ'ನ ಪರಮಾರ್ಥ(ನಿಜ)ರೂಪವು ಅದ್ವಿತೀಯ ವಿಜ್ಞಾನಘನಸ್ವರೂಪವೇ ಆಗಿದೆ, ಎಂಬಿದು ಸಿದ್ಧವಾಗುತ್ತದೆ. ಇದು ಶ್ರುತಿ ಸಮ್ಮತವಾದ ಕಾಶಕೃತ್ಸ್ನರ ಮತವಾಗಿದೆ. ಆದರೆ ಭೇದವೂ ಸತ್ಯ, ಅಭೇದವೂ

ಸತ್ಯ–ಎನ್ನುವ ಆಶ್ಮರಥ್ಯ ಮೊದಲಾದ ಮಿಕ್ಕ ಆಚಾರ್ಯರ ಮತಗಳ ವಾದದಿಂದ ನಾನಾತ್ವದಿಂದ ಏಕತ್ವದೆಡೆಗೂ ಏಕತ್ವಜ್ಞಾನದಿಂದ ನಾನಾತ್ವಭ್ರಾಂತಿಯೆಡೆಗೂ ಸಾಧಕನ ಬುದ್ಧಿಯೂ ಹೊಯ್ದಾಡುತ್ತಾ ತಾಕಲಾಡುತ್ತಿರುವದರಿಂದ ಬುದ್ಧಿಯ ಸ್ಥಿರತೆಯಾಗಲಿ, ಸ್ಥಿತಪ್ರಜ್ಞತೆಯಾಗಲಿ, ಶಾಂತಿಯಾಗಲಿ ಸಾಧ್ಯವಿಲ್ಲವಾಗಿದೆ.

ಛ) ಸೂತ್ರಕಾರರಾದ ಬಾದರಾಯಣರಿಗೂ ಅವರ ಹೃದಯವನ್ನರಿತ ಕಾಶಕೃತ್ಸ್ನರಿಗೂ ಆ ಪರಂಪರೆಯ ಗೌಡಪಾದರಿಗೂ ಅವರ ಶಿಷ್ಯರಾದ ಶಂಕರಾಚಾರ್ಯರಿಗೂ ಅವರ ಶಿಷ್ಯರಾದ ಸುರೇಶ್ವರಾಚಾರ್ಯರಿಗೂ ಸಂಪೂರ್ಣ ಸಮ್ಮತವಾದ ಈ ಆತ್ಮೈಕತ್ವವಿಜ್ಞಾನವೇ ವೇದಾಂತವಿಜ್ಞಾನದ ಸುನಿಶ್ಚಿತಾರ್ಥವಾಗಿದೆ ; ಇದೇ ಪರಮಾರ್ಥಸತ್ಯವೂ ಆಗಿದೆ ; ಇದರಿಂದಲೇ ನಿರ್ವಾಣಶಾಂತಿರೂಪ ಅಮೃತತ್ವವೂ ಸಾಧ್ಯವಾಗಿದೆ. ಅಮೃತತ್ವದ ಅನುಗ್ರಹಕ್ಕೆ ಕಾರಣವಾದುದೇ ದಿವ್ಯವಾದ ಸಮ್ಯಗ್ದರ್ಶನವಾಗಿದೆ.

> "ಯೇ ತು (ಕ್ಷೇತ್ರಜ್ಞೋಽಯಂ ಪರಮಾತ್ಮನೋ ಭಿನ್ನಃ, ಪರಮಾತ್ಮಾ ಅಯಂ ಕ್ಷೇತ್ರಜ್ಞಾತ್ ಭಿನ್ನಃ) ನಿರ್ಬನ್ಧಂ ಕುರ್ವನ್ತಿ ತೇ ವೇದಾನ್ತಾರ್ಥಂ ಬಾಧಮಾನಾಃ ಶ್ರೇಯೋದ್ವಾರಂ ಸಮ್ಯಗ್ದರ್ಶನಮೇವ ಬಾಧನ್ತೇ । ಕೃತಕಮ್ ಅನಿತ್ಯಂ ಚ ಮೋಕ್ಷಂ ಕಲ್ಪಯನ್ತಿ ॥ (ಸೂ. ಭಾ. ೧-೪-೨೨)

(ಈ ಕ್ಷೇತ್ರಜ್ಞನಾದ ಜೀವನು ಪರಮಾತ್ಮನಿಗಿಂತ ಬೇರೆಯಾಗಿದ್ದಾನೆ. ಈ ಪರಮಾತ್ಮನೂ ಕ್ಷೇತ್ರಜ್ಞನಿಗಿಂತ ಭಿನ್ನನಾಗಿದ್ದಾನೆ–ಎಂದು) ಯಾರಾದರೆ ನಿರ್ಬಂಧವನ್ನು ಮಾಡುವರೋ ಅವರು (ನಿಜವಾದ) ವೇದಾಂತಾರ್ಥವನ್ನು ಬಾಧಿಸುತ್ತಾರಾದ್ದರಿಂದ ನಿಶ್ಶ್ರೇಯಸ್ಸಿಗೆ ಅಮೃತತ್ವಕ್ಕೆ ದ್ವಾರವಾದ ಸಮ್ಯಗ್ದರ್ಶನವನ್ನೇ ದೂಷಿಸಿದವರಾಗುತ್ತಾರೆ ; ಮತ್ತು ಮೋಕ್ಷವು ಕೃತಕವೂ ಅನಿತ್ಯವೂ ಆಗಿರುವದೆಂದು ಕಲ್ಪಿಸಿದವರಾಗುತ್ತಾರೆ. ಏಕೆಂದರೆ, ಅವರ ಪಕ್ಷದಲ್ಲಿ, ಆತ್ಮನು ನಿತ್ಯಮುಕ್ತಸ್ವರೂಪನೆಂದಾಗದೆ, ಮೋಕ್ಷವು (ಸಾಧನಸಾಧ್ಯವಾಗಿ) ಹೊಸದಾಗಿ ಉಂಟಾಗತಕ್ಕದ್ದಾಗುತ್ತದೆ. (ಪಡೆಯಲ್ಪಡತಕ್ಕದ್ದಾಗುತ್ತದೆ.)

ಜ) ಇನ್ನು, ಜೀವಾತ್ಮ ಮತ್ತು ಪರಮಾತ್ಮ ಎಂಬ ಭೇದವ್ಯವಹಾರಕ್ಕೆ ಅವಿದ್ಯಾದೃಷ್ಟಿಯೇ ಕಾರಣವಾಗಿದೆ. ವಿದ್ಯಾದೃಷ್ಟಿಯಲ್ಲಿ ಪರಮಾತ್ಮನೊಬ್ಬನೇ ಸತ್ಯ, ಅವನೇ ಅಜ್ಞರಿಗೆ ಜೀವಾತ್ಮನಾಗಿ ಕಾಣುತ್ತಾನೆ–ಎಂಬ ವಿದ್ಯಾವಿದ್ಯೆಗಳ ವೈದಿಕವ್ಯವಹಾರವು ಕೂಡ ಸಾಂಪ್ರದಾಯಿಕವಾದ ಅಧ್ಯಾರೋಪ–ಅಪವಾದವೆಂಬ ನ್ಯಾಯವನ್ನು ಅನುಸರಿಸಿಯೇ ತತ್ತ್ವೋಪದೇಶಕ್ಕಾಗಿ ಉಪಯೋಗಿಸಲಾಗಿದೆ. ಏಕೆಂದರೆ ವಿದ್ಯಾವಿದ್ಯೆಗಳ ಭೇದವಾದರೂ ಪರಮಾರ್ಥವಲ್ಲ, ಸತ್ಯವಲ್ಲ.

"ನ ವಿದ್ಯತೇ ಇತಿ ಅವಿದ್ಯಾ" ಯಾವದು ಎಷ್ಟುಮಾತ್ರಕ್ಕೂ ಇಲ್ಲವೇ ಇಲ್ಲವೋ (ಆದರೂ ಇದ್ದಂತೆ ತೋರುತ್ತದೆಯೋ) ಅದೇ ಅವಿದ್ಯಾ-ಎಂದು ಸುರೇಶ್ವರಾಚಾರ್ಯರು ಹೇಳಿದ್ದಾರೆ. ತೈತ್ತಿರೀಯಭಾಷ್ಯದಲ್ಲಿ ಶಂಕರಾಚಾರ್ಯರು ವಿದ್ಯಾವಿದ್ಯೆಗಳು ನಾಮರೂಪಪಕ್ಷಕ್ಕೇ ಸೇರಿವೆ 'ತಸ್ಮಾತ್ ನಾಮರೂಪಪಕ್ಷಸ್ಯೈವ ವಿದ್ಯಾವಿದ್ಯೇ । ನಾಮರೂಪೇ ಚ ನಾತ್ಮಧರ್ಮೌ' ॥ (ತೈ. ಭಾ. ೨-೮-೫) -ಎಂದು ಹೇಳಿದ್ದಾರೆ. ಈ ದೃಷ್ಟಿಯಿಂದ ಅವಿದ್ಯೆ ಎಂದರೂ ಮಾಯೆಯೇ. ನಿಜವಾಗಿ ಇಲ್ಲವಾದರೂ ಇದ್ದಂತೆ ತೋರುವದೇ ಮಾಯೆ. ನಿತ್ಯಪ್ರಕಾಶಸ್ವರೂಪನಾದ ಸೂರ್ಯನಲ್ಲಿ ಕತ್ತಲೆಯು ಎಷ್ಟುಮಾತ್ರವೂ ಹೇಗೆ ಇರಲು ಸಾಧ್ಯವಿಲ್ಲವೋ ಹಾಗೆ ನಿತ್ಯಪ್ರಜ್ಞಾನಘನಸ್ವರೂಪನಾದ ಆತ್ಮನಲ್ಲಿ ಅವಿದ್ಯೆ ಇರುವದೂ ಸಾಧ್ಯವಿಲ್ಲ. ಆದ್ದರಿಂದ ಕಳೆದುಕೊಳ್ಳಬೇಕಾದ ಅವಿದ್ಯೆಯೂ ಇಲ್ಲ; ಪಡೆಯಬೇಕಾದ ವಿದ್ಯೆಯೂ ಇಲ್ಲ. ಹೀಗೆ ತಿಳಿಯುವದೇ ಬ್ರಹ್ಮವಿದ್ಯೆ. ಇದೇ ಸಮ್ಯಗ್ದರ್ಶನ.

॥ ಓಂ ತತ್ಸತ್ ॥

ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.